ಕರ್ನಾಟಕ ವಿಧಾನಸಭೆ

ಬುಧವಾರ ದಿನಾಂಕ 28ನೇ ಜುಲೈ 2004ರಂದು
ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 10 ಗಂಟೆ 20 ನಿಮಿಷಕ್ಕೆ ಸಮಾವೇಶಗೊಂಡಿತು
ಅಧ್ಯಕ್ಷರು (ಶ್ರೀ ಕೃಷ್ಣ)
ಪೀಠವನ್ನು ಅಲಂಕರಿಸಿದ್ದರು

ವಿತ್ತೀಯ ಕಾರ್ಯಕಲಾಪಗಳು

2004-05ನೇ ಸಾಲಿನ ಆಯವ್ಯಯದ ಮೇಲಿನ ಬಗ್ಗೆ ಚರ್ಚೆ (ಮುಂದುವರೆದುದು)

ಅಧ್ಯಕ್ಷರು : ಮಾನ್ಯ ಮಾಧುಸ್ವಾಮಿಯವರೆ, ವಿತ್ತೀಯ ಕಾರ್ಯಕಲಾಪಗಳ ಮೇಲಿನ ಚರ್ಚೆಯನ್ನು ಮುಂದುವರಿಸಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಸನ್ಮಾನ್ಯ ಅಧ್ಯಕ್ಷರೆ, ಒಂದು ವಿಷಯವನ್ನು........

ಅಧ್ಯಕ್ಷರು : ಇಲ್ಲಿರತಕ್ಕಂಥ ಮಾನ್ಯ ಸದಸ್ಯರುಗಳಲ್ಲಿ ನನ್ನದೊಂದು ಮನವಿ ಏನೆಂದರೆ, ಆಯವ್ಯಯದ ಮೇಲೆ ಸುಮಾರು 30 ಜನ ಮಾತನಾಡಬೇಕೆಂದು ಹೆಸರನ್ನು ಕೊಟ್ಟಿದ್ದಾರೆ. ಆದ್ದರಿಂದ ಎಲ್ಲಾ ಸದಸ್ಯರಲ್ಲಿ ಮನವಿ ಮಾಡುವುದೇನೆಂದರೆ, ಒಬ್ಬೊಬ್ಬರು 10 ನಿಮಿಷಗಳ ಸಮಯ ತೆಗೆದುಕೊಂಡು ತಮ್ಮಗಳ ಮಾತನ್ನು ಮುಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಆದ್ದರಿಂದ ದಯಮಾಡಿ ಎಲ್ಲರೂ ಸಹಕರಿಸಬೇಕು. ಏಕೆಂದರೆ ಬಹಳ ಜನ ಹೊಸ ಸದಸ್ಯರು ಆಯವ್ಯಯದ ಮೇಲೆ ಮಾತನಾಡುವುದಕ್ಕೆ ಹೆಸರನ್ನು ಕೊಟ್ಟಿದ್ದಾರೆ. ಆದ್ದರಿಂದ ಅವರಿಗೂ ಕೂಡ ಅವಕಾಶ ಸಿಗಬೇಕಾಗಿದೆ. ಆದ್ದರಿಂದ 10 ನಿಮಿಷ ಸಮಯ ತೆಗೆದುಕೊಂಡು ತಮ್ಮ ಭಾಷಣವನ್ನು ಮುಗಿಸಬೇಕೆಂದು ಹಿರಿಯ ಸದಸ್ಯರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ನಾವು ಮಾತನಾಡಲೇಬೇಕೆಂಬ ಅಗತ್ಯತೆ ಏನಿಲ್ಲ. ಆದ್ದರಿಂದ ನೀವು ಮಾತನಾಡುವುದು ಬೇಡ ಎಂದರೆ ನಾನು ಕುಳಿತುಕೊಳ್ಳುತ್ತೇನೆ.

ಅಧ್ಯಕ್ಷರು : ಎಲ್ಲರಿಗೂ ಅವಕಾಶ ಕೊಡಬೇಕಾಗಿರುವುದರಿಂದ ಎಲ್ಲರೂ ಅನುಸರಿಸಿಕೊಂಡು ಹೋಗಬೇಕು. ಏಕೆಂದರೆ ಎಲ್ಲರಿಗೂ ಅವಕಾಶ ಕೊಡುವಾಗ ಹಾಗೆ, ಹೀಗೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಆದ್ದರಿಂದ ದಯಮಾಡಿ ಎಲ್ಲರೂ ಸಹಕರಿಸಬೇಕೆಂಬುದು ನನ್ನ ಪ್ರಾರ್ಥನೆ. ಇದರ ಹಿಂದೆ ಇರತಕ್ಕಂಥ ಉದ್ದೇಶವನ್ನು ಅರ್ಥ ಮಾಡಿಕೊಳ್ಳಬೇಕು. ಎಲ್ಲರಿಗೂ ಅವಕಾಶ ಸಿಗಬೇಕಾಗಿರುವುದರಿಂದ ತಾವೆಲ್ಲರೂ ಸಹಕರಿಸಬೇಕೆಂದು ನನ್ನ ಪ್ರಾರ್ಥನೆ.

†ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) : ಮಾನ್ಯ ಅಧ್ಯಕ್ಷರೆ, ಎರಡು-ಮೂರು ದಿವಸಗಳಿಂದ ಇಲ್ಲಿ ಬೇರೆ ಬೇರೆ ವ್ಯವಹಾರಗಳು ನಡೆದಿದ್ದರಿಂದ ಈ ಸ್ಥಿತಿ ನಿರ್ಮಾಣವಾಗಿದೆ. ನಾವೂ ಕೂಡ ಪ್ರಶ್ನೋತ್ತರ ವೇಳೆಯನ್ನು ಬದಿಗೊತ್ತಿ ತಮ್ಮ ಜೊತೆಗೆ ಸಹಕರಿಸುತ್ತಿದ್ದೇವೆ. ಕೇವಲ 10 ನಿಮಿಷಕ್ಕೆ ಭಾಷಣವನ್ನು ಮುಗಿಸುವಂಥ ಮೆಷಿನ್ ನಮ್ಮ ತಲೆಯೊಳಗೆ ಇಲ್ಲ, ತಾವು ಮಾತನಾಡಿ ಎಂದರೆ ಮಾತನಾಡುತ್ತೇನೆ ಇಲ್ಲದಿದ್ದರೆ ಬೇಡ.

ಅಧ್ಯಕ್ಷರು : ತಮ್ಮ ಭಾಷಣವನ್ನು ಮುಂದುವರಿಸಿ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) : ಮಾನ್ಯ ಅಧ್ಯಕ್ಷರೆ, ಮೊನ್ನೆ ದಿವಸ ನಾನು ಮಾತನಾಡುವಂಥ ಸಂದರ್ಭದಲ್ಲಿ ಕೆ.ಪಿ.ಟಿ.ಸಿ.ಎಲ್. ಮತ್ತು ಗ್ರಾಮೀಣಭಾಗದ ಬಗ್ಗೆ ಪ್ರಸ್ತಾಪ ಮಾಡಿದ್ದೆನು. ಇವತ್ತಿನ ದಿವಸ ಸನ್ಮಾನ್ಯ ಉಪ ಮುಖ್ಯಮಂತ್ರಿಯವರ ಗಮನವನ್ನು ಸೆಳೆಯುತ್ತಾ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ರಾಜ್ಯದಲ್ಲಿ 70 ಪರ್ಸೆಂಟ್‌ನಷ್ಟು ಜನ ಸಂಕಷ್ಟ ಸ್ಥಿತಿಯಲ್ಲಿ ಬದುಕುತ್ತಿರುವುದನ್ನು ತಾವೇ ಒಪ್ಪಿಕೊಂಡಿದ್ದೀರಿ. ಒಂದು ಕಡೆ ಬರಗಾಲ ಮತ್ತೆ ಇನ್ನೊಂದು ಕಡೆ ರೈತ ಬೆಳೆಯತಕ್ಕಂಥ ಬೆಳೆಗೆ ಸರಿಯಾದ ಧಾರಣೆ ಸಿಗುತ್ತಿಲ್ಲ. ಮತ್ತೊಂದು ಕಡೆ ಬೆಳೆಗೆ ಕೀಟದ ಬಾಧೆ, ಇದರಿಂದೆಲ್ಲಾ ಗ್ರಾಮೀಣ ಜನರ ಬದುಕು ತೀರ ಕೆಳಮಟ್ಟಕ್ಕೆ ಹೋಗಿದೆ ಎಂದು ತಾವೇ ಹೇಳಿದ್ದೀರಿ. ಆದ್ದರಿಂದ ಅದಕ್ಕೆ ತಮ್ಮನ್ನು ಶ್ಲಾಘಿಸುತ್ತೇನೆ. ಆದರೆ, ತಾವು ಇವತ್ತಿನ ದಿವಸ ಸರ್ಕಾರವನ್ನು ನಡೆಸುತ್ತಿರುವವರು. ಮತ್ತೆ ತಾವು ಉಪ ಮುಖ್ಯಮಂತ್ರಿಗಳೂ ಕೂಡ ಆಗಿದ್ದೀರಿ. ನಾನು ಹೇಳುವಂಥ ಮಾತನ್ನು ತಾವು ಹೇಳುವುದು ಅಷ್ಟೊಂದು ಸಮಂಜಸವಲ್ಲ. ಆದರೆ, ತಾವೇನು ಹೇಳುತ್ತೀರಿ. ಅದಕ್ಕೂ ಕೂಡ ತಮ್ಮ ಬಜೆಟ್‌ನಲ್ಲಿ ಒಂದು ಪರಿಹಾರ ಸೂಚಿಸಬೇಕೆಂದು ನಾನು ಭಾವಿಸುತ್ತೇನೆ. ಈಗಾಗಲೇ ಇದರ ಬಗ್ಗೆ ತಾವೇ ಹೇಳಿದ್ದೀರಿ. ಆದ್ದರಿಂದ ನಾನು ಮತ್ತೆ ಹೇಳುವಂಥ ಅಗತ್ಯವಿಲ್ಲ. ಅವರ ಜೀವನ ಸ್ಥಿತಿ ಇನ್ನಷ್ಟು ಹದಗೆಡುತ್ತಿದೆ ಎಂದು ತಾವೇ ಹೇಳಿದ್ದೀರಿ. ಈ ವಿಷಯದಿಂದ ತಮ್ಮ ಜೊತೆಗೆ ನಾನು ಮಾತನಾಡುವುದಕ್ಕೆ ಪ್ರಾರಂಭ ಮಾಡುತ್ತೇನೆ. ಇವತ್ತಿನ ದಿವಸ ಗ್ರಾಮೀಣ ಜನರು ಅಭಿವೃದ್ಧಿಯಾಗಬೇಕಾದರೆ ಸಮಗ್ರವಾದ ಚಿಂತನೆ ಆಗಬೇಕಾಗಿದೆ. ಇದು ಶಾಸನ ಸಭೆಯಲ್ಲಿ ಮತ್ತು ಸರ್ಕಾರದ ಕಡೆಯಿಂದಲೂ ಕೂಡ ಆಗಬೇಕಾಗಿದೆ. ಪ್ರಕೃತಿಯೇ ಇವತ್ತಿನ ದಿವಸ ನಮಗೆ ಮೊದಲನೇ ಶಾಪವಾಗಿದೆ. ಸತತವಾಗಿ ಬರಗಾಲವನ್ನು ನಾವು ಇವತ್ತಿನ ದಿವಸ ಎದುರಿಸಿಕೊಂಡು ಬರಬೇಕಾಗಿದೆ. ಡಾ: ಸ್ವಾಮಿನಾಥ್‌ರವರು ನೀಡಿರತಕ್ಕಂಥ ವರದಿಯನ್ನು ನಾನು ತಮಗೆ ಕಳುಹಿಸಿಕೊಡುತ್ತೇನೆ. ಅವರು ಅದರಲ್ಲಿ ಏನು ಹೇಳಿದ್ದಾರೆಂದರೆ, ಈ ದೇಶದ 200 ವರ್ಷಗಳ ಹಿಂದಿನ ಮಳೆ ಮತ್ತು ಬೆಳೆಯನ್ನು ಅವಲೋಕನ ಮಾಡಿ ಪ್ರತಿ 5 ವರ್ಷಕ್ಕೆ ಒಂದು ಸಲ ಕರ್ನಾಟಕ ರಾಜ್ಯದಲ್ಲಿ ಬರ ಬರಬಹುದೆಂದು ಹೇಳಿದ್ದಾರೆ. 1904ನೇ ಇಸವಿಯಲ್ಲಿ ಮತ್ತು 1922–1903ರಲ್ಲಿ ಬಂದಂಥ ಬರಗಾಲ ಮತ್ತು ಈಗ ಬಂದಿರತಕ್ಕಂಥ ಬರಗಾಲವನ್ನು ನಾವು ಆಲೋಚನೆ ಮಾಡಿದರೆ, ಬಹುಶಃ ಅವತ್ತು ಒಂದು ರಾಜ್ಯ ನಮ್ಮ ಬರಗಾಲದ ನೆರವಿಗೆ ಬರುತ್ತಿತ್ತು. ಆದರೆ, ಇವತ್ತು ಸತತವಾಗಿ ಬರಗಾಲ ಬಂದು ಎಲ್ಲಾ ಕಡೆ ಮಾಮೂಲಿ ಎನ್ನತಕ್ಕಂಥ ಸ್ಥಿತಿ ನಿರ್ಮಾಣವಾಗಿದೆ. ಅವರ ಜೀವನ ಕಷ್ಟವಾಗಿದೆ ಎಂದು ಮತ್ತು ಅವರೇನೋ ಹೇಳುತ್ತಾರೆಂದು ಮತ್ತು ಏತಕ್ಕೋ ಹೇಳುತ್ತಾರೆಂದು ಭಾಷಣ ಮಾಡುವುದಕ್ಕೋಸ್ಕರ ನಾವು ಬರವನ್ನು ಇಟ್ಟುಕೊಂಡಿದ್ದೇವೆ. ಇನ್ನೊಂದು ಕಡೆ ಇದು ಸತ್ಯವೆಂದು ಹೇಳಬೇಕಾಗುತ್ತದೆ. ಏಕೆಂದರೆ, ಬರಗಾಲದ ಸಮಯದಲ್ಲಿ ಮಾಡತಕ್ಕಂಥ ಅಷ್ಟೊ

ಪ್ರಯೋಜನಗಳು ಅಧಿಕಾರಿಗಳಿಗೆ ದಲ್ಲಾಳಿಗಳಿಗೆ ಮತ್ತು ಇದರಲ್ಲಿ ಕಮಿಷನ್ ತೆಗೆದುಕೊಳ್ಳವಂಥರಿಗೆ ಹಾಗೂ ವ್ಯಾಪಾರಸ್ಥರಿಗೆ ಸಿಗುವಂಥ ಪರಿಸ್ಥಿತಿಯನ್ನು ನಾವು ಇಲ್ಲಿ ನಿರ್ಮಾಣ ಮಾಡಿದ್ದೇವೆ. ಬರಗಾಲದ ದವಡೆಗೆ ಸಿಕ್ಕಿರತಕ್ಕಂಥವನಿಗೆ ನೇರವಾಗಿ ಯಾವುದೇ ರೀತಿಯ ರಿಲೀಫ್‌ನ್ನು ಕೊಡುವುದಕ್ಕೆ ಆಗಿಲ್ಲ. ಅಂದರೆ, ನಾನು ನೆನ್ನೆ ಮೊನ್ನೆಯವರಿಗೆ ; ಸ್ವಲ್ಪ ಜಮೀನು ಇಟ್ಟುಕೊಂಡಿದ್ದೆ. ಆದರೆ ಈಗ ನಾನು ಹೋಗಿ ಕೂಲಿ ಮಾಡುವುದಕ್ಕೆ ಆಗುವುದಿಲ್ಲ ಎನ್ನತಕ್ಕಂಥ ಸ್ಥಿತಿಯಲ್ಲಿದ್ದವರಿಗೆ ಸರ್ಕಾರದಿಂದ ಯಾವುದೇ ರೀತಿಯ ರಿಲೀಫ್‌ನ್ನು ಈವರೆಗೆ ಯಾವುದೇ ಯೋಜನೆಯಿಂದ ಕೊಟ್ಟಿಲ್ಲ. ತಾವು ಗ್ರಾಮೀಣ ಸೊಗಡಿನಲ್ಲಿ ಬಂದಿರುವಂಥವರು ಮತ್ತು ನಿಮ್ಮ ಮೇಲೆ ನನಗೆ ಸ್ವಲ್ಪ ವಿಶ್ವಾಸ ಇದೆ. ಮತ್ತೆ ನಿಮ್ಮ ಜೊತೆ ನಾನೂ 20 ವರ್ಷಗಳ ಕಾಲ ಒಡನಾಟ ಮಾಡಿದವನು. ಆದ್ದರಿಂದ ಈ ರಾಜ್ಯಕ್ಕೆ ತಾವು ಏನಾದರೊಂದು ಕಾಯಕಲ್ಪ ತರುತ್ತೀರೆಂದು ನಮಗೆಲ್ಲಾ ಆಸೆ ಇದೆ. ಕಳೆದ ನಾಲ್ಕೂವರೆ ವರ್ಷಗಳಲ್ಲಿ ಬರಗಾಲವನ್ನು ನಿಭಾಯಿಸಿದ ರೀತಿಯೇ ಬೇರೆ. ಇವತ್ತಿನ ದಿವಸ ಬರ ಬಂದಿರತಕ್ಕಂಥದ್ದು ಒಂದು ರೀತಿಯಾದರೆ ಬರ ಬಂದ ಮೇಲೆ ಆಗತಕ್ಕಂಥ ಪರಿಣಾಮಗಳು ಬಹಳ ತೀವ್ರವಾಗಿರುತ್ತದೆ. ಅದರಲ್ಲಿಯೂ ತೋಟಗಾರಿಕೆ ಬೆಳೆ ಬೆಳೆಯತಕ್ಕಂಥವರು ಮತ್ತು ಬೇರೆ ಕಸಬು ಇರತಕ್ಕಂಥವರು ಬರಗಾಲದ ಹಿಂದಿನ ವರ್ಷದ ಸಂಪನ್ಮೂಲದಿಂದ ಯಾವುದೋ ರೀತಿಯಲ್ಲಿ ಸಸ್ಟೈನ್ ಮಾಡಿಕೊಳ್ಳುತ್ತಾರೆ. ಆದರೆ, ತದನಂತರ ಕಾಲಗಳು ಅವರಿಗೆ ಬಹಳ ಕ್ಲಿಷ್ಟವಾಗುತ್ತದೆ. ಈ ಒಂದು ಪರಿಸ್ಥಿತಿಗೆ ನಾವು ಬಂದು ನಿಂತಿದ್ದೇವೆ. ಕಳೆದ ಎರಡು-ಮೂರು ವರ್ಷಗಳಿಂದ ನಮ್ಮಲ್ಲಿದ್ದಂಥ ದವಸ ಮತ್ತು ಸಂಪನ್ಮೂಲವನ್ನು ಬಳಕೆ ಮಾಡಿಕೊಂಡಿದ್ದೇವೆ. ಈಗ ನಾವು ಕಷ್ಟಕ್ಕೆ ಸಿಕ್ಕಿಕೊಂಡಿದ್ದೇವೆ. ಈ ಸಂದರ್ಭದಲ್ಲಿ ನಮ್ಮ ರಿಸ್ಕ್‌ಗೆ ಸರ್ಕಾರ ಬರಬೇಕಾಗಿದೆ. ಈಗ ಬಹಳ ಮುಖ್ಯವಾಗಿ ಬರಗಾಲಕ್ಕೊಂದು ಶಾಶ್ವತ ಪರಿಹಾರವನ್ನು ಸರ್ಕಾರ ಕಂಡುಹಿಡಿಯಬೇಕು. ಇದಕ್ಕೋಸ್ಕರ ಮೂರು ಪ್ರಮುಖ ಇಲಾಖೆಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ನಾನು ಹೇಳತಕ್ಕಂಥ ಈ ಮೂರು ಪ್ರಮುಖ ಇಲಾಖೆಗೆ ತಾವು ಹೇರಳವಾಗಿ ಹಣ ಕೊಡುತ್ತೀರಿ. ಈ ಮೂರು ಇಲಾಖೆಗಳು ಯಾವುದೆಂದರೆ, ವಿದ್ಯುಚ್ಛಕ್ತಿ, ನೀರಾವರಿ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆ. ಈ ಎಲ್ಲಾ ಇಲಾಖೆಗಳಿಗೆ ಕೊಡತಕ್ಕಂಥ ಹಣವನ್ನು ಕ್ರೋಢೀಕರಿಸಿದರೆ ಸುಮಾರು ಅರ್ಧದಷ್ಟು ಹಣವನ್ನು ಈ ಇಲಾಖೆಗಳಿಗೆ ಕೊಡುತ್ತೀರಿ, ಆದರೆ, ನಾವು ಅರ್ಧದಷ್ಟು ಹಣ ಕೊಟ್ಟರೂ ಕೂಡ ನಾವೇಕೆ ಅದೇ ಸ್ಥಿತಿಯಲ್ಲಿದ್ದೇವೆ ಎನ್ನತಕ್ಕಂಥದ್ದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಪ್ರತಿ ಸಲ ಎಲ್ಲಾ ಸರ್ಕಾರಗಳು ಗ್ರಾಮೀಣ ಹೆಸರಿನಲ್ಲಿ ಮತ್ತು ರೈತರ ಹೆಸರಿನಲ್ಲಿ ಹಣ ಖರ್ಚು ಮಾಡುತ್ತಿದೆ. ಹಣ ಖರ್ಚು ಮಾಡಿಲ್ಲವೆಂದು ನಾನು ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ, ಯಾವುದಕ್ಕೆ ಮಾಡಬೇಕಾಗಿತ್ತೋ ಅದು ಇದೆಯೋ ಅಥವಾ ಇಲ್ಲವೋ ಎಂಬುದನ್ನು ನೋಡಬೇಕಾಗುತ್ತದೆ. ಇವತ್ತಿನ ದಿವಸ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, ನೀರಾವರಿಗೋಸ್ಕರ ನಾವು ಹೇರಳವಾಗಿ

ಹಣವನ್ನು ಖರ್ಚು ಮಾಡುತ್ತಿದ್ದೇವೆ. ಬಹುಶಃ ಸುಮಾರು 20 ವರ್ಷಗಳಿಂದ ಈ ರಾಜ್ಯದ ಬಜೆಟ್‌ನ ಸಿಂಹಪಾಲನ್ನು ಈ ನೀರಾವರಿಗೆ ಕೊಟ್ಟುಕೊಂಡು ಬಂದಿದ್ದೇವೆ. ಆದರೂ ಕೂಡ ಒಂದು ಶಾಶ್ವತವಾದ ಪರಿಹಾರವನ್ನು ಈ ರಾಜ್ಯಕ್ಕೆ ತರುವುದಕ್ಕೆ ಆಗಲಿಲ್ಲ. ಶಾಶ್ವತವಾಗಿ ಬರಗಾಲಕ್ಕೆ ತುತ್ತಾಗುತ್ತಿದ್ದ ಪ್ರದೇಶದ ಮೇಲೆ ನಾವು ಇವತ್ತಿನ ದಿವಸ ಪರಿಣಾಮಕಾರಿಯಾದ ಕಾರ್ಯಕ್ರಮ ಮಾಡಿಕೊಂಡು ಅಕಸ್ಮಾತ್ ಮಳೆ ಬಾರದೆ ಇರತಕ್ಕಂಥ ವರ್ಷ ಕೂಡ ನಾವು ಬದುಕುತ್ತೇವೆ ಎಂಬ ಸ್ಥಿತಿಯನ್ನು ನಾವು ನಿರ್ಮಾಣ ಮಾಡುವುದಕ್ಕೆ ಆಗಿಲ್ಲ ಎಂದು ಮಾನ್ಯ ಸಿದ್ದರಾಮಯ್ಯರವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ನಾವು ಮಾಡಿರತಕ್ಕಂಥ ಕಾರ್ಯಕ್ರಮಗಳು, ಅದು ಅಪ್ಪರ್ ಕೃಷ್ಣ ಅಥವಾ ಕಾವೇರಿ ಬೇಸಿನ್ ಇರಬಹುದು, ನಾಲೆ ಮಾಡುವುದಕ್ಕೆ ಸೀಮೆಂಟ್ ಹಾಕಿದ್ದೇವೆಂದು ದುಡ್ಡು ಮಾಡಿರುವುದು ಮತ್ತೆ ಕೆನಾಲ್ ಮಾಡಿಕೊಂಡು ಹೋಗಿರತಕ್ಕಂಥದನ್ನು ಬಿಟ್ಟರೆ ಭೂಮಿಯ ಮೇಲೆ ಅಚ್‌ಕಟ್ಟನ್ನು ಡೆವಲಪ್ ಮಾಡಿ ನೀರನ್ನು ನಾವು ಬಿಟ್ಟಿಲ್ಲ. ಪೊಟೆನ್‌ಶಿಯಾಲಿಟಿಯನ್ನು ಕ್ರಿಯೇಟ್ ಮಾಡಿದ್ದೇವೆಂದು ನಮ್ಮ ಇಂಗ್ಲೀಷ್‌ನವರು ಮತ್ತು ಇಂಜಿನಿಯರ್‌ಗಳು ಭಾಷಣ ಮಾಡುತ್ತಾರೆ ವಿನಹ ಇವತ್ತಿನ ದಿವಸ ಅಕ್ಚುವಲ್ ಇರಿಗೇಷನ್ ಎಷ್ಟು ಮಾಡಲಾಗಿದೆ ಎಂದರೆ, ಬಹುಶಃ 1 ರಿಂದ 2 ಪರ್ಸೆಂಟ್‌ನಷ್ಟೂ ಕೂಡ ನಾವು ಮಾಡಿಲ್ಲ. ನಮ್ಮ ಭಾಗದಲ್ಲಿ ಅಂದರೆ, ಕಾವೇರಿ ಕಣಿವೆ ಪ್ರದೇಶದಲ್ಲಿ ನೀರಾವರಿ ಸೌಲಭ್ಯವನ್ನು 20 ವರ್ಷಗಳಿಂದ ಕೇವಲ ಎರಡು ಎಕರೆ ಪ್ರದೇಶಕ್ಕೆ ಕೂಡ ಡಿಸ್ಟ್ರಿಬ್ಯೂಟರಿಸ್ ಮಾಡಿ ನೀರನ್ನು ಸರಬರಾಜು ಮಾಡಿಲ್ಲ. ಆದರೆ, ಇದಕ್ಕೆ ಹಣ ಎಷ್ಟು ಖರ್ಚಾಗಿದೆ ಎಂಬುದಕ್ಕೆ ಲೆಕ್ಕವಿಲ್ಲ. ಯಾರೂ ಕೂಡ ಇದರ ಬಗ್ಗೆ ಬಾಯಿ ಬಿಡುವಂತಿಲ್ಲ. ನೀರಾವರಿ ಸೌಲಭ್ಯ ಒದಗಿಸಿಕೊಡುವಂಥ ಸ್ಥಿತಿಯಲ್ಲಿ ಬೇರೆ ಬೇರೆ ಕಾರ್ಯಕ್ರಮಗಳಿಗೆ ಕೊಡಬೇಕಾಗಿರತಕ್ಕಂಥ ಹಣವನ್ನೆಲ್ಲಾ ಪೂಲ್ ಮಾಡಿ ಮತ್ತು ಮತ್ತು ಸಾಮಾನ್ಯ ಜನರಿಗೆ ಆಗಬೇಕಾಗಿರತಕ್ಕಂಥ ಕಾರ್ಯಕ್ರಮಗಳನ್ನು ಹಿಂದಿಟ್ಟು ಈ ಕೆಲಸ ಮಾಡಿ 20 ವರ್ಷಗಳಾದರೂ ಕೂಡ ನಾವು ಯಾವುದೇ ಹಂತವನ್ನು ತಲುಪುವುದಕ್ಕೆ ಆಗಲಿಲ್ಲ. ಈ ನೀರಾವರಿ ದಿಢೀರೆಂದು ಆಗುವುದು ಬಹುಶಃ ಕಷ್ಟವೆಂದು ನಾನು ಅಂದುಕೊಂಡಿದ್ದೇನೆ. ಆದರೆ, ಒಂದು ಕಾರ್ಯಕ್ರಮವನ್ನು ತಾವು ಮಾಡಬಹುದು, ನಾನು ಕೇವಲ ಭಾಷಣ ಮಾಡುವುದಕ್ಕೆ ಇಲ್ಲಿ ಬಂದಿಲ್ಲ. ನಮ್ಮಲ್ಲಿ ಹೇಮಾವತಿ ಕೆನಾಲ್ ಆಗಿದೆ. ಅಲ್ಲಿ ಆಗಿರತಕ್ಕಂಥ ಹೇಮಾವತಿ ಕೆನಾಲ್ ಡಿಪಿಎಪಿ ಪ್ರೋಗ್ರಾಮ್‌ನಲ್ಲಿರತಕ್ಕಂಥದು. ಡಿಪಿಎಪಿ ಪ್ರೋಗ್ರಾಮ್‌ನಲ್ಲಿ ಆಯ್ಕೆ ಮಾಡಿಕೊಂಡು ತುಮಕೂರು ಜಿಲ್ಲೆಗೆ ಒಂದು ಬೆಳೆ ಬೆಳೆಯುವುದಕ್ಕೆ ಸುಮಾರು 3.5 ಲಕ್ಷದಿಂದ 5 ಲಕ್ಷ ಎಕರೆ ಪ್ರದೇಶಕ್ಕೆ ನೀರು ಕೊಡಬೇಕೆಂದು ಇತ್ತು, ಕನಿಷ್ಟ ಒಂದು ಬೆಳೆಯನ್ನಾದರೂ ಆ ಜಿಲ್ಲೆಯ ರೈತರು ಬೆಳೆಯಬೇಕೆಂದು ಬಹಳ ಆಕಾಂಕ್ಷೆ ಇಟ್ಟುಕೊಂಡು ಆರಂಭ ಮಾಡಿದಂಥ ಕೆನಾಲ್ ಅದಾಗಿದೆ. ಇವತ್ತು ನಾನು ನಿಮ್ಮಲ್ಲಿ ರಿಕ್ವೆಸ್ಟ್ ಮಾಡುವುದೇನೆಂದರೆ, ಇದಕ್ಕಾಗಿ ಖರ್ಚು ಮಾಡಿರತಕ್ಕಂಥ ಹಣವನ್ನೆಲ್ಲಾ ಲೆಕ್ಕಾ ಹಾಕಬೇಕು. ಅಂದರೆ, ಕೆ.ಇ.ಬಿ.ಗೆ ಕೊಟ್ಟಿರತಕ್ಕಂಥ ದುಡ್ಡು

ಮತ್ತು ಅಲ್ಲಿನ ಟ್ರಾನ್ಸ್‌ಫಾರ್ಮರ್‌ಗಳಿಗೆ ಪೋಲ್ ಆಗತಕ್ಕಂತ ಹಣ ಮತ್ತು ನಾವು ಅನಧಿಕೃತವಾಗಿ ರನ್ ಮಾಡುತ್ತಿರುವ ಐ.ಪಿ. ಸೆಟ್‌ಗಳು ಮತ್ತು ನಾವು 700 ರಿಂದ 800 ಅಡಿ ಆಳದವರೆಗೆ ಕೊರೆದಿರುವ ಬೋರ್‌ವೆಲ್‌ಗಳು ಮತ್ತು ಇದು ಫೇಲ್ಯೂರ್ ಆಗಿ ರೈತರ ಮನೆ ಹಾಳಾಗಿರತಕ್ಕಂಥ ದುಡ್ಡು ಮತ್ತೆ ಪವರ್ ಕನ್ಸಂಪಶನ್ ಬಗ್ಗೆ ಹೇಳುವುದಾದರೆ, 5 ಹೆಚ್.ಪಿ. ಎಂದು ಹೇಳಿ ಇವತ್ತಿನ ದಿವಸ 400 ರಿಂದ 500 ಅಡಿ ಆಳದಲ್ಲಿ ಬೋರ್‌ವೆಲ್‌ನಲ್ಲಿ ನೀರಿದ್ದರೆ ಇಷ್ಟು ಹೆಚ್.ಪಿ.ಗೆ ಮೋಟಾರ್‌ಗಳು ರನ್ ಆಗುವುದಿಲ್ಲ. ಆ ಸಂದರ್ಭದಲ್ಲಿ 6,7 ಅಥವಾ 8 ಹೆಚ್.ಪಿ. ನೋ ಕನ್ಸ್ಯೂಮ್ ಮಾಡಿರುತ್ತದೆ. ಇವೆಲ್ಲವನ್ನೂ ಕೂಡ ನೀವು ಲೆಕ್ಕಕ್ಕೆ ತೆಗೆದುಕೊಂಡರೆ ಒಂದು ಸಣ್ಣ ಪರಿಹಾರವನ್ನು ತಾವು ಯೋಚನೆ ಮಾಡಬಹುದು. ಇವತ್ತಿನ ದಿವಸ ಆ ನಾಲೆಯಿಂದ ಕನಿಷ್ಟ ಕೆರೆಗಳಿಗೆ ನೀರನ್ನು ಕೊಡಬಹುದಾಗಿತ್ತು. ನಿಮ್ಮ ಹೇಮಾವತಿ ಕೆನಾಲ್‌ನಿಂದ ಎಡ ಅಥವಾ ಬಲಭಾಗದ ಅಥವಾ ಕಾಡಾಯಿಂದ ಆಚೆ ಇರತಕ್ಕಂತ ಕೆರೆಗಳಿಗೂ ಕೂಡ ನೀರನ್ನು ಕೊಟ್ಟಿದಿದ್ದರೆ ತುಮಕೂರು ಜಿಲ್ಲೆಯಲ್ಲಿ ಪ್ರಮುಖವಾಗಿ ತೋಟಗಾರಿಕೆ ಬೆಳೆ ಬೆಳೆಯತಕ್ಕಂಥ ಪ್ರದೇಶಗಳಲ್ಲಿ ಸುಮಾರು ತೋಟಗಳನ್ನು ನಾವು ಉಳಿಸಿಕೊಳ್ಳಬಹುದಾಗಿತ್ತು. ಮತ್ತೆ ಸುವಾರಷ್ಟು ವರಮಾನವನ್ನು ನಾವು ನೋಡಬಹುದಾಗಿತ್ತು. ಹಾಗೆಯೇ ನಮ್ಮ ಎಲ್ಲಾ ಬೋರ್‌ವೆಲ್‌ಗಳಲ್ಲಿ ನೀರು ಇರುತ್ತಿತ್ತೆಂದು ಮಾನ್ಯ ಸಿದ್ಧರಾಮಯ್ಯನವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ರೀತಿಯಾಗಿದ್ದರೆ, ಹೊಸ ಹೊಸದಾಗಿ ಕಂಬ ಹಾಕಿ ತಂತಿ ಎಳೆದು ಪವರ್ ಸಪ್ಲೈ ಮಾಡಿ ಎಂದು ಕೇಳುವುದಕ್ಕೆ ಆಗುತ್ತಿರಲಿಲ್ಲ. ನಾವು ಅಂದರೆ ರೈತರು ಕದ್ದು ವಿದ್ಯುಚ್ಛಕ್ತಿಯನ್ನು ಬಳಸುತ್ತಾರೆಂದು ಏನೊಂದು ಆಪಾದನೆಗೆ ಗುರಿಯಾಗಿದ್ದೇವೆ, ಇದು ನಮಗೆ ಬೇಕಾಗಿರಲಿಲ್ಲ. ಶಾಶ್ವತ ಪರಿಹಾರ ಕಂಡು ಹಿಡಿಯುವ ಕಡೆ ಕೆರೆಗಳಿಗಾದರೂ ನೀರು ಕೊಡಬೇಕಾಗುತ್ತದೆ. ಇದರ ಬಗ್ಗೆ ತಾವು ಒಂದು ಸಲವಾದರೂ ಯೋಚನೆ ಮಾಡಬೇಕಾಗುತ್ತದೆ. ಇವತ್ತಿನ ದಿವಸ ಕುಡಿಯುವ ನೀರಿನ ಪರಿಸ್ಥಿತಿ ಬಗ್ಗೆ ಹೇಳುವುದಾದರೆ, ಚಿಕ್ಕನಾಯಕನ ಹಳ್ಳಿ ತಾಲ್ಲೂಕಿನಲ್ಲಿ ಮತ್ತು ತಿಪಟೂರು ತಾಲ್ಲೂಕಿನಲ್ಲಿ ಕುಡಿಯುವುದಕ್ಕೆ ನೀರಿಲ್ಲ. ನನ್ನದೇ ಗ್ರಾಮಪಂಚಾಯಿತಿಗೆ ಈ ವರ್ಷ ನಾವು ಸುಮಾರು ಊರಿಗೆ ಟ್ಯಾಂಕ್‌ಗಳಿಂದ ನೀರನ್ನು ಕೊಟ್ಟಿದ್ದೇವೆ. ನಮ್ಮ ಮನೆಯಿಂದ ಸುಮಾರು 1 ಕಿ.ಮೀ. ದೂರದ ಊರಿಗೆ ಟ್ಯಾಂಕರ್‌ನಿಂದ ನೀರನ್ನು ಕೊಟ್ಟಿದ್ದೇವೆ. ಅಲ್ಲಿಂದ 6–7 ಕಿಲೋಮೀಟರ್ ದೂರದಲ್ಲಿ ಹೇಮಾವತಿ ಕೆನಾಲ್ ಹೋಗುತ್ತದೆ. 7 ಕಿಲೋ ಮೀಟರ್ ದೂರದಲ್ಲಿ ಕೆನಾಲ್ ಇತ್ತು, ಕೆರೆಗಳಿಗೆಲ್ಲಾ ಬರಬಹುದಾಗಿತ್ತು. ಸನ್ಮಾನ್ಯ ಕೃಷ್ಣದೇವರಾಯರ ಕಾಲದಿಂದ ಈವರೆವಿಗೆ ಕೆರೆಯ ಚೈನೇಜ್ ಇತ್ತು, ಒಂದು ಕೆರೆಗೆ ನಾವು ನೀರನ್ನು ತುಂಬಿಸಿಬಿಟ್ಟಿದ್ದರೆ ಎಲ್ಲಾ ಕೆರೆಗಳಿಗೆ ಅಂದರೆ 10 ರಿಂದ 20 ಕೆರೆಗಳಿಗೆ ಕಾವೇರಿ ಕಣಿವೆಯಿಂದ ನೀರು ತುಂಬಿಕೊಂಡು ಬರುತ್ತಿತ್ತು. ಅಂತಹ ಯೋಜನೆಯ ಬಗ್ಗೆ ನೀವು ಯೋಚನೆಯನ್ನು ಮಾಡಿದ್ದರೆ, ಗ್ರಾಮೀಣಾಭಿವೃದ್ಧಿ ಮತ್ತು ನೀರಾವರಿ ಎರಡನ್ನೂ ಸರಿಪಡಿಸುವ ಬಗ್ಗೆ ಹೊರಟಿದ್ದರೆ, ಖಂಡಿತವಾಗಿಯೂ ಸ್ವಲ್ಪ ಮಟ್ಟಿನ

ಪ್ರಯೋಜನವಾಗುತ್ತಿತ್ತು. ಇವತ್ತು ಏನಾಗಿದೆ, ಅದು ಆಗಲೇ ಇಲ್ಲ. ಸರ್ಕಾರವು ಬರ, ಬರ ಎಂದು ಹೇಳಿಕೊಂಡು ಹೇರಳವಾಗಿ ಹಣವನ್ನು ಖರ್ಚು ಮಾಡಿಕೊಂಡು, ಇದರಿಂದ ಬರದ ದವಡೆಗೆ ಸಿಕ್ಕಿಕೊಂಡಿರುವವರಿಗೆ ಯಾರಿಗೂ ಕೂಡ ಸಹಾಯವಾಗಲಿಲ್ಲ. ನಾನು ಈ ಮಾತನ್ನು ಬಹಳ ನೋವಿನಿಂದ ಹೇಳಬೇಕಾಗುತ್ತದೆ. ಕಂಟ್ರಾಕ್ಟರ್‌ಗೆ ಮತ್ತು ಇಂಜಿನಿಯರ್‌ಗೆ ಸಹಾಯವಾಗುತ್ತದೆ, ಮೊದಲಾಗಿದ್ದರೆ ಅಂಗಡಿಯವರಿಗೆ ಒಂದಿಷ್ಟು ಆಗಿರುತ್ತಿತ್ತು, ಈಗ ನೀವು ಅಕ್ಕಿಯನ್ನು ಕೊಡುವುದರಿಂದ, ಅಂಗಡಿಯವರಿಗೆ ಏನೂ ಪ್ರಯೋಜನವಾಗಲಿಲ್ಲ. ಪಾಪ ರೈಸ್‌ಮಿಲ್‌ಗಳನ್ನು ಮುಚ್ಚಿಕೊಂಡು ಬಿಟ್ಟರು, ಭತ್ತವನ್ನು ಮಿಲ್ ಮಾಡಬೇಕಾಗಿಲ್ಲ, ಅಕ್ಕಿಯನ್ನೇ ಪಾಲೀಶ್ ಮಾಡಿ ಮಾಡುವ ಸ್ಥಿತಿಯನ್ನು ತಾವು ನಿರ್ಮಾಣವನ್ನು ಮಾಡಿದ್ದೀರಿ, ಸ್ವಲ್ಪ ಆ ಕಡೆಗೆ ತೆಗೆದುಕೊಳ್ಳಬೇಕಾಗಿತ್ತು, ಮತ್ತೆ ನೀರಾವರಿಯೂ ಕೂಡ ನೀವು ಬಹಳ ಪ್ರಮುಖವಾದ ಇಲಾಖೆಯೆಂದು ತೆಗೆದುಕೊಂಡಿದ್ದೀರಿ, ಆದರೆ ದುರ್ದೈವ ಫಂಡ್‌ನ್ನು ನಾವು ಇಷ್ಟು ಇಟ್ಟಿದ್ದೇವೆ, ನಾವು ಇಷ್ಟನ್ನು ಪ್ರಾವಿಜನ್ ಮಾಡುತ್ತೇವೆಂದು ಹೇಳಿದ್ದನ್ನು ಬಿಟ್ಟರೆ ಯಾವುದೇ ವರ್ಷ ನೀವು ಇಟ್ಟಷ್ಟು ಹಣವನ್ನು ನೀರಾವರಿಗೆ ಕೊಡಲಿಲ್ಲ. ಕೆಇಬಿ ಕೆಪಿಟಿಸಿಎಲ್‌ಗಾಗಲಿ ಕೊಡಲಿಲ್ಲ. ಇದರ ಬಗ್ಗೆ ತಾವು ಹೇಳಿದ್ದೀರಿ, ಸರ್ಕಾರದ ರೆವಿನ್ಯೂಗಳಿಗೆ ನಷ್ಟ ಏಕೆ ಆಗಿದೆ ; ಎಸ್ಕಲೇಟೆಡ್ ಕಾಸ್ಟ್ ಎಂದು ತಾವು ಒಪ್ಪಿಕೊಂಡಿದ್ದೀರಿ. ಏಕೆ ಸ್ವಾಮಿ ಎಸ್ಕಲೇಷನ್ ಆಯಿತು ? ಯಾವುದೇ ಪ್ರಾಜೆಕ್ಟ್‌ನ್ನು ನೀವು ಮಾಡುವ ದಿವಸ, ಆ ಪ್ರಾಜೆಕ್ಟ್ ಬೇಕಾಗಿರುವಂತಹ ಹಣವನ್ನು ಇಟ್ಟವರು ಅದರ ಮಿತಿಯೊಳಗೆ ನೀವು ಏನು ಕಾಲವನ್ನು ನಿಗಧಿ ಮಾಡಿರುತ್ತೀರಿ ಆ ಯೋಜನೆಯನ್ನು ಅನುಷ್ಠಾನಕ್ಕೆ ತರುವ ಬಗ್ಗೆ, ಅಷ್ಟರೊಳಗಡೆ ಬಿಡುಗಡೆ ಮಾಡಿದ್ದರೆ ಟೆಂಡರ್ ಹಾಕುವ ಹಂತದಿಂದ ಹಿಡಿದು ಧಾರಣಿಯು ಕಡಿಮೆಯಾಗುತ್ತಿತ್ತು. ನಾವು ಏಕೆ ಇಷ್ಟೊಂದು ದುಬಾರಿ ಟೆಂಡರ್‌ನ್ನು ಹಾಕುತ್ತೀರೆಂದು ನಾವು ಕೇಳಿದರೆ 30 ಪರ್ಸೆಂಟ್ ನಮಗೆ ಜಾಸ್ತಿ ಬೇಕು ಸಾರ್, ನಾವು 20 ಪರ್ಸೆಂಟ್ ಹಣವನ್ನು ಬಡ್ಡಿ ಕೊಡಬೇಕು. ಆ ಬಿಲ್ ಆಗುವುದರೊಳಗಡೆ ನಮ್ಮ ಬಿಲ್ ಅಲ್ಲಿಗೆ ಹೋಗುತ್ತದೆ, ಆಗ ನಮ್ಮ ರೇಟ್ ಅಲ್ಲಿಗೆ ಹೋಗುತ್ತದೆ. 3 ರಿಂಧ 5 ವರ್ಷ ಫಿಡಬ್ಲ್ಯೂಡಿಯಲ್ಲಿ ನಾವು ಕಾದು ಬಿಲ್‌ನ್ನು ತೆಗೆದುಕೊಳ್ಳಬೇಕಾಗುತ್ತದೆ. ಹೀಗೆ ಮಾಡಿದರೆ ನಾವು ಹೇಗೆ ಕಂಟ್ರಾಕ್ಟ್‌ನ್ನು ಮಾಡಬೇಕಾಗುತ್ತದೆ ಎಂದು ಅವರು ಹೇಳುತ್ತಾರೆ. ಒಂದು ಬೋರ್‌ವೆಲ್‌ಗೆ 40 ರಿಂದ 45 ರೂಪಾಯಿಗೆ ಖಾಸಗಿಯವನಿಗೆ : ಬೋರ್‌ವೆಲ್ ಕೊರೆಯುವನಿಗೆ ಸುಮಾರು ಸರ್ಕಾರಿ ಬೋರ್‌ವೆಲ್ ಕೊರೆಯುವುದಕ್ಕೆ 70–80 ರೂಪಾಯಿಗಳಷ್ಟು ಹಣವನ್ನು ಡಿಮ್ಯಾಂಡ್ ಮಾಡುತ್ತಾನೆ. ಏತಕ್ಕಾಗಿ ತಾವು ಕೊರೆಯುತ್ತೀರಿ ಎಂದು ಕೇಳಿದರೆ ಆತನು ಹೇಳುತ್ತಾರೆ. ಸ್ವಾಮಿ, ತಾವು ಅಷ್ಯೂರ್ ಮಾಡಿಬಿಡಿ ನಾನು ಬೋರ್‌ವೆಲ್ ಕೊರೆದ 15– ದಿವಸಕ್ಕೋ ಅಥವಾ ತಿಂಗಳಿಗೂ ಹಣ ಕೊಡಿಸುತ್ತೇನೆಂದು ಹೇಳಿಬಿಡಿ. ಖಾಸಗಿಯವನು ಕೊರೆದಿದ್ದ ಧಾರಣಿ ಈತನಿಗೆ ಕೊಡಬೇಕು. ನೀವು ಅಷ್ಯೂರ್ ಮಾಡಿಬಿಡಿ ಯಾವುದೇ ಇಂಜಿನಿಯರ್‌ಗೆ ಜಿಯಾಜಿಲಿಸ್ಟ್‌ಗಳಿಗೆ ಹಣ ಕೊಡಬೇಕಾಗಿಲ್ಲವೆಂದು ಹೇಳಿ. ಅಷ್ಟಕ್ಕೆ ಮಾಡುತ್ತೇವೆ

ಇದರ ಫಲಾನುಭವಿಗಳು ನಾವಲ್ಲ, ಸರ್ಕಾರವನ್ನು ನಡೆಸುತ್ತಿರುವವರು ಎಂದು ಅವರು ಹೇಳುತ್ತಾರೆ. ಆ ಕಡೆ ತಾವು ಎಲ್ಲಾದರೂ ಒಂದು ಚೆಕ್ ಅಂಡ್ ಬ್ಯಾಲೆನ್ಸ್‌ನ್ನು ತರಬೇಕು ನೀವು. ಅಕಸ್ಮಾತ್ ಒಂದು ಯೋಜನೆಯನ್ನು ತಾವು ಕೈಗೆತ್ತಿಕೊಂಡರೆ, ಆ ಯೋಜನೆಯು ಪೂರ್ಣವಾಗುವ ಕಾಲಕ್ಕೆ ನೀವು ಅದಕ್ಕೆ ಬೇಕಾಗಿರುವಂತಹ ಹಣವನ್ನು ನಿಗಧಿ ಮಾಡಬೇಕು. ಅದು ಆಗಲೇ ಇಲ್ಲ, ಎಲ್.ಓ.ಸಿ.ಗಳು ಇಲ್ಲ, ಬಿಲ್‌ಗಳು ಪೇಮೆಂಟಾಗುವುದಿಲ್ಲ. ಅವರುಗಳು ಕಾಯುತ್ತಾ ಕುಳಿತುಕೊಳ್ಳುತ್ತಾರೆ, ಇಂಜಿನಿಯರ್‌ಗಳಿಗೆ ಕಂಟ್ರಾಕ್ಟ್‌ಗಳು ಹಿಡಿತಕ್ಕೆ ಸಿಕ್ಕುವುದಿಲ್ಲ. ಏಕೆಂದರೆ, ಆತನಿಗೆ ಸರಿಯಾಗಿ ಹಣವನ್ನು ಕೊಟ್ಟರೆ ತಾನೇ ಆತನು ಹಿಡಿತಕ್ಕೆ ಸಿಕ್ಕಿಕೊಳ್ಳುವುದು. ನೀವು ಎಷ್ಟು ಬಿಲ್ ಕೊಡುತ್ತೀರೆಂದರೆ ಅದಕ್ಕೆ ತಮ್ಮಿಂದ ಉತ್ತರವಿಲ್ಲ. ಈ ಸ್ಥಿತಿಯೂ ಅಲ್ಲಿ ನಿರ್ಮಾಣವಾಗಿದೆ. ಅದರಲ್ಲಿಯೂ ದಿ, ದೇವರಾಜ್‌ಅರಸುರವರನ್ನು ನಿನ್ನೆ ದಿವಸ ಸ್ಮರಿಸಿಕೊಂಡೆವು. ನಾವು ಎಷ್ಟು ದಿವಸಕ್ಕೆ ವರುಣಾನಾಲೆಯಲ್ಲಿ ನೀರನ್ನು ಬಿಟ್ಟೆವು ಸ್ವಾಮಿ. ವರುಣಾ ನಾಲೆಗೆ ನೀರನ್ನು ಬಿಡುವುದಕ್ಕೆ ಎಷ್ಟು ವರ್ಷಗಳಾಯಿತು? ಇವತ್ತಿನ ದಿವಸ ಹೇಮಾವತಿಯೂ ಅದೇ ಸ್ಥಿತಿಗೆ ಬಂದಿದೆ. ತಾವು ಒಂದು ಹೊಸ ಯೋಜನೆಗೆ, ಸರ್ವೆ ಮಾಡುವ ಬಗ್ಗೆ 5 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ ಎಂದು ಹೇಳುತ್ತೀರಿ. 3 ವರ್ಷಗಳಿಂದ ಇಲ್ಲಿ ನೇತ್ರಾವತಿ ನದಿಯ ನೀರಿನ ಬಗ್ಗೆ ಸರ್ವೆ ಮಾಡುವ ಬಗ್ಗೆ ನಾನು ಹಣವನ್ನು ಇಟ್ಟಿದ್ದೇನೆಂದು ಸರ್ಕಾರ ಭಾಷಣವನ್ನು ಮಾಡಿತು. ಅವತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ. ಕೃಷ್ಣರವರು 5 ಕೋಟಿ ರೂಪಾಯಿಗಳನ್ನು ಇಟ್ಟರು. ನೇತ್ರಾವತಿಯ ನೀರನ್ನು ತುಮಕೂರು ಮತ್ತು ಈ ಭಾಗಕ್ಕೆ ತರುವ ಬಗ್ಗೆ ನಾನು ಒಂದು ಸರ್ವೆ ಮಾಡಿಸುತ್ತೇನೆ, ಇದರ ಬಗ್ಗೆ ನಕಾಶೆಯನ್ನು ತಯಾರು ಮಾಡಿಸುತ್ತೇನೆಂದು ಹೇಳಿದರು. ಆ ಯೋಜನೆಯೂ ಎಲ್ಲಿ ಹೋಯಿತು ಸ್ವಾಮಿ ? ಒಂದು ವರ್ಷ ತಾವು 5 ಕೋಟಿ ರೂಪಾಯಿಗಳ ಬಜೆಟ್ ಇಟ್ಟು ಸರ್ವೆ ಮಾಡುತ್ತೇವೆಂದು ಹೇಳಿ ಈಗ ಯೋಜನೆ ಏನಾಗಿದೆ ಎಂಬುದರ ಬಗ್ಗೆ ಮುಂಬರುವ ಬಜೆಟ್‌ನಲ್ಲಿ ಹೇಳದೆ ಹೋದರೆ ನೀವು ಹಣ ಇಟ್ಟಿರುವ ಬಗ್ಗೆ ಪ್ರಯೋಜನ ಏನಾಯಿತು ? ಅದನ್ನು ಕೈಬಿಟ್ಟಿದ್ದೀರಾ ? ಅದನ್ನು ತೆಗೆದುಕೊಂಡಿದ್ದೀರಾ ? ಇದರ ಬಗ್ಗೆ ಸರ್ವೆಯನ್ನು ಮುಂದುವರಿಸಿದ್ದೀರಾ ? what is the net result of the survey report ? ಇದರ ಬಗ್ಗೆ ತಾವು ಯಾರಿಗೆ ಹೇಳುತ್ತೀರಿ ? ಇದರ ಬಗ್ಗೆ ಅಲೋಚನೆಯನ್ನು ಮಾಡದೆ ಹೋದರೆ ಸರ್ಕಾರವನ್ನು ನಡೆಸುವುದು ಕಷ್ಟವಾಗುತ್ತದೆ. ಈಗ 25 ಪೈಸೆಯಾದರೂ ನಮ್ಮ ಬೇರೆ ಕೆಲಸಗಳಿಗೆ ಮಾಡಲು ಇದೆ ಎಂದು ಒಪ್ಪಿದ್ದೀರಿ. ಆದರೆ ಮುಂಬರುವ ದಿವಸಗಳಲ್ಲಿ 5 ಪೈಸೆಯೂ ಕೂಡ ಉಳಿಯುವುದಿಲ್ಲ. ಒಂದು ಸೊಸೈಟಿಯ ಜನರಲ್ ಬಾಡಿಯಲ್ಲಿ ನೀವು ರೆಸಿಫ್ಟ್ ಮತ್ತು ಪೇಮೆಂಟ್ಸ್‌ನ್ನು ಓದಿದ ಹಾಗೆ ಆಗುತ್ತದೆ. ಇಂತಿಂಥವರ ಹತ್ತಿರ ಸಾಲವನ್ನು ತೆಗೆದುಕೊಂಡು ಬಂದು ನಾವು ಬಡ್ಡಿಯನ್ನು ಇಷ್ಟು ಕೊಡುತ್ತೇವೆ ಅಸಲು ಇಷ್ಟನ್ನು ಕೊಡುತ್ತೇವೆ, ನಾವು ಇಷ್ಟು ಹಣ ಬಾಕಿದಾರರಾಗಿರುತ್ತೇವೆ ಎಂದು ಹೇಳುತ್ತೇವೆ. ಮುಂದೆ ಈ ರೀತಿಯಾದರೆ

ಸರ್ಕಾರ ನಡೆಯುವುದಿಲ್ಲ. ನಾವು ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ಒಂದು ಕಡೆ ನಮಗೆ ಇನ್‌ವೆಸ್ಟ್‌ಮೆಂಟ್‌ಗಳಿಂದ ನಮಗೆ ಬಾಕಿ ಬರಬೇಕಾದ ಹಣ ಮತ್ತು ನಮಗೆ ಬರಬೇಕಾದ ಪಾಲು ಸರಿಯಾಗಿ ಬರುತ್ತಿಲ್ಲ. ಇನ್ನೊಂದು ಕಡೆ ನೀವು ಹಾಕುತ್ತಿರುವ ಯಾವುದೇ ಹಣ ಜನರೇಟ್ ಮಾಡುತ್ತಿಲ್ಲ. ಅವರು ಹಣವನ್ನು ವಾಪಸ್ಸು ಕೊಡುತ್ತಿಲ್ಲ. ಅದರಲ್ಲಿಯೂ ನಮ್ಮ ಹೆಸರನ್ನು ಹೇಳಿಕೊಂಡು, ರೈತರ ಮತ್ತು ಕೃಷಿ ಹೆಸರನ್ನು ನೀರಾವರಿ ಹೆಸರನ್ನು ಹೇಳಿಕೊಂಡು ತಾವು ಏನು ಬಂಡವಾಳವನ್ನು ಹಾಕುತ್ತಿದ್ದೀರಿ, ನಿಜವಾಗಿ ಕೊಡುತ್ತಿಲ್ಲ. ಅದನ್ನು ನಾವು ನಿಜವಾಗಿಯೂ ಒಪ್ಪಿಕೊಳ್ಳುತ್ತೇನೆ. ತಾವು ಕೊಡುವ ಹಾಗೆ ಮಾಡಬೇಕು, ಸ್ವಲ್ಪ ಮಟ್ಟಿಗೆ ಹಣವನ್ನು ಡೈವರ್ಟ್ ಮಾಡಬೇಕು, ಇದರಿಂದಾಗಿ ಬಹಳ ಖರ್ಚು ಬರುವುದಿಲ್ಲ, ಒಂದೊಂದು ಕೆರೆಗಳಿಗೆ ನೀರನ್ನು ಬಿಡಿಸುವ ಬಗ್ಗೆ ಸುಮಾರು 2 ರಿಂದ 3 ಕೋಟಿ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಿದ್ದರೆ ನಮಗೆ ಸಾವಿರಾರು ಎಕರೆಗಳಷ್ಟು ಭೂಮಿ ಉಳಿದುಕೊಳ್ಳುತ್ತಿತ್ತು. ತುಮಕೂರು ಜಿಲ್ಲೆಯಲ್ಲಿ ಹೇಮಾವತಿ ನೀರಿನಿಂದ ಈ ವರ್ಷ ಬರದ ತೀವ್ರತೆ ಬಹಳ ಕಡಿಮೆಯಾಗಿದೆ. ಡಿಸ್ಟ್ರಿಬ್ಯೂಟರಿ ಮಾಡಿ ನೀರನ್ನು ಕೊಡದೆಹೋದರೂ ಕನಿಷ್ಟ ಪಾರ್ಟ್ ಆಫ್ ತಿಪಟೂರು ತಾಲ್ಲೂಕು ತುರುವೇಕೆರೆ, ಕುಣಿಗಲ್ ತಾಲ್ಲೂಕಿನಲ್ಲಿ ಹೇಮಾವತಿ ಕೆನಾಲ್‌ನಿಂದ ನೀರು ಹರಿದಿದ್ದರಿಂದ, ನಾವು ಬರದ ತೀವ್ರತೆಯನ್ನು ಸುಮಾರಷ್ಟು ಸುಧಾರಿಸಿಕೊಂಡಿದ್ದೇವೆ. ನಮ್ಮ ಉತ್ತರ ಭಾಗ ಏನಿತ್ತು ಬಿ.ಹೆಚ್. ರಸ್ತೆಯಿಂದ ಎಷ್ಟು ತೀಕ್ಷಣವಾಗಿತ್ತೆಂದರೆ ಅಲ್ಲಿ ನೀರೇ ಇಲ್ಲ. ಸ್ವಲ್ಪ ಒಂದೆರಡು ಕೆರೆಗಳಿಗೆ ನೀರನ್ನು ಬಿಟ್ಟಿದ್ದರೆ, ಒಳ್ಳೆಯದಾಗುತ್ತಿತ್ತು ನಾನು ಹಿಂದೆ ಶಾಸಕನಾಗಿದ್ದಾಗ ಹೇಳಿದ್ದೆ, ಇದರ ಬಗ್ಗೆ ಪರ್ಮಿಶನ್‌ನ್ನು ಕೂಡ ಕೊಡಿಸಿದ್ದೆ. ಜೆ.ಸಿ. ಪುರದ ಕೆರೆಗೆ, ದೊಡ್ಡ ಗುಣಿ ಕೆರೆಗೆ, ಕಟ್ಟಿಗೇನಹಳ್ಳಿ ಕೆರೆಗೆ ಈ ಕೆರೆಗಳಿಗೆಲ್ಲಾ ನೀರನ್ನು ಬಿಡಬಹುದು, ನೀರನ್ನು ಬಿಡುವುದರ ಬಗ್ಗೆ ಎಸ್ಟಿಮೇಟ್ ಮಾಡಿ ರಾಜೀವ್‌ಗಾಂಧಿ ಟೆಕ್ನಾಲಜಿ ಮಿಷನ್ ಮುಂದೆ ಈ ರಿಪೋರ್ಟ್ ಹೋಗಬೇಕೆಂಬುದರ ಬಗ್ಗೆ ಒಪ್ಪಂದವಾಗಿ ರಿಪೋರ್ಟ್‌ನ್ನು ಕೂಡ ರೆಡಿ ಮಾಡಿಸಿದ್ದೆವು. ಆಗ ತಾವೇನಾದರೂ ತುಮಕೂರು ಜಿಲ್ಲೆಯ ಮಟ್ಟಿಗಾದರೂ ಮಾಡಿಸಿದ್ದರೆ ನಮ್ಮ ಜೆ.ಸಿ. ಪುರದ ಕೆರೆಗೆ ಅದು ನನ್ನೂರು ಒಂದು ಕೆರೆಗೆ ನೀರನ್ನು ಬಿಟ್ಟಿದ್ದರೆ ಅದರಿಂದ ಮಾನ್ಯ ಸಿಂಧ್ಯಾರವರೇ, ನಾವು ಇನ್ನೂ 10 ಕೆರೆಗೆ ನೀರನ್ನು ಹರಿಸಬಹುದಾಗಿತ್ತು. 10 ಕೆರೆಗೆ ಫೀಡ್ ಮಾಡಿದ್ದರೆ ಕೊನೆಗೆ ವಾರ್ಕೊನಹಳ್ಳಿಗೆ ಬರಬೇಕಾಗಿತ್ತು. ಇಂತಹ ಬಗ್ಗೆ ತಾವು ಆಲೋಚನೆಯನ್ನು ಮಾಡಬೇಕು. ಎರಡನೆಯದಾಗಿ ಕೆಪಿಟಿಸಿಎಲ್‌ಗೆ, ಇರಿಗೇಷನ್‌ಗೆ ಮತ್ತು ಅಗ್ರಿಕಲ್ಚರ್‌ಗೆ ಮೂರಕ್ಕೂ ಒಂದು ಕಾಯಕಲ್ಪ ವನ್ನು ತಾವು ತರಬೇಕು. ಸಾರ್, ಕೆಪಿಟಿಸಿಎಲ್‌ನವರು ಹೇಳುವುದೆಲ್ಲವೂ ಸತ್ಯ ಅಲ್ಲ, ಅಷ್ಟೊಂದು ರೈತರಿಗೆ ಇವರು ಕರೆಂಟ್‌ನ್ನು ಕೊಡುತ್ತಿಲ್ಲ. ಅಲ್ಲಿ ಆಗುತ್ತಿರುವಂತಹ ಟ್ರಾನ್ಸ್‌ಮಿಷನ್ ಲಾಸ್. ಡಿಸ್ಟ್ರಿಬ್ಯೂಷನ್ ಲಾಸ್, ಕಳ್ಳತನ, ಎಲ್ಲದನ್ನೂ ಸೇರಿಸಿ ನಮ್ಮ ಲೆಕ್ಕಕ್ಕೆ ತರುತ್ತಾರೆ. ಸುಟ್ಟು ಹೋಗುವಂತಹ ಟ್ರಾನ್ಸ್‌ಫಾರ್ಮರ್‌ಗೆ ನಾವು ಹೊಣೆಯಲ್ಲ. ಒಂದೇ ದಿವಸಕ್ಕೆ

ಯಾವುದೇ ಟಿ.ಸಿ.ಯೂ ಸುಟ್ಟುಹೋಗುವುದಿಲ್ಲ. ಅದು 2 ರಿಂದ 6 ವರ್ಷಗಳ ಕಾಲ ನಡೆದು ಅಲ್ಲಿ ಟಿ.ಸಿ. ಯು ಸುಟ್ಟು ಹೋಗಿರುವುದು. ನಾನು ತಮಗೆ ಒಂದು ಮಾಹಿತಿಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಕ.ವಿ.ಕಾ. ಎಂದು ನಮ್ಮ ಒಂದು ಫ್ಯಾಕ್ಟರಿಯನ್ನು ಇಟ್ಟುಕೊಂಡು ಎನ್.ಜಿ.ಇ.ಎಫ್. ಎಂದು ಫ್ಯಾಕ್ಟರಿ ಇಟ್ಟುಕೊಂಡು ಕೆಪಿಟಿಸಿಎಲ್‌ನವರು ಒಂದೇ ಒಂದು ಆರ್ಡರನ್ನೂ ಕೂಡ ಪ್ಲೇಸ್ ಮಾಡುವುದಿಲ್ಲ. ಏಕೆ ? ಕಮೀಷನ್ ಬರುವುದಿಲ್ಲ. ಹಾಗಾದರೆ ತಾವು ಇವತ್ತು ಧೀಮಂತರಿದ್ದೀರಿ, ಹೋದ ಸಲ ಯಾರೋ ಎಂಡಿಯಾಗಿದ್ದರು, ಈಗ ಇರುವಂತಹ ಎಂಡಿಯವರ ಬೋನಾಫೈಡಿಯನ್ನು ತಾವು ಸ್ವಲ್ಪ ಎನ್‌ಕ್ವಯರಿ ಮಾಡಿಸಿ. ಚೆಕ್ ಮಾಡಿಸಿ, with due respect, ಏನಾಯಿತು ? ಅವರಿಗೆ ಟ್ರಾನ್ಸ್‌ಫಾರ್ಮರ್ ಆರ್ಡರ್ಸ್‌ನು ಎಲ್ಲಿಗೆ ಕೊಟ್ಟರು ? ಅವರು ಕವಿಕಾವನ್ನು ಏತಕ್ಕಾಗಿ ನಿಷ್ಕ್ರಿಯೆ ಮಾಡಿದರು. ಒಂದೊಂದು ಫ್ಯಾಕ್ಟರಿಯನ್ನು ಮುಚ್ಚುವುದಕ್ಕೆ ಒಂದೊಂದು ಕಡೆ ಇವರು ಎಂಡಿಯಾಗಿ ಈ ರಾಜ್ಯಕ್ಕೆ ಏತಕ್ಕೆ ಬರುತ್ತಾರೆ ನೀವು ಕವಿಕಾ ಫ್ಯಾಕ್ಟ್ರರಿಯನ್ನು ಮಾಡಿದ್ದಾದರೂ ಏತಕ್ಕಾಗಿ ? ಕವಿಕಾ ಫ್ಯಾಕ್ಟರಿಯ ಮ್ಯಾನೇಜಿಂಗ್ ಡೈರೆಕ್ಟರ್ ಕೈಕಟ್ಟಿಕುಳಿತುಕೊಳ್ಳುತ್ತಾನೆ. ಅದೇ ಕೆಪಿಟಿಸಿಎಲ್‌ನ ಎಂ.ಡಿ. ಆರ್ಡರನ್ನು ಕೊಡುವುದಿಲ್ಲವೆಂದು ಹೇಳುತ್ತಾನೆ. ಹಾಗಾದರೆ ಇವರಿಗೆ ಹೇಳುವವರು ಮತ್ತು ಕೇಳುವವರು ಯಾರೂ ಇಲ್ಲವಾ ? ತರಿಸಿ, ನಿನ್ನೆ ಯಾರನ್ನೋ ಮೆಡಿಕಲ್ ಕಾಲೇಜಿ ಮಾಡಿರುವವರೆಲ್ಲಾ ಅವರ ಅಸೆಟ್ಸ್ ಏನಿತ್ತು. ಅವರು ಈಗ ಏನು ಮಾಡಿಕೊಂಡಿದ್ದಾರೆ ಎಂದು ಮಾತನಾಡಿದ್ದೇವೆ ನಾವು ಒಂದು ಪಟ್ಟಿಯನ್ನು ಕೊಡುತ್ತೇನೆ ಐ.ಎ.ಎಸ್. ಆಫೀಸರ್‌ರವರ ಅಸೆಟ್ಸ್ ಬಗ್ಗೆ ಪಟ್ಟಿಯನ್ನು ತರಿಸಿ. what was the assests declared when he joined the duty and what is his assets today ? ನಾನು ಕೇಳುತ್ತೇನೆ, ಕೆಪಿಟಿಸಿಎಲ್ ಎಂ.ಡಿ. ಕಳೆದ ಒಂದೂವರೆ ಮತ್ತು ಎರಡು ವರ್ಷಗಳಿಂದ ಏನು ಕೆಲಸವನ್ನು ಮಾಡಿದ್ದಾರೆ ಅದರ ಬಗ್ಗೆ ಸರ್ಕಾರದವರಿಗೆ ಜನಪರವಾದ ನಿಜವಾಗಿಯೂ ಕಾಳಜಿ ಇದ್ದರೆ ಅವರ ಎಲ್ಲಾ ಬೋನಾಫೈಡ್ಸ್ ಬಗ್ಗೆ ತಾವು ಎನ್‌ಕ್ವಯರಿ ಮಾಡಿಸಬೇಕು. ಇಲ್ಲವೆಂದರೆ ನಾವು ಅಧ್ಯಕ್ಷರ ಪರ್ಮಿಶನ್‌ನ್ನು ತೆಗೆದುಕೊಂಡು ಇನ್ನೊಂದು ಬೇಡಿಕೆಯುನ್ನು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಮಾಧುಸ್ವಾಮಿಯವರು ಒಳ್ಳೆಯ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ನನ್ನ ಇಲಾಖೆಗೆ ಬಜೆಟ್ ಮೇಲೆ ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುವುದರಿಂದ ಈಗ ಆ ವಿಷಯದ ಬಗ್ಗೆ ನಾನು ನನ್ನ ಸರ್ಕಾರದ ಧೋರಣೆಯನ್ನು ತಿಳಿಸೋಣ ಎಂಬ ದೃಷ್ಟಿಯಿಂದ ನಾನು ಇಂಟರ್‌ವೀನ್ ಆಗಿದ್ದೇನೆ. ತಾವು ಏನು ಹೇಳಿದ್ದೀರಿ ಅದು ಸತ್ಯವಾದ ಮಾತಾಗಿದೆ. ಕವಿಕಾ ಏನಿದೆ. ಅದು ದುಸ್ಥಿತಿಗೆ ಬಂದಿದೆ. ನಿಜವಾಗಿಯೂ ಕೂಡ ಅದನ್ನು ಬದುಕಿಸಬಹುದು. ಅದರಿಂದಾಗಿಯೇ ನಾವು ಒಂದು ತೀರ್ಮಾನವನ್ನು

ಮಾಡಿದ್ದೇವೆ. ಸಧ್ಯದಲ್ಲಿಯೇ ಬೆಸ್ಕಾಂ, ಕೆಪಿಟಿಸಿಎಲ್, ಮತ್ತು ಕವಿಕಾ ಈ ಮೂರು ಕಾರ್ಖಾನೆಗಳ ಸಂಘಟನೆಗಳ ಪದಾಧಿಕಾರಿಗಳನ್ನು ಕರೆಸಿ ಏನಾದರೂ ಮಾಡಿ ಕವಿಕಾದಿಂದಲೇ ಎಲ್ಲಾ ಆರ್ಡರ್ಸ್‌ಗಳನ್ನು ಬೆಸ್ಕಾಂಗೆ ಹೋಗಬೇಕು. ಮತ್ತು ಕವಿಕಾದವರು ಸಹಿತ ಅಲ್ಲಿ ಎಂಪ್ಲಾಯಿಸ್‌ಗಳು ಬಹಳ ಚೆನ್ನಾಗಿದ್ದಾರೆ. ಅಲ್ಲಿರುವಂತಹ ಉದ್ಯೋಗಿಗಳು ಬಹಳ ಒಳ್ಳೆಯವರಾಗಿದ್ದಾರೆ. ಒಳ್ಳೆಯ ಕ್ವಾಲಿಟಿಯ ಟ್ರಾನ್ಸ್‌ಫಾರ್ಮರ್‌ಗಳನ್ನು ಅವರು ಮಾಡಿಕೊಡುತ್ತಾರೆ. ಇದರ ಬಗ್ಗೆ ಸಂಶಯವೇನೂ ಇಲ್ಲ, ಅದೇ ರೀತಿಯಾಗಿ ಒಂದು ನೀತಿಯನ್ನು ಮಾಡಿ ಅಲ್ಲಿಂದ ತೆಗೆದುಕೊಳ್ಳಬೇಕೆಂದು ಮಾಡುವುದರ ಜೊತೆಗೆ ಕವಿಕಾದಲ್ಲಿಯೂ ಸಹಿತ ಪರಿಸ್ಥಿತಿಯೂ ಸರಿಯಾಗಿಲ್ಲ. ಅಲ್ಲಿ ಆಡಳಿತವೂ ಕೆಟ್ಟಿದೆ. ಅದನ್ನು ಸರಿಮಾಡುವುದಕ್ಕೆ ಈಗಾಗಲೇ ನಾನು ಕ್ರಮವನ್ನು ತೆಗೆದುಕೊಂಡಿದ್ದೇನೆ. ಸಧ್ಯದಲ್ಲಿ ಅದು ಸರಿಹೋಗುತ್ತದೆ ಎಂಬ ಭರವಸೆಯನ್ನು ಮಾನ್ಯ ಅಧ್ಯಕ್ಷರೆ ಕೊಡುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾನು ಸರ್ಕಾರವನ್ನು ಶ್ಲಾಘಿಸುತ್ತೇನೆ. ನಾನು ಕವಿಕಾ ಮ್ಯಾನೇಜ್ ಮೆಂಟ್‌ನ್ನು ಹೊಗಳಲಿಲ್ಲ, ಅದು ನನ್ನ ಕೆಲಸವಲ್ಲ. ಒಂದು ಫ್ಯಾಕ್ಟರಿ ಇದ್ದರೂ ಕೂಡ ಅದನ್ನು ಮುಚ್ಚಬೇಡಿ. ಒಂದು ವ್ಯವಸ್ಥೆಯನ್ನು ಕೆಜ್ಲಾಸ್ ಮಾಡಿ, ಒಂದು ಪಬ್ಲಿಕ್ ಸೆಕ್ಟಾರ್‌ನ್ನು ಮುಚ್ಚಿ ಪ್ರೈವೇಟ್‌ನವರಿಗೆ ಕೊಟ್ಟಿರುವುದು ತಪ್ಪು ಎಂದು ನನ್ನ ಮಾತಿನ ಸಾರಾಂಶ. ನಾನು ಇದರ ಬಗ್ಗೆ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಕೆಪಿಟಿಸಿಎಲ್‌ಗೆ ಒಬ್ಬ ಮ್ಯಾನೇಜಿಂಗ್ ಡೈರೆಕ್ಟರ್ ಬಂದರು, ದಯಮಾಡಿ ಅವರ ಬಗ್ಗೆ ಸ್ವಲ್ಪ ತಾವು ಗಮನಹರಿಸಬೇಕು. ಅವರು ತಾಂತ್ರಿಕವಾಗಿ ಎಕ್ಸ್‌ಪರ್ಟ್ ಅಲ್ಲ. ಎಕ್ಸಿಕ್ಯೂಟೀವ್ ಪೋಸ್ಟ್‌ನಿಂದ ನಾನ್ ಎಕ್ಸಿಕ್ಯೂಟೀವ್ ಪೋಸ್ಟಿಂಗ್ ಕೊಡುವುದೇ ಹಣ ಮಾಡಿಕೊಳ್ಳುವುದಕ್ಕೆ ಎಂಬ ಭಾವನೆಯನ್ನು ಇಟ್ಟುಕೊಂಡು ಅವರು ಈ ರೀತಿಯ ಕೆಲಸ ಮಾಡಿ ಈ ಸ್ಥಿತಿಗೆ ಕೆಪಿಟಿಸಿಎಲ್ ಅಂತಹ ಸಂಸ್ಥೆಯನ್ನು ತರಬಾರದಾಗಿತ್ತು ಕೆಪಿಟಿಸಿಎಲ್‌ಗೆ ತಮ್ಮಿಂದಲೂ ಮಾನ್ಯ ಸಿದ್ಧರಾಮಯ್ಯನವರೇ, ಅನ್ಯಾಯವಾಗಿದೆ. ತಾವೂ ಕೂಡ ಯಾವುದೇ ವರ್ಷ ನೀವೇನು 22 ಪರ್ಸೆಂಟ್ 24 ಪರ್ಸೆಂಟ್ ಕೊಡುತ್ತೇವೆಂಬ ಬಗ್ಗೆ ಬಜೆಟ್‌ನಲ್ಲಿ ಹೇಳಿದ್ದೀರಿ. ನೀವು ಯಾವತ್ತೂ ಕೂಡ ಹಣವನ್ನು ಬಿಡುಗಡೆ ಮಾಡಿಲ್ಲ. ಮಾನ್ಯ ಅಧ್ಯಕ್ಷರೆ, ಈ ಪ್ರಮಾಣದ ಹಣ ಬಿಡುಗಡೆಯಾಗಿರುವುದಿಲ್ಲ. ತಾವು ಇದನ್ನು ನೋಡಿಕೊಳ್ಳಬೇಕಾಗಿತ್ತು. ಇನ್ನು ಎರಡನೆಯದು ತಾವು ಏನು ಕೆಪಿಟಿಸಿಎಲ್‌ಗೆ ಹಣವನ್ನು ಬಿಡುಗಡೆ ಮಾಡುತ್ತಿದ್ದೀರಿ, ಸುಮಾರು ಪಾಪುಲರ್ ಪ್ರೋಗ್ರಾಮ್ಸ್‌ನ್ನು ಅವರು ಉಚಿತವಾಗಿ ಮಾಡುತ್ತಿದ್ದರು. ಇವತ್ತಿನ ದಿವಸ ಆ ಸ್ಥಿತಿ ಇಲ್ಲ. ನಮಗೆ ಒಂದು ಮಿನಿ ವಾಟರ್ ಸ್ಕೀಮ್‌ನ್ನು ಕೊಡಿ ಎಂದರೆ, 50 ಸಾವಿರ ರೂಪಾಯಿಗಳಷ್ಟು ಹಣವನ್ನು ಡೆಪಾಸಿಟ್ ಕೊಡಬೇಕು. ಒಂದು ಗ್ರಾಮಪಂಚಾಯಿತಿಯಲ್ಲಿ ಹಾಕುವಂತಹ ಬೋರ್‌ವೆಲ್ ಮತ್ತು ಮಿನಿವಾಟರ್ ಸ್ಕೀಮ್‌ಗೆ. ಒಂದು ಮೇಜರ್ ವಾಟರ್ ಸ್ಕೀಮ್‌ಗೆ ಒಂದು ಲಕ್ಷ ರೂಪಾಯಿಗಳನ್ನು ನಾವು ಕೆಪಿಟಿಸಿಎಲ್‌ಗೆ ಡೆಪಾಸಿಟ್‌ನ್ನು ಕೊಡಬೇಕು. ನೀವು ಬಜೆಟ್‌ನಲ್ಲಿ ಗ್ರಾಮೀಣ ಭಾಗಕ್ಕೆ ನೀರಿಗೆ ಇಷ್ಟು ಕೊಡುತ್ತಿದ್ದೇವೆಂದು ಹೇಳುತ್ತೀರಿ, ಒಂದೊಂದು ವಾಟರ್

ಸ್ಕೀಮ್‌ಗೆ ಒಂದು ಲಕ್ಷ ರೂಪಾಯಿಗಳನ್ನು ಡೆಪಾಸಿಟ್ ಮಾಡುತ್ತಿದ್ದೇವೆ. ಮಾನ್ಯ ಸಿದ್ಧರಾಮಯ್ಯನವರೇ, ಅಡ್ವಾನ್ಸ್‌ನಲ್ಲಿ ಮಾಡುತ್ತಿದ್ದೇವೆ, ದಯಮಾಡಿ ಇದರ ಬಗ್ಗೆ ತಾವು ನಿರ್ಬಂಧವನ್ನು ಹೇರಬೇಕು. ಒಂದು ಮಿನಿ ವಾಟರ್ ಸ್ಕೀಮ್‌ನ್ನು ಮಾಡುತ್ತೇವೆಂದರೆ ಫಸ್ಟ್ 50 ಸಾವಿರ ರೂಪಾಯಿಗಳನ್ನು ಸರ್ಕಾರ ಕಟ್ಟಬೇಕು. ಇದರಿಂದ ಎಷ್ಟು ಹಣ ಬರುತ್ತದೆಂಬ ಬಗ್ಗೆ ಸರ್ಕಾರಕ್ಕೆ ಲೆಕ್ಕವನ್ನು ಕೊಡುತ್ತಾರಾ? ಹಾಗಾದರೆ ನಾವು ಬಜೆಟ್ ಸಪೋರ್ಟ್‌ನ್ನು ಏತಕ್ಕಾಗಿ ಕೊಡಬೇಕು ? ಅವರು ಹೇಳಬೇಕು, ನೀವು ಬಜೆಟ್‌ನಲ್ಲಿ ಯಾವ್ಯಾವ ಪ್ರೋಗ್ರಾಮ್‌ನ್ನು ರಾಜ್ಯಕ್ಕೆ ಆಗಬೇಕೆಂದು ಮಾಡಿದ್ದೀರಿ, ಖಂಡಿತವಾಗಿಯೂ ಆ ಪ್ರೋಗ್ರಾಮ್ ಇಂಪ್ಲಿಮೆಂಟೇಷನ್ ಆಗಿಲ್ಲ. ಇ ಅಂಡ್ ಐ ಕೆಲಸವನ್ನು ಅವರು ಎಂದೂ ಕೂಡ ಮಾಡಿರುವುದಿಲ್ಲ. ಅವರು ಮಾಡಿದ್ದರೆ ಟ್ರಾನ್ಸ್‌ಫಾರ್ಮರ್‌ಗಳು ಇಷ್ಟೊಂದು ಫೇಲ್ ಆಗುವ ಸ್ಥಿತಿ ಇರುತ್ತಿರಲಿಲ್ಲ. ಅವರು ಎಕ್ಸ್‌ಟೆನ್ಷನ್ ಇಂಪ್ರೂವ್‌ಮೆಂಟ್‌ನಲ್ಲಿ ಸಿಸ್ಟಮ್ ಇಂಪ್ರೂವ್‌ಮೆಂಟ್‌ನಲ್ಲಿ ಕೆಲಸ ಮಾಡಿ ಟಿಸಿಗಳನ್ನು ಕಾಲಕಾಲಕ್ಕೆ ಬದಲಾಯಿಸಿದ್ದರೆ 1994ನೇ ಇಸವಿಯಿಂದ ಚಿಕ್ಕನಾಯಕನಹಳ್ಳಿಯಲ್ಲಿ ಪೆಂಡಿಂಗ್ ಇರುವಂತಹ ಸಿಸ್ಟಮ್ ಇಂಪ್ರೂವ್‌ಮೆಂಟ್‌ನಲ್ಲಿ ಟಿಸಿಗಳ ಸಂಖ್ಯೆ 110 ಇದೆ. ಮಾನ್ಯ ಸಿದ್ದರಾಮಯ್ಯನವರೇ, ನಾನಲ್ಲ ಎಸ್ಟಿಮೇಟ್ ಮಾಡುವವನು. ಇದನ್ನು ಮಾಡುವವರು ಅವರೇ ಲೋಡ್ ಜಾಸ್ತಿ ಎಲ್ಲಿ ಇದೆ ? ಎಲ್ಲಿ ಟಿಸಿಗಳನ್ನು ಚೇಂಜ್ ಮಾಡಬೇಕು, ಅಡಿಷನ್ ಮಾಡಬೇಕು ಅವು ಒಂದೂ ಮಾಡಲಿಲ್ಲ. ಇದರ ನೆಟ್ ಎಫೆಕ್ಟ್ ಇನ್ನು ಎರಡನೆಯದು ಸ್ಟಾಫ್‌ಗಳು ಒಬ್ಬರೂ ಸಹ ಫೀಲ್ಡ್ ಮೇಲೆ ಹೋಗುವುದಿಲ್ಲ. ಕಂಟ್ರಾಕ್ಟ್‌ನ್ನು ಕೊಟ್ಟುಬಿಡುತ್ತಾನೆ, ಪ್ರೈವೇಟ್‌ನವರು ತಂತಿಯನ್ನು ಬಿಗಿಯಾಗಿ ಎಳೆಯುವುದಿಲ್ಲ. ಸಾರ್, ಸಣ್ಣ ಮಳೆ ಬಂದು ಲೈಟಿಂಗ್ ಅರೆಸ್ಟ್, ಆದರೆ ಸುಮಾರು ಟಿಸಿಗಳು ಫೇಲಾಗುತ್ತದೆ. ಇಡೀ ಟಿಸಿಗಳು ಫೇಲಾಗಿರುವುದು ರೈತರ ಪ್ರಮಾಣದಿಂದ ಆಗಿಲ್ಲ. ಲೈಟಿಂಗ್ ಅರೆಸ್ಟ್‌ನಿಂದ, ಗುಡುಗು ಮತ್ತು ಮಿಂಚಿನಿಂದ ಆಗಿದೆ. ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ಏಕೆ ಫೇಲಾಯಿತು ಎಂದು ಹೇಳಲಿ. ಇದಕ್ಕೆ ಯಾರು ಜವಾಬ್ದಾರರು ? ನಾನಾ ? ಹಾಗಾದರೆ ಇದರ ಬಗ್ಗೆ ಅವರನ್ನು ಜವಾಬ್ದಾರರನ್ನಾಗಿ ಮಾಡಬೇಕೋ ಅಥವಾ ಬೇಡವೋ ? ತಾವು ಯೋಚನೆ ಮಾಡಿ. ಕೆಪಿಟಿಸಿಎಲ್ ಎಂದರೆ ರೈತರಿಗೆ ಕರೆಂಟ್ ಕೊಟ್ಟೆವು ನಮ್ಮ ಸಂಸ್ಥೆಯು ಮುಳುಗಿಹೋಯಿತು ಎಂಬುದಾಗಿ ಭಾಷಣವನ್ನು ಮಾಡಿ, under the pretext of that. ಇದರಲ್ಲಿ ಎಲ್ಲರೂ ಸೇವೆ ಆಗಿದ್ದಾರೆ. ಇದು ನಮ್ಮ ದೌರ್ಭಾಗ್ಯ ತಾವು ನೊಂದುಕೊಳ್ಳುವುದಿಲ್ಲವೆಂದರೆ ನಾನು ಹೇಳುತ್ತೇನೆ. ಯಾರೇ ಇಲ್ಲಿ ಕೆಇಬಿ ಮಂತ್ರಿಗಳಾಗಿದ್ದರು ಅವರು ಪೂರ್ಣ ಪ್ರಮಾಣದ ಕೆಲಸವನ್ನು ಮಾಡಲಿಲ್ಲ. ತೀರಾ ದೊಡ್ಡವರಿಗೆ ಬೇಕಾಗಿತ್ತು ಆ ಖಾತೆ ಸನ್ಮಾನ್ಯ ರೇವಣ್ಣನವರನ್ನು ಎಕ್ಸೆಂಟ್ ಮಾಡಿದರೆ ತೀರಾ ದೊಡ್ಡವರಿಗೆ ಕೆಪಿಟಿಸಿಎಲ್ ಬೇಕಾಗಿತ್ತು. ಇದರ ಭಗ್ಗೆ ಒಂದು ದಿವಸಗಳ ಕಾಲ ಕುಳಿತು ಯೋಚನೆಯನ್ನು ಮಾಡೋಣ. ಯಾವಾತ್ತಾದರೂ ಒಂದು ದಿವಸಗಳ ಕಾಲ ಈ ಇಲಾಖೆಯು ಏನಾಗಿದೆ ಎಂದು ಕೇಳಿದ್ದಾರಾ ? ಎರಡು ಸಾವಿರ ಮತ್ತು ಎರಡೂವರೆ ಸಾವಿರ ಬಜೆಟ್ ಇದೆ

ಎಂದು ಹೇಳುವುದು. ನಮ್ಮ ಖಾತೆಯೂ ನಮಗೆ ಇರಲಿ ಎಂದು ಹೇಳುವುದು ಗೀವ್ ರೆಸ್ಪೆಕ್ಟ್ ನಾನು ಅವರನ್ನು ಟೀಕೆ ಮಾಡುವುದಿಲ್ಲ. ನಿಮಗೆ ಮಾಡಬೇಕೆಂಬ ಅರ್ಜಿ ಇದ್ದಾಗ, ನಿಮಗೆ ಅಲ್ಲಿ ಕಾನ್‌ಸಂಟ್ರೇಟ್ ಮಾಡಬೇಕೆಂದಾಗ ಇಂತಹ ಒಂದು ಕೋರ್ ಡಿಪಾರ್ಟ್‌ಮೆಂಟ್, ರೈತರು ಉಳಿಯಬೇಕು ಕೆಇಬಿ, ಕೆಪಿಟಿಸಿಎಲ್ ಇಂಡಸ್ಟ್ರಿ ಉಳಿಯಬೇಕು, ಕೆಪಿಟಿಸಿಎಲ್ ಸಾರ್ವಜನಿಕರ ಜನಜೀವನ ಚೆನ್ನಾಗಿರಬೇಕು, ಕೆಪಿಟಿಸಿಎಲ್ ಅಂತಹ ಒಂದು ಖಾತೆಗೆ ನಿಮ್ಮಂತಹ ಯಾರಾದರೂ ಒಬ್ಬರು ಮಂತ್ರಿಯಾಗುವುದನ್ನು ಬಿಟ್ಟು ಏನೋ ಇಲ್ಲಿ ಬಜೆಟ್ ಓದುವುದು, ಅದನ್ನು ಮಾಡುತ್ತೇನೆ. ಇದನ್ನು ಮಾಡುತ್ತೇನೆಂದು ಇದಕ್ಕೆ ಬರಬೇಕಾ ನೀವು ? ಹಾಗಾದರೆ ನಿಮಗೆ ಹಳ್ಳಿಯ ಜನರ ಮೇಲೆ ಆಸೆ ಇಲ್ಲವೇ ? ತೆಗೆದುಕೊಳ್ಳಿ, ನೀವು ಯಾರಾದರೂ ಆ ಖಾತೆಯನ್ನು. ಇದರ ಬಗ್ಗೆ ಸ್ವಲ್ಪ ಹಿಡಿತಕ್ಕೆ ತನ್ನಿ, ನಾವು ಸಂತೋಷವನ್ನು ಪಡುತ್ತೇವೆ. ಈ ಬಜೆಟನ್ನು ಓದಿ ಬ್ಯಾಲೆನ್ಸ್‌ನ್ನು ಮಾಡಿ ಅಲ್ಲಿಯ ಲಾಸ್‌ನ್ನು ತೆಗೆದು ಇಲ್ಲಿ ತುಂಬಿ ಬಹಳ ಅನ್ನಿಸಿಕೊಳ್ಳುವುದಕ್ಕಿಂತ ನಿಮ್ಮನ್ನು ನಂಬಿರುವಂತಹ ರೈತರಿಗೆ ರಕ್ಷಣೆಗೆ ಬನ್ನಿ 70 ಪರ್ಸೆಂಟ್ ರೈತರು ರಾಜ್ಯವನ್ನು ಪ್ರತಿನಿಧಿಸುತ್ತಿರುವಂತಹ ಒಬ್ಬ ಉಪಮುಖ್ಯ ಮಂತ್ರಿ ನಾಯಕರು ಅವರನ್ನು ಯಾರಾದರೂ ಉದ್ಧಾರ ಮಾಡಿ. ಇಲ್ಲಿ ಬ್ಯಾಲೆನ್ಸ್, ಚೆಕ್ಸ್ ಇದನ್ನು ಬಿಟ್ಟುಬಿಡಿ, ಎಲ್ಲೋ ಒಂದಿಷ್ಟು ಕಮರ್ಷಿಯಲ್ ಟ್ಯಾಕ್ಸ್ ಅಷ್ಟು ಹೋಗುತ್ತಿದೆ, ಇನ್ನೊಂದು ಕಡೆ ಇಷ್ಟು ಬರುತ್ತದೆ ಪುಸ್ತಕವನ್ನು ಬರೆದುಕೊಂಡು ದೊಡ್ಡ ಹೆಡ್‌ಕ್ಲರ್ಕ್ ಕೆಲಸ ಮಾಡುವುದಲ್ಲ. ಜೊತೆಗೆ ಕೆಇಬಿಯನ್ನು ತೆಗೆದುಕೊಳ್ಳಿ. ಒಂದು ಸಲ ಕಂಟ್ರೋಲ್‌ನ್ನು ಮಾಡಿ ಕೆಇಬಿಯ ಬಗ್ಗೆ ನಾವು ಏಕೆ ಹೇಳುತ್ತೇವೆಂಬ ಬಗ್ಗೆ ನಿಮಗೆ ಅರ್ಥವಾಗುತ್ತದೆ. ದಯಮಾಡಿ ಆ ಇಲಾಖೆಯನ್ನು ತಾವು ತಹಬದಿಗೆ ತರಬೇಕು, ಇವತ್ತು ನಮ್ಮ ಮೇಲೆ ಅವ್ಯಾಹತವಾಗಿ ಪ್ರಚಾರ ಮಾಡಿದ್ದಾರೆ. ರೈತರಿಂದ ನಷ್ಟವಾಯಿತು, ಎಂದು ಇದರ ಬಗ್ಗೆ ತಾವು ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ನಾನು ಮುಂದಕ್ಕೆ ಬರುತ್ತೇನೆ. ನಾನು ಬೇರೆ ಇಲಾಖೆಗಳ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ತಾವು ನಿಗಧಿ ಮಾಡಿರುವಂತಹ ಸಮಯ ಬಹಳ ಕಡಿಮೆ ಇದೆ. ನಮ್ಮ ತೋಟಗಾರಿಕಾ ಕ್ಷೇತ್ರ ತೀರಾ ನಿಷ್ಕ್ರಿಯೆಯಾಗಿದೆ, ನಾವು ಪಯೋನಿಯರ್ಸ್ ಮಹಾರಾಷ್ಟ್ರದವರು ನಮಗೆ ಸ್ಪರ್ಧೆ ಮಾಡಿ ಅವರು ಏನೋ ಹೊಸ ಹೊಸ ಪ್ಯಾಕೇಜ್‌ಗಳನ್ನು ಕೊಟ್ಟುಕೊಂಡು ಹಾರ್ಟಿಕಲ್ಚರ್ ಕ್ಷೇತ್ರದಲ್ಲಿ ಬೆಳವಣಿಗೆಯನ್ನು ಮಾಡದೇ ಹೋಗಿದ್ದರೆ ಇಡೀ ಭಾರತದ ದೇಶದಲ್ಲಿ ನಾವು ನಂ : 1 ಪೊಸಿಷನ್‌ಗೆ ತೋಟಗಾರಿಕಾ ಕ್ಷೇತ್ರದಲ್ಲಿರುತ್ತಿದ್ದೆವು. ಅದರಲ್ಲಿ ಪ್ರಮುಖವಾದಂತಹ ಬೆಳೆ ನಮಗೆ ಕಾಫಿ, ತೆಂಗು, ಅಡಿಕೆ, ದಾಳಿಂಬೆ, ದ್ರಾಕ್ಷಿ ಇತ್ತು. ಬಿಜಾಪುರ ಭಾಗದಲ್ಲಿ ದಾಳಿಂಬೆ ಮತ್ತು ದ್ರಾಕ್ಷಿ ಇತ್ತು. ಈ ಭಾಗದಲ್ಲಿ ನಾವಿದ್ದೆವು. ಕೋಲಾರ ಭಾಗದಲ್ಲಿ ನಾವು ತರಕಾರಿ ಹಣ್ಣುಗಳನ್ನು ಬೆಳೆದು ಇಡೀ ದೇಶಕ್ಕೆ ನಾವು ಮಾದರಿಯಾಗಿದ್ದೆವು. ಹಾಗಾಗಿ ರೈತರುಗಳು ಸ್ವಲ್ಪ ಉಸಿರಾಡುತ್ತಿದ್ದರು. ಇತ್ತು ಇಡೀ ತೋಟಗಾರಿಕಾ ಕ್ಷೇತ್ರವು ನಿರ್ನಾಮವಾಗಿದೆ. ನಾನು ರಾಜಕೀಯ ಮಾಡುವುದಕ್ಕಾಗಿ ಮಾತನಾಡುತ್ತಿಲ್ಲ. ನಾನು ನಾಲ್ಕೂವರೆ ವರ್ಷಗಳ ಕಾಲ ಹೊರಗಡೆ

ಇದ್ದವನಾಗಿದ್ದೇನೆ. ನಾನು ಸ್ವಂತ ರೈತ, ಕಷ್ಟ ಅನುಭವಿಸಿರುವವನು. ಭಗವಂತ ಜನರ ಸಮಸ್ಯೆಗಳನ್ನು ಹೇಳಿಕೊಳ್ಳುವುದಕ್ಕೆ ನನಗೆ ಅವಕಾಶವನ್ನು ಮಾಡಿಕೊಟ್ಟಿದ್ದಾನೆ. ನಾನು ಹೇಳಬೇಕೆಂದೇ ಈ ವಿಚಾರವನ್ನು ಹೇಳುತ್ತಿದ್ದೇನೆ. ನೀವು ಅಷ್ಟೇ ಕನ್ಸರ್ನ್ ಇರುವವರು ಎಂದು ತಿಳಿದುಕೊಂಡು ಹೇಳುತ್ತಿರುವವನು ನಾನು ಬೇಡವೆಂದರೆ ನಾನು ಹೇಳುವುದಿಲ್ಲವೆಂದು ಅದಕ್ಕೇ ನಾನು ಹೇಳಿರುವುದು. ಏನಾಗಿದೆ ಎಂಬುದರ ಬಗ್ಗೆ ತಾವು ಒಳಹೊಕ್ಕು ನೋಡಬೇಕು. ಪ್ರೊಡಕ್ಷನ್ ಇಲ್ಲ, ಕರೆಂಟ್ ಕೊಡುವುದಿಲ್ಲ, ಗೊಬ್ಬರ ಹಾಕೋಣವೆಂದರೆ ಇವತ್ತು ದನಕರುಗಳಿಲ್ಲ. ಅದನ್ನೂ ಸಹ ಕೊಂಡುಹಾಕಬೇಕು. ಗೊಬ್ಬರದ ರೇಟ್ ಜಾಸ್ತಿಯಾಗಿದೆ, ಮಾರ್ಕೆಟ್‌ನಲ್ಲಿ ಕೇಳುವವರು ಇಲ್ಲ, ಹಾಗೆ ಎಲ್ಲಾ ಮಾಡಿದರೂ ಕೂಡ ಟ್ಯಾಕ್ಸ್ ಹಾಕುವವರು ನಮ್ಮನ್ನು ಬಿಡುವುದಿಲ್ಲ. ದಯವಿಟ್ಟು ತಾವು ಈ ಕಡೆ ಗಮನಹರಿಸಬೇಕು. ಕೋಲಾರ ಜಿಲ್ಲೆಗೆ ಡ್ರಿಪ್ ಇರಿಗೇಷನ್‌ಬೇಕೆಂದು ತೀರ್ಮಾನ ಮಾಡುವುದಕ್ಕೆ ತಾವು ಯಾರು ? ಅದೇ ತುಮಕೂರು ಜಿಲ್ಲೆಗೆ ಬೇಕೆಂದು ಏತಕ್ಕಾಗಿ ಯೋಚನೆಯನ್ನು ಮಾಡುವುದಿಲ್ಲ ? ತುಮಕೂರು ಜಿಲ್ಲೆಗೆ ಬೇಕೆನ್ನುವವರು ಚಿತ್ರದುರ್ಗ ಜಿಲ್ಲೆಯ ಬಗ್ಗೆ ಏತಕ್ಕಾಗಿ ಯೋಚನೆ ಮಾಡುವುದಿಲ್ಲ ? ತುಮಕೂರು ಜಿಲ್ಲೆ, ಪ್ರಮುಖ ತೋಟಗಾರಿಕಾ ಬೆಳೆ, ಪರ್ಮೆಂಟಾಗಿ ನಾವು 20 ವರ್ಷಗಳ ಕಾಲ ಕಾಯಬೇಕು ಸಾರ್ ಒಂದು ತೆಂಗಿನ ಮರ ಹೋದರೆ. ಒಂದು ಅಡಿಕೆ ಮರ ಹೋದರೆ 10 ವರ್ಷ ಕಾಯಬೇಕು. ಸುಮಾರು ಸಬ್ಸಿಡಿಯನ್ನು ಕೊಟ್ಟು ಡ್ರಿಪ್ ಕೊಟ್ಟಿದ್ದಿದ್ದರೆ ಇರುವಂತಹ ಕರೆಂಟ್‌ನಲ್ಲಿ ನೀರಲ್ಲಿ ಒಂದಿಷ್ಟು ಉಳಿಸಿಕೊಳ್ಳುತ್ತಿದ್ದೆವು. ತುಮಕೂರು ಜಿಲ್ಲೆಗೆ ತಾವು ಹೋದ ವರ್ಷ ಡ್ರಿಪ್ ಇರಿಗೇಷನ್ ಇಟ್ಟಿರುವಂತಹ ಹಣವೆಷ್ಟು ? ಯೂಟಿಲೈಸ್ ಆಗಿರುವುದೆಷ್ಟು ? ಬಿಲ್‌ನಲ್ಲಿ ಕೊಟ್ಟಿರುವುದೆಷ್ಟು ? ರೈತರಿಗೆ ಮೋಸ ಮಾಡಿರುವುದೆಷ್ಟು? ತಾವು ಇದರ ಬಗ್ಗೆ ಮಾಹಿತಿಯನ್ನು ತರಿಸಿಕೊಳ್ಳಬೇಕು. ಮಾನ್ಯ ಸಿಂಧ್ಯಾರವರೇ, ಡ್ರಿಪ್ ಇರಿಗೇಷನ್ ಸ್ಕೀಮ್‌ನಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಇಡೀ ನನ್ನ ಒಂದು ತಾಲ್ಲೂಕಿಗೆ ಕೊಟ್ಟಿರುವುದಿಲ್ಲ. ಏಕೆ ಈ ದ್ರೋಹ ? ನಾವು ಏನು ರೈತರಿಗೆ ಅನ್ಯಾಯವನ್ನು ಮಾಡಿದ್ದೇವೆ ? ಇಲ್ಲಿ ಬಜೆಟ್‌ನಲ್ಲಿ ತೋರಿಸುವುದು, ತೋಟಗಾರಿಕಾ ಬೆಳೆಗಳಿಗೆ ಅಷ್ಟು ಇಟ್ಟಿದ್ದೇನೆ, ದ್ರಾಕ್ಷಿಗೆ ಇಷ್ಟು ಹಣವನ್ನು ಇಟ್ಟಿದ್ದೇನೆ ಎಂದು, ತಾವು ಇದರ ಬಗ್ಗೆ ಗಮನವನ್ನು ಹರಿಸಬೇಕು. ಇಡೀ ಸಬ್ಸಿಡಿಯನ್ನು ತಾವು ಏನು ಕೊಡಬೇಕಾಗಿತ್ತೋ ಅದನ್ನು ಕೊಟ್ಟರೂ ಕೂಡ ಕಂಪನಿಯವನಿಗೆ ಹೆಲ್ಪ್ ಆಗುವಂತಹ ರೀತಿಯಲ್ಲಿ ಕೊಟ್ಟಿದ್ದೀರಿ, Laws are formulated like that. ರೈತ ನಾನೇ ಮಾಡಿಸಿಕೊಂಡು ಬಂದಿದ್ದೇನೆಂದರೆ ಇಲ್ಲಿ ಬಿಲ್ ಆಗುವುದಿಲ್ಲ. ಕಂಪನಿಯ ಸೀಲ್ ಬೇಕು, ಅದಕ್ಕೆ ಒಬ್ಬ ಅಧಿಕಾರಿಯ ರುಜು ಬೇಕು, ಬಾರಪ್ಪ ನೋಡು ನಾನು ಹಾಕಿದ್ದೇನೆ ಹಣಯ್ಯಾ ಹಣ ಉಳಿಯುತ್ತದೆ ನನಗೆ ಅಂದರೆ ಅದು ನಾರ್ಮ್ಸ್‌ನಲ್ಲಿ ಬರುವುದಿಲ್ಲ ಅನ್ನುತ್ತಾರೆ, ನಾನು ತಮಗೆ ಬೇಡಿಕೆಯನ್ನು ಇಡುತ್ತಿದ್ದೇನೆ, ಡ್ರಿಪ್ ಇರಿಗೇಷನ್ ಹಣ ಏನು ಇಟ್ಟಿದ್ದೀರಿ, ಅದರ ಬಗ್ಗೆ ತಾವು ಪುನರ್‌ವಿಮರ್ಶೆಯನ್ನು ಮಾಡಬೇಕಾಗುತ್ತದೆ. ದಯಮಾಡಿ ಎಲ್ಲೆಲ್ಲಿ ತೋಟಗಾರಿಕಾ

ಬೆಳೆಗಳು ಇದೆ, ಎಲ್ಲೆಲ್ಲಿ ವಿದ್ಯುಚ್ಛಕ್ತಿಗೆ ಅಭಾವವಿದೆ, ಎಲ್ಲಿ ಬಯಲುನಾಡು ಇದೆ, ನೀರನ್ನು ತೀರಾ ಕಡಿಮೆ ಬಳಸಬೇಕಾದರೆ, ಅಂತಹ ಕಡೆ ಹೆಚ್ಚು ಒತ್ತನ್ನು ಕೊಡಬೇಕು. ಎರಡನೆಯದು ಬಗ್ಗೆ ನಾನು ತಮ್ಮ ಗಮನಕ್ಕೆ ನಿನ್ನೆ ದಿವಸ ತಂದಿದ್ದೇನೆ, ಮೇಜರ್ ಇರಿಗೇಷನ್ ಪ್ರಾಜೆಕ್ಟ್ ಬದಲಾಗಿ, ಸಣ್ಣಪುಟ್ಟ ಇರಿಗೇಷನ್ ಅಥವಾ ವಾಟರ್ ಕನ್ಸರ್‌ವೇಷನ್ ವರ್ಕ್ಸ್‌ನ್ನು ಆದ್ಯತೆಯ ಮೇರೆ ಸರ್ಕಾರದವರು ತಕ್ಷಣ ಕ್ರಮವನ್ನು ತೆಗೆದುಕೊಳ್ಳಬೇಕು. ನೀರು ಇನ್ನು 2-3 ವರ್ಷಕ್ಕೆ ಬಯಲುಸೀಮೆಯಲ್ಲಿ ಯಾವ ಸ್ಥಿತಿಗೆ ಹೋಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಇವತ್ತು ನೀವು ಬೋರ್‌ನ್ನು ಕೊರೆಯಲಿಲ್ಲ. ರೀಡ್ರಿಲ್ 600 ರಿಂದ 700 ಅಡಿ ಮಾಡುತ್ತೇವೆ, ಇದರ ಬಗ್ಗೆ ನಾನು ತಮ್ಮನ್ನು ಒಂದು ಪ್ರಶ್ನೆ ಕೇಳುತ್ತೇನೆ, 500 ಅಡಿ ನೀವು ಡ್ರಿಪ್ ಮಾಡಿದರೆ 120 ಅಡಿಗಳಿಗಿಂತ ಕೆಳಗಡೆ ಹೋದರೆ ಹ್ಯಾಂಡ್‌ಪಂಪ್‌ನಲ್ಲಿ ಬೋರ್‌ನಲ್ಲಿ ನೀರನ್ನು ಎತ್ತುವುದಕ್ಕಾಗುವುದಿಲ್ಲ. 500 ಅಡಿ ಕೊರೆದರೆ ಎಲ್ಲಾದಕ್ಕೂ ಕೂಡ ನೀವು ಪವರ್ ಪಂಪ್‌ನ್ನೇ ಹಾಕಬೇಕಾಗುತ್ತದೆ. ಅಂತಹ ಬೋರ್‌ವೆಲ್‌ಗಳನ್ನು ನೀವು ರೀಚಾರ್ಜ್ ಮಾಡಿಸದೆ ಹೋದರೆ ಈ ರಾಜ್ಯಕ್ಕೆ ಮುಂದೆ ಭವಿಷ್ಯವಿಲ್ಲ. ತಾವು ಗಮನಕ್ಕೆ ತೆಗೆದುಕೊಳ್ಳಬೇಕು. ಇದು ತಕ್ಷಣದ ಅತ್ಯಂತ ಎಮರ್ಜೆನ್ಸಿ ನಮ್ಮ ಭಾಗದಲ್ಲಿ 700 ಅಡಿ ಬೋರ್ ಕೊರೆಯುತ್ತಿರುವುದು. ನೀವು ಕುಡಿಯುವ ನೀರೂ ಕೂಡ ಮೋಟಾರನ್ನು ಹಾಕಿಯೇ ಓಡಿಸಬೇಕು. 20 ಮನೇ ಇರಲಿ ಅಲ್ಲಿ ಹ್ಯಾಂಡ್ ಪಂಪ್ ಹಾಕಿ ಅಲ್ಲಿ 120 ಅಡಿಗೆ ನೀರು ಇರುವುದಿಲ್ಲ, ಅಲ್ಲಿ ಅಂಡರ್‌ಗ್ರೌಂಡ್ ವಾಟರ್ ಅಲ್ಲಿ ನೀರು ತಳದಲ್ಲಿರುತ್ತದೆ. ನೀರನ್ನು ಎತ್ತುವುದಕ್ಕಾಗುವುದಿಲ್ಲ. ಹಾಕಿದ್ದ ದುಡ್ಡು ದಂಡವಾಗುತ್ತದೆ. ದಯಮಾಡಿ ರೀಚಾರ್ಜ್ ಮಾಡಿಸುವಂತಹ ಸ್ಟ್ರಕ್ಚರ್ಸ್‌ನ್ನು ತಾವು ತೆಗೆದುಕೊಳ್ಳಬೇಕು. ಕೇಂದ್ರಸರ್ಕಾರವನ್ನು ತಾವು ಶ್ಲಾಘಣೆ ಮಾಡಿದ್ದೀರಿ. ವಾಟರ್‌ಶೆಡ್ ಮ್ಯಾನೇಜ್‌ಮೆಂಟ್ ಬಗ್ಗೆ ಸನ್ಮಾನ್ಯ ಚಿದಂಬರ್‌ರವರು ಹೇಳಿರುವಂತಹ ಮಾತನ್ನು ತಾವು ಶ್ಲಾಘನೆ ಮಾಡಿದ್ದೀರಿ. ತಾವು ತಿಳಿದುಕೊಂಡಿರುವಷ್ಟು ಪ್ರಮಾಣದಲ್ಲಿ ಅವರು ಏರಿಕೆಯನ್ನು ಮಾಡಲಿಲ್ಲ. 10 ಲಕ್ಷ ಹೆಕ್ಟೇರಷ್ಟು ಅಷ್ಟು ಇಡೀ ಇಂಡಿಯಾ ದೇಶದಲ್ಲಿ ನಾನು ವಾಟರ್ ಶೆಡ್ ಡೆವಲಪ್‌ಮೆಂಟ್ ಬಗ್ಗೆ ಹೊಸದಾಗಿ ತೆಗೆದುಕೊಳ್ಳುತ್ತಿದ್ದೇನೆ. ಜಲಾನಯನ ಪ್ರದೇಶವೆಂದರೆ, ಭಾರಿ ಕಾರ್ಯಕ್ರಮವೆಂದು ಈ ಹಣಕಾಸಿನ ಸಚಿವ ತಮ್ಮ ಬಾಯಿಯಲ್ಲಿ ಏತಕ್ಕಾಗಿ ಆ ಮಾತು ಬಂತೆಂದು ನನಗಂತೂ ಅರ್ಥವಾಗುತ್ತಿಲ್ಲ. ಮಾನ್ಯ ಚಿದಂಬರಂರವರು 10 ಲಕ್ಷ ಮಾಡುತ್ತೇವೆಂಬುದನ್ನು ಇವರ ಭಾಷಣದಲ್ಲಿ ಒಪ್ಪಿಕೊಂಡಿದ್ದಾರೆ. ಕೇಂದ್ರ ಸರ್ಕಾರ 10 ಲಕ್ಷ ಹೆಕ್ಟಾರ್‌ನ್ನು. ಎಕ್ಸ್‌ಟೆಂಡ್ ಮಾಡಿರುವುದನ್ನು ಇವರು ಒಪ್ಪಿಕೊಂಡಿದ್ದಾರೆ. ನಾವು ಸ್ವಾಗತಿಸುತ್ತೇನೆಂದು ಹೇಳಿದ್ದಾರೆ. 10 ಲಕ್ಷವಲ್ಲ, ಆದರೆ 10 ಪಟ್ಟು ಜಾಸ್ತಿ ಮಾಡಿದರೂ ಕೂಡ ನಾವೆಲ್ಲಾ ಕವರ್ ಆಗುತ್ತಿರಲಿಲ್ಲ ಎಂದು ನಾನು ಹೇಳುತ್ತಿರುವುದು. ನೀವು ಹೇಳಿರುವಂತಹ ಮಾತಿಗೆ ನಾನು ಪ್ರತಿಕ್ರಿಯಿಸುತ್ತಿದ್ದೇನೆ. ದಯಮಾಡಿ ವಾಟರ್‌ಶೆಡ್ ಮ್ಯಾನೇಜ್‌ಮೆಂಟ್ ಏನಿದೆ, ಇದನ್ನು ತ್ವರಿತಗೊಳಿಸಬೇಕು, ಒಂದು ನೋವಿನ ಸಂಗತಿ ಎಂದರೆ, ಎನ್‌ಜಿಒಗಳ ಕೂಡ ನಾವು ತಿಳಿದುಕೊಳ್ಳುವಷ್ಟು

ಸಮರ್ಪಕವಾಗಿ ಕೆಲಸವನ್ನು ಮಾಡುತ್ತಿಲ್ಲ. Everything is not fair. ಇವತ್ತು ನಾವು ಇಲಾಖೆಯವರನ್ನು ಬೈಪಾಸ್ ಮಾಡಿ ಸಂಘಗಳನ್ನು ಮಾಡಿ ಎನ್‌ಜಿಓಸ್‌ಗಳಿಗೆ ಏನು ಕೊಡುತ್ತಿದ್ದೇವೆ, ಈ ಕೆಲಸಗಳಿಗಾಗಿ 5–5 ಕೋಟಿ ರೂಪಾಯಿಗಳ ವರ್ಕ್ಸ್, ಸಾರ್ ನನ್ನ ಕ್ಷೇತ್ರದಲ್ಲಿ ಸುಜಲ್ ವಾಟರ್ ಶೆಡ್‌ಗಾಗಿ 5 ಕೋಟಿ ರೂಪಾಯಿಗಳ ಒಂದು ಯೋಜನೆ ಎನ್‌ಜಿಓಗೆ ಎಂಟ್ರಸ್ಟ್ ಆಗಿದೆ, ಅದು 5 ವರ್ಷದ ಕಾರ್ಯಕ್ರಮವಾಗಿದೆ, ಯಾವುದೇ ಟೆಕ್ನಿಕಲ್ ಎಕ್ಸ್‌ಪರ್ಟೈಸ್ ಇಲ್ಲ, ಯಾವುದೋ ಒಬ್ಬರು ಬಿಎಸ್‌ಸಿ ಎಜಿ ಗ್ರಾಜ್ಯುಯೇಟ್ ಇರಲಿಲ್ಲ. ಒಬ್ಬ ಇಂಜಿನಿಯರ್‌ಗಳು ಇರಲಿಲ್ಲ, ಒಂದು ಬೋರ್ಡ್‌ನ್ನು ಇಟ್ಟುಕೊಂಡು 3 ವರ್ಷವಾಗಿದೆ ನಮ್ಮ ಸಂಸ್ಥೆಯನ್ನಿಟ್ಟುಕೊಂಡು ಎಲ್ಲೋ ಒಂದು ಸರ್ಟಿಫಿಕೇಟನ್ನು ತಂದು ಕೊಟ್ಟರು. 5–5 ಕೋಟಿ ರೂಗಳ ವರ್ಕ್‌ನ್ನು ಎಂಟ್ರಸ್ಟ್‌ಮಾಡಿಕೊಂಡು ಹೋದರೆ ಈ ಸರ್ಕಾರದ ಗತಿ ಏನು ? ನಾಳೆ ಏನಾಗುತ್ತದೆ ಎಂಬುದು ನನಗರ್ಥವಾಗುತ್ತಿಲ್ಲ. ಇದರ ಬಗ್ಗೆ ತಾವು ಸ್ವಲ್ಪ ಆಲೋಚನೆಯನ್ನು ಮಾಡಬೇಕು. ನಮ್ಮ ಇಲಾಖೆಗಳಲ್ಲೆಲ್ಲಾ ಆಯೋಗ್ಯರೇ ತುಂಬಿದ್ದಾರೆಂದು ನಾವು ಭಾಷಣ ಮಾಡುವುದಕ್ಕಾಗುವುದಿಲ್ಲ. ನಮ್ಮ ಅಗ್ರಿಕಲ್ಚರ್ ಇಲಾಖೆಯಲ್ಲಿ ಸ್ಟಾಂಡ್ ಸ್ಟಿಲ್ ಆಯಿತು. ನಮ್ಮ ಇಂಜಿನಿಯರಿಂಗ್ ಇಲಾಖೆ ಸ್ಟಾಂಡ್‌ಸ್ಟಿಲ್ ಆಯಿತು. ಆ ಕಡೆಗೆ ಯೋಜನೆಯನ್ನು ಮಾಡಿ ವಾಟರ್ ಶೆಡ್‌ನ್ನು ಸ್ವಲ್ಪ ಡೆವಲಪ್ ಮಾಡಬೇಕು, ಬರೀ ದುಡ್ಡು ಖರ್ಚು ಮಾಡದೆ ಭಾಷಣ ಮಾಡಿದರೆ ನನಗೆ ಗೊತ್ತು, ಅದು ಬಜೆಟ್ ಮೇಲೆ ಭಾಷಣವಾಗುವುದಿಲ್ಲ. ನಾನು ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ, ಏಕೆಂದರೆ ನಾನು ನೋಟ್ಸ್ ಮಾಡಿಕೊಂಡಿಲ್ಲ, ಕರ್ನಾಟಕದಲ್ಲಿ ವ್ಯಾಪಕವಾಗಿ ಮೈನಿಂಗ್ ಆಪರೇಷನ್ಸ್ 2 ವರ್ಷದಿಂದ ಕರ್ನಾಟಕ ರಾಜ್ಯದಲ್ಲಿ ಲೂಟಿಯಾಗುತ್ತಿದೆ. 65 ರೂ ಟನ್ ಮಾರುತ್ತಿದ್ದ ಐರನ್ ಓರ್ ಈವತ್ತು 700 ರೂಪಾಯಿ ಟನ್‌ಗೆ ಮಾರಾಟವಾಗುತ್ತಿದೆ. ಲಾರಿಗಳು ಓಡಾಡುವುದನ್ನು ನೋಡಿದರೆ ನಾವು ಹಳ್ಳಿಗಳಲ್ಲಿ ಬದುಕುವುದಕ್ಕೆ ಆಗುತ್ತಿಲ್ಲ. ಇದರಿಂದ ನಿಮಗೆ ಎಷ್ಟು ಇನ್‌ಕಂ ಬಂದಿದೆ ಎಂದು ನಾನು ಕೇಳುತ್ತಿದ್ದೇನೆ. ಕೋಟ್ಯಾಂತರ ಸಹಸ್ರಾರು ಕೋಟಿ ರೂ. ಒಂದು ವರ್ಷದಿಂದ ನಮ್ಮ ತೋಟದಲ್ಲಿ ಸೋಗೆ ಕಡ್ಡಿಯನ್ನು ಕೀಳುತ್ತಿದ್ದವನು ಇವತ್ತು ಕೋಟ್ಯಾಧೀಶರನಾಗಿದ್ದಾನೆ. ನಮ್ಮ ಹತ್ತಿರ ಮೇಸ್ತ್ರಿಯಾಗಿದ್ದವನು, ಈವತ್ತು ಕೋಟ್ಯಾಧೀಶನಾಗಿದ್ದಾನೆ. ನಾನು ಇಲ್ಲಿ ಮಾತನಾಡುವುದನ್ನೆಲ್ಲಾ ಪ್ರೂವ್ ಮಾಡುತ್ತೇನೆ. ಒಂದೊಂದು ಲಾರಿಗೆ ಚಿಕ್ಕನಾಯಕನಹಳ್ಳಿಯಿಂದ ಹಿಡಿದು ಮಂಗಳೂರಿನವರೆಗೆ ಪೊಲೀಸ್ ಸ್ಟೇಷನ್‌ನಲ್ಲಿರುವಂತಹ ಆಫೀಸರ್‌ಗಳೆಲ್ಲರೂ ಶ್ರೀಮಂತರಾಗಿದ್ದಾರೆ. ಆರ್‌ಟಿಓನಲ್ಲಿರುವಂತಹ ಆಫೀಸರ್‌ಗಳೆಲ್ಲರೂ ಶ್ರೀಮಂತರಾಗಿದ್ದಾರೆ. ಚಿಕ್ಕನಾಯಕನಹಳ್ಳಿಯಲ್ಲಿ ಫಾರೆಸ್ಟ್ ಇಲ್ಲವೆಂದು ಬರುತ್ತಿಲ್ಲದಿದ್ದವರು ಯಾರೂ ಇವತ್ತು ಚಿಕ್ಕನಾಯಕನಹಳ್ಳಿಯನ್ನು ಬಿಡುವುದಕ್ಕೆ ತಯಾರಿಲ್ಲ. ಇಡೀ ಮೈನಿಂಗ್ ಆಪರೇಷನ್ ಫಾರೆಸ್ಟ್ ಲ್ಯಾಂಡ್ ಒಳಗಡೆ ಸರ್ಕಾರಿ ಸರ್ವೆ ನಂಬರ್‌ನಲ್ಲಿ ಆಗುತ್ತದೆ, 5 ಎಕರೆ ಲೀಸ್ ಆಗುತ್ತದೆ, ಪಕ್ಕದಲ್ಲಿ ಮೈನಿಂಗ್ ಆಗುತ್ತದೆ. ಮೈನ್ ಐರನ್ ಓರ್

ಚಿಕ್ಕನಾಯಕನಹಳ್ಳಿ ಮತ್ತು ಹೊಸಪೇಟೆಯಲ್ಲಿ ಇಲ್ಲಿ ವ್ಯಾಪಕವಾಗಿ 400–500 ಟ್ರಕ್‌ಗಳು ಒಂದು ದಿವಸಕ್ಕೆ ಓಡಾಡುತ್ತವೆ.

10.50 ಪಿ.ಎಂ

ಶ್ರೀ ಜೆ.ಸಿ. ಮಾಧುಸ್ವಾಮಿ : ನಮ್ಮ ಮನೆಯಿಂದ ಮೂರು–ನಾಲ್ಕು ಕಿಲೋಮೀಟರ್‌ಗೇ ನಡೆದಿದ್ದು ಈ ಹಗರಣಗಳು ನಿಲ್ಲುವುದಿಲ್ಲ. 12000 ಚಿಲ್ಲರೆ ಎಕರೆ ಇರುವಂಥಾದ್ದು ಸಾರಾಂಗಪಾಣಿ ಮೈನ್ಸ್‌ದ್ದು ಇವತ್ತು ಸ್ಟೇ ಇದೆ. ಸನ್ಮಾನ್ಯ ಕೃಷ್ಣ ಅವರು ಅದನ್ನು ರಿನ್ಯೂಯಲ್ ಮಾಡಿ ಅಂತ ಬರೆದಾಗ ಅವರು ಸ್ಟೇ ತಂದರು. ಇಡೀ ಕೋರ್ಟಿನಲ್ಲಿ ಸ್ಟೇ ಇದ್ದರೂ ಕೂಡ ಎಷ್ಟೋ ಮಂದಿ ಯಾರ್ಯಾರೋ ಯಾರಿಗೆ ಬೇಕೋ ಅವರು ಮೈನ್ಸ್ ಮಾಡಿದರು.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೇ, ಮೈನಿಂಗ್ ಆಪರೇಷನ್ ಬಗ್ಗೆ ಮಾನ್ಯ ಮಾಧುಸ್ವಾಮಿಯವರು ಪ್ರಸ್ತಾಪ ಮಾಡುತ್ತಿದ್ದಾರೆ. ಬಳ್ಳಾರಿಯಲ್ಲಿ ಫೇಕ್ ಪರ್ಮಿಟ್ ಮೂಲಕ ಆ ಇಲಾಖೆಯ ಎಲ್ಲಾ ಅಧಿಕಾರಿಗಳದ್ದು ನಕಲಿ ಸ್ಟಾಂಪ್‌ನ್ನು ಇಟ್ಟುಕೊಂಡು ಸಾಗಾಣಿಕೆ ಮಾಡುತ್ತಾ ಇದ್ದಂಥ ವ್ಯಕ್ತಿಯನ್ನು ಅಪ್ಪ ಮಕ್ಕಳನ್ನು ಬಂಧಿಸಿದ್ದರು. ನಾನೂ ಕೂಡ ಬಳ್ಳಾರಿಗೆ ಹೋಗಿದ್ದೆ. ಆಮೇಲೆ ಏನು ಆಯಿತೋ ಗೊತ್ತಿಲ್ಲ. ಇಂತಹ ಹತ್ತು ಹನ್ನೆರಡು ವ್ಯವಹಾರಗಳು ಇವೆ. ಇಂಥಾದ್ದು ನಡೆಯುತ್ತಲೇ ಇರುತ್ತದೆ. ಇದರ ಬಗ್ಗೆ ನಾನು ಸರ್ಕಾರದ ಗಮನಕ್ಕೆ ತಂದೆ, ಮುಖ್ಯಮಂತ್ರಿಗಳಿಗೆ ಪತ್ರವನ್ನು ಬರೆದೆ. ಪ್ರೆಸ್ ಮೀಟ್ ಮಾಡಿ ವಿವರಗಳನ್ನು ಕೊಟ್ಟಿದ್ದೇನೆ. ಅಧಿಕಾರಿಗಳ ಹತ್ತಿರ ನೇರವಾಗಿ ನಾನು ಸಂಪರ್ಕ ಮಾಡಿ ಮಾತನಾಡಿದ್ದೆ. ಅರೆಸ್ಟ್ ಮಾಡಿ ಅವರನ್ನು ಬಿಟ್ಟುಬಿಟ್ಟಿದ್ದಾರೆ. ಅದನ್ನು ಮುಚ್ಚಿಹಾಕುವುದಕ್ಕೆ ಬೇಕಾದಂಥ ಸಿದ್ಧತೆಗಳು ನಡೆಯುತ್ತಿವೆ. ಇವತ್ತು ಏನೂ ಬೇಡ. ಮಾನ್ಯ ಮಾಧುಸ್ವಾಮಿಯವರು ಪ್ರಸ್ತಾಪ ಮಾಡಿದಂತೆ ಒಂದು ನೂರು ಕೋಟಿ ರೂಪಾಯಿಗಳು ಈ ಒಂದು ಬಾಬಿನಲ್ಲಿ ನಮಗೆ ಆದಾಯ ಬರುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ ; ಮಾನ್ಯ ಅಧ್ಯಕ್ಷರೇ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು ಮತ್ತು ಗೌರವಾನ್ವಿತ ಮಾಧುಸ್ವಾಮಿಯವರು ಒಂದು ಸಲಹೆಯನ್ನು ಮಾಡಿದ್ದಾರೆ. ಅದನ್ನು ಸಂಪೂರ್ಣವಾಗಿ ನಾನು ಒಪ್ಪುತ್ತೇನೆ. ನಮಗೂ ಸಹಿತ ಕಬ್ಬಿಣದ ಅದಿರು ಹೋಗತಕ್ಕಂಥಾದ್ದು, ಗ್ರಾನೈಟ್ ಹೋಗುತ್ತಾ ಇರತಕ್ಕಂಥಾದ್ದು ಇದನ್ನೆಲ್ಲಾ ನೋಡಿದರೆ ಹೊಟ್ಟೆ ಉರಿಯುತ್ತದೆ. ಇನ್ನೊಂದು ಇಪ್ಪತ್ತೈದು–ಮೂವತ್ತು ವರ್ಷಕ್ಕೆ ಶ್ರೀಮಂತ ಕರ್ನಾಟಕ ಹೋಗಿ ಬಹಳ ಬಡ ಕರ್ನಾಟಕ ಆಗತಕ್ಕಂಥಾದ್ದು ಆಗಿ ನಮ್ಮ ಮುಂದಿನ ಪೀಳಿಗೆಗೆ ಏನೂ ಸಹಿತ ನಾವು ಕೊಡದೇ ಇರತಕ್ಕಂಥ ಸನ್ನಿವೇಶ ಬರಬಹುದು. ಆದ್ದರಿಂದ ಒಂದು ಸ್ಪೆಷಲ್ ಡಿಬೇಟ್‌ಗೆ ಒಂದನೇ ತಾರೀಖು ಆದಮೇಲೆ ಒಂದು ಸಮಯವನ್ನು ನಿಗದಿಮಾಡಿ ತಾವು ಅವಕಾಶ ಮಾಡಿಕೊಟ್ಟರೆ ಇದರ ಬಗ್ಗೆ ನಾವು ಕೇಂದ್ರಸರ್ಕಾರಕ್ಕೆ ಒಂದು ಶಿಫಾರಸ್ಸು ಮಾಡೋಣ. ನಮ್ಮಲ್ಲಿ

ಬೇಕಾದಷ್ಟು ವ್ಯಾಲ್ಯು ಆ್ಯಡ್ ಮಾಡತಕ್ಕಂಥ ಅವಕಾಶಗಳು ಇವೆ. ಕಬ್ಬಿಣದ ಅದಿರು ಏನು ಸಿಗುತ್ತದೆ, ಅದರಿಂದ ಕಬ್ಬಿಣ ಮಾಡಿ, ಸ್ಟೀಲ್ ಮಾಡಿ ವ್ಯಾಲ್ಯೂ ಆ್ಯಡ್ ಮಾಡಿ ವಿದೇಶಕ್ಕೆ ಕಳುಹಿಸಿದರೆ ನಮಗೆ ಒಂದಕ್ಕೆ ಹತ್ತರಷ್ಟು ದುಡ್ಡು ಸಿಗುತ್ತದೆ. ಬರೇ ಕಬ್ಬಿಣದ ಅದಿರನ್ನು ಕಳುಹಿಸಿದರೆ ಇದರಿಂದ ಹೆಚ್ಚು ದುಡ್ಡು ನಷ್ಟವಾಗುತ್ತದೆ. ಇನ್ನು 60–70 ವರ್ಷಕ್ಕೆ ಅದು ಸಂಪೂರ್ಣ ಲೂಟಿಯಾಗಿ ಹೋಗಿ ಬಿಟ್ಟಿರುತ್ತದೆ. ಆದ್ದರಿಂದ ತಾವು ಒಂದು ಸಮಯವನ್ನು ನಿಗದಿಮಾಡಿ. ನಾವೆಲ್ಲರೂ ಕೂಡ ಚರ್ಚೆ ಮಾಡೋಣ. ಅದನ್ನು ಕೂಲಂಕಷವಾಗಿ ಚರ್ಚೆಮಾಡಿ ನಾವೂ ಕೂಡ ಹೇಳತಕ್ಕಂಥಾದ್ದು ಇದೆ. ಸರ್ಕಾರದ ವತಿಯಿಂದ ಬೇಕಾದರೆ ಹೇಳೋಣ. we will have a policy for this. ಒಂದು ಪಾಲಿಸಿಯನ್ನು ಮಾಡೋಣ. ಇದರಿಂದ ಕರ್ನಾಟಕಕ್ಕೆ ಉಳಿತಾಯವಾಗುತ್ತದೆ ಎನ್ನತಕ್ಕಂಥಾದ್ದು ನನ್ನ ಸಲಹೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮಾಧುಸ್ವಾಮಿಯವರು ಪ್ರಸ್ತಾಪ ಮಾಡಿದಂತೆ ಈ ನೀರಾವರಿ ಬಗ್ಗೆ, ಲೂಟಿಯಾಗುತ್ತಾ ಇರುವಂತಹ ಕಬ್ಬಿಣದ ಅದಿರಿನ ಬಗ್ಗೆ ಒಂದು ಅರ್ಧರ್ಧ ಗಂಟೆ ವಿಶೇಷ ಚರ್ಚೆ ಮಾಡೋಣ ಎನ್ನುವ ಉದ್ದೇಶದಿಂದ 2ನೇ ತಾರೀಖಿನಿಂದ ಆರನೇ ತಾರೀಖಿನವರೆಗೆ ಅಧಿವೇಶನವನ್ನು ವಿಸ್ತರಿಸಲಾಗಿದೆ. ಈ ತರಹದ ವಿಷಯಗಳ ಬಗ್ಗೆ ಚರ್ಚೆ ಮಾಡುವುದರಿಂದ ಸರ್ಕಾರಕ್ಕೆ ಆದಾಯ ಬರಬೇಕು, ಶ್ರೀ ಸಾಮಾನ್ಯರಿಗೆ ಅನುಕೂಲಗಳು ಸಿಗಬೇಕು. ಈ ಲೂಟಿ ಮಾಡುವಂಥಾದ್ದು ಏನಿದೆ ಇದು ಕೊನೆಯಾಗಬೇಕು. ಈ ತರಹ ವಿಷಯಗಳನ್ನು ತೆಗೆದುಕೊಂಡು ಚರ್ಚೆ ಮಾಡಿ ಇದಕ್ಕೆ ಪರಿಹಾರವನ್ನು ಹುಡುಕುವಂಥ ಪ್ರಯತ್ನವನ್ನು ಎರಡೂ ಕಡೆಯವರು ಮಾಡಿದರೆ ಒಳ್ಳೆಯದು. ಅದಕ್ಕಾಗಿ ಐದು ದಿವಸ ಅಧಿವೇಶನವನ್ನು ಎಕ್ಸ್‌ಟೆಂಡ್ ಮಾಡಿರುವಂಥಾದ್ದು. ಎರಡು ಗಂಟೆ ಬೇರೆ ವಿಷಯಗಳನ್ನು ಚರ್ಚೆ ಮಾಡಿ ನಂತರ ಇಂತಹ ವಿಷಯಗಳ ಬಗ್ಗೆ ಆದ್ಯತೆ ಕೊಟ್ಟು ಚರ್ಚೆಮಾಡಿದರೆ ಬಹಳ ಒಳ್ಳೆಯದಾಗಬಹುದು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಪೋರ್ಟ್‌ನಿಂದ ಎಷ್ಟು ಹೋಗಿದೆ ಮತ್ತು ಮೈನ್‌ನವರು ಎಷ್ಟು ಲೆಕ್ಕ ಕೊಟ್ಟಿದ್ದಾರೆ ಎಂದು ನೋಡಿದರೆ ಅದು ಸಾಕಾಗುತ್ತದೆ. ಎಷ್ಟು ಕದ್ದು ಹೊರಗೆ ಹೋಗಿದೆ ಎಂಬುದನ್ನು ಇದರಿಂದ ನೋಡಬಹುದು. ಮುಂದೆ ಹೀಗೆ ಹೋಗದಿರುವ ಹಾಗೆ ಮಾಡಬೇಕಾದರೆ ಹಿಂದೆ ಎಷ್ಟು ಆಗಿದೆ ಎಂಬುದನ್ನು ನೋಡಬೇಕಾಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ತಮ್ಮ ಗಮನಕ್ಕೆ ಒಂದು ಮಾತನ್ನು ಹೇಳುತ್ತೇನೆ. ಜೈನಾದ ಕನ್‌ಸೈನ್‌ಮೆಂಟ್ ಸಿಕ್ಕಿದಮೇಲೆ, ಅದು ಮಂಗಳೂರಿನಿಂದ ಹೋಗುವುದಕ್ಕೆ ಪ್ರಾರಂಭವಾದ ಮೇಲೆ ಬಹಳ ಲೂಟಿಯಾಗುತ್ತಿದೆ. ಅದನ್ನಂತೂ ಹೇಳುವ ಹಾಗಿಲ್ಲ. ಬೇರೆ ಯಾವ ಸ್ಥಿತಿಯಲ್ಲಿ ಇದ್ದವರೆಲ್ಲಾ ಶ್ರೀಮಂತರಾಗಿ ಬಿಟ್ಟಿದ್ದಾರೆ. ಈ ಏರಿಯಾದಲ್ಲಿ ಇರುವ ಟ್ರಾನ್ಸ್‌ಪೋರ್ಟ್ ಇಲಾಖೆ, ಪೋಲೀಸ್ ಇಲಾಖೆ ಮತ್ತು Forest Department Among All ಎಲ್ಲ ಬಹಳ ಅನುಕೂಲವಾಗಿ ಬಿಟ್ಟಿದ್ದಾರೆ. ಅಧ್ಯಕ್ಷರೇ, ತಾವು ಇದಕ್ಕೆ ಬೇರೆ ಸಮಯ ನಿಗದಿ ಮಾಡುವುದಾದರೆ ನಾನು ಈ ವಿಷಯವನ್ನು ಇಲ್ಲಿಗೇ ಬಿಟ್ಟು ಮುಂದೆ ಹೋಗುತ್ತೇನೆ.

ಅಧ್ಯಕ್ಷರು : ಸೋಮವಾರ ನಿಗದಿ ಮಾಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ಮೈನ್ಸ್‌ನ್ನು ಅಲ್ಲಿಗೆ ಬಿಡುತ್ತೇನೆ. ಆದರೂ ನನಗೆ ತಿಳಿದಮಟ್ಟಿಗೆ ಸನ್ಮಾನ್ಯ ಸಿದ್ಧರಾಮಯ್ಯನವರೇ, ಇನ್ನೂ 270 ಫೈಲುಗಳು ಕ್ಲಿಯರೆನ್ಸ್‌ಗಾಗಿ ಕಾದಿವೆ. ದಯಮಾಡಿ ಏನಾದರೂ ಒಂದು ಚರ್ಚೆಯಾಗುವವರೆಗೆ ಇದಕ್ಕೆ ತಡೆಮಾಡಿ. ಇವರು ಎಲ್ಲಿಲ್ಲಿಂದ ಬರುತ್ತಾರೋ, ಯಾರ್ಯಾರು ಬರುತ್ತಾರೋ ಗೊತ್ತಾಗುವುದಿಲ್ಲ. ಈ ಮೈನ್ಸ್ ಕಾನೂನನ್ನೇ ತಿದ್ದುಪಡಿ ಮಾಡಬೇಕೆಂದು ನಾನು ಹೇಳುತ್ತೇನೆ. First come First served. ಬೆಂಗಳೂರಿನಲ್ಲಿ ಕುಳಿತುಕೊಂಡು ಡೈರೆಕ್ಟರ್ ಆಫೀಸ್‌ನ ಕನ್‌ಕ್ಷನ್ ಇರುವವರು ಇಲ್ಲೇ ಕುಳಿತುಕೊಂಡು ಅರ್ಜಿಯನ್ನು ಹಾಕಿಬಿಡುತ್ತಾನೆ. ಇಂತಹ ಊರಿನಲ್ಲಿ ಇಷ್ಟು ಎಕರೆಗೆ ನಾನು.......

ಶ್ರೀ ಪಿ.ಜಿ.ಆರ್. ಸಿಂಧ್ಯ : ಎಲ್ಲಾ ಆಚೆಗೆ ಬರಲಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಲಾ ಬದಲಾವಣೆಯಾಗಬೇಕೆಂದು ನಾನು ಹೇಳುತ್ತಿರುವುದು. ನೀವು ಏನಾದರೂ ನಿರುದ್ಯೋಗಿಯಾಗಿದ್ದರೆ ಅವರಿಗೆ ಮೀಸಲಾತಿ ಇಡಿ, ಎಸ್.ಸಿ. ಕ್ಯಾಟಗರಿಯಲ್ಲಿ ಕೊಡಿ. ಆದರೆ ಯಾರೋ ಅರ್ಜಿ ಹಾಕಿದ ಅಂತ ಮೊದಲು ಬಂದವರಿಗೆ ಮೊದಲ ಪ್ರಾಶಸ್ತ್ಯ ಎನ್ನುವ ನೀತಿಯನ್ನು ತಪ್ಪಿಸಬೇಕು. ಅದಕ್ಕೆ ತಿದ್ದುಪಡಿಯನ್ನು ಮಾಡಬೇಕಾಗಿದೆ. ಆದ್ದರಿಂದ ಪೆಂಡಿಂಗ್ ಇರುವ ಫೈಲುಗಳನ್ನು ತಾವು ನಿಲ್ಲಿಸಬೇಕೆಂದು ನಾನು ಕೇಳಿಕೊಂಡು ನಾನು ಹೆಚ್ಚು ಹೊತ್ತು ತೆಗೆದುಕೊಳ್ಳುವುದಕ್ಕೆ ಇಚ್ಛೆಪಡುವುದಿಲ್ಲ. ನಾನು ಈಗಾಗಲೇ ತಮಗೆ ವಿನಂತಿ ಮಾಡಿದ್ದೇನೆ. ತೆಂಗು, ಅಡಿಕೆ, ಕಾಫಿ, ದ್ರಾಕ್ಷಿ - ಇಂತಹ ಬೆಳೆಗಳು, ಈಗ ದ್ರಾಕ್ಷಿಗೆ ತಾವು ವಿನಾಯ್ತಿಯ್ನು ಕೊಟ್ಟಿದ್ದೀರಿ, ಈ ರಾಜ್ಯದಿಂದ ಹೊರಗಡೆ ಹೋಗುವಂಥ ಕೃಷಿ ಉತ್ಪನ್ನಗಳನ್ನು ಟ್ಯಾಕ್ಸ್ ಹಾಕಿ ನಿರ್ಬಂಧ ಮಾಡಬೇಡಿ, ಇವು ಹೋಗಬೇಕು. ಹೋಗದೆ ಇದ್ದರೆ ನಮಗೆ ಹಣ ಎಲ್ಲಿಂದ ಬರುತ್ತದೆ ? ಹಾಗೆ ಹೋಗದೆ ಇದ್ದರೆ ನಮಗೆ ಮಾರುಕಟ್ಟೆಯನ್ನು ಯಾರು ಕೊಡುತ್ತಾರೆ ? ಈಗ ಕೊಬ್ಬರಿಯನ್ನು ನಾವು ಮಾರುವುದಕ್ಕೆ ಸಾಧ್ಯವೇ ಇಲ್ಲ. ಇದಕ್ಕೆ ನೀವು ನಾಲ್ಕು ಪರ್ಸೆಂಟ್ ಏಕೆ ಹಾಕುತ್ತೀರಿ ? ನಿಮ್ಮ ಪಕ್ಕದಲ್ಲಿರುವ ರಾಜ್ಯಗಳು ಒಂದು-ಎರಡು ಪರ್ಸೆಂಟ್ ಟ್ಯಾಕ್ಸ್ ಹಾಕಿದರೆ ಇಡೀ ಉತ್ತರ ಭಾರತದ ಲಾಬಿಯ ಕೊಳ್ಳುವವರು ಅಲ್ಲಿಗೆ ಹೋಗುತ್ತಾರೆ. ಎರಡನೇಯದು, ಅವರು ಟರ್ನ್‌ಓವರ್ ಟ್ಯಾಕ್ಸ್ ಕೊಡುವುದಕ್ಕೆ ಆಗುವುದಿಲ್ಲ. ನೀವು ಹಿಂದೆ ಒಂದು ಸಲ ಉಪಮುಖ್ಯಮಂತ್ರಿಗಳಾಗಿದ್ದಾಗ ಅದನ್ನು ವೇವ್ ಮಾಡಿಸಿ ತಿಪಟೂರು ಮಾರ್ಕೆಟ್‌ನ್ನು ಬದುಕಿಸಿದ್ದಿರಿ. ಇವತ್ತು ಮತ್ತೆ ಸಿ' ಫಾರ್ಮನ್ನು ಇನ್ಸಿಸ್ಟ್ ಮಾಡಿ ನಾಲ್ಕು ಪರ್ಸೆಂಟ್ ಸಿ.ಎಸ್.ಟಿ. ಹಾಕಿ ಅಲ್ಲಿ ಯಾರೂ ಹೊರಗಡೆಯವರು ಕೊಬ್ಬರಿಯನ್ನು ಕೊಳ್ಳಲಾಗದಂಥ ಪರಿಸ್ಥಿತಿ ಬಂದಿದೆ. ದಯುವಾಡಿ ಇದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ನಿಮಗೆ ಯಾರು ಅಡ್ವೈಸ್ ಮಾಡಿದ್ದರೋ ಗೊತ್ತಿಲ್ಲ. ನಾನ್ ಬ್ರಾಂಡಡ್- ಬ್ರಾಂಡ್ ಅಲ್ಲದ ಕೊಬ್ಬರಿ ಎಣ್ಣೆಗೆ 4ರಿಂದ 20 ಪರ್ಸೆಂಟ್ ಟ್ಯಾಕ್ಸ್ ತೆಗೆದುಕೊಂಡು ಹೋಗಿದ್ದೀರಿ. ಇದನ್ನು ಮಾಡುವವರು ಯಾರು, ಮಾರುವವರು

ಯಾರು ಮತ್ತು ತೆಗೆದುಕೊಳ್ಳುವವರು ಯಾರು ? ಇದಕ್ಕೆ ತಾವು ನೇರವಾಗಿ 4ರಿಂದ 20 ಪರ್ಸೆಂಟ್ ಟ್ಯಾಕ್ಸ್‌ಗೆ ತೆಗೆದುಕೊಂಡು ಹೋಗಿದ್ದೀರಿ. ಪುಣ್ಯಾತ್ಮರು ಯಾರಿಗೋ ನಿಮ್ಮ ಕೈಕೆಳಗಿನ ಅಧಿಕಾರಿಗಳಿಗೆ ನಮ್ಮ ಮೇಲೆ ಭಾರಿ ಸಿಟ್ಟು ಬಂದುಬಿಟ್ಟಿದೆ. ಅವರು ಅಭಿಪ್ರಾಯವನ್ನು ತಮಗೆ ಕೊಟ್ಟುಬಿಟ್ಟಿದ್ದಾರೆ. ಸ್ವಲ್ಪ ದಯಮಾಡಿ ಯೋಚನೆ ಮಾಡಿ. ಕೊಬ್ಬರಿ ಎಣ್ಣೆಯನ್ನು ನಾವು ದುಬಾರಿ ಮಾಡುವುದಕ್ಕೆ ಆಗುವುದಿಲ್ಲ. ಇವತ್ತು ಶಿವಮೊಗ್ಗದಿಂದ ಮಾನ್ಯ ಜಯಪ್ರಕಾಶ್ ಹೆಗ್ಡೆಯವರ ಭಾಗದಲ್ಲಿ ಅಡುಗೆಗೆ ಕೂಡ ಇದನ್ನು ಬಳಸುತ್ತಿದ್ದಾರೆ. ಇದು ಕೂಡ ಎಡಿಬಲ್ ಆಯಿಲ್. ನಾನ್ ಬ್ರಾಂಡಡ್ ಕೊಬ್ಬರಿ ಎಣ್ಣೆ ಅಥವಾ ಕಾಯಿ ಎಣ್ಣೆಯನ್ನು ಪೂರ್ತಿಯಾಗಿ ತಲೆಗೆ ಮಾತ್ರ ಹಾಕುತ್ತಾರೆ ಅಂತ ತಿಳಿದುಕೊಳ್ಳಬೇಡಿ. ನಿಮ್ಮ ಹೊಸ ಎಣ್ಣೆಗಳು, ಕೊಲೆಸ್ಟ್ರಾಲ್ ಫ್ರೀ ಅಂತ ವಿದೇಶಗಳಿಂದ ಬಂದು ಜಾಹೀರಾತು ಮಾಡುವುದಕ್ಕೆ ಮೊದಲೇ ಇಲ್ಲಿ ಅಡುಗೆಗೆ ಕೊಬ್ಬರಿ ಎಣ್ಣೆಯನ್ನು ಬಳಸುತ್ತಿದ್ದುದ್ದು ಇದೆ. ಇದು ಮಾರಕವಾದಂಥದ್ದು. ಅದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು ಮತ್ತು ಆ.ಸಿ.ಎಸ್.ಟಿ.ಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು.

ಮತ್ತೆ ತಮಗೆ ನಾನು ಒಂದನ್ನು ಕೇಳುತ್ತೇನೆ. ಬಾಕಿಗಳನ್ನು ನಾವು ತೀರಿಸಬೇಕು ಅಂತ ಹೇಳುವ ಕಡೆ ಋಣಗಳನ್ನು ತೀರಿಸುತ್ತೇವೆ ಅಂತ ಹೆಜ್ಜೆ ಇಟ್ಟುಕೊಂಡರೆ ನಿಮ್ಮ ಬಾಕಿಗಳ ಜೊತೆ ಪೆಂಡಿಂಗ್ ಬಿಲ್‌ಗಳನ್ನು ಸಹ ಸೇರಿಸಿ ತಾವು ಹೇಳಬೇಕಾಗುತ್ತದೆ. ಕರ್ನಾಟಕದಲ್ಲಿ ಸಂಬಳದಿಂದ ಹಿಡಿದು ಕಂಟ್ರಾಕ್ಟರ್ಸ್ ಬಿಲ್‌ವರೆಗೆ ಕೋಟ್ಯಾಂತರ ರೂಪಾಯಿಗಳನ್ನು ಸರ್ಕಾರ ಬಾಕಿದಾರರಿಗೆ ಉಳಿಸಿಕೊಂಡಿದೆ; ಅದನ್ನು ಪಾವತಿ ಮಾಡಬೇಕಾಗಿದೆ. ಸಂಸ್ಕೃತ ಶಾಲೆಗಳಿಗೆ ಪಾಠ ಮಾಡುವ ಮೇಷ್ಟ್ರಿಗೆ ನೀವು ಸಂಬಳವನ್ನು ಕೊಟ್ಟಿಲ್ಲ. ಹಳ್ಳಿಗಳ ಗ್ರಂಥಾಲಯಗಳಲ್ಲಿ ಇರುವ ಗ್ರಂಥ ಪಾಲಕರಿಗೆ ಆರೇಳು ತಿಂಗಳಿಂದ ಸಂಬಳವನ್ನು ಕೊಟ್ಟಿಲ್ಲ. ಕೆಲವು ಕಾಲೇಜುಗಳಿಗೆ ಕೊಡಬೇಕಾದ loss of pay income ನ್ನು ಕೊಟ್ಟಿಲ್ಲ. ಏಕೆ ಸರ್ಕಾರವನ್ನು ನಡೆಸುತ್ತಿದ್ದೀರಿ ಎಂಬುದು ನಮಗೆ ಅರ್ಥವಾಗುತ್ತಿಲ್ಲ. ಬೇಕಾದರೆ ಬಿಟ್ಟು ಹೋಗಿಬಿಡಿ. ಐ.ಎ.ಎಸ್.ನವರು ಯಾರಾದರೂ ಮಾಡಿಕೊಳ್ಳುತ್ತಾರೆ. ಒಂದೊಂದು ಹಳ್ಳಿಗಳಲ್ಲಿ ಸಣ್ಣ ಸಣ್ಣ ಗ್ರಂಥಾಲಯಗಳನ್ನು ಮಾಡಿ ಗ್ರಂಥಪಾಲಕರನ್ನು ಅಲ್ಲಿ ನೇಮಿಸಿದ್ದೀರಿ. ಕಳೆದ ಏಳೆಂಟು ತಿಂಗಳಿಂದ ಅವರಿಗೆ ಸಂಬಳ ಕೊಟ್ಟಿಲ್ಲ. ನಿಮಗೆ ಮಾಡುವುದಕ್ಕೆ ಆಗುವುದಿಲ್ಲ ಎಂದರೆ ಹೋಗಿ, ಇನ್ಯಾರಾದರೂ ಮಾಡಿಕೊಳ್ಳುತ್ತಾರೆ.....

ಶ್ರೀ ವಾಟಾಳ್ ನಾಗರಾಜ್ : ಇನ್ನು ಯಾರು ಬರುತ್ತಾರೆ ? ಬಿಟ್ಟು ಹೋಗಿ ಎಂದರೆ ಇನ್ಯಾರು ಬರುತ್ತದೆ.

ಶ್ರೀ ಎಸ್.ಎಲ್. ಧರ್ಮೇಗೌಡ ; ಮಾನ್ಯ ಮಾಧುಸ್ವಾಮಿಯವರು ಹೇಳಿದ ಹಾಗೆ ಐ.ಎ.ಎಸ್. ಅಧಿಕಾರಿಗಳಿಗೆ ಕೊಟ್ಟರೆ ಅವರು ಬಾಗಿಲು ಹಾಕಿಸಿಬಿಡುತ್ತಾರೆ. ಈಗ ಏನೋ ಕುಂಟಿಕೊಂಡಾದರೂ ನಡೆಯುತ್ತಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಧರ್ಮೇಗೌಡರೇ, ಸರ್ಕಾರವನ್ನು ನಡೆಸುತ್ತಿರುವವರೇ ಅವರು. ಅವರದ್ದೇ ಸರ್ಕಾರ, ನಿಮ್ಮದಲ್ಲ, ಅದಕ್ಕೆ ನೀವು ಹೋಗಿ ಅಂತ ನಾನು ಹೇಳುತ್ತಿರುವುದು. ಅವರ ಸಂಬಳ ಯಾವತ್ತಾದರೂ ನಿಂತು ಹೋಯಿತಾ ?

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಅವರ ಸಂಬಳ ನಿಂತುಹೋಗಬಾರದು.....

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಮಂತ್ರಿ) : ಬಜೆಟ್ ಪಾಸ್ ಆದಮೇಲೆ ಯಾರ್ಯಾರಿಗೆ ಸಂಬಳ ಕೊಟ್ಟಿಲ್ಲ ಎಂಬುದನ್ನು ನೋಡಿ ಸಂಬಳ ಕೊಡುವುದಕ್ಕೆ ಏರ್ಪಾಡು ಮಾಡುತ್ತೇನೆ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಈಗ ಅವರ ಸಂಬಳ 30ನೇ ತಾರೀಖಿಗೆ ಕೊಡುವುದಕ್ಕೆ ಆಗುವುದಿಲ್ಲ ಅವರಿಗೆ ಒಂದನೇ ತಾರೀಖಿಗೆ ಸಂಬಳ ಕೊಡುವುದಕ್ಕೆ ಆಗುವುದಿಲ್ಲ ಎಂದು ಅದಕ್ಕೋಸ್ಕರ ನೀವು ಬೇಗ ಬೇಗ ಮಾತನಾಡಿ ಅಂತ ಹೇಳಿ ನಮ್ಮ ತಲೆ ಮೇಲೆ ಕೂತಿರುವುದು.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ) : ಸಂಬಳ ಬರಬೇಕಾದರೆ ಬಜೆಟ್ ಪಾಸ್ ಆಗಬೇಕಲ್ಲಾ ? ನಿಧಾನವಾಗಿ ಕೊಡಬೇಕು ಎಂದರೂ ಬಜೆಟ್ ಪಾಸ್ ಆಗಬೇಕು. ಇಲ್ಲದಿದ್ದರೆ ನಿಮಗೂ ಸಂಬಳ ಇರುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ರಾಜ್ಯದ ಫಲಾನುಭವಿಗಳು ಅವರೇ ಅಲ್ವಾ? ನಮಗೆ ಒಂದು ತಿಂಗಳು ಸಂಬಳ ನಿಧಾನವಾಗಿ ಕೊಡಿ, ಪರವಾಗಿಲ್ಲ. ಅಸೆಂಬ್ಲಿಯನ್ನು ಮುಂದುವರೆಸೋಣ.

ಅಧ್ಯಕ್ಷರು ; ಮಾಧುಸ್ವಾಮಿಯವರೇ, ಬೇಗ ಮುಗಿಸಿ.

ಶ್ರೀ ಜೆ.ಸಿ. ಮಾಧುಸ್ವಾಮಿ ; ನಾನು ಮುಗಿಸುತ್ತೇನೆ, ಅದಕ್ಕೇ ನಾನು ವಿವರಗಳಿಗೆ ಹೋಗುವುದಿಲ್ಲ. ಮಾನ್ಯ ಸಿದ್ಧರಾಮಯ್ಯನವರನ್ನು, ಪಶುಸಂಗೋಪನೆ ಮಂತ್ರಿಗಳು....

ಅಧ್ಯಕ್ಷರು : ಈಗ 85 ನಿಮಿಷ ಕಾಲ ನೀವು ತೆಗೆದುಕೊಂಡಿದ್ದೀರಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್ ; ನೀವು ಕನ್‌ಕ್ಲೂಡ್ ಮಾಡುವ ಸ್ಟೇಜ್‌ಗೆ ನಿಜವಾಗಿಯೂ ಪ್ರಾರಂಭ ಮಾಡಿದ್ದೀರಿ, ನೀವು ಇಷ್ಟು ಹೊತ್ತು ಏನು ಹೇಳಿದ್ದೀರಿ, ಅದೇನೂ ಅಷ್ಟು ರೆಲವೆಂಟ್ ಅಲ್ಲ. The relevent talk has now begin but unfortunately you are concluding. ಅವರ ಕಡೆ ತೋರಿಸಿ ಹೇಳಿದಿರಲ್ಲಾ ಅವರ ಸಂಬಳದ ಬಗ್ಗೆ. ಈಗ ತಾನೇ ನಾನು ಮತ್ತು ಮಾನ್ಯ ರೆಡ್ಡಿಯವರು ಚರ್ಚೆ ಮಾಡುತ್ತಿದ್ದೆವು. ಈ ದೇಶವನ್ನು ಒಂದು ಕಂಪನಿ ನಡೆಸುತ್ತಿತ್ತು. ಅದು ಈಸ್ಟ್ ಇಂಡಿಯಾ ಕಂಪನಿ. ಕಂಪನಿಯವರು ಈ ದೇಶವನ್ನು ಹೇಗೆ ನಡೆಸಿಕೊಂಡು ಲಾಭ ಹೊಡೆಯಬೇಕು ಎಂದು ಏನು ಇಟ್ಟುಕೊಂಡಿದ್ದರು ಅದು ಇನ್ನೂ ಕಂಟಿನ್ಯೂ ಆಗುತ್ತಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅದಕ್ಕೆ ಒಂದು ಅಮೆಂಡ್‌ಮೆಂಟ್. Collaboration of East India Company ಈಗ ನಡೆಸುತ್ತಿದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಲಾರ್ಡ್ ಮೆಕಾತ್ರಿ education system, East India Company, Indian civil Service ಆದರ substitution replacement ಆಗಿ ಇವರು ಬಂದಿರುವುದು. ಅಲ್ಲಿಂದ ಪ್ರಾರಂಭಿಸಿ ಮಾಡಿದ್ದರೆ probably, you have concluded better. ನೀವು ಕನ್‌ಕ್ಲೂಡ್ ಮಾಡುವ ಸ್ಟೇಜ್‌ನಲ್ಲಿ ಪ್ರಾರಂಭ ಮಾಡಿದ್ದೀರಿ.

ಶ್ರೀ ಜೆ.ಸಿ. ಮಾಧುಸ್ವಾಮಿ ; ನಾನು ಪ್ರಾರಂಭದಲ್ಲೇ ಹೇಳಿದ್ದೆ; ನಾನು ಗ್ರಾಮೀಣ ಪರವಾಗಿ ಮಾತನಾಡುವ ಮನುಷ್ಯ ಅಂತ. ಅಕಸ್ಮಾತ್ ನಮ್ಮ ಪಕ್ಷದವರು ಇಲ್ಲಿ ಕೂಡಿಸಿರುವುದರಿಂದ ಎಲ್ಲದರ ಮೇಲೆ ಸ್ವಲ್ಪ ಮಾತನಾಡಬೇಕು ಎಂದು ಅಲ್ಲಿಗೆ ಬಂದೆ. ಇದರ ಬಗ್ಗೆ ನಾನು ಪ್ರಾಮಾಣಿಕನಾಗಿದ್ದೇನೆ. ನನ್ನ ಕನ್ಸರ್ನ್, ನನ್ನ ಬದುಕು ಅಲ್ಲಿಗೇ ಇರುವಂಥಾದ್ದು. ಅದಕ್ಕೆ ನಾನು ಪ್ರಾಯಾ ರಿಟಿ ಕೊಟ್ಟು ಮಾತನಾಡಿದ್ದೇನೆ. ಆದರೆ ಈಗ ಬಜೆಟ್‌ನಲ್ಲಿ ಮಾತನಾಡಬೇಕಾಗಿರುವುದರಿಂದ, ತಮಗೆ ಹೇಳಬೇಕಾಗಿರುವುದು ನನ್ನ ಕರ್ತವ್ಯವೆಂದು ತಿಳಿದು ಮಾತನಾಡಿದ್ದೇನೆ.

ಸಾರ್ ನಾನು, ಎಸ್.ಸಿ. ಎಸ್.ಟಿ. ಕಾರ್ಪೋರೇಷನ್ ವಿಷಯಕ್ಕೆ ಬರುತ್ತೇನೆ, ಕೊರೆದಿರತಕ್ಕ ಬೋರ್‌ಗಳಿಗೆ 3–4 ವರ್ಷಗಳ ಹಿಂದೆ ಪಂಪುಸೆಟ್ ಹಾಕಿದೆ. ಒಂದೇ ಒಂದು ಫಲಾನುಭವಿಗಳಿಗೆ ನಾವು ಮೋಟಾರು ಬಿಟ್ಟುಕೊಟ್ಟಿಲ್ಲ. ನಾವು ಗಂಗಾ ಕಲ್ಯಾಣ ಯೋಜನೆ ಯಡಿಯಲ್ಲಿ ಎಸ್.ಸಿ. ಎಸ್.ಟಿ. ಗಳಿಗೆ ಎಂದು ಸಮಾಜ ಕಲ್ಯಾಣ ಇಲಾಖೆಯಲ್ಲಿ ಏನು ಬೋರ್ ಕೊರೆಸುತ್ತೇನೆ, ಅವರೂ ಕೂಡ ವಿದ್ಯುದ್ದೀಕರಣ ಮಾಡಿಲ್ಲ. ನೀವು ಮೋಟಾರು ಬಿಟ್ಟು ಬರುವುದರಲ್ಲಿ ಅದು ಡ್ರೈ ಆಗಿರುತ್ತೋ, ಓಡುತ್ತೋ ಅದು ಅವರಿಗೆ ಗೊತ್ತಿರುವುದಿಲ್ಲ. ಮತ್ತೆ ಐದು ಸಾವಿರ ಪಂಪುಸೆಟ್ಟುಗಳನ್ನು ಆ ಕಾರ್ಪೋರೇಷನ್‌ನವರು ಎಲ್ಲಿಂದ ಕೊಟ್ಟಿದ್ದಾರೆಂಬುದನ್ನು ತಾವು ತನಿಖೆ ಮಾಡಿಸಿ. ಇದು ಸ್ಪಷ್ಟವಾಗಿ ಆಗಬೇಕು. ಯಾರನ್ನು ಕೇಳಿಕೊಂಡರು? ಇಲ್ಲಿ ನಿಯಮ ಇತ್ತು, ಕರ್ನಾಟಕದ ಮ್ಯಾನುಫ್ಯಾಕ್ಚರ್ಸ್‌ರಿಂದ ತೆಗೆದುಕೊಳ್ಳಬೇಕೆಂದು, ಅವರು ಏಕೆ ತೆಗೆದುಕೊಳ್ಳಲಿಲ್ಲ ? ನಿಮ್ಮದೊಂದು ಸಂಸ್ಥೆ ಇತ್ತು, ಗವರ್ನಮೆಂಟ್ ಪರ್ಚೆಸಸ್‌ನ್ನು ಇಲ್ಲಿ ಮಾಡಬೇಕು ಎಂದು. ಅದನ್ನು ಏಕೆ ವೈಲೇಟ್ ಮಾಡಿದ್ದಾರೆ? ಇದೆಲ್ಲಾ ನೋಡಬೇಕು. ಆ ಮೋಟಾರುಗಳನ್ನು ತಂದ ತಕ್ಷಣ ಸುಟ್ಟು ಹೋಗುತ್ತದೆ. ಎರಡು ತಿಂಗಳು ಮೂರು ತಿಂಗಳು ಓಡಿದರೆ, ಪಾಪ, ಆ ಫಲಾನುಭವಿ ಪುಣ್ಯ. ಇಂತಹ ಸ್ಥಿತಿಗೆ ಆ ಸಂಸ್ಥೆ ಬಂದಿದೆ. ಇದನ್ನೆಲ್ಲಾ ನಾವು ಇಲ್ಲಿ ಹೇಳದೆ, ಇನ್ನೆಲ್ಲಿ ಹೋಗಿ ಹೇಳಬೇಕೋ ನಮಗೆ ಗೊತ್ತಾಗುವುದಿಲ್ಲ. ತಾವು ಏನಾದರೂ ನಿಜವಾಗಿ ಅವರಿಗೆ ಅನುಕೂಲ ಮಾಡುತ್ತಿದ್ದೇವೆ, ಬಜೆಟ್‌ನಲ್ಲಿ ಓದಿದ್ದೆಲ್ಲಾ ಕಾರ್ಯಗತವಾಗುತ್ತಾ ಇದೆ ಎಂದು ಭಾವಿಸಿದ್ದರೆ, ಅದು ತಪ್ಪು ಸನ್ಮಾನ್ಯ ಸಿದ್ಧರಾಮಯ್ಯನವರೇ, ಇವತ್ತು ಯಾವುದೇ ಫಲ ಅಲ್ಲಿಯವರೆಗೆ ತಲುಪಿಸುವುದಕ್ಕೆ ನೀವು ಸಮರ್ಥರಾಗಿಲ್ಲ ಮಧ್ಯದವರು ತಿಂದುಹಾಕುತ್ತಿದ್ದಾರೆ ಅಥವಾ ಮಧ್ಯದಲ್ಲಿ ಎಲ್ಲಾ ಸಂಸ್ಥೆಯವರು ಕುಳಿತುಕೊಂಡು ಮುಖ್ಯಸ್ಥರು, ದುಡ್ಡಿನ ಮೇಲೆ ಬಹಳ ಆಸೆ ಇಟ್ಟುಕೊಂಡು, ಅಲ್ಲಿರುವವರನ್ನು ಬೀದಿಪಾಲು ಮಾಡುತ್ತಿದ್ದಾರೆ. ಅವನಿಗೆ ನೀವು ಆದ್ಯತೆ ಮೇಲೆ

ಈಗಲಾದರೂ ಸ್ವಲ್ಪ ನೋಡಿ ಆ ಸಂಸ್ಥೆಗಳಲ್ಲಿ ಬರುವಂಥ ಫಲಾನುಭವಿಗಳಿಗೆ ಬೋರ್ ಕೊರೆದಿರುವವರಿಗೆ ಮೋಟಾರು ಕೊಡಿಸಿ, ಅವೆಲ್ಲವನ್ನೂ ಒಂದು ಸಾರಿ ಕಮಿಷನ್ ಮಾಡಿ ಆಮೇಲೆ ಎಲ್ಲಿಯಾದರೂ ಹೊಸದಾಗಿ ಬೋರ್ ಕೊರೆಸುವ ವ್ಯವಸ್ಥೆಯನ್ನು ನಿರ್ಮಾಣ ಮಾಡಬೇಕು. ಸನ್ಮಾನ್ಯ ಜೆ.ಹೆಚ್. ಪಟೇಲರಿದ್ದಾಗ ನಾವು ಒಂದು ಸಾರಿ ಕೇಳಿಕೊಂಡಿದ್ದೆವು. ಸಾರ್, ಈಗ ಕೊರೆದಿರುವವರಿಗೆಲ್ಲಾ ಮೊದಲು ಮೋಟಾರು ಬಿಡಿಸಿಬಿಡಿ. ನಿಮ್ಮ ಹತ್ತಿರ ಇರುವ ಹಣದಲ್ಲೇ ಅದನ್ನು ಮಾಡಿ. ಆಮೇಲೆ ಹೊಸ ಬೋರ್ ಕೊರೆಸಿ. ವರ್ಷೇ ವರ್ಷೇ ಕೊರೆಯುತ್ತಾ ಹೋಗುತ್ತಿರುವುದು. ಅವು ಎನರ್ಜೈಸ್ ಆಗುವುದೇ ಇಲ್ಲ. ಈ ಸ್ಥಿತಿ ಏನಿದೆ ಇದರಿಂದ ತಾವು ಅವರನ್ನು ಪಾರು ಮಾಡಬೇಕು.

ಶ್ರೀ ಹೆಚ್. ಅಂಜನೇಯ : ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಇದ್ದಾರೆ ಮತ್ತು ನಮ್ಮ ಎಸ್.ಸಿ. ಎಸ್.ಟಿ ಗೆ ಸಂಬಂಧಪಟ್ಟಂಥ ಹಿರಿಯ ಸಚಿವರು ಇಲ್ಲಿ ಇದ್ದಾರೆ. ಕಳೆದ ಮೂರು ವರ್ಷಗಳಿಂದ ಎಸ್.ಸಿ. ಎಸ್.ಟಿ. ಡೆವಲಪ್‌ಮೆಂಟ್ ಕಾರ್ಪೋರೇಷನ್‌ನಿಂದ ಮತ್ತೆ ಬ್ಯಾಕ್‌ವರ್ಡ್ ಕ್ಲಾಸ್ ಅಭಿವೃದ್ಧಿ ನಿಗಮದಿಂದ ಕೂಡ ಬೋರ್‌ವೆಲ್‌ಗಳನ್ನು ಕೊರೆಸಲಾಗುತ್ತಿದೆ. ಕಳೆದ ಮೂರು ವರ್ಷಗಳಿಂದ ವಿದ್ಯುತ್ ಸಂಪರ್ಕ ಕೊಡುತ್ತಾ ಇಲ್ಲ. ಮೊದಲು ಕೆ.ಇ.ಬಿ. ಇತ್ತು ಆಗ ನೇರವಾಗಿ ಎಸ್.ಸಿ. ಎಸ್.ಟಿ. ಕಾರ್ಪೋರೇಷನ್‌ನಿಂದ ಒಂದು ಬೋರನ್ನು ಕೊರೆಸಿದ ತಕ್ಷಣವೇ ವಿದ್ಯುತ್ ಸಂಪರ್ಕವನ್ನು ಅವರು ಕಲ್ಪಿಸಿಕೊಡುತ್ತಾ ಇದ್ದರು. ಎಸ್.ಸಿ ಎಸ್.ಟಿ. ಡೆವಲಪ್‌ಮೆಂಟ್ ಕಾರ್ಪೋರೇಷನ್‌ನಿಂದ ಬೋರ್ ಕೊರೆಸಿ ಕೊಟ್ಟರೆ ಅವರು ಯಾವುದೇ ಹಣ ತೆಗೆದುಕೊಳ್ಳುತ್ತಾ ಇರಲಿಲ್ಲ. ಮಾನ್ಯ ಸಿಂಧ್ಯಸಾಹೇಬರು ಹಿಂದೆ ಸೋಷಿಯಲ್ ವೆಲ್‌ಫೇರ್ ಇಲಾಖೆಯ ಮಂತ್ರಿಗಳಾಗಿದ್ದರು, ಅವರಿಗೆ ಇದು ಗೊತ್ತಿದೆ. ಈ ಕಂಪನಿಗಳು ಆದನಂತರ ಅವರೇನು ಮಾಡಿಬಿಟ್ಟರು. ಎಲ್ಲೆಲ್ಲಿ ಕಳೆದ ಮೂರು ವರ್ಷಗಳಿಂದ ಬೋರ್‌ಗಳನ್ನು ಕೊರೆಸಿದ್ದಾರೋ, ಯಾವುದಕ್ಕೂ ಕೂಡ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿಲ್ಲ. ಸುಮಾರು ಐದು ಸಾವಿರ ಬೋರ್‌ವೆಲ್‌ಗಳನ್ನು ಕೊರೆಸಿದ್ದಾರೆ. ಆ ಕಾರ್ಪೋರೇಷನ್‌ನಲ್ಲಿ ಪಂಪ್‌ಸೆಟ್ ಇದೆ, ಎಲ್ಲಾ ರೆಡಿ ಇದೆ. ಆದರೆ, ವಿದ್ಯುತ್ ಸಂಪರ್ಕವನ್ನು ಕಲ್ಪಿಸಿಕೊಡುವುದಕ್ಕೆ ಆಗುತ್ತಾ ಇಲ್ಲ. ವಿದ್ಯುತ್ ಸಂಪರ್ಕವನ್ನು ಫಲಾನುಭವಿಯೇ ಕಲ್ಪಿಸಿಕೊಳ್ಳಿ ಎಂದು ಹೇಳುತ್ತಾರೆ. ಅದರಿಂದ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ತೆರಬೇಕು, ಈ ಹಣ ಅವನಲ್ಲಿ ಇಲ್ಲ. ಆದ್ದರಿಂದ. ತಾವು ದಯಮಾಡಿ ಬೆಸ್ಕಾಂನವರ ಹತ್ತಿರ ಮಾತನಾಡಿ, ಸಮಾಜ ಕಲ್ಯಾಣ ಇಲಾಖೆಯುವರು, ಬೆಸ್ಕಾಂನವರು ಮತ್ತು ಎಸ್.ಸಿ. ಎಸ್.ಟಿ. ಡೆವಲಪ್‌ಮೆಂಟ್ ಕಾರ್ಪೋರೇಷನ್‌ನವರು ಮಾತನಾಡಿ ತಕ್ಷಣ ಕೊರೆದಿರತಕ್ಕ ಬೋರ್‌ವೆಲ್‌ಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿ ಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ಮತ್ತು ಹಿರಿಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ ; ಇವತ್ತು ತಾವು ಅವರಿಗೆ ಎನರ್ಜೈಸ್ ಮಾಡುವಂಥ ಸ್ಥಿತಿಯನ್ನು ನಿರ್ಮಾಣ ಮಾಡಬೇಕು. ಹೋಟೆಲ್‌ಗಳಲ್ಲಿ ಒಂದು ದಿನಕ್ಕೆ 400

ರೂಪಾಯಿಗಳ ಮೇಲೆ ಟ್ಯಾಕ್ಸ್ ಹಾಕುತ್ತಿದ್ದುದ್ದನ್ನು 150 ಕ್ಕೆ ಇಳಿಸುತ್ತೇವೆಂದು ಹೇಳುತ್ತೀರಿ. ನೀವು ಬೆಂಗಳೂರಿನಲ್ಲಿ ಮಾಡಿ, ತುಮಕೂರಿನಲ್ಲಿ ಮಾಡಿ, ಎಂದು ನಾವು ಕೇಳುವುದಿಲ್ಲ. ತೀರಾ ಮಫ್ಯುಸಿಲ್ ಟೌನ್‌ನಲ್ಲಿ ಈ ಟ್ಯಾಕ್ಸ್ ಹಾಕುವುದು ಸೌಜನ್ಯವೇ ಎಂದು ತಾವು ಯೋಚನೆ ಮಾಡಿ. ಚಿಕ್ಕನಾಯ್ಕನಹಳ್ಳಿ ಎಂಬ ಊರಿನಲ್ಲಿ ಬರುವವರೇ ಇಲ್ಲ. ನೀವು 150 ರೂಪಾಯಿ ರೇಟ್ ಇಟ್ಟರೆ, ಆ ಹೋಟೆಲ್ ನಡೆಸುವವನಿಗೆ ಏನೂ ವರ್ಕ್-ಔಟ್ ಆಗುವುದಿಲ್ಲ. ನೀವು ಮತ್ತೆ ಟ್ಯಾಕ್ಸ್ ಹಾಕುತ್ತೇವೆಂದು, ಮತ್ತೆ ದುಬಾರಿಯಾಗುತ್ತದೆ. ದಯಮಾಡಿ, ನೀವು ಜನಸಂಖ್ಯೆ ಆಧಾರದ ಮೇಲೋ, ಅಲ್ಲಿರುವ ಮೂವ್‌ಮೆಂಟ್ ಮೇಲೋ ಏನು ಅಲ್ಲಿ ಜನ ಬರುತ್ತಾರೆ, ಹೋಗುತ್ತಾರೆಂಬುದರ ಮೇಲೆ ನೀವು ಈ ರೇಟ್ ಇಡಬೇಕಾಗಿತ್ತು. ಒಂದು ದಿವಸಕ್ಕೆ 150 ರೂಪಾಯಿಗೆ ಅವನು ಟ್ಯಾಕ್ಸ್ ಕೊಟ್ಟು, ರೂಮ್ ಬಾಡಿಗೆ ಕೊಡುತ್ತಾನೆಂದರೆ, ಬಹಳ ನೋವಿಗೆ ಮಫ್ಯುಸಿಲ್ ಟೌನ್‌ನಲ್ಲಿ ಲಾಡ್ಜ್‌ಗಳು ಮಾಡುವವರು ಶುರುವಾಗುತ್ತಾರೆ ಅವರೆಲ್ಲಾ ಪರೋಕ್ಷವಾಗಿ ಅಥವಾ ಪ್ರತ್ಯೇಕವಾಗಿ ಸರ್ಕಾರದಲ್ಲಿ ಲೋನ್ ತೆಗೆದುಕೊಂಡು ಸಬ್ಸಿಡಿ ಕಾಯ್ದುಕೊಂಡು ಟೂರಿಸಂ ಡಿಪಾರ್ಟ್‌ಮೆಂಟಿಗೆ ಅಫಿಲಿಂಯೇಟ್ ಆಗಿ, ಲೋನ್ ಮಾಡಿ ಲಾಡ್ಜ್ ನಡೆಸುತ್ತಿರುವವರೇ ಜಾಸ್ತಿ. ಅವರು ಜನಗಳಿಗೂ ಹಾಕುತ್ತಾರೆ ಮತ್ತೆ ಅವರಿಗೂ ದುಬಾರಿಯಾಗುತ್ತದೆ. ಮೂರನೆಯದು, ಮಾನ್ಯ ಸಿಂಧ್ಯರವರ ಗಮನಕ್ಕೆ ತರಬೇಕೆಂದರೆ, ನಾನು ಆಗಲೇ ಹೇಳಲು ಹೊರಟಿದ್ದೆ. ಇನ್‌ವೆಸ್ಟ್‌ಮೆಂಟ್ ಮಾಡಿದ ಕಡೆಯಿಂದ ನಮಗೆ ರೆವಿನ್ಯೂ ಬರುತ್ತಾ ಇಲ್ಲ. ನನ್ನದೊಂದು ಆಕ್ಷೇಪಣೆ ಇದೆ. ಸೋಪ್ಸ್ ಅಂಡ್ ಡಿಟರ್ಜೆಂಟ್ ಫ್ಯಾಕ್ಟರಿಯನ್ನು ಮುಚ್ಚಲಿಕ್ಕೆ ಮಾಡಿರುವ ತೀರ್ಮಾನ ಸರಿಯೇ ಅಥವಾ ತಪ್ಪೇ ? ಈ ಫ್ಯಾಕ್ಟರಿ ನಾವು ತಿಳಿದಂಥ ಮಟ್ಟಿಗೆ ಮುಚ್ಚಬೇಕಾದ ಸ್ಥಿತಿಗೆ ಬಂದಿರಲಿಲ್ಲ. ಅಲ್ಲಿ ಬಹಳ ಉತ್ತಮವಾಗಿ ಮಾರಾಟ ಮಾಡುವಂಥಾದ್ದು ಮತ್ತು ಬಹಳ ಚೀಪಾಗಿ ಗಂಧವನ್ನು, ಗಂಧದ ಎಣ್ಣೆಯನ್ನು ಪೂರೈಕೆ ಮಾಡಿಕೊಂಡು ಸಬ್ಸಿಡೈಡ್ ಮಾಡಿಕೊಂಡು ಬಂದ ಫ್ಯಾಕ್ಟರಿ, ಇದು ಯಾರ ತೆವಲಿಗೆ ? ನನಗೆ ಗೊತ್ತಿದೆ. ವಿಪ್ರೋದವರ ತೆವಲಗೆ ಈ ಫ್ಯಾಕ್ಟರಿಯನ್ನು ಮುಚ್ಚುವುದಕ್ಕೆ ಹೊರಟಿದ್ದಾರೆ ತಾವು ಕಡಿವಾಣ ಹಾಕಬೇಕು. ವಿಪ್ರೋದವನು ಸೋಪ್ ಮಾರಬೇಕು, ವಿಪ್ರೋದವನು ಅದನ್ನು ವಹಿಸಿಕೊಳ್ಳಬೇಕು ಅಥವಾ ಇನ್ನೊಬ್ಬ ಯಾರೋ ಮಲ್ಟಿನ್ಯಾಷನಲ್‌ನವನಿಗೆ ವಹಿಸಬೇಕೆಂಬ ತೀರ್ಮಾನಗಳಿಗೆ ಬಂದು ಇಂತಹ ಸಾರ್ವಜನಿಕ ಉದ್ದಿಮೆಗಳನ್ನೆಲ್ಲಾ ನಾವು ಮುಚ್ಚುವುದಕ್ಕೆ ಹೊರಟರೆ ಸರಿಯೇ ? ನಷ್ಟದಲ್ಲಿರುವ ಉದ್ದಿಮೆಗಳನ್ನು ತಲೆಮೇಲೆ ಎಳೆದುಕೊಂಡು ನಡೆಸಿ ಎಂದು ನಾವು ಕೇಳುವುದಿಲ್ಲ. ಇದು ನಡೆಯಬಹುದಾದಂಥಾದ್ದು. ಇವತ್ತು ಸೋಪ್ ಮಾರುವುದಕ್ಕೆ ಏನು ಕೊರತೆ ಇದೆ ? ಅಂತಹ ಸಂಸ್ಥೆಗಳನ್ನು ಮುಚ್ಚುವುದು ಮತ್ತು ಎನ್.ಜಿ.ಇ.ಎಫ್. ನಲ್ಲಿ ಮಿಷನರೀಸ್ ಹೇರಳವಾಗಿದೆ. ನಿಮ್ಮ ಕ್ಯಾಬಿನೆಟ್ ಸಬ್ ಕಮಿಟಿ ಹೇಳಿದೆ. ಎನ್,ಜಿ.ಇ.ಎಫ್. ನಲ್ಲಿರುವಂಥ ಮಿಷನರೀಸನ್ನು ಸರ್ಕಾರ ಆಸಕ್ತಿ ತೆಗೆದುಕೊಂಡು ಡಿಸ್‌ಪೋಸ್ ಮಾಡಿದರೆ ಅವರ ಸಾಲ ತೀರಿಸಿ, ನಾವು [illegible]

ಎಂದು. ಬಹುಶಃ ತಿಮ್ಮಪ್ಪನವರು, ಹಿಂಡಿಸ್‌ಗೇರಿಯವರು ಆ ಸಭೆಯಲ್ಲಿ ಕುಳಿತಿದ್ದರು. ನಾನು ಆ ವರದಿಯನ್ನು ಓದಿದ್ದೇನೆ. ಎನ್.ಜಿ.ಇ.ಎಫ್. ಲ್ಯಾಂಡ್ ಸ್ಕ್ಯಾಂಡಲ್ ಒಂದು ಕಡೆಯಾದರೆ, ಮಿಷನರಿ ಸ್ಕ್ಯಾಂಡಲ್ ಇನ್ನೊಂದು ಕಡೆ. ಆಮೇಲೆ, ಅವರು ಒಂದು ಕಡೆ ಹೇಳುತ್ತಾರೆ. ನೀವು ಮಿನಿಮಮ್ ಸ್ಟ್ಯಾಫ್ ಇಟ್ಟುಕೊಂಡು, ಅಲ್ಪಸ್ವಲ್ಪ ಫ್ಯಾಕ್ಟರಿ ಇಟ್ಟುಕೊಂಡರೆ ದೊಡ್ಡ ಟ್ರಾನ್ಸ್‌ಫಾರ್ಮರ್ಸ್‌ಗೆ ಡಿಮ್ಯಾಂಡ್ ಇದೆ. ಎಸ್.ಜಿ.ಇ.ಎಫ್,ನವರು ಸಣ್ಣ ಡಿಸ್ಟ್ರಿಬ್ಯೂಟರ್ ಟ್ರಾನ್ಸ್‌ಫಾರ್ಮರ್ಸ್ ಮಾಡುವುದಿಲ್ಲ. ಇವರಿಗೆ ಹೊರಗಡೆಯಿಂದಲೂ ಡಿಮ್ಯಾಂಡ್ ಇತ್ತು. ಅಂತಹ ಸಂಸ್ಥೆಗಳನ್ನು ಮುಚ್ಚಲೇಬೇಕೆಂದು ಏಕೆ ತೀರ್ಮಾನ ತೆಗೆದುಕೊಂಡಿದ್ದಾರೋ ಗೊತ್ತಿಲ್ಲ. ನೀವು ಇಳಿಸಿದಿರಿ, ಆರು ಸಾವಿರದಿಂದ ಹಿಡಿದು ಈಗ 120 ಜನ ಸಿಬ್ಬಂದಿಗೆ ತಂದಿದ್ದೀರಿ. 120 ಜನ ಅಥವಾ 200 ಜನ ಇಟ್ಟುಕೊಂಡು ಒಂದು ವಿಭಾಗ ನಡೆಸಬಹುದೆಂದರೆ ಏಕೆ ನಡೆಸಬಾರದು ? ಮೂರನೆಯದು, ನಾನು ಲ್ಯಾಂಡ್ ಸ್ಕ್ಯಾಂಡಲ್ ಮೇಲೆ ಮಾತನಾಡಿದ್ದೇನೆ. 43 ಎಕರೆ ಜಮೀನು ಏನು ಅಲ್ಲಿ ಮಾರಾಟವಾಗಿದೆ. ಅಲ್ಲಿನ ಮರ ಗಿಡ ಎಲ್ಲವನ್ನೂ ಕಡಿದು ನುಣ್ಣಗೆ ಮಾಡಿ, 125 ರೂಪಾಯಿ ರೇಟ್ ಫಿಕ್ಸ್ ಮಾಡಿ, ಅದರ ಮೇಲೆ ಈ ಖರ್ಚೆಲ್ಲಾ ಸೇರಿಸಿ 238 ರೂಪಾಯಿಗೆ ಕೊಟ್ಟಿದ್ದಾರೆ. ನೀವು ನಮ್ಮ ಎಂ.ಎಲ್.ಎ.ಗಳಿಗೆ ಕೊಡಿಸಿ. 300 ಅಥವಾ 350 ರೂಪಾಯಿಗಳಂತೆ ನಾವು ತೆಗೆದುಕೊಳ್ಳುತ್ತೇವೆ. ನೀವು ಯಾವ ಪಾಪಕ್ಕೆ ಇವರಿಗೆ ಆ 43 ಎಕರೆ ಕೊಡುತ್ತಿದ್ದೀರಿ ? ಯಾರೋ ಹೊರಗಡೆಯಿಂದ ಬಂದು, ಯಾರದೋ ಹೆಸರು ಹೇಳಿಕೊಂಡು ತೆಗೆದುಕೊಂಡು ಹೋಗುವವರಿಗೆ? ಬೇಡ, ನಾನು ಕೇಳುವುದಿಲ್ಲ. ಸ್ಟ್ಯಾಫ್ ಕೇಳಿದ್ದರಲ್ಲಾ ನಮಗೆ ಅಲ್ಲಿ ರಿಹ್ಯಾಬಿಲ್‌ಟೇಟ್ ಮಾಡಿ ಎಂದು. ನಮಗೆ ಕೊಡಬೇಕಾಗಿರುವ ಬೆನಿಫಿಟ್‌ನಲ್ಲಿ ಡಿಡೆಕ್ಟ್ ಮಾಡಿಕೊಂಡು ನಮಗೆ ಕೊಡಿ ಎಂದು ಕೇಳಿದ್ದರು. ನೀವು ಏತಕ್ಕೆ ಕನ್‌ಸಿಡರ್ ಮಾಡಲಿಲ್ಲ ? why this government has taken a decision to close down all the public sector units ? If they are doing loss, I understand it. ನನಗೆ ಗೊತ್ತಾಗಲಿಲ್ಲ. ಮುಚ್ಚಲೇಬೇಕು, ಇದರ ಹಿಂದೆ ಒಂದು ಹುನ್ನಾರ ಇದೆ. ಯಾರಿಗೋ ಸಹಾಯ ಮಾಡಬೇಕೆಂಬುದೂ ಇದೆ. ಯಾರನ್ನೋ ಬೆಳೆಸಬೇಕೆಂಬುದೂ ಇದೆ. ಯಾರದೋ ಪ್ರಾಡಕ್ಟನ್ನು ಮಾರ್ಕೆಟ್ ಮಾಡಿಸಬೇಕೆನ್ನುವುದನ್ನೂ ಕೂಡ ನಾನು ಇವತ್ತು ಚಾರ್ಜ್ ಮಾಡುತ್ತಿದ್ದೇನೆ. ಕೆಲವು ಸಂಸ್ಥೆಗಳು, ಮೈಸೂರು ಸೋಪ್ಸ್ ಅಂಡ್ ಡಿಟರ್ಜೆಂಟ್. ದಯಮಾಡಿ ಇಂತಹ ಕಡೆ ತಾವು ನೋಡಬೇಕು. ಈಗ ಹಾಲು, ಏತಕ್ಕೆ ನಮ್ಮ ಹಾಲಿನ ಡೈರಿಗಳು ಲಾಸ್ ಆಗುತ್ತಾ ಇದೆ. ನಾನು ಹೇಳುವುದಕ್ಕೆ ಹೋಗುವುದಿಲ್ಲ. ತಾವು ನನ್ನ ಜೊತೆಯಲ್ಲಿ ಹಾಲಿ ಡೈರಿಯಲ್ಲಿ ಇದ್ದವರು. ನಾನು ತಮಗೆ ಕೇಳುತ್ತಿದ್ದೇನೆ. ಕನಿಷ್ಠ ಕನ್‌ಸ್ಯೂಮಬಲ್ ಆರ್ಟಿಕಲ್ಸ್ ಮಾಡುವವರು ದಿನನಿತ್ಯದ ಆಗತ್ಯಕ್ಕೆ ಬರಬೇಕಾದಂಥ ವಸ್ತುವನ್ನು ಉತ್ಪಾದನೆ ಮಾಡುವಂಥ ಇಂಡಸ್ಟ್ರಿ ನಮ್ಮ ಹತ್ತಿರ ಯಾವುದಾದರೂ ಪಬ್ಲಿಕ್ ಸೆಕ್ಟಾರ್‌ನಲ್ಲಿ ಇದ್ದರೆ, ಅದನ್ನು ರಕ್ಷಣೆ ಮಾಡುವ ಕೆಲಸವನ್ನು ಈ ಸರ್ಕಾರ ಮಾಡಬೇಕು. ಎರಡನೆಯದು, ನಿನ್ನೆ ದಿವಸ ನಾನು

ತಮಗೆ ಬೇಡಿಕೊಂಡೆ. ಜಿಲ್ಲಾ ಪರಿಷತ್ತುಗಳದು. ತಾಲ್ಲೂಕು ಪಂಚಾಯಿತಿಗಳದ್ದು ಮಾರ್ಚ್ ಕೊನೆಯಲ್ಲಿ ಟ್ರಜರಿಯಲ್ಲಿ ಇದ್ದ ದುಡ್ಡನ್ನೆಲ್ಲಾ ತಾವು ವಿತ್ ಡ್ರಾ ಮಾಡಿದಿರಿ. ಇದು ಓನ್ ಫಂಡ್ಸ್ ನಾನು ಎಂಟು ನೂರು ಕೋಟಿ ಎಂದು ಹೇಳಿದ್ದೆ. I stand correct, ಆದರೆ, ಅದು 1200 ಕೋಟಿ ರೂ ಯವರೆಗೆ ರೆವಿನ್ಯೂ ಲ್ಯಾಡ್ ಆಗಿದೆ ಎಂದು ಯಾರೋ ಮಾಹಿತಿ ಕೊಟ್ಟರು. ಇದು ಆಗಿದೆಯೋ ಇಲ್ಲವೋ ಈ ವಿಷಯ ತಮಗೇ ಬಿಡುತ್ತೇನೆ. ಅಕಸ್ಮಾತ್ ಏನಾದರೂ ಆ ಹಣವನ್ನು ನೀವು ತೆಗೆದುಕೊಂಡಿದ್ದಾರೆ. ಹೋದ ವರ್ಷದ ಎಲ್ಲಾ ಬಿಲ್ಲೂಗಳೂ ಪೆಂಡಿಂಗ್ ಇವೆ. ನಾವು ಒಂದು ಬೋರ್‌ವೆಲ್ ಕೊರೆದಿರುವ ಬಿಲ್ ಕೂಡ ಕೊಡುವುದಕ್ಕಾಗಿಲ್ಲ. ಒಂದು ರಸ್ತೆ ಮಾಡಿದ್ದನ್ನು ಕೊಡುವುದಕ್ಕಾಗಿಲ್ಲ. ಇದನ್ನೆಲ್ಲಾ ಕೊಡಬೇಕಾಗುತ್ತೆ. ದಯಮಾಡಿ ತಾವು ಆ ಕಡೆ ಯೋಚನೆ ಮಾಡಬೇಕು. ಟ್ಯಾಕ್ಸಿಂಗ್ ಏರಿಯಾಕ್ಕೆ ಬಂದಾಗ, ನೀವು ರೇಟ್ ಅಡ್ಜಸ್ಟಮೆಂಟ್ ಮಾಡುವುದು, ಟ್ಯಾಕ್ಸ್ ಅಡ್ಜಸ್ಟ್‌ಮೆಂಟ್ ಮಾಡುವುದಕ್ಕೆ 13 ಇರುವುದನ್ನು 12 ಮಾಡುವುದು. 4 ಇರುವುದನ್ನು 20 ಮಾಡುವುದಕ್ಕೆ ದಯವಿಟ್ಟು ಹೋಗಬೇಡಿ. ಅದು ಯಾವುದು ? whether it is a popular product ಅದೇನಾದರೂ ಜನಕ್ಕೆ ಕನ್‌ಸ್ಯೂಮಬಲ್, ನಿಮ್ಮದು ಕೆಟಗರಿ 5 ರಲ್ಲಿ ಬರುತ್ತಾ, 6 ರಲ್ಲಿ ಬರುತ್ತದೆಯೇ ಎಂಬುದನ್ನು ನೋಡಿದಿರಾ ? ಟ್ಯಾಕ್ಸ್ ಜಾಸ್ತಿ ಇತ್ತು ಕಡಿಮೆ ಮಾಡಿದ್ದೇನೆ, ಕಡಿಮೆ ಇದ್ದುದ್ದನ್ನು ಜಾಸ್ತಿ ಮಾಡಿದ್ದೇನೆ ಎಂಬ ತೀರ್ಮಾನವನ್ನು ತಾವು ಕೈಬಿಡಬೇಕು. ದಯಮಾಡಿ, ನಮ್ಮ ಕೊಬ್ಬರಿ ಮೇಲಿರುವ ಸಿ.ಎಸ್.ಟಿ. ತೆಗೆಯಬೇಕೆಂದು ಕೇಳಿ. ಕೊನೆಯದಾಗಿ ಒಂದೇ ಒಂದು ಮಾತನ್ನು ರೆವಿನ್ಯೂ ಮಂತ್ರಿಗಳ ಗಮನಕ್ಕೆ ತರಲು ಬಯಸುತ್ತೇನೆ. ತಾವೇನು ಕಲಾಮಿಟಿ ರಿಲೀಫ್ ಫಂಡ್‌ನಲ್ಲಿ ರಸ್ತೆ ಮಾಡಬಾರದೆಂದು ನಿರ್ಧಾರ ಮಾಡಿದ್ದರೆ, ದಯಮಾಡಿ ಅದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ರಸ್ತೆಗಳು ಕೂಡ, ನಾವು ಕೂಲಿ ಕೊಟ್ಟು ಕೂಲಿ ಅಥವಾ ಕಾಳು ಯೋಜನೆಯಲ್ಲಾಗುವಂಥ ಕೆಲಸವಾಗಿದ್ದರೆ, ಮಾಡಲಿಕ್ಕೆ ಪರ್ಮಿಟ್ ಮಾಡಬಹುದು.

ಶ್ರೀ ಎಂ.ಪಿ. ಪ್ರಕಾಶ್ : ರಸ್ತೆಗಳನ್ನೂ ತೆಗೆದುಕೊಳ್ಳಬೇಕೆಂದು ಮಾರ್ಗಸೂಚಿಯಲ್ಲಿ ಕೊಟ್ಟಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮೈನರ್ ಇರಿಗೇಷನ್ ಟ್ಯಾಂಕ್ಸ್‌ನಲ್ಲಿ ಭಾರಿ ಪ್ರಮಾಣದಲ್ಲಿ ಲೂಟಿಯಾಗಿದೆ ಈ ರಾಜ್ಯದಲ್ಲಿ. ನಿಮಗೆ ವಿಶ್ವಬ್ಯಾಂಕ್ ಅಥವಾ ಬೇರೆ ಫಂಡ್ ಬಂತು ಎಂದು ಹೇಳಿ ಮೈನರ್ ಇರಿಗೇಷನ್ ಟ್ಯಾಂಕನ್ನು ಹೂಳು ತೆಗೆಯುತ್ತೇನೆ, ದುರಸ್ತಿ ಮಾಡುತ್ತೇವೆಂದು ಮಾಡಿದ್ದಾರೆ. ನಿಜವಾಗಿ ಕನ್‌ಸರ್ನ್ ಇದ್ದರೆ, ಮೈನರ್ ಇರಿಗೇಷನ್ ಇಲಾಖೆಯಲ್ಲಿ ಕೊಟ್ಟಿರತಕ್ಕ ಗ್ರಾಂಟ್ ಬಗ್ಗೆ ತಾವು ಗಮನ ಕೊಡಲೇಬೇಕು. ಯಾರು ಲೂಟಿ ಮಾಡಿದ್ದಾರೆ ? ಎಷ್ಟು ಲೂಟಿ ಮಾಡಿದ್ದಾರೆ? ಈ ಸದನದ ಮುಂದೆ ವಿವರವನ್ನು ನೀಡಿ ಬಹಳ ವ್ಯಾಪಕವಾದುದು. ಬರಗಾಲದಲ್ಲೂ ಅವರಿಗೆ ದುಡ್ಡು ಬಂದಿದೆ. ಆರ್.ಐ.ಡಿ.ಎಫ್. ನಲ್ಲೂ ಅವರಿಗೆ ದುಡ್ಡು ಬಂದಿದೆ. ಬಹಳ ದುಡ್ಡು ಹೋದ ಅವಧಿಯಲ್ಲಿ ಮೈನರ್ ಇರಿಗೇಷನ್ ಟ್ಯಾಂಕ್‌ಗೆ

ಬಂದಿರತಕ್ಕದ್ದು ಇಡೀ ಮೈನರ್ ಇರಿಗೇಷನ್ ಟ್ಯಾಂಕ್ಸ್‌ನಲ್ಲಿ ಹತ್ತು ಪರ್‌ಸೆಂಟ್ ಸಹ ಪ್ರಯೋಜನವಾಗಿರುವ ಕೆಲಸವಾಗಿಲ್ಲ. ಅದಕ್ಕೊಂದು ತನಿಖೆಯನ್ನು ತಾವು ಇನಿಶಿಯೇಟ್ ಮಾಡಬೇಕೆಂದು ಕೇಳಿಕೊಂಡು ನನಗೆ ಮಾತನಾಡಲು ಬಹಳ ಇತ್ತು. ತಮಗೆ ಹೇಗಾದರೂ ಮಾಡಿ ಮುಕ್ಕಾಲು ಗಂಟೆಯೊಳಗೆ ಮುಗಿಸುತ್ತೇನೆಂದು ಹೇಳಿದ್ದೆ. ಆದ್ದರಿಂದ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ. ನಮಸ್ಕಾರ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕೈಗಾರಿಕಾ ಸಚಿವರು) ; ಮಾನ್ಯ ಅಧ್ಯಕ್ಷರೆ, ಮಾನ್ಯ ಮಾಧುಸ್ವಾಮಿಯವರು ನಮ್ಮ ಗೌರ್ನಮೆಂಟ್ ಸೋಪ್ಸ್ ಅಂಡ್ ಡಿಟರ್‌ಜೆಂಟ್ ಫ್ಯಾಕ್ಟರಿ ಬಗ್ಗೆ ವಿಪ್ರೋದವರಿಗೆ ಕೊಡಬೇಕು ಎಂಬ ಹುನ್ನಾರ ನಡೆಯುತ್ತಿದೆಯೆಂದು ಹೇಳಿದ್ದಾರೆ. ಹಿಂದೆ ಏನು ನಡೆದಿತ್ತೋ ಅದು ನನಗೆ ಗೊತ್ತಿಲ್ಲ ಇವತ್ತಂತೂ ನಾನು ಸ್ಪಷ್ಟವಾಗಿ ಹೇಳಿದ್ದೇನೆ, ಮೊನ್ನೆ ನಾನು ನಮ್ಮ ಗಂಧದ ಎಣ್ಣೆ ಕಾರ್ಖಾನೆಗೆ ಭೇಟಿ ಸಹ ಕೊಟ್ಟಿದ್ದೆ, ಅಲ್ಲಿ ಕೆಲವು ಅವ್ಯವಹಾರ ನಡೆಯುತ್ತಿರತಕ್ಕದ್ದು ನನ್ನ ಗಮನಕ್ಕೆ ಬಂದಿದೆ. ಅದನ್ನು ಸರಿಪಡಿಸಲು ನಾನು ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತೇನೆ. ಮತ್ತು ಯಾವುದೇ ಕಾರಣಕ್ಕೂ ಆ ಕಾರ್ಖಾನೆಯನ್ನು ಮುಚ್ಚುವುದಿಲ್ಲ ಎಂಬ ಭರವಸೆಯನ್ನು ಕೊಡುತ್ತಿದ್ದೇನೆ. ಮತ್ತು ಎನ್.ಜಿ.ಇ.ಎಫ್. ಬಗ್ಗೆ ತಾವೇನು ಹೇಳಿದ್ದೀರಿ. ರಾಜ್ಯಕ್ಕೆ ಅನುಕೂಲವಾಗತಕ್ಕ ಬೊಕ್ಕಸಕ್ಕೆ ಬರತಕ್ಕ ಬಹಳ ದೊಡ್ಡ ಜಮೀನಿದೆ ಎನ್ನತಕ್ಕದ್ದು ನನ್ನ ಗಮನಕ್ಕೆ ಬಂದಿದೆ. ಅದನ್ನು ರಕ್ಷಣೆ ಮಾಡತಕ್ಕ ಭರವಸೆಯನ್ನು ಸಹ ನಾನು ಈಗಾಗಲೇ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ಮೆಶಿನರಿ ಕೆಟ್ಟು ಹೋಗುತ್ತಿದೆಯೆಂದು ಕೇಳಿದ್ದೇನೆ, ಅದರ ಬಗ್ಗೆ ಸಹ ಅಧಿವೇಶನದ ನಂತರವೇ ಸಭೆಯನ್ನು ಕರೆದು ಅದನ್ನು ಯಾವ ರೀತಿಯಾಗಿ ಡಿಸ್‌ಪೋಸ್ ಮಾಡಬೇಕು ಎಂಬ ಬಗ್ಗೆ ಸಹ ಯೋಚನೆ ಮಾಡುತ್ತಿದ್ದೇನೆ. ಪಾಪ ಅಲ್ಲಿರುವ ನೌಕರರು ಬಹಳಷ್ಟು ಜನ ಆರುತಿಂಗಳಿನಿಂದ ಒಂದು ವರ್ಷದಿಂದ ಸಂಬಳ ಇಲ್ಲವೆಂದು ಶಾಸಕರ ಹತ್ತಿರ ಬಂದು ಪರದಾಡುತ್ತಿದ್ದರು. ಆ 120 ಜನರಿಗೂ ತಕ್ಷಣದಲ್ಲಿ 30 ರಿಂದ 50 ಸಾವಿರ ಹಣವನ್ನು ಕೊಡಲು ನಾನು ವ್ಯವಸ್ಥೆಯನ್ನು ಮಾಡಿದ್ದೇನೆ. ಸಾರ್ವಜನಿಕ ವಲಯದಲ್ಲಿರತಕ್ಕ ಕಾರ್ಖಾನೆಗಳೆನಿವೆ, ಅದು ಕನ್ನಡದವರಿಗೆ ಬಹಳ ಹೆಚ್ಚು ಉದ್ಯೋಗವನ್ನು ಕೊಟ್ಟಿರತಕ್ಕದ್ದು ಇದನ್ನೆಲ್ಲಾ ಕಳುಹಿಸಿ ಬೇರೆ ಬೇರೆ ಮಾಲೀಕರನ್ನು ತೆಗೆದುಕೊಂಡು ಬಂದು ಮಾಡತಕ್ಕ ಹುನ್ನಾರವಿದೆಯೆಂದೇನು indirect ಆಗಿ refer ಮಾಡಿದ್ದೀರಾ, ಅದಕ್ಕೆ ಸರ್ಕಾರ ಯಾವುದೇ ಕಾರಣಕ್ಕೂ ಅವಕಾಶವನ್ನು ಕೊಡುವುದಿಲ್ಲವೆಂಬ ಭರವಸೆಯನ್ನು ಕೊಡುತ್ತೇನೆ.

ಅಧ್ಯಕ್ಷರು : ಈಗ ಈ ಕಡೆಯಿಂದ ಒಬ್ಬರನ್ನು ಮಾತನಾಡಲು ಕರೆಯೋಣ. ಮಾನ್ಯ ಎಸ್.ಎಸ್. ಪಾಟೀಲ್‌ರವರು.

ಶ್ರೀ ಜೆ.ಸಿ. ಮಾಧುಸ್ವಾಮಿ : ಮೊದಲು ಫ್ಲೋರ್ ಲೀಡರ್ಸ್ ಮಾತನಾಡಿ ಅನಂತರ ಅವರು ಮಾತನಾಡುವ ಸಂಪ್ರದಾಯವನ್ನು ತಾವು ದಯಮಾಡಿ ತಿರುಚಬಾರದು. ಅವರು legislature party ಯಲ್ಲಿ ಕ್ಯಾಬಿನೇಟ್‌ನಲ್ಲಿ ಮಾತನಾಡಿ

ಬಜೆಟ್ ಪ್ರಪೋಸ್ ಮಾಡಿ ಇಲ್ಲಿಟ್ಟಿರುತ್ತಾರೆ. ಆದ್ದರಿಂದ ಅದರ ಬಗ್ಗೆ ಮಾತನಾಡುವುದು. ವ್ಯಾಖ್ಯಾನ ಮಾಡಲು ನಮಗೇ ಮೊದಲು ಅವಕಾಶ ಕೊಡಬೇಕು ಸ್ವಾಮಿ. ಆಮೇಲೆ ಅವರು ಮಾಡಿಕೊಳ್ಳುತ್ತಾರೆ. ಮಾನ್ಯ ಎಸ್.ಎಸ್. ಪಾಟೀಲರು ಮಾತನಾಡಬಾರದು ಎಂದು ನಾನು ಹೇಳುತ್ತಿಲ್ಲ ಅವರು ಪ್ರಪೋಸ್ ಮಾಡುವುದರಿಂದ ಮೊದಲು ಈ ಕಡೆಯಧನ್ನೆಲ್ಲಾ ಮುಗಿಸಿಕೊಂಡು ಅನಂತರ ಅವರು ಮಾತನಾಡುವುದು ಒಂದು ಸೌಜನ್ಯ ಅದು ಅವರಿಗೂ ಗೊತ್ತು. ಪಾಟೀಲ್‌ರವರು ಸರ್ಕಾರ ನಡೆಸಿರುವವರು ದಯವಿಟ್ಟು ಅವರಿಗೆ ಬಿಡಿ.

ಅಧ್ಯಕ್ಷರು : ಈ ಸಂಪ್ರದಾಯಗಳೇನಿದ್ದಾವೆ ಅದು ಯಾವ ಸಂಪ್ರದಾಯವೋ, ಅದೇನು ಕತೆಯೋ ?

ಶ್ರೀ ವಾಟಾಳ್ ನಾಗರಾಜ್ ; ಆ ಸಂಪ್ರದಾಯ ಇಲ್ಲವೆ ಇಲ್ಲ ತಾವು ಹೇಳಿದಾಗ ಇದು ಹೊಸ ಸಂಪ್ರದಾಯ. ನಿಮ್ಮ ಹತ್ತಿರ ನಾನು ಕದನಕ್ಕೆ ಇಳಿಯಬಾರದಲ್ಲಾ ಎಂದು ಸುಮ್ಮನೆ ಕುಳಿತುಕೊಂಡೆ.

ಶ್ರೀ ಎಸ್.ಎಸ್. ಪಾಟೀಲ್ : ಈ ಸಂಪ್ರದಾಯ ಇಲ್ಲ ಎಂಬುದು ಸತ್ಯ. ಆ ಕಡೆಯಿಂದ ನಿಂತು ಮಾತನಾಡಿದ್ದೀರಿ. ಈ ಕಡೆಯಿಂದ ನಿಂತು ಮಾತನಾಡಿ ನೋಡೋಣ ಎಂದು

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ತಾವು ಮಾತನಾಡಬಾರದು ಎಂದು ಹೇಳುತ್ತಿಲ್ಲ. ತಾವು ದಯವಿಟ್ಟು ಅರ್ಥ ಮಾಡಿಕೊಳ್ಳಿ. ಫ್ಲೋರ್ ಲೀಡರ್ಸ್ ಮಾತನಾಡಿ ಮುಗಿದ ಮೇಲೆ ನೀವು ಮಾತನಾಡಬೇಕು ಎಂದು ಸಂಪ್ರದಾಯ ಇರುವುದು. ತಮಗೆ ಅಧಿಕಾರವನ್ನು ಕೊಟ್ಟು ಬಜೆಟ್‌ನ್ನು ಫ್ರೇಮ್ ಮಾಡಿರುವುದೇ ನೀವು.

ಶ್ರೀ ಎಸ್.ಎಸ್. ಪಾಟೀಲ್ : ಅಧ್ಯಕ್ಷರು ಏನು ಹೇಳುತ್ತಾರೋ ಅದರಂತೆ ನಡೆದುಕೊಳ್ಳುತ್ತೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಧ್ಯಕ್ಷರಲ್ಲೇ ನಾವು ಕೇಳಿಕೊಳ್ಳುತ್ತಿದ್ದೇವೆ. ಇದು ಮೊದಲಿನಿಂದ ಬಂದಿರತಕ್ಕ ಸಂಪ್ರದಾಯ, ಆದ್ದರಿಂದ ಅಧ್ಯಕ್ಷರಲ್ಲೇ ಕೇಳಿಕೊಳ್ಳುತ್ತಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್ : ಅದಕ್ಕೆ ನಮ್ಮ ತಕರಾರೇನಿಲ್ಲ, ನಾವೂ ನಿಮ್ಮ ಜಾಗದಲ್ಲಿ ಕುಳಿತು ನೀವು ಮಾತನಾಡಿದನ್ನೇ ಮಾತನಾಡಿದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾವು ನಿಮ್ಮ ಹತ್ತಿರ ತಕಾರರು ಮಾಡಲಿಲ್ಲ. ಅಧ್ಯಕ್ಷರ ಹತ್ತಿರ ಹೇಳುತ್ತಿರುವುದು.

(ಗೊಂದಲ)

ಅಧ್ಯಕ್ಷರು ; ಪಾಟೀಲರೇ, ಅನಂತರ ತಮಗೆ ಕೊಡೋಣ. ಈಗ ಸಮಯ ಬಹಳ ಕಡಿಮೆ ಇದೆ. ಆದ್ದರಿಂದ ಸ್ವಲ್ಪ ಬೇಗ ಮುಗಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ ಒಂದು ಗಂಟೆಯಲ್ಲಿ ಮುಗಿಸಿಬಿಡುತ್ತೇನೆ.

ಅಧ್ಯಕ್ಷರು : ಒಂದು ಗಂಟೆ ಎಂದರೆ ನಿಮ್ಮ ಹೊಸ ಸದಸ್ಯರುಗಳೇನಿದ್ದಾರೆ ಅವರೆಲ್ಲಾ ನಿಮ್ಮ ಮುಂದೆ ಬಂದು ಧರಣಿ ಮಾಡುತ್ತಾರಷ್ಟೆ. ಆ ಕಾರಣದಿಂದ

ಬೇಗ ಮುಗಿಸಿ ನಾವೇನು ಪಕ್ಷವಾರು ವಿಭಾಗ ಮಾಡಿದ್ದೇವೆ ಅದರಲ್ಲಿ ಇತರರಿಗೆ ಇರತಕ್ಕದ್ದೇ 30 ನಿಮಿಷ. ಆದ್ದರಿಂದ ದಯಮಾಡಿ ಬೇಗ ಮುಗಿಸಿ. ಬಹಳ ಜನ ಹೊಸಬರು ಮಾತನಾಡುವವರಿದ್ದಾರೆ. ನಾನು ಎಲ್ಲರಿಗೂ ಅವಕಾಶ ಕೊಡಬೇಕಲ್ಲಾ

†ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ನನ್ನ ಮನವಿಯನ್ನು ತಮಗೆ ತಲುಪಿಸುತ್ತಿರುತ್ತೇನೆ, ದಯಮಾಡಿ ಅದನ್ನು ತಾವು ಸ್ವೀಕಾರ ಮಾಡುತ್ತೀರಿ. ಮಾನ್ಯ ಸಿದ್ಧರಾಮಯ್ಯನವರು 6ನೇ ಬಾರಿ ಆಯವ್ಯಯವನ್ನು ಮಂಡಿಸಿದ್ದಾರೆ. ನಾನು ಸಂತೋಷಪಡುತ್ತೇನೆ. ಇದು ಒಂದು ದಾಖಲೆಗೆ ಹೋಗುತ್ತದೆ. ಬಹುಶಃ ಇನ್ನೂ ಮೂರುನಾಲ್ಕು ಬಾರಿ ತಾವು ಮಂಡಿಸುತ್ತೀರೆಂದು ನಾನು ಅಂದುಕೊಂಡಿದ್ದೇನೆ. ನೀವು ಅವರು ವ್ಯಾಜ್ಯ ಮಾಡಿಕೊಳ್ಳದಿದ್ದರೆ ನಿಮ್ಮ ಕೊಂಡಿ ಕೀಳದಿದ್ದರೆ ಇನ್ನೂ ನಾಲ್ಕು ಬಾರಿ ತಾವು ಮಂಡಿಸುತ್ತೀರಿ. ಸಂತೋಷ ಅದರ ಬಗ್ಗೆ ನಾನು ಬೇರೆ ವಿಶ್ಲೇಷಣೆ ಮಾಡಲು ಹೋಗುವುದಿಲ್ಲಾ. ತಮಗೆ ಸಾಮಾಜಿಕ ಕಾಳಜಿ ಇಲ್ಲವೆಂದು ಹೇಳುವುದಕ್ಕೆ ಹೋಗುವುದಿಲ್ಲ. ಇರುವ ವ್ಯವಸ್ಥೆಯಲ್ಲೇ ಬಜೆಟ್‌ನ್ನು ತಾವು ಇಟ್ಟಿದ್ದೀರಿ. ನಾವು ಅನೇಕ ವಿಚಾರಗಳಲ್ಲಿ ಚರ್ಚೆ ಮಾಡಬೇಕಾಗುತ್ತದೆ. ತಾವು ಅನೇಕ ಒಳ್ಳೆಯ ಕಾರ್ಯಗಳನ್ನು ಹೇಳಿದ್ದೀರಿ. ಅನೇಕ ವಿಚಾರಗಳನ್ನು ಕೈಬಿಟ್ಟಿದ್ದೀರಿ. ಇದು ಸ್ಪಷ್ಟ. ಬಹುಶಃ ತಾವೇ ಹಿಂದೆ ನನಗೆ ಒಂದು ಸಲ ಹಣವೇ ಇಲ್ಲ. ದುಡ್ಡು ಇಲ್ಲದಿದ್ದಾಗ ನಾನೇನು ಮಾಡಬಹುದು ಎಂಬ ಮಾತನ್ನು ಹೇಳಿದ್ದಿರಿ. ಆದರೂ ನೀವು ಉಳಿತಾಯದ ಬಜೆಟ್ ಎಂದು ಹೇಳಲು ಎಲ್ಲೋ ಹೊರಟಿದ್ದೀರಲ್ಲಾ, ಇದು ಎಲ್ಲೋ ಒಂದು ತರಹ ಮಾಯಾಮಂತ್ರ ಮಾಡಿದಂತೆ ಇದೆ. ತಾವು ಬಹಳ ಬುದ್ಧಿವಂತರು. ತಾವು 6ನೇ ಆಯವ್ಯಯವನ್ನು ಮಂಡಿಸುತ್ತಿದ್ದೀರಿ. ನಾನು ಹೇಳಿದ ಪ್ರಕಾರ ಇನ್ನೂ ನಾಲ್ಕು ಆಯವ್ಯಯವನ್ನು ತಾವು ಮಂಡಿಸಿ. ಸಂತೋಷ. ನಿಮ್ಮನ್ನು ನಾನು ಸ್ವಾಗತ ಮಾಡುತ್ತೇನೆ. ಒಳ್ಳೆಯದಾಗುತ್ತದೆ. ಇತಿಹಾಸದಲ್ಲಿ ಬಹುಶಃ ಚರಿತ್ರೆಯಲ್ಲಿ ಹೋಗುತ್ತದೆ. ಯಾವ ರಾಜ್ಯದಲ್ಲೂ ಒಬ್ಬರು ಆಯವ್ಯಯವನ್ನು ಎಂಟು ಒಂಭತ್ತು ಬಾರಿ ಮಂಡಿಸಿರತಕ್ಕದ್ದು ಬಹುಶಃ ಪಶ್ಚಿಮಬಂಗಾಳದಲ್ಲಿರಬಹುದು. ಅದನ್ನು ಬಿಟ್ಟರೆ ಬೇರೆಯದ್ದು. ಇದ್ದರೂ ಇರಬಹುದು. ಆದರೆ ಅದು ನನಗೆ ಗೊತ್ತಿಲ್ಲ. ನಾನು ನಿಮ್ಮ ಆಯವ್ಯಯವನ್ನು ಸುಮ್ಮನೆ ಒಂದು ಕಡೆ ನೋಡಿಕೊಂಡು ಬಂದೆ. ಅದರಲ್ಲಿ ವಿನಾಯಿತಿ ಲಿಸ್ಟ್‌ನಲ್ಲಿ ನೋಡಿದೆ. ವಿಭೂತಿಗೆ ವಿನಾಯಿತಿಯನ್ನು ಕೊಟ್ಟಿದ್ದೀರಿ, ಏಕೆ ? ಆದರೆ ಕುಂಕುಮಕ್ಕೆ ಏಕೆ ಕೊಡಲಿಲ್ಲ? ಅರಿಶಿಣಕ್ಕೆ ಏಕೆ ಕೊಡಲಿಲ್ಲ ? ಪಂಗನಾಮಕ್ಕೆ ನಾಮಕ್ಕೆ ಏಕೆ ಕೊಡಲಿಲ್ಲ ? ಶಿವದಾರಕ್ಕೆ ಜನವಾರಕ್ಕೆ ಏಕೆ ಕೊಡಲಿಲ್ಲ ? ವಿಭೂತಿಯಿಂದ ಇದು ಶಿವನ ಆರಾಧಕರಿಗೆ ಮಾತ್ರ ನೀವು ಬೆಂಬಲವಾದಿರಲ್ಲಾ ವಿಷ್ಣುವಿನ ಆರಾಧಕರ ಗತಿಯೇನು ? ಅವರು ನಿಮ್ಮ ಮೇಲೆ ಧಾಳಿ ಮಾಡಿದರೆ ಅವರ ಪರಿಸ್ಥಿತಿ ಏನು?

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಯವರು) : ಈಶ್ವರ ಕೆಳವರ್ಗದವರ ದೇವರು. ಅದಕ್ಕೋಸ್ಕರ ವಿಭೂತಿಗೆ ವಿನಾಯಿತಿ ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಶಿವ ಬಡವರ ಆಧಾರಿ, ಅದನ್ನು ಒಪ್ಪುತ್ತೇನೆ. ಆದರೆ ವಿಷ್ಣುವನ್ನು ನಾವು ಕೈಬಿಡುವಂತೆ ಇಲ್ಲ. ಮಹಿಳೆಯನ್ನು ನೀವು ಕೈಬಿಟ್ಟಿರಿ. ಮಹಿಳೆಯನ್ನು ಶೇಕಡ 35 ಭಾಗ ಶಾಸನ ಸಭೆಯಲ್ಲಿ, ಲೋಕಸಭೆಯಲ್ಲಿ ತೆಗೆದುಕೊಳ್ಳಬೇಕು ಎಂದು ಇರುವಾಗ ನಮ್ಮಲ್ಲಿ ನಾಲ್ಕು ಜನ ಮಹಿಳೆಯರು ಬಂದಿದ್ದಾರೆ. ಕುಂಕುಮಕ್ಕೆ ಅರಿಶಿಣಕ್ಕೆ ನೀವು ವಿನಾಯಿತಿ ಕೊಡಬೇಡವೇ ಇದು ಸರಿಯೇ ?

ಶ್ರೀಮತಿ ಟಿ. ಭಾಗೀರಥಿ : ಇಲ್ಲಿ ಆರು ಜನ ಮಹಿಳೆಯರು ಇದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಆರು ಜನರಿದ್ದಾರೆ. ನಾನು ನಿಮಗೆ ಸಹಾಯ ಮಾಡುತ್ತಿದ್ದೇನೆ. ನೀವು ಮಾನ್ಯ ಹಣಕಾಸು ಸಚಿವರ ಮೇಲೆ ದಾಳಿ ಮಾಡುತ್ತೀರೋ ಹೇಗೆ ? ಇದರಲ್ಲೇನೂ ರಾಜಕೀಯ ಇಲ್ಲ

ಶ್ರೀಮತಿ ಟಿ. ಭಾಗೀರಥಿ : ತಾವು ಮಾತನಾಡುವಾಗ ಯಾವ ರೀತಿಯಲ್ಲಿ ಮಾತನಾಡುತ್ತೀರಿ ಎಂಬುದನ್ನು ತಿಳಿದುಕೊಂಡು ಅನಂತರ ಯಾವ ರೀತಿಯಲ್ಲಿ ಧಾಳಿ ಮಾಡಬಹುದೋ ಆ ರೀತಿಯಲ್ಲಿ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಸಂತೋಷ. ಆದ್ದರಿಂದ ವಿಭೂತಿ ಪುರುಷರು ಅತ್ಯಂತ ಶರಣರು ಶಿವಶರಣರು ಆ ವಿಭೂತಿ ಪುರುಷರು ಎಂದರೆ ಒಂದೇ ವರ್ಗದ ಒಂದೇ ಸಮಾಜಕ್ಕೆ ಸೇರಿದವರಲ್ಲ, ವಿಭೂತಿ ಪುರುಷರು ಎಂದರೆ ಅದಕ್ಕೆ ಶತಶತಮಾನಗಳಲ್ಲಿ ಅವರು ಮಾಡಿರತಕ್ಕ ಪವಾಡಗಳು, ವಿಚಾರಗಳು ಬಹಳ ನೆನಪಿಗೆ ಬರುತ್ತದೆ. ಬೆಳಿಗ್ಗೆ ನಾನು ಕುಳಿತು ಯಾವುದಕ್ಕೆ ವಿನಾಯಿತಿ ಕೊಟ್ಟಿದ್ದಾರೆ ಎಂಬುದನ್ನು ನೋಡಿದಾಗ ವಿಭೂತಿಗೆ ಕೊಟ್ಟಿದ್ದಾರೆ. ತಾವು ಹೇಳಿದ ಪ್ರಕಾರ ಶಿವ ಬಡವರ ಆಧಾರಿ ಮತ್ತು ಶಿವ ಇದ್ದರೆ ಯಾವಾಗಲೂ ಎಲ್ಲರಿಗೂ ಆಶ್ರಯ ನೀಡತಕ್ಕಂಥ ಮತ್ತು ನೆನದುದನ್ನು ಕೊಡತಕ್ಕಂಥ, ಶಿವ ಎಲ್ಲರಿಗೂ ಇದ್ದರೆ. ಅದು ಒಂದು ಸಮಾಜ ಒಂದು ಗುಂಪಿಗೆ ಅಲ್ಲ, ಆದರೆ ವಿಭೂತಿ ಎನ್ನುವುದನ್ನು ನಾವು ನೆನಪಿಸಿಕೊಂಡು ಎಲ್ಲೋ ಒಂದು ಕಡೆ ತಾವು ಇದಕ್ಕೆ ಎಷ್ಟು ವಿನಾಯಿತಿ ಕೊಟ್ಟಿದ್ದೀರಿ, ಇದರಿಂದ ತಮಗೆ ನಷ್ಟ ಎಷ್ಟಾಯಿತು. ವಿನಾಯಿತಿ ಕೊಡದಿದ್ದರೆ ನಿಮಗೆ ಲಾಭ ಎಷ್ಟಾಗುತ್ತಿತ್ತು ನಿಮ್ಮ ಆದಾಯಕ್ಕೆ ಎಷ್ಟು ಬರಬಹುದಿತ್ತು?

11.20 ಎಎಂ

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅವರಿ ಏತಕ್ಕೆ ವಿಭೂತಿಗೆ ಕೊಟ್ಟಿರುವುದು ಗೊತ್ತಾ, ಕರ್ನಾಟಕ ರಾಜ್ಯಕ್ಕೆಲ್ಲಾ ನಾವು ಹೀಗೆ ನಾಮ ಹಾಕುತ್ತೇವೆಂದು.

ಶ್ರೀ ವಾಟಾಳ್ ನಾಗರಾಜ್ : ಅವರು ಹಾಗೆ ಹೇಳೇ ಇಲ್ಲ, ನಾನು ಸಿದ್ಧರಾಮಯ್ಯನವರಿಂದ ನಿರೀಕ್ಷೆ ಮಾಡುವುದಿಲ್ಲ, ಸಿದ್ಧರಾಮಯ್ಯನವರಿಗೆ ಕೋಪ ತಾಪವಿದೆ ಒಪ್ಪಿಕೊಳ್ಳುತ್ತೇನೆ, ಸ್ವಲ್ಪ ಅಧಿಕಾರಿಗಳ ಮೇಲೆ ಧಾಳಿ ಮಾಡುವುದಿದೆ, ಆದರೆ ವೈಯಕ್ತಿಕವಾಗಿ ಯಾರ ಮೇಲೂ ಕೂಡ ಆ ರೀತಿಯಾಗಿ ಹೇಳುತ್ತಾರೆಂದು ನಾನು ಒಪ್ಪಲು ಸಾಧ್ಯವಿಲ್ಲ. ಮಾನ್ಯ ಹಣಕಾಸು ಸಚಿವರ ಆಯವ್ಯಯವನ್ನು ನೋಡಿದಾಗ ಉತರ ಕರ್ನಾಟಕ ಹೈಕೋರ್ಟ್ ಪೀಠಕೆ, 20 ಕೋಟಿ

ರೂಪಾಯಿಗಳನ್ನು ಇಡಲಾಗಿದೆ ಎಂದು ಹೇಳಲಾಗಿದೆ. ಹೈಕೋರ್ಟ್ ಪೀಠದ ಬಗ್ಗೆ ನಾವೆಲ್ಲರೂ ಹೋಗಿ ಮುಖ್ಯನ್ಯಾಯಾಧೀಶರೊಡನೆ ಮಾತನಾಡಿದೆವು. ಅವತ್ತು ಒಂದು ಒಳ್ಳೆಯ ಮಧುರವಾದ ವಾತಾವರಣ ನಿರ್ಮಾಣವಾಯಿತು. ಆದಾದ ಮೇಲೆ ಮತ್ತೆ ಎಲ್ಲೋ ಒಂದು ಕಡೆ ಕತ್ತಲೆ ಅವರಿಸಿದೆ ಮತ್ತು ಉತ್ತರ ಕರ್ನಾಟಕದ ಸಮಗ್ರ ಬೆಳವಣಿಗೆಯ ಬಗ್ಗೆ ನಿಮ್ಮಲ್ಲಿ ಏನೂ ಇಲ್ಲ. ಡಾ; ನಂಜುಂಡಪ್ಪ ಸಮಿತಿಯನ್ನು ರಚಿಸಿದ ಉದ್ದೇಶವೇನು? ಇಲ್ಲವೆಂದರೆ ಅವರ ವರದಿಯನ್ನು ಒಪ್ಪುವುದಿಲ್ಲವೆಂದಾದರೂ ಸ್ಪಷ್ಟವಾಗಿ ಹೇಳಿ, ಆಗಾಗ ಅವರು ಕೂಗಿಕೊಳ್ಳುವ ಕೂಗನ್ನು ಶಮನಮಾಡತಕ್ಕಂಥ ವಿಚಾರಬೇಡ; ಪ್ರಾಮಾಣಿಕವಾಗಿ ನಾವು ಉತ್ತರ ಕರ್ನಾಟಕಕ್ಕೆ ಮಾಡುವುದಿಲ್ಲವೆಂದು ಹೇಳಿ, ಆಗ ಉತ್ತರ ಕರ್ನಾಟಕದವರು ಯಾವ ತೀರ್ಪನ್ನು ತೆಗೆದು ಕೊಳ್ಳಬೇಕಾಗುತ್ತದೆ, ಯಾವ ದಾರಿ ಹಿಡಿಯಬೇಕಾಗುತ್ತದೆ, ಏನು ಚಿಂತನೆ ಮಾಡಬೇಕಾಗುತ್ತದೆ ಅದು ಬೇರೆ ಆದರೆ ತಾವು ಹೇಳುವಾಗ, ಡಾ; ನಂಜುಂಡಪ್ಪ ವರದಿಯಲ್ಲಿ ಪ್ರತಿ ವರ್ಷ, ಈ ವರ್ಷ ಎಷ್ಟು ಕೋಟಿ ರೂಪಾಯಿಗಳನ್ನು ಒಂದು ಕಾಲ ಮಿತಿಯೊಳಗೆ ಖರ್ಚು ಮಾಡಬೇಕೆಂದು ಹೇಳಲಾಗಿದೆ, ಅದನ್ನು ತಾವು ಸ್ಪಷ್ಟಪಡಿಸಿದರೆ ಒಳ್ಳೆಯದು. ಕರ್ನಾಟಕದ ಏಕೀಕರಣ 1956 ನವೆಂಬರ್ 1 ರಂದು ಸೆಂಟ್ರಲ್ ಕಾಲೇಜು ಕ್ರಿಕೆಟ್ ಮೈದಾನದಲ್ಲಿ ನಡೆಯಿತು, ಆ ಕಾಲದಲ್ಲಿ ಡಾ; ರಾಜೇಂದ್ರಪ್ರಸಾದ್‌ರವರು ಮುಖ್ಯಮಂತ್ರಿಗಳಾದ ನಿಜಲಿಂಗಪ್ಪನವರು. ಈ ಸದನದ ಹಾಗೂ ಈ ರಾಜ ಪ್ರಮುಖರಾದ ಅಂದಿನ ಜಯಚಾಮರೇಂದ್ರ ಒಡೆಯರ್ ಅವರ ನೇತೃತ್ವದಲ್ಲೇ ಹರಿದು ಹಂಚಿಹೋಗಿದ್ದ ಈ ನಾಡು ಒಂದಾಗಿ ಕರ್ನಾಟಕ ಏಕೀಕರಣವಾಯಿತು. ಆ ಕರ್ನಾಟಕ ಏಕೀಕರಣವಾಗಿ ಬಂದಂತಹ ಗಡಿ ಪ್ರದೇಶಗಳಾದ ರಾಯಚೂರು, ಗುಲ್ಬರ್ಗಾ, ಬೆಳಗಾಂ, ಇರಬಹುದು, ಒಂದು ಕಡೆ ಹೈದರಾಬಾದ್ ಕರ್ನಾಟಕ, ಇನ್ನೊಂದೆಡೆ ಮಹಾರಾಷ್ಟ್ರದಿಂದೆಲ್ಲಾ ಬಂದು ಸೇರಿದ ಅ ಪ್ರದೇಶಗಳ ಪರಿಸ್ಥಿತಿ ಅಂದಿನಿಂದ ಇಂದಿನವರೆಗೆ ಅದೇ ಪರಿಸ್ಥಿತಿಯಲ್ಲಿದೆ. ಆ ಪ್ರದೇಶಗಳ ಅಭಿವೃದ್ಧಿ ಬೆಳವಣಿಗೆಯ ಬಗ್ಗೆ ಈಗ ಎಲ್ಲೋ ಅಲ್ಲೋ ಅಣೆಕಟ್ಟುಗಳಾಗುತ್ತಿವೆ. ಅದು ಬಿಟ್ಟರೆ ಸಮಗ್ರವಾಗಿ ತಾವು ಹಳ್ಳಿಗಳಿಗೆ ಹೋದರೆ ಅಲ್ಲಿಯ ಜನ ಬಹುಶಃ ನರಕದಲ್ಲಿ ಬದುಕುತ್ತಿದ್ದಾರೆ. ಉತ್ತರಕರ್ನಾಟಕದ ನಮ್ಮ ಸಹೋದರರು, ನಮ್ಮ ಜನ ನರಕದಲ್ಲಿದ್ದಾರೆ, ನಾವು ಪ್ರಾಮಾಣಿಕವಾಗಿ ಹೇಳೋಣ ನಮಗೆ ರಾಜರ ದರ್ಬಾರಿನ ಮೈಸೂರಿನ ಆಳ್ವಿಕೆ ಇತ್ತು, ಎಲ್ಲಾ ಬೆಳವಣಿಗೆಯಾಗಿತ್ತು, ಆ ಕಾಲದಲ್ಲಿ ರಸ್ತೆಗಳಿತ್ತು, ರೈಲಿತ್ತು, ಅರಮನೆಯ ರೈಲುಗಳಿದ್ದವು, ಆ ಕಾಲದಲ್ಲಿ ಕೈಗಾರಿಕೆಗಳು ಪ್ರಾರಂಭವಾದವು. ನಾನು ಏತಕ್ಕೆ ಈ ಮಾತನ್ನು ಹೇಳುತ್ತೇನೆಂದರೆ, ಉತ್ತರ ಕರ್ನಾಟಕವನ್ನು ತಾವು ಕೈಬಿಟ್ಟಿದ್ದೀರಿ, ಡಾ; ನಂಜುಂಡಪ್ಪ ವರದಿಯನ್ನು ಕಾರ್ಯಗತಮಾಡದಿದ್ದರೆ. ಹೈದರಾಬಾದ್ ಕರ್ನಾಟಕಕ್ಕೆ ಸ್ಥಾನಮಾನವನ್ನು ಕೊಡದಿದ್ದರೆ ನಾನೇ ನಿಂತು ತೆಲಂಗಾಣ ಮಾದರಿಯ ಚಳುವಳಿಯನ್ನು ಆರಂಭಿಸುತ್ತೇನೆ. ತೆಲಂಗಾಣ ಮಾದರಿಯ ಚಳುವಳಿಯನ್ನು ಉತ್ತರ ಕರ್ನಾಟಕದಲ್ಲಿ ಸಮಗ್ರವಾಗಿ ಆರಂಭಿಸುವ ಕಾಲ ಬರುತ್ತದೆ ಎನ್ನುವ ಮಾತನ್ನು ನಾನು ತಮಗೆ ಹೇಳುತ್ತೇನೆ.

ಶ್ರೀ ಡಿ.ಟಿ. ಜಯಕುಮಾರ್ : ಮೊದಲನೆ ಬಾರಿಗೆ ಉತ್ತರ ಕರ್ನಾಟಕಕ್ಕೆ ಶೇಕಡ 54, ಅಂದರೆ 7770 ಕೋಟಿ ರೂಪಾಯಿಗಳನ್ನು ಆಯವ್ಯಯದಲ್ಲಿ ಕೊಡಲಾಗಿದೆ. ನೀವು ಸದನವನ್ನು ತಪ್ಪುದಾರಿಗೆಳೆದು, ಉತ್ತರ ಕರ್ನಾಟಕಕ್ಕೆ ಏನೂ ಕೊಟ್ಟಿಲ್ಲವೆಂದು ನೀವು ಹೇಳಿದರೆ, ಉತ್ತರ ಕರ್ನಾಟಕದವರು ಬೊಬ್ಬೆ ಇಡಬೇಕು.

ಶ್ರೀ ಜಗದೀಶ್ ಶೆಟ್ಟರ್ : ನೀವು 54 ಪರ್ಸೆಂಟ್ ಬಗ್ಗೆ ಹೇಳುವುದಕ್ಕೆ ಹೋಗಬೇಡಿ, ಡಾ; ನಂಜುಂಡಪ್ಪನವರ ವರದಿಯ ಪ್ರಕಾರ ಏನು ಹೆಚ್ಚುವರಿ ಅಲೊಕೇಷನ್ ಕೊಡಬೇಕಾಗಿತ್ತು, ನೀವು ಎಲ್ಲಾ ತಾಲ್ಲೂಕಿನದು ಲೆಕ್ಕಾ ಮಾಡಿದರೆ ಅಷ್ಟು ಬಂದೇ ಬರುತ್ತದೆ, ಆ ಬಗ್ಗೆ ವಿಶೇಷವಾದ ಅನುದಾನವೇನಿಲ್ಲ. ಈ 54 ಪರ್ಸೆಂಟ್ ನೀರಾವರಿ, ಶಿಕ್ಷಣಕ್ಕೆ ಎಲ್ಲಾ ತಾಲ್ಲೂಕಿಗೆ ಬರುವಂತೆ ಬಂದಿದೆ ಅಷ್ಟೆ. ಆದರೆ ನಾವೇನು ವಿಶೇಷವಾಗಿ ಕೇಳುತ್ತಿದ್ದೇವೆ. ಡಾ; ನಂಜುಂಡಪ್ಪನವರ ವರದಿಯ ಪ್ರಕಾರ ವಿಶೇಷವಾದಂಥ ಅನುದಾನ ವರ್ಷಕ್ಕೆ 2000 ಕೋಟಿ ರೂ ಹೆಚ್ಚುವರಿಯಾಗಿ ಕೊಡಬೇಕೆಂದು ಹೇಳಿದ್ದಾರೆ, ಆ ಬಗ್ಗೆ ಇದರಲ್ಲಿ ಚಕಾರವಿಲ್ಲ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಜಗದೀಶ್ ಶೆಟ್ಟರ್‌ರವರೆ, ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕವೆಂದು ಭೇದಭಾವಬೇಡ, ಎಲ್ಲದರ ಅಭಿವೃದ್ಧಿಯಾಗಲಿ.

ಶ್ರೀ ಜಗದೀಶ್ ಶೆಟ್ಟರ್ ; ನಂಜುಂಡಪ್ಪನವರ ವರದಿಯನ್ನು ತರಿಸಿದರು ಸರ್ಕಾರದವರಲ್ಲವೇ?

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಉತ್ತರ ಕರ್ನಾಟಕದಲ್ಲಿ 50 ವರ್ಷದಲ್ಲಿ ಏನು ಆಗಿಲ್ಲವೇ ? ಕರ್ನಾಟಕದ ಸರ್ವತೋಮುಖ ಅಭಿವೃದ್ಧಿಯಾಗುವುದಾದರೆ ಎಲ್ಲಾ ಕಡೆಯಲ್ಲೂ ಆಗಲಿ......

(ಗೊಂದಲ)

ನಂಜುಂಡಪ್ಪನವರ ವರದಿ ಇಡೀ ಕರ್ನಾಟಕಕ್ಕೆ ಅನ್ವಯಿಸುತ್ತದೆಯೇ ಹೊರತು ಬರೀ ಉತ್ತರ ಕರ್ನಾಟಕಕ್ಕೆ ಅಲ್ಲ.

ಅಧ್ಯಕ್ಷರು : ಪ್ರಥಮಬಾರಿಗೆ ಆರಿಸಿ ಬಂದಿರುವ ಸದಸ್ಯರು ಸ್ವಲ್ಪ ಸಹಕರಿಸಬೇಕು, ಆಯವ್ಯಯದ ಮೇಲೆ ಮಾತನಾಡಿ ಎಂದರೆ ಯಾರು ಮಾತನಾಡುವುದಿಲ್ಲವೆನ್ನುತ್ತೀರಿ, ಅವಕಾಶವಿದ್ದಾಗ ಸುಮ್ಮನೆ ಹೀಗೆ ಗಲಾಟೆ ಮಾಡುತ್ತೀರಿ, ಕಡೆಗೆ ಎಲ್ಲವನ್ನೂ ಗಿಲಿಟಿನ್‌ಗೆ ಹಾಕಬೇಕಾಗುತ್ತದೆ ಅಷ್ಟೆ.

ಶ್ರೀ ವಾಟಾಳ್ ನಾಗರಾಜ್ : ನಂಜುಂಡಪ್ಪ ವರದಿ ಕೇವಲ ಉತ್ತರ ಕರ್ನಾಟಕಕ್ಕೆ ಇಲ್ಲ ಅದರಲ್ಲಿ ಎಲ್ಲಾ ಪ್ರದೇಶಗಳ ಬಗ್ಗೆಯೂ ಕೊಟ್ಟಿದ್ದಾರೆ, ಅದನ್ನು ನಾವು ಒಪ್ಪಿಕೊಳ್ಳೋಣ. ಅದರ ಬಗ್ಗೆ ತಕರಾರೇನು ಇಲ್ಲ.

ಶ್ರೀ. ಹೆಚ್.ಎಸ್. ಮಹಾದೇವಪ್ರಸಾದ್ : ಅದರಲ್ಲಿ ಚಾಮರಾಜನಗರವು ಸೇರಿದೆ.

ಶ್ರೀ ವಾಟಾಳ್ ನಾಗರಾಜ್ : ಚಾಮರಾಜನಗರ ಗಡಿ ಪ್ರದೇಶ, ಕೋಲಾರ ಗಡಿಪ್ರದೇಶ, ಮೈಸೂರು ಗಡಿಪ್ರದೇಶ, ಮೈಸೂರು ಕೇರಳದ ಗಡಿ, ಚಾಮರಾಜನಗರ

ತಮಿಳುನಾಡಿನ ಗಡಿಪ್ರದೇಶ, ಬೆಂಗಳೂರು ತಮಿಳುನಾಡಿನ ಗಡಿಪ್ರದೇಶ. ನಂಜುಂಡಪ್ಪ ವರದಿಯಲ್ಲಿ ಇಡೀ ರಾಜ್ಯದ ಎಲ್ಲಾ ಹಿಂದುಳಿದ ಪ್ರದೇಶಗಳ ಬಗ್ಗೆ ಬರೆದಿದ್ದಾರೆ. ಕೇವಲ ಯಾವುದೋ ಒಂದು 10 ಜಿಲ್ಲೆಗಳ ಬಗ್ಗೆ ಬರೆದಿಲ್ಲ ಆದರೆ ಒತ್ತುಕೊಟ್ಟಿರುವುದು ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿಯ ಬಗ್ಗೆ. ಈಗ ಕೊಡಗಿನ ಬಗ್ಗೆ ಏನು ಮಾಡಿದ್ದೇವೆ ಕೊಡಗು ಜಿಲ್ಲೆ ಕರ್ನಾಟಕದ ಕಾಶ್ಮೀರ, ಉಪ ಮುಖ್ಯಮಂತ್ರಿಗಳಲ್ಲಿ ನಾನು ಕಳಕಳಿ ಮಾಡುತ್ತೇನೆ, ಇವತ್ತಿನವರೆಗೆ ಬಂದಂತಹ ಯಾವುದೇ ಸರ್ಕಾರಗಳು ಆ ಜಿಲ್ಲೆಯ ಅಭಿವೃದ್ಧಿಯ ಬಗ್ಗೆ ಪ್ರಾಮಾಣಿಕ ಪ್ರಯತ್ನವನ್ನು ಮಾಡಲಿಲ್ಲ. ಕೊಡಗಿನ ಸಮಗ್ರ ಅಭಿವೃದ್ಧಿಯ ಬಗ್ಗೆ ನಿಮ್ಮ ಆಯವ್ಯಯದಲ್ಲಿ ನಮಗೇನೂ ಕಾಣಲಿಲ್ಲ. ಅವರೇನು ಮಾಡುತ್ತಿದ್ದಾರೆ. ನಾವು ಅಲ್ಲಿಗೆ ಹೋಗುತ್ತೇವೆ, ನಾವು ಬಿಟ್ಟು ಹೋಗುತ್ತೇವೆ ಎನ್ನುವ ಮಟ್ಟದಲ್ಲಿ ಅವರು ಕೇಳುತ್ತಿದ್ದಾರೆ. ನನ್ನ ನೇತೃತ್ವದಲ್ಲಿ ಸಮಗ್ರ ಒಂದು ವರದಿಯನ್ನು ಕೊಡಬೇಕೆಂದು ಒಂದು ಮಧ್ಯಂತರ ವರದಿಯನ್ನು ನಾನು ಸರ್ಕಾರಕ್ಕೆ ಕೊಟ್ಟೆ, ಆ ವರದಿಯನ್ನು ಕೊಟ್ಟಾಗ ಗಡಿನಾಡು ಪ್ರದೇಶಗಳು ಎಂದರೆ, ಮೈಸೂರು, ಕೋಲಾರ, ಮಂಗಳೂರು ಸೇರಿದಂತೆ ಈ ಎಲ್ಲಾ ಗಡಿನಾಡು ಪ್ರದೇಶಗಳ ಸಮಗ್ರ ಅಭಿವೃದ್ಧಿಗೆ ವರ್ಷಕ್ಕೆ ಕನಿಷ್ಟ 500 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ನನ್ನ ವರದಿಯಲ್ಲಿದೆ. ಇದುವರೆವಿಗೂ ಆ ವರದಿ ಏನಾಯಿತು, ಆ ವರದಿ ಎಲ್ಲಿಗೆ ಹೋಗಿದೆ ? ಇದರ ಜೊತೆಗೆ ಗಡಿನಾಡು ಪ್ರದೇಶದಲ್ಲಿ ತಾಲ್ಲೂಕು ಇರಬಹುದು ಅಥವಾ ಜಿಲ್ಲೆ ಇರಬಹುದು, ಅಲ್ಲಿ ಕನ್ನಡವನ್ನೇ ಮಾತನಾಡುವಂತಹ ಅಧಿಕಾರಿಗಳನ್ನು ಹಾಕಬೇಕು. ಕನ್ನಡ ಬರೆಯುವುದಕ್ಕೆ ಓದುವುದಕ್ಕೆ ಬಲ್ಲವರು ಅಧಿಕಾರಿಗಳನ್ನಾಗಿ ಹಾಕಬೇಕೆಂದು ಹೇಳಿದ್ದು ಇದುವರೆವಿಗೂ ಕಾರ್ಯಗತವಾಗಿಲ್ಲ. ಈ ಗಡಿನಾಡು ಜಿಲ್ಲೆಗಳ ಬಗ್ಗೆ ತಾವು ಸಮಗ್ರವಾಗಿ ಚಿಂತನೆ ಮಾಡಿದರೆ, ಆ ಗಡಿನಾಡು ಜಿಲ್ಲೆಗಳು ಎಂದರೆ ಜಿಲ್ಲೆಯ ಪ್ರಧಾನ ಸ್ಥಳವಲ್ಲ. ಆ ಗಡಿನಾಡು ಪ್ರದೇಶ ಏನಿದೆ ಸುಮಾರು 75 ತಾಲ್ಲೂಕುಗಳು 20 ಜಿಲ್ಲೆಗಳು 10 ಸಾವಿರ ಹಳ್ಳಿಗಳಿವೆ ಇಷ್ಟು ಹಳ್ಳಿಗಳ ಅಭಿವೃದ್ಧಿ ಬಗ್ಗೆ ತಾವೇನೂ ಪ್ರಾಮಾಣಿಕ ಪ್ರಯತ್ನ ಮಾಡಿಲ್ಲ ಏತಕ್ಕೆ ನಿಮಗೆ ಹೇಳುತ್ತಿದ್ದೇನೆಂದರೆ ತಾವು ಹಿಂದೆ ಕನ್ನಡ ಕಾವಲು ಸಮಿತಿಯಲ್ಲೂ ಇದ್ದಿರಿ, ನಾವೆಲ್ಲಾ ಮಾತನಾಡುತ್ತೇವೆ ಗಡಿನಾಡು, ಹೊರನಾಡು, ಗಡಿನಾಡು ಪ್ರದೇಶದ ಬಗ್ಗೆ ನಾವೇನೂ ಚಿಂತನೆ ಮಾಡಿಲ್ಲ. ಹೊರನಾಡಿನಲ್ಲಿ ಎರಡು ಕೋಟಿ ಕನ್ನಡಿಗರಿದ್ದಾರೆ. ಅಕ್ಕಲಕೋಟೆ ಇರಬಹುದು ಹೊಸೂರು, ತಾಳವಾಡಿ ಇರಬಹುದು, ಅಥೋನಿ ಇರಬಹುದು, ಸೊಲ್ಲಾಪುರ ಇರಬಹುದು, ಕಾಸರಗೋಡು ಮಡಕಶಿರಾ ಇರಬಹುದು. ಈ ಎಲ್ಲಾ ಪ್ರದೇಶಗಳಲ್ಲಿ ಕನಿಷ್ಟ ಎರಡು ಕೋಟಿ ಜನ ಕನ್ನಡಿಗರಿದ್ದಾರೆ. ನಾನೇನೂ ಕೇಳುತ್ತಿಲ್ಲ ನಿಮಗೆ, ದಯಮಾಡಿ ಆ ಪ್ರದೇಶಗಳ ಮುಖಂಡರನ್ನು ಕರೆದು ಅವರ ಶಾಲೆಗಳಿಗೆ ಕನಿಷ್ಠ ನೀವೇನು ಕೊಡದೇ ಇದ್ದರೂ ದಾನವಾಗಿ ಪ್ರೀತಿ ವಿಶ್ವಾಸದಿಂದ ಕನ್ನಡ ಪಠ್ಯಪುಸ್ತಕಗಳನ್ನು ಕೊಡಿ ತಾಂತ್ರಿಕವಾಗಿ ಅವರು ನಮಗೆ ಸೇರಿಲ್ಲ, ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ತಾಂತ್ರಿಕವಾಗಿ ಬರಲಿಲ್ಲ ಅವರು. ಹೊರಗುಳಿದರು ಒಬ್ಬೊಬ್ಬರ ಹಿತಕ್ಕೋಸ್ಕರ. ಫಣಿಕ್ಕರ್‌ಗೋಸ್ಕರ ಕಾಸರಗೋಡು

ಉಳಿಯಿತು, ಕಾಮರಾಜ್‌ಗೋಸ್ಕರ ತಾಳವಾಡಿ ಹೆಸರು ಉಳಿಯಿತು, ಹೀಗೆ ಸಮಗ್ರವಾಗಿ ನಮ್ಮ ಕರ್ನಾಟಕಕ್ಕೆ ಬರಬೇಕಾದ ಎರಡು ಕೋಟಿ ಜನ ಹೊರಗುಳಿದಿದ್ದಾರೆ. ಆದ್ದರಿಂದ ಆ ಪ್ರದೇಶಗಳಲ್ಲಿರುವ ಶಾಲೆಗಳಿಗೆ ಕನಿಷ್ಟ ಪಠ್ಯ ಪುಸ್ತಕ ಹಂಚುವ ಬಗ್ಗೆ ನಾವೇನು ಅವರಿಗೆ ಹಣ ಕೊಡುವುದು ಬೇಡ, ಆ ತಾಲ್ಲೂಕಿನ ಶಾಲೆಗಳೆಷ್ಟಿವೆ ಎಂಬುದನ್ನು ತಿಳಿದು ಕೊಂಡು ಅವರನ್ನು ಕೇಳಿ, ಒಂದು ಮರ್ಯಾದೆ ಅಥವಾ ಗೌರವಕ್ಕೋಸ್ಕರ ಇದನ್ನು ಮಾಡಿ ಎಂದು ಈ ಸಂದರ್ಭದಲ್ಲಿ ತಮಗೆ ಹೇಳುತ್ತಿದ್ದೇನೆ.

ಮಹಾಜನ ವರದಿ, ನನಗನ್ನಿಸುತ್ತದೆ, ನಾವೆಲ್ಲರೂ ಈ ಸದನದಲ್ಲಿ ಸರ್ವಾನುಮತದಿಂದ ನಿರ್ಣಯ ಆಗಿರುವಂತಹದು. ಆ ನಿರ್ಣಯ ಈಗ ಲೋಕಸಭೆಯ ಸ್ವತ್ತು. ಇಲ್ಲ ಯಾವುದಾದರೂ ಒಂದು ತೀರ್ಮಾನಕ್ಕೆ ಬರಬೇಕು. ಮಹಾಜನ ವರದಿ ಆಧಾರದ ಮೇಲೆ ಆ ವರದಿ ಶಾಶ್ವತವಾಗಿ ಕಾರ್ಯಗತವಾದರೆ ನನಗನ್ನಿಸುತ್ತದೆ ಕಾಸರಗೋಡು ಕರ್ನಾಟಕಕ್ಕೆ ಬರುತ್ತದೆ, ಕಾಸರಗೋಡಿನ ಬಹುದಿನಗಳ ಬೇಡಿಕೆ ಕರ್ನಾಟಕಕ್ಕೆ ಬರುತ್ತದೆ, ಇವತ್ತಿನವರೆಗೂ ಮಹಾಜನ ವರದಿ ಆಧಾರದ ಮೇಲೆ ಮಹಾಜನ ವರದಿ ಬಂದ ಮೇಲೆ ಯಾವ ಮುಖ್ಯಮಂತ್ರಿಗಳೂ ಹೋಗಿ ಕೇರಳ ಸರ್ಕಾರದ ಜೊತೆ ಮಾತುಕತೆ ಆಡಿಲ್ಲ. ಆ ಮಾತುಕತೆ ತಾವು ಆರಂಭ ಮಾಡಿ. ನಾನು ಹೇಳುತ್ತೇನೆ, ಈಗಿನ ಕೇರಳ ರಾಜ್ಯದ ಮುಖ್ಯಮಂತ್ರಿಗಳ ಜೊತೆಯಲ್ಲಿ ಮತ್ತು ಕೇಂದ್ರದ ಪ್ರಧಾನಿಗಳ ಜೊತೆಯಲ್ಲಿ ನಾವು ಹೋಗಿ ಮಹಾಜನ ವರದಿಯನ್ನು ಕಾರ್ಯಗತ ಮಾಡುವುದಕ್ಕೆ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ತಮಗೆ ಕೇಳುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಒಂದ್ನಿಮಿಷ. ಮಹಾರಾಷ್ಟ್ರ ಏಕೀಕರಣ ಸಮಿತಿ ಸದಸ್ಯರು ಮಹಾಜನ ವರದಿ ಇರುವುದರಿಂದಲೇ ಈ ಸದನಕ್ಕೆ ಗೆದ್ದು ಗೆದ್ದು ಬರುತ್ತಿರುವುದು, ಇಲ್ಲದಿದ್ದರೆ ಅವರು ಬರುವುದಕ್ಕೆ ಸಾಧ್ಯವೇ ಇಲ್ಲ. ಅದಿರುವುದರಿಂದ ಆ ಶಕ್ತಿಯಿಂದ ಆ ಬಗ್ಗೆ ಮಾತನಾಡಿ ಪ್ರತಿ ಸಲ ಅವರು ಗೆದ್ದು ಬರುತ್ತಿದ್ದಾರೆ. ಬೆಳಗಾವಿ ಪ್ರಶ್ನೆ ತೀರ್ಮಾನವಾಗಿ ಹೋಗಿದೆ. ಅದರ ಬಗ್ಗೆ ಮಾತುಕತೆ ಇಲ್ಲ, ಮಹಾಜನ ವರದಿ ಅಂತಿಮ, ನಮ್ಮ ಸ್ನೇಹಿತರು ಮಹಾರಾಷ್ಟ್ರಕ್ಕೆ ಯಾಕೆ ಹೋಗಬೇಕು, ನೀವು ಇಲ್ಲೇ ಇರಿ ಮಹಾರಾಷ್ಟ್ರಕ್ಕೆ ಹೋಗಬೇಡಿ, ನೀವು ಹೋಗುವುದು ಒಳ್ಳೆಯದಲ್ಲ, ಮಹಾರಾಷ್ಟ್ರಕ್ಕೆ ಹೋದರೆ ನಿಮ್ಮನ್ನು ಯಾರೂ ಕೇಳುವುದಿಲ್ಲ. ಅಲ್ಲಿ ಕೇಳೋರಿಲ್ಲ ಹೇಳೋರಿಲ್ಲ ನಿಮಗೆ. ಇಲ್ಲೇ ಇದ್ದುಬಿಡಿ, ನೀವು, ನಿಮ್ಮನ್ನು ಬಿಡುವುದಕ್ಕೆ ನಾವು ತಯಾರಿಲ್ಲ, ನೀವು ವೈಯಕ್ತಿಕವಾಗಿ ಹೋಗಬಹುದು ಆದರೆ ಬೆಳಗಾವಿಯನ್ನು ಮಾತ್ರ ಬಿಡುವುದಕ್ಕೆ ಸಾಧ್ಯವಿಲ್ಲ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ, ಸದಸ್ಯರು ನಿಮ್ಮ ಭಾವನೆಗಳನ್ನು ವ್ಯಕ್ತ ಮಾಡಿದ್ದೀರಿ, ಇನ್ನು ಮಾತನಾಡಲು ಅವಕಾಶ ಕೊಡಿ.

ಶ್ರೀ ವಾಟಾಳ್ ನಾಗರಾಜ್ : ಸಾರ್, ಮತ್ತೊಂದು ತಮ್ಮ ಗಮನಕ್ಕೆ ಬಹಳ ಮುಖ್ಯವಾದುದನ್ನು ತರುತ್ತಾ ಇದ್ದೇನೆ. ಇನ್ನು ಸರೋಜಿನಿ ಮಹಿಷಿ ವರದಿ, ಪ್ರಾಮಾಣಿಕವಾಗಿ ಮಾತನಾಡೋಣ. ಇದರಲ್ಲೇನೂ ರಾಜಕೀಯ ಇಲ್ಲ. ಇಡೀ ಸದನವೇ ಅದರ ಬಗ್ಗೆ ಪ್ರಾಮಾಣಿಕವಾಗಿದೆ. 24 ವರ್ಷವಾಯಿತು, ದಿವಂಗತ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದಾಗ ಆ ವರದಿ ಎಷ್ಟು ಪರಿಣಾಮಕಾರಿಯಾಗಿ, ಈ ರಾಜ್ಯದ ಜನರಿಗೆ, ಈ ರಾಜ್ಯದ ಕನ್ನಡಿಗರಿಗೆ ಉದ್ಯೋಗ ಸಿಗುವ ದಿಕ್ಕಿನಲ್ಲಿ ಅನುಷ್ಠಾನವಾಯಿತು ಎಂಬ ಬಗ್ಗೆ ಹೇಳುತ್ತೇನೆ ಆ ವರದಿಯನ್ನು ಕೊಟ್ಟ ತಕ್ಷಣ ಅಧ್ಯಕ್ಷರೇ, ಉಪಸಮಿತಿ ನೇಮಕ, ಉಪಸಮಿತಿ ಮೇಲೆ ಉಪಸಮಿತಿ ನೇಮಕ; ಹೀಗೆ ವರದಿಯನ್ನು ಸಂಪೂರ್ಣ ವಿರೂಪ ವಿಕೃತಗೊಳಿಸಿ ಅದು ಜಾರಿಯಾದ ರೀತಿಯಲ್ಲಿ ಈಗ ಅದು ಎಲ್ಲಿದೆ ಅನ್ನುವುದನ್ನು ಹುಡುಕುವುದಕ್ಕೆ ಮತ್ತೊಂದು ಆಯೋಗವನ್ನು ನೇಮಕ ಮಾಡಬೇಕಾಗಿದೆ. ಅದು ಅಧಿಕಾರಿಗಳ ಮಟ್ಟದಲ್ಲಾದರೂ ನೇಮಕ ಮಾಡಬಹುದು, ಅಥವಾ ನಿವೃತ್ತ ನ್ಯಾಯಾಧೀಶರ ಮಟ್ಟದಲ್ಲಾದರೂ ನೇಮಕ ಮಾಡಬಹುದು. ಆ ಪರಿಸ್ಥಿತಿ. ನಾನು ತಮಗೆ ಹೇಳುತ್ತಿದ್ದೇನೆ. ಕರ್ನಾಟಕಕ್ಕೆ, ದೇಶಪಾಂಡೆಯವರಿಲ್ಲ, ಕಾರ್ಖಾನೆಗಳು ಬನ್ನಿ ಎಲ್ಲಾ ಕಾರ್ಖಾನೆಗಳು, ಯಾರೂ ಬೇಕಾದರೂ ಖಾಸಗಿ ಕಾರ್ಖಾನೆಗಳು ಇಡೀ ರಾಜ್ಯವನ್ನೇ, ನೆಲ ಅವರಿಗೆ ಕೊಡಿ, ಅವರಿಗೆ ಜಲ ಕೊಡಿ, ವಿದ್ಯುಚ್ಛಕ್ತಿ ಅವರಿಗೆ ಕೊಡಿ, ಎಲ್ಲರನ್ನೂ ಕರೆಯಿರಿ, ಇಡೀ ರಾಜ್ಯದ ತುಂಬಾ, ಆದರೆ ಉದ್ಯೋಗ ಬೇಡವು ? ನೀವು ಉದ್ಯೋಗ ಕೊಡದೇ ಇರುವಂತಹ ಯಾವುದೇ ಕಾರ್ಖಾನೆ ಸಂಸ್ಥೆಗಳು ಕರ್ನಾಟಕಕ್ಕೆ ಬೇಡ, ಬೇಕಾಗಿಲ್ಲ ನಮಗೆ. ನಾವ್ಯಾಕೆ ನಿಮಗೆ ನೀರು ಕೊಡಬೇಕು, ನಾವ್ಯಾಕೆ ನಿಮಗೆ ನೆಲ ಕೊಡಬೇಕು, ನಾವ್ಯಾಕೆ ನಿಮಗೆ ವಿದ್ಯುಚ್ಛಕ್ತಿ ಕೊಡಬೇಕು, ಇವತ್ತು ನಮ್ಮಲ್ಲಿ ಕರ್ನಾಟಕದಲ್ಲಿ ಸುಮಾರು ಎರಡು ಕೋಟಿ ನಿರುದ್ಯೋಗಿಗಳಿದ್ದಾರೆ ಆ ಕನ್ನಡಿಗರ ಪರಿಸ್ಥಿತಿಯೇನು ? ಗೋವಾಕ್ಕೆ ಹೋದರೆ ಅಲ್ಲಿಂದ ಕತ್ತು ಹಿಡಿದು ನೂಕುತ್ತಾರೆ. ತಮಿಳುನಾಡಿಗೆ ಹೋದರೆ ಅಲ್ಲಿಂದ ಒದೆಯುತ್ತಾರೆ, ಕೇರಳಕ್ಕೆ ಹೋದರೆ ನಮ್ಮನ್ನು ಕೇಳೋರು ಗತಿಯಿಲ್ಲ, ಉತ್ತರಪ್ರದೇಶ, ದೇವರೇ ಕಾಪಾಡಬೇಕು, ಕನ್ನಡಿಗರಿಗೆ ಕರ್ನಾಟಕವೇ ಸ್ವರ್ಗ, ಈ ಕರ್ನಾಟಕದಲ್ಲಿರುವ ಕಾರ್ಖಾನೆಗಳು ಕನ್ನಡಿಗರ ಹಿತವನ್ನು ಕಾಯದೇ ಇದ್ದರೆ ಕನ್ನಡಿಗರಿಗೆ ಉದ್ಯೋಗ ಕೊಡದೇ ಇದ್ದರೆ, ಕಷ್ಟವಾಗುತ್ತದೆ. ತಮಿಳುನಾಡಿನಲ್ಲಿ ಮಾನ್ಯ ಕರುಣಾನಿಧಿಯವರು ಮುಖ್ಯ ಮಂತ್ರಿಯಾಗಿದ್ದಾಗ ಮಣ್ಣಿನ ಮಕ್ಕಳಿಗೆ ಯಾವುದೇ ಕಾರ್ಖಾನೆ ತಮಿಳುನಾಡಿಗೆ ಬಂದರೆ ಅವರು ಸಹಿ ಹಾಕುವಾಗ ನೂರಕ್ಕೆ 99 ಭಾಗ ತಮಿಳರಿಗೆ ಕಡ್ಡಾಯ ಎಂಬುದು ಜಾರಿಯಲ್ಲಿದೆ, ಕರ್ನಾಟಕದಲ್ಲಿ ಇದಿಲ್ಲವೇ ? ಏನೂ ಇಲ್ಲ ಇಲ್ಲಿ, ಯಾರು ಬೇಕಾದರೂ, ತೋಟದಪ್ಪನ ಛತ್ರ ಇದು, ಸುತ್ತ ಬೇಲಿ ಎದ್ದುಹೋಗಿದೆ, ಬೆಂಗಳೂರು ನಗರ ಒಂದರಲ್ಲೇ ನೀವೇ ಯಾರೋ ಉತ್ತರ ಕೊಟ್ಟಿರಬಹುದು. ಬೆಂಗಳೂರು ಪರಿಸ್ಥಿತಿ ಇವತ್ತು 65 ಲಕ್ಷ ಜನ, ನಾವಿರುವುದು ಶೇಕಡ ಕೇವಲ 38. ನಮ್ಮ ಕೈಯಲ್ಲಿ ಬೆಂಗಳೂರಿಲ್ಲ, ಎಚ್ಚರಿಕೆ ಗಂಟೆ ಬಹಳ ಅಪಾಯದಲ್ಲಿದ್ದೇವೆ, ಬೆಂಗಳೂರು ಕರ್ನಾಟಕದ ರಾಜಧಾನಿ, ಕೆಂಪೇಗೌಡರು.

ಶ್ರೀ ಸಿದ್ಧರಾಮಯ್ಯ : ಅದು 91ರ ಜನಗಣತಿ ಪ್ರಕಾರ.

ಶ್ರೀ ವಾಟಾಳ್ ನಾಗರಾಜ್ : ಇವತ್ತು 2004, ನನ್ನ ಪ್ರಕಾರ ಶೇಕಡ 40 ಆಗಿರಬಹುದು, ನಾನು ಮಾತನಾಡಲೇಬೇಕಾದ ಪರಿಸ್ಥಿತಿ, ಬೆಂಗಳೂರನ್ನು ನಾವು ಕನ್ನಡೀಕರಣ ಮಾಡದೇ ಇದ್ದರೆ, ಸಮಗ್ರ ಕನ್ನಡದ ಬೆಳವಣಿಗೆ ಮಾಡದೇ ಇದ್ದರೆ, ಕನ್ನಡಿಗರಿಗೆ ಇಲ್ಲಿ ಆದ್ಯತೆ ಕೊಡದೇ ಇದ್ದರೆ, ನಾಳೆ ಇದು ಸರ್ವ ಭಾಷಾ ರಾಜಧಾನಿ ಅಂತ ಕೇಳುತ್ತಾರೆ. ಎಚ್ಚರ, ನಾವು ಬಹಳ ಅಪಾಯದಲ್ಲಿದ್ದೇವೆ. ಶ್ರೀಲಂಕಾದವರು ಬಂದರೆ ತಮಿಳುನಾಡಿನ ಮುಖ್ಯಮಂತ್ರಿ ಕಾಲಿಡಕೂಡದು ಅಂತ ಊರಿಂದ ಹೊರಗೆ ಕಳುಹಿಸುತ್ತಾರೆ. ಕರ್ನಾಟಕದಲ್ಲಿ ತಮಿಳು ಸಂಘದವರು ಇಲ್ಲಿ ಎಲ್‌ಟಿಟಿಇಯವರನ್ನು ಕರೆಯುತ್ತಾರೆ. ಪೋಟಾ ಕಾಯಿದೆಯವರನ್ನು ಕರೆಯುತ್ತಾರೆ. ಟಾಡಾ ಬಂಧಿಗಳನ್ನು ಕರೆಯುತ್ತಾರೆ. ವಿಶ್ವ ತಮಿಳು ಸಮ್ಮೇಳನ, ಬೆಂಗಳೂರಿನಲ್ಲಿ ಅದನ್ನು ತಡೆಯುವುದಕ್ಕೆ ಹೋದರೆ ಕತ್ತುಹಿಡಿದು ಹೊಡೆಯುತ್ತಾರೆ. ಎಲ್ಲಿ ? ಬೆಂಗಳೂರಿನಲ್ಲಿ ತಮಿಳುನಾಡಿನಲ್ಲಿ ಅಲ್ಲ ನಮ್ಮ ಪರಿಸ್ಥಿತಿ ನಾಳೆ ಹದಗೆಡುತ್ತದೆ. ಕರ್ನಾಟಕ ಏಕೀಕರಣ ಆದಾಗಿನಿಂದ ಇಲ್ಲಿಯವರೆಗೆ ಎರಡು ಕೋಟಿ ಜನರು ಹೊರಗಡೆಯಿಂದ ಬಂದಿದ್ದಾರೆ. ಈ ಒಂದು ವಲಸೆಯನ್ನು ತಡೆಯುವ ಬಗ್ಗೆ ನಮ್ಮಲ್ಲಿ ಪಕ್ಷಾತೀತವಾಗಿ ಕೂತು ಪರಿಣಾಮಕಾರಿಯಾಗಿ ನಾವು ಮಾಡಲಿಲ್ಲವೆಂದರೆ ನಿಜಕ್ಕೂ ನಾವು ನಮ್ಮ ರಾಜ್ಯಕ್ಕೆ ನಮ್ಮ ನಾಡಿಗೆ, ನಮ್ಮ ಜನರಿಗೆ ನಾವು ಅನ್ಯಾಯವನ್ನು ಮಾಡಿದ ಹಾಗೆ ಆಗುತ್ತದೆ. ಆದ್ದರಿಂದ ಮಾನ್ಯ ಸಿದ್ಧರಾಮಯ್ಯನವರೇ, ತಮ್ಮಲ್ಲಿ ನಾನು ಕಳಕಳಿಯಿಂದ ಮನವಿಯನ್ನು ಮಾಡುತ್ತಿದ್ದೇನೆ, ನೀವು ದಯಮಾಡಿ ಈ ಸರೋಜಿನಿ ಮಹಿಷಿ ವರದಿಯ ಬಗ್ಗೆ ತಾವು ಪರಿಣಾಮಕಾರಿಯಾಗಿ, ಪ್ರಾಮಾಣಿಕವಾಗಿ, ಅದರ ಬಗ್ಗೆ ಎಲ್ಲರನ್ನೂ ಕರೆಯಿರಿ. ಎಲ್ಲಾ ಸರ್ವಪಕ್ಷಗಳನ್ನು ಇದರ ಬಗ್ಗೆ ಕರೆದು ಚರ್ಚೆ ಮಾಡೋಣ. ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಕನ್ನಡಿಗರಿಗೆ ಕೆಲಸವಾಗಿದೆ. ಯಾವ ಯಾವ ಕಾರ್ಖಾನೆಗಳಲ್ಲಿ ಈಗ ಬಂದಿದ್ದಾರಲ್ಲಾ ನಾರಾಯಣಮೂರ್ತಿ, ಪ್ರೇಮ್‌ಜೀ ಇವರು 28 ಸಾವಿರ ಉದ್ಯೋಗವನ್ನು ಕೊಟ್ಟಿದ್ದಾರೆ. ಇದರಲ್ಲಿ ಕನ್ನಡಿಗರು 1500 ಮಾತ್ರ. ನಾವು ಏನು ಅವರನ್ನು ಹೊಗಳುತ್ತೇವೆ. ಏನು ಅವರನ್ನು ಈ ರಾಜ್ಯದಲ್ಲಿ ಯಾವ ಸಮಾರಂಭವನ್ನು ಮಾಡಿ, ರಾಷ್ಟ್ರಪತಿ ಸ್ಪರ್ಧೆಗೂ ಅವರನ್ನು ಕರೆಯುವುದು, ಅವರು ಬಹಳ ಮೂಲ ವಿಗ್ರಹಗಳಾಗಿದ್ದರೆ, ಅವರ ಹೊಗಳಿಕೆ ಏನು ಈ ರಾಜ್ಯದಲ್ಲಿ ಅವರ ಬಗ್ಗೆ ಏನು ಗೌರವ ? ಮನ್ನಣೆಗಳೇನು ? ಹಾರತುರಾಯಿಗಳೇನು ? ಅವರೊಬ್ಬರೇ ಅಲ್ಲ. ಅವರ ಮನೆಯವರನ್ನು ರಸ್ತೆ ರಸ್ತೆಯಲ್ಲಿ ಕರೆಯುವುದು ಯಾವುದಕ್ಕೆ ? 28 ಸಾವಿರ ಉದ್ಯೋಗದಲ್ಲಿ 1800 ಜನ ಕನ್ನಡಿಗರಿಗೆ ಕೊಟ್ಟಿರುವುದು. ಕನ್ನಡಿಗರನ್ನು ಕಂಡರೆ ಅವರಿಗೆ ಆಗುವುದಿಲ್ಲ. ಕನ್ನಡಿಗರನ್ನು ಕಂಡರೆ ಶತ್ರುಗಳಿದ್ದ ಹಾಗೆ. ನಾವು ನಿಮ್ಮ ಸಾಮರ್ಥ್ಯವನ್ನು ನಾನು ಒಪ್ಪುತ್ತೇನೆ, ನಾಳೆಯಿಂದಲೇ ಯಾವ ಯಾವ ಕಾರ್ಖಾನೆಗಳಲ್ಲಿ ಕರ್ನಾಟಕದಲ್ಲಿರುವ ಖಾಸಗಿ ಕಾರ್ಖಾನೆಗಳು ಯಾವುದು ಬಂದಿದೆ. ಅದು ಯಾವುದೇ ಇರಬಹುದು. ಎಲ್ಲಿಂದಲೇ ಬಂದಿರಬಹುದು. ಎಲ್ಲಾ

ಕಾರ್ಖಾನೆಗಳಲ್ಲಿ ಪ್ರಾಮಾಣಿಕವಾಗಿ ಕನ್ನಡಿಗರನ್ನು ಎಷ್ಟು ಜನರನ್ನು ತೆಗೆದುಕೊಂಡಿದ್ದಾರೆ ? ತೆಗೆದುಕೊಳ್ಳದಿದ್ದರೆ ಬೇರೆಯವರನ್ನು ತೆಗೆದುಕೊಂಡಿದ್ದರೆ ಅವರೆಲ್ಲರನ್ನೂ ಅವರವರ ಊರುಗಳಿಗೆ ಕಳುಹಿಸಿ. ಅವರು ಹೊರಟುಹೋಗಲಿ. ನಾವೇನೂ ಅವರನ್ನು ಬಯ್ಯುವುದು ಬೇಡ. ನೀವು ನಿಮ್ಮ ಊರುಗಳಿಗೆ ಹೋಗಿ, ಆ ಕೆಲಸವನ್ನು ಕನ್ನಡಿಗರಿಗೆ ಕೊಡಬೇಕು. ಸಮಗ್ರ ಕನ್ನಡಿಗರಿಗೆ ಕೊಡಬೇಕು. ಈ ರೀತಿ ಒಂದು ಕ್ರಾಂತಿಕಾರಕವಾದಂಥ ಒಂದು ವ್ಯವಸ್ಥೆಯನ್ನು ತಾವು ಮಾಡುವುದಾದರೆ ನನಗನ್ನಿಸುತ್ತದೆ. ನಿಜಕ್ಕೂ ಈ ರಾಜ್ಯದಲ್ಲಿ ಕನ್ನಡಿಗರಿಗೆ ಆಶಾಕಿರಣ, ಕನ್ನಡಿಗರಿಗೆ ಎಲ್ಲೋ ಒಂದು ಕಡೆ ನಾವು ಬದುಕಿದ್ದೇವೆ. ನಮಗೆ ಯಾರೋ ಒಬ್ಬರು ಇದ್ದಾರೆ ಎನ್ನುವ ಭಾವನೆ ಬರುತ್ತದೆ. ದಯಮಾಡಿ ತಾವು ನಮಗೆ ಏನು ಖುಷಿ. ಅವರು ಬರುವಾಗ ಬಹಳ ಚೆನ್ನಾಗಿ ಬರುತ್ತಾರೆ. ಅವರ ಕಾರ್ಖಾನೆಗಳನ್ನು ಸ್ಥಾಪನೆ ಮಾಡುವಾಗ ಮಂತ್ರಿಗಳನ್ನು ಕಾಣುವುದಕ್ಕೆ ಕೈಗಾರಿಕಾ ಮಂತ್ರಿಗಳನ್ನು ಕಾಣುವುದಕ್ಕೆ ಮುಖ್ಯಮಂತ್ರಿಗಳನ್ನು ಕಾಣುವುದಕ್ಕೆ ಬರುವ ವ್ಯವಸ್ಥೆ ಇದೆಯಲ್ಲಾ ಆ ವ್ಯವಸ್ಥೆಗೆ ನಾವು ಬಿದ್ದುಹೋಗಿಬಿಡುತ್ತೇವೆ. ತಕ್ಷಣವೇ ಸಹಿಯನ್ನು ಹಾಕಿಬಿಡುತ್ತೇವೆ. ನಾವೇನು ಕೇಳುವುದಕ್ಕೆ ಹೋಗುವುದಿಲ್ಲ. ಇಲ್ಲಿ ಬಿಡಿಎ ಮೂಲೆ ನಿವೇಶನ, ಮಾನ್ಯ ಆಶೋಕ್‌ರವರೇ, ಯಾರಿಗೆ ಹೋಗುತ್ತಿದೆಯಪ್ಪಾ, ಮೂಲೆ ನಿವೇಶನ ಎಲ್ಲಾ ಹೊರಗಡೆಯವರಿಗೆ ಬಿಡಿಎ ಮೂಲೆ ನಿವೇಶನಗಳು ನಮಗೆ ಯಾರಿಗೂ ಸಿಗುತ್ತಿಲ್ಲ, ಇಲ್ಲಿ ಕನ್ನಡಿಗರಿಗೆ ಇಲ್ಲ. ಎಲ್ಲಾ ಹೊರಗಡೆಯವರಿಗೆ ಹರಾಜು.

ಅಧ್ಯಕ್ಷರು : ಮಾನ್ಯ ನಾಗರಾಜ್‌ರವರೇ, ಹೊರಗಡೆಯವರಿಗೋ ? ದುಡ್ಡು ಕೊಟ್ಟವರಿಗೋ ? ಅದನ್ನು ತಾವು ಸ್ಪಷ್ಟೀಕರಣ ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್ ; ಮಾನ್ಯ ಅಧ್ಯಕ್ಷರೇ, ನನಗೆ ಇದು ಬಹಳ ನೋವಾಗುತ್ತದೆ. ನನ್ನ ಇಡೀ ಜೀವನವನ್ನೇ ನಾನು ಕನ್ನಡಕ್ಕಾಗಿ ಇಟ್ಟಿದ್ದೇನೆ. ನನ್ನ ಉಸಿರು, ನಾನು ಸತ್ತರೂ ಕನ್ನಡ ಉಸಿರ ಹೇಳಿ ಸಾಯುತ್ತೇನೆ. ಆ ವಿಚಾರ ಬೇರೆ. ಆದರೆ ನಮ್ಮ ಕಣ್ಣೆದುರಿಗೆ ನಮ್ಮ ಹಣೆಬರಹ ಹೀಗೆ ಆಗಿದೆಯಲ್ಲಾ ಈ ರಾಜ್ಯವನ್ನು ಯಾರೂ ಕೇಳುವವರು ಇಲ್ಲವೇ ? ನನಗನ್ನಿಸುತ್ತದೆ. ನಾವೇ ಕೆಲವು ಕಡೆ ಹೋದರೆ ಇನ್ನೊಂದು 5–10 ವರ್ಷವಾಯಿತು ಎಂದರೆ ನಮ್ಮನ್ನೇ ನೀವ್ಯಾರ್ರೀ? ನೀವು ಯಾರು ಎಂದು ಕೇಳತಕ್ಕ ಪರಿಸ್ಥಿತಿ ನಿರ್ಮಾಣವಾಗಿದೆ. ಮಾರ್ವಾಡಿಗಳ ಕೈಯಲ್ಲಿ ಕೊಟ್ಟಿದ್ದೇವೆ. ಗುಜರಾತಿಗಳ ಕೈಗೆ ಕೊಟ್ಟಿದ್ದೇವೆ. ತಮಿಳರಿಗೆ ಕೊಟ್ಟಿದ್ದೇವೆ. ತೆಲುಗಿನವರಿಗೆ ಕೊಟ್ಟಿದ್ದೇವೆ. ಇನ್ನು ಮಲೆಯಾಳಿಗಳಿಗೂ ಕೊಟ್ಟಿದ್ದೇವೆ. ಇದು ಯಾವ ಭಾಷೆ ? ಇದು ಸರ್ವಭಾಷಾ ರಾಜ್ಯ ಹಾಗೆ ಆಗಿಬಿಟ್ಟಿದೆ. ಇದು ನಿಜಕ್ಕೂ ನಾವು ಎಚ್ಚರವಾಗಲಿಲ್ಲ ಎಂದರೆ ಈ ಪರಿಸ್ಥಿತಿ ತಮಿಳುನಾಡಿನಲ್ಲಿ ಇಲ್ಲ, ಕೇರಳದಲ್ಲಿ ಇಲ್ಲ, ಆಂಧ್ರದಲ್ಲೂ ಇಲ್ಲ, ಇದು ಕರ್ನಾಟಕ ಒಂದರಲ್ಲೇ ಈ ಪರಿಸ್ಥಿತಿ ಇದೆ. ಇದರ ಬಗ್ಗೆ ಮಾನ್ಯ ಸಿದ್ಧರಾಮಯ್ಯನವರಿಗೆ ನಾನು ಏಕೆ ಒತ್ತಾಯ ಮಾಡಿ, ಒತ್ತಾಯ ಮಾಡಿ ಹೇಳುತ್ತಿದ್ದೇನೆಂದರೆ ಅವರಿಗೆ ಸ್ವಲ್ಪ ಕಾಳಜಿ ಇದೆ. ಕಾವಲು ಸಮಿತಿಗೆ ಇರುವ ಕಾಳಜಿ ಇದೆ. ಇದರ ಬಗ್ಗೆ ಒಂದು ಕಾರ್ಯಕ್ರಮ. ಎಲ್ಲರನ್ನೂ

ಸಭೆ ಕರೆಯಿರಿ. ಅಲ್ಲೇನು ತೀರ್ಮಾನ ಮಾಡೋಣ ಎನ್ನುವುದನ್ನು ತಾವು ಮಾಡಬೇಕೆಂದು ತಮ್ಮಲ್ಲಿ ನಾನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೇ, ತಾವು 30 ನಿಮಿಷ ತೆಗೆದುಕೊಂಡಿದ್ದೀರಿ. ದಯಮಾಡಿ ಮುಗಿಸಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ತಾವು ಮನರಂಜನಾ ತೆರಿಗೆಯನ್ನು ಕಡಿಮೆ ಮಾಡಿದಿರಿ. ಏಕೆ ಸ್ವಾಮಿ ? ಆ ಮನರಂಜನಾ ತೆರಿಗೆ ಯಾರಿಗೆ ? ಇಲ್ಲಿ ಪರಭಾಷಾ ಚಿತ್ರಗಳಿಗೆ ಕೊಡುವುದಕ್ಕಾ ? ಒಂದು ಪರಭಾಷಾ ಚಿತ್ರ ತೆಲುಗು ಇಲ್ಲಿ ಬಂದರೆ ಮೂರು ಕೋಟಿ ರೂ ಸಂಪಾದರೆ, ತಮಿಳು ಇಲ್ಲಿಗೆ ಬಂದರೆ ಮೂರು ಕೋಟಿ, ರೂ ಕರ್ನಾಟಕದ ಬೆಂಗಳೂರಿನ ಶೇರು ಮೂರು ಕೋಟಿ ರೂ. ಇವತ್ತು ನನಗನ್ನಿಸುತ್ತದೆ. ಕನ್ನಡ ಚಿತ್ರರಂಗ ಯಾವ ಉದ್ದೇಶಕ್ಕೆ ಬಂತು ? 82 ರಲ್ಲಿ ತಮಿಳುನಾಡಿನಲ್ಲಿತ್ತು. ತಮಿಳುನಾಡಿನಲ್ಲಿ ಕೇಳುವವರು ಇರಲಿಲ್ಲ. ಅವರು ಕಷ್ಟದಲ್ಲಿದ್ದಾರೆಂದು ಹೇಳಿ ಇಲ್ಲಿ ನಾವು ಕರೆದೆವು. ನಿಮಗೆ ಸಹಾಯಧನವನ್ನು ಕೊಡುತ್ತಿದ್ದೇವೆ. ಇಲ್ಲೇ ಚಿತ್ರವನ್ನು ತೆಗೆಯಿರಿ. ನಮ್ಮ ಸ್ಟುಡಿಯೋಗಳಲ್ಲೇ ತೆಗೆಯಬೇಕು. ನಮ್ಮ ಚಿತ್ರವನ್ನೇ ತೆಗೆಯಬೇಕು. ನಮಗೋಸ್ಕರ ಎಂದು ಬಂದಾಗ ಇಲ್ಲಿ ತಾವು ಪರಭಾಷಾ ಚಿತ್ರಗಳಿಗೆ ಹೆಚ್ಚಿನ ತೆರಿಗೆಯನ್ನು ಹಾಕಬೇಕು. ಹೆಚ್ಚಿನ ಮನರಂಜನಾ ತೆರಿಗೆಯನ್ನು ಹಾಕಬೇಕು. ಕನ್ನಡ ಚಿತ್ರಗಳಿಗೆ, ಉತ್ತಮ ಕನ್ನಡ ಚಿತ್ರಗಳಿಗೆ ಸಾಹಿತ್ಯ ಸಂಸ್ಕೃತಿ, ಬೆಳವಣಿಗೆ, ನಾಡಿನ ಅಭ್ಯುದಯಕ್ಕೋಸ್ಕರವಾಗಿ ಚಿಂತನೆಯನ್ನು ಮಾಡತಕ್ಕಂಥ ಕನ್ನಡ ಚಿತ್ರಗಳಿಗೆ 20 ಲಕ್ಷ ರೂಪಾಯಿಗಳ ಸಹಾಯಧನವನ್ನು ಕೊಡಿ. ಸಂತೋಷ, ಏಕೆಂದರೆ ಆ ಚಿತ್ರ ಅದು ಇರಬೇಕು. ಕನ್ನಡತನ ಕನ್ನಡ ಭಾಷೆ. ಕನ್ನಡ ಸಾಹಿತ್ಯ, ಕನ್ನಡ ಸಂಸ್ಕೃತಿ ಇದು ಇರತಕ್ಕದ್ದು, 25 ವರ್ಷದ ಹಿಂದೆ ಕನ್ನಡ ಚಿತ್ರಗಳು ಎಂದು ಹೇಳಿದರೆ ಹಿಮಾಲಯದೆತ್ತರಕ್ಕೆ ಇದ್ದವು. 1960 ನೇ ಇಸವಿ 7ನೇ ತಾರೀಖು ಅಲಂಕಾರ್ ಟಾಕೀಸ್‌ನಲ್ಲಿ ಕನ್ನಡ ಚಿತ್ರವನ್ನು ಹಾಕಬೇಕೆಂದು ಗಲಾಟೆ ಮಾಡಿದಾಗ ನನಗೆ ಬೂಟ್ಸ್ ಏಟನ್ನು ಹೊಡೆದರು. ನಾವು ಇವೆಲ್ಲವನ್ನೂ ಅನುಭವಿಸಿ ನಿರಂತರವಾದಂಥ ಹೋರಾಟವನ್ನು ಮಾಡಿಕೊಂಡು ಬಂದಿದ್ದೇವೆ. ಇತ್ತೀಚೆಗೆ ಬರತಕ್ಕ ಕನ್ನಡ ಚಿತ್ರಗಳು ಕನ್ನಡ ಚಿತ್ರಗಳಲ್ಲ. ಅವಷ್ಟೂ ರೀಮೇಕ್ ಚಿತ್ರಗಳು, ತಮಿಳು, ತೆಲುಗು ಮಲೆಯಾಳಂ ನಿಂದ ಬರತಕ್ಕ ರೀಮೇಕ್ ಚಿತ್ರಗಳು. ನಾವು ಹಿಂದೆ ರೀಮೇಕ್ ಚಿತ್ರಗಳಿಗೆ ವಿರೋಧವನ್ನು ಮಾಡಿದ್ದೇವೆ. ಡಬ್ಬಿಂಗ್ ಚಿತ್ರಗಳಿಗೆ ವಿರೋಧವನ್ನು ಮಾಡಿದ್ದೇವೆ. ಚಿತ್ರಮಂದಿರ ಭರ್ತಿಯಾಗದಿದ್ದರೆ ನಾವೇ ಹಣವನ್ನು ಕೊಟ್ಟು ಚಿತ್ರಮಂದಿರವನ್ನು ಭರ್ತಿ ಮಾಡುತ್ತಿದ್ದೆವು. ತಮಗೆ ನಾನು ಏಕೆ ಹೇಳುತ್ತಿದ್ದೇನೆಂದರೆ ರೀಮೇಕ್ ಚಿತ್ರಗಳಿಗೆ ಒಂದು ನಯಾಪೈಸೆ ಯಾವುದೇ ಸಹಾಯಧನವನ್ನು ಕೊಡಕೂಡದು. ರೀಮೇಕ್ ಚಿತ್ರಗಳಿಗೆ ಕೊಟ್ಟರೆ ಅದು ತಮಿಳು ಚಿತ್ರಕ್ಕೆ ಕೊಟ್ಟ ಹಾಗೆ, ರೀಮೇಕ್ ಚಿತ್ರಗಳಿಗೆ ಕೊಟ್ಟರೆ ಅದು ತೆಲುಗು ಚಿತ್ರಕ್ಕೆ ಕೊಟ್ಟ ಹಾಗೆ, ರೀಮೇಕ್ ಚಿತ್ರಗಳಿಗೆ ಕೊಟರೆ ಪರಬಾಷಾ ಚಿತಗಳಿಗೆ ಕೊಟ ಹಾಗೆ ಆದರಿಂದ ನಮ್ಮ ನಿರ್ಮಾಪಕರುಗಳು,

ನಿರ್ದೇಶಕರುಗಳು, ಹಣ ಹಾಕತಕ್ಕವರು ಗಂಭೀರವಾಗಿ ಕನ್ನಡ ಸಾಹಿತ್ಯ, ಕನ್ನಡ ಸಂಸ್ಕೃತಿ, ಕನ್ನಡ ಸಂಗೀತ, ಇವುಗಳಿಗೆ ಪ್ರಾಮುಖ್ಯತೆ ನೀಡಬೇಕು, ಏನು ನಮ್ಮ ಚಿತ್ರಗಳ ಹೆಸರು ಕುಲಗೆಟ್ಟುಹೋಗಿದೆ "ಕತ್ತೆಗಳು ಸಾರ್ ಕತ್ತೆಗಳು" ಕುರಿಗಳ್ ಸಾರ್ ಕುರಿಗಳ್, ನಾಯಿಗಳು ಸಾರ್ ನಾಯಿಗಳು, ಏನು ಆ ಚಿತ್ರದ ಹೆಸರುಗಳು? ಹೊಲಸು ಚಿತ್ರಗಳು, ಎಲ್ಲಿಗೆ ನಾವು ಹೋಗಬೇಕು ? ಎಲ್ಲಿಗೆ ನಾವು ತಲುಪಬೇಕು? ಯಾವ ಚಿತ್ರಗಳು ? ಆ ಚಿತ್ರಗಳ ಭಾಷೆ. ಸಂಭಾಷಣೆ, ಛೇ ಛೇ, ನಮ್ಮಲ್ಲಿ ಅನೇಕರ ಚಿತ್ರಗಳು ಕಣಗಾಲ್ ಪುಟ್ಟಣನವರ ಚಿತ್ರಗಳನ್ನು ನೋಡಿದ್ದೇನೆ. ಕಣಗಾಲ್ ಪ್ರಭಾಕರ ಶಾಸ್ತ್ರಿಗಳ ಚಿತ್ರಗಳನ್ನು ನೋಡಿದ್ದೇವೆ. ಹುಣಸೂರು ಕೃಷ್ಣಮೂರ್ತಿ ಅವರ ಚಿತ್ರಗಳನ್ನು ನೋಡಿದ್ದೇವೆ. ವಿಜಯ ನಾರಸಿಂಹ ಅವರ ಚಿತ್ರಗಳನ್ನು ನೋಡಿದ್ದೇವೆ. ಎಂಥೆಂಥ ವೈಭವ ಚಿತ್ರಗಳಾಗಿ ಮೆರೆದಂಥ ಚಿತ್ರಗಳು ಕರ್ನಾಟಕದಲ್ಲಿ ವಿಶ್ವದ ಮಾರುಕಟ್ಟೆಯಲ್ಲಿ ಅತ್ಯುನ್ನತವಾದ ಸ್ಥಾನವನ್ನು ಪಡೆದಂಥ ಕನ್ನಡ ಚಿತ್ರರಂಗ ಇವತ್ತು ಅವಹೇಳನಕ್ಕೆ ಗುರಿಯಾಗಿದೆ. ಅವರ ಸಂಭಾಷಣೆಗಳು, ಯಾರು ಹೋಗಿ ಕುಳಿತುಕೊಂಡು ಆ ಚಿತ್ರಗಳನ್ನು ನೋಡತಕ್ಕ ವ್ಯವಸ್ಥೆ, ನಮಗಂತೂ ಇಲ್ಲ. ಬಹಳ ಕೆಟ್ಟ ಚಿತ್ರಗಳು. ಆ ಸಂಗೀತಗಳು, ತಾವು ನೋಡಬೇಕು. ಛೇ, ಛೇ, ಪ್ರೀತ್ಸೆ ಯಾರನ್ನು ಪ್ರೀತಿಸುವುದು ? ಎಲ್ಲಿ ಪ್ರೀತಿಸುವುದು ? ಯಾವ ಸಂಗೀತ ಅದು ? ಏನು ಕತೆ ಅದು ? ಛೇ, ಛೇ, ಇನ್ಯಾವನೋ ಬರುತ್ತಾನೆ. ಕಲ್ಯಾಣ ಮಂಟಪಕ್ಕೆ ಡಕ್ಕು ಡಕ್ಕು ಡಕ್ಕು ಸಂಗೀತ, ಕಲ್ಯಾಣ ಮಂಟಪ ಎನ್ನುವುದು ಸಾಹಿತ್ಯ ಇದೇನು? ನನಗೆ ಅರ್ಥವಾಗುವುದಿಲ್ಲ. ಇದಾದಮೇಲೆ ಚಕೋತ, ಚಕೋತ ಇದು ನನಗೆ ಅರ್ಥವಾಗಲಿಲ್ಲ, ಬಸ್ ನಿಲ್ದಾಣಕ್ಕೆ ಬರುತ್ತಾಳೆ. ಆಕೆ ಯಾರೋ ಒಬ್ಬಳು, ಅಲ್ಲೂ ಚಕೋತ, ರೈಲ್ವೆ ಸ್ಟೇಷನ್

ಶ್ರೀ ಎಸ್.ಎಸ್. ಪಾಟೀಲ್ : ಇನ್ನೊಂದು ಯಾವುದೋ ಪರಸಂಗದ ಗೆಂಡೆತಿಮ್ಮ

ಶ್ರೀ ವಾಟಾಳ್ ನಾಗರಾಜ್ : ಅದು ಇರಲಿ, ಆ ಹೆಸರು ಚೆನ್ನಾಗಿದೆ,

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ : ಮಾನ್ಯ ಅಧ್ಯಕ್ಷರೇ, ವಾಟಾಳ್ ನಾಗರಾಜ್‌ರವರು ಯಾವಾಗ ಧರಣಿಯನ್ನು ನಿಲ್ಲಿಸಿಬಿಟ್ಟರು, ಈ ತರಹ ಚಿತ್ರಗಳು ಶುರುವಾಗಿಬಿಟ್ಟವು. ತಾವು ಯಾವಾಗ ಹೋರಾಟವನ್ನು ಸ್ವಲ್ಪ ಕಡಿಮೆ ಮಾಡಿದಿರಿ, ಈ ತರಹ ಚಿತ್ರಗಳು ಜಾಸ್ತಿಯಾಗಿಬಿಟ್ಟಿದೆ.

ಶ್ರೀ ವಾಟಾಳ್ ನಾಗರಾಜ್ ; ಅದಕ್ಕೆ ಸಂಬಂಧ ಇಲ್ಲ ಪ್ರಸಾದ್‌ರವರೇ, ನಮ್ಮ ಚಿತ್ರಗಳ ಬಗ್ಗೆ ತಾವು ವಿಮರ್ಶೆಯನ್ನು ಮಾಡಬೇಕು.

ಶ್ರೀ ಕುಮಾರ್ ಬಂಗಾರಪ್ಪ ; ಮಾನ್ಯ ಅಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್‌ರವರು ರೀಮೇಕ್ ಚಿತ್ರಗಳ ಬಗ್ಗೆ ಏನು ಪ್ರಸ್ತಾಪವನ್ನು ಮಾಡಿದರು, ಅಥವಾ ಕುರಿಗಳು ಸಾರ್ ಕುರಿಗಳ್ ನಾಯಿಗಳು ಸಾರ್ ನಾಯಿಗಳು, ಇದರ ಬಗ್ಗೆ ನೀವೇನು ಹೇಳಿದಿರಿ, ಇವೆಲ್ಲವೂ ಕೂಡ ಒರಿಜಿನಲ್ ಸಬ್ಜೆಕ್ಟ್. They are not dubbed subjects. They are not remake subjects. ಯಾವುದು ಕುರಿಗಳು

ಸಾರ್ ಕುರಿಗಳು ಇರಬಹುದು, ಕುರಿಗಳು ಸಾರ್ ಕುರಿಗಳು ಎನ್ನತಕ್ಕ ಹಾಡನ್ನು ಒಂದು ಹಂತದಲ್ಲಿ ಎಮರ್ಜೆನ್ಸಿ ಟೈಮ್‌ನಲ್ಲಿ ಬ್ಯಾನ್ ಮಾಡಿದ್ದರು. No. I am just bringing to your notice. ಮತ್ತೆ ಆ ಹಾಡನ್ನು ಹಾಡತಕ್ಕ ದಿನಗಳ ಕೂಡ ಇದ್ದವು. ನಾನೂ ಹೇಳುತ್ತಿರುವುದು, ಒಂದು ಚಿತ್ರರಂಗ ಯಶಸ್ವಿಯಾಗುವುದಕ್ಕೆ ಅಥವಾ ಒಂದು ಹಾಡು, ಈಗ ನೀವು ಹೇಳಿದಿರಿ ಚಕೋತ ಚಕೋತ ಎಂದು Why did you sing ? ನೀವು ಏಕೆ ಹೇಳಿದಿರಿ ? ಪಾಪ್ಯುಲಾರಿಟಿ ಯಾವುದಕ್ಕೆ ಜನರು ಒಂದು ಮನ್ನಣೆಯನ್ನು ಕೊಡುತ್ತಾರೆ.... ಹಾಗೆಯೇ ಕಲಾತ್ಮಕ ಚಿತ್ರಗಳು ಬೇಕಾದಷ್ಟು ಆಗುತ್ತದೆ. ಏಕೆ ಓಡುವುದಿಲ್ಲ ?

11.50 ಎ.ಎಂ

ಅದಕ್ಕೆ ನಾನು ಹೇಳತಕ್ಕ ವಿಚಾರ ಏನೆಂದರೆ ಚಿತ್ರರಂಗದ ಯಶಸ್ಸು ಅಥವಾ ಚಿತ್ರಗಳ ಯಶಸ್ಸು ಯಾವುದೇ ಒಂದು ಪದಗಳ ಮೇಲೆ, ಯಾವುದೇ ಒಂದು ಚಿತ್ರಗಳ ಹೆಸರಿನ ಮೇಲೆ ಇರುವುದಿಲ್ಲ. ಎಷ್ಟೋ ಚಿತ್ರಗಳು ಒಳ್ಳೊಳ್ಳೆಯ ಹೆಸರುಗಳನ್ನು ಇಟ್ಟು ಮಾಡಿರತಕ್ಕಂಥ ಚಿತ್ರಗಳು ಏತಕ್ಕೆ ಓಡುವುದಿಲ್ಲ? ಅದಕ್ಕೆ ವ್ಯಾಖ್ಯಾನ ಮಾಡುವುದಕ್ಕೆ ಒಂದು ಫೋರಂ ಇದೆ. ಅದಕ್ಕೇ ಚರ್ಚೆ ಮಾಡುವುದಕ್ಕೆ ಫೋರಂ ಇದೆ. ಚಿತ್ರರಂಗವನ್ನು ವಿಶ್ಲೇಷಣೆ ಮಾಡುವುದಕ್ಕೆ ಎಂದು ಹೇಳಿ; ನಾವು ಆಶ್ಲೀಲತೆ, ಮಾತನಾಡತಕ್ಕಂತ ವಿಚಾರಗಳು ಏನು ಇದ್ದಾವೆ, ಅದಕ್ಕೆ ಸೀಮಿತವಾಗಿ ಮಾತನಾಡತಕ್ಕದ್ದನ್ನು ಮಾಡೋಣ. ರೀಮೇಕ್ ಚಿತ್ರಗಳನ್ನು ಮಾಡಬಾರದು ಅಥವಾ ಪರಭಾಷಾ ಚಿತ್ರಗಳನ್ನು ಬೆಂಬಲಿಸಿ ಹೇಳುತ್ತಿಲ್ಲ. ಅದಕ್ಕೆ ಕಡಿವಾಣ ಹಾಕತಕ್ಕಂಥ ಅವಶ್ಯಕತೆ ಇದೆ. ಮಾನ್ಯ ಉಪ ಮುಖ್ಯಮಂತ್ರಿಗಳೂ ಏನು ಈಗ ಪ್ರಸ್ತಾಪ ಮಾಡಿದ್ದಾರೆ, ಟ್ಯಾಕ್ಸ್‌ನ್ನು ಕಡಿಮೆ ಮಾಡುತ್ತಾರೆ ಎಂದು ಅದನ್ನೂ ಕೂಡ ನಮ್ಮ ಕನ್ನಡ ಭಾಷೆಗಳ ವತಿಯಿಂದ

ಅಧ್ಯಕ್ಷರು : ಮಾನ್ಯ ಕುಮಾರ್ ಬಂಗಾರಪ್ಪನವರೆ, ತಮ್ಮ ಅವಧಿ ಬಂದಾಗ ಮಾತನಾಡಬಹುದು.

ಶ್ರೀ ಕುಮಾರ್ ಬಂಗಾರಪ್ಪ : ಅದಕ್ಕೇ ನಾನು ಹೇಳುತ್ತಿರುವುದು. ಏಕೆಂದರೆ ಚಿತ್ರರಂಗದ ವಿಚಾರ ಬಂದಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಕುಮಾರ್ ಬಂಗಾರಪ್ಪನವರೆ, ತಾವು ನಟರೂ ಆಗಿದ್ದೀರಿ, ದಯಮಾಡಿ, ಮಾತನಾಡೋಣ, ನಾನು ಮುಗಿಸುತ್ತೇವೆ, ತಾವು ಮಾತನಾಡಿ. ನೀವು ಮಾತನಾಡುವಾಗ ಸಾರಾಸಗಟಾಗಿ ನನ್ನ ವಿಚಾರವನ್ನು ತಳ್ಳಿ ಹಾಕಿ. ತಪ್ಪು ಏನೂ ಇಲ್ಲ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೆ, ಈ ಕಡೆಯವರಿಗೆ ಅವಕಾಶವೇ ಕೊಡದಿದ್ದರೆ ಹೇಗೆ ? ಸಾಯಂಕಾಲ ಐದು ಗಂಟೆಗೆ ಅಸೆಂಬ್ಲಿ ಕ್ಲೋಸ್ ಎನ್ನುತ್ತೀರಿ. ನಮಗೆ ಮಾತನಾಡಲು ಅವಕಾಶವೇ ಬೇಡವಾ ?

ಅಧ್ಯಕ್ಷರು : 50 ನಿಮಿಷ ಮಾತನಾಡಿದ್ದೀರಿ ಮಾನ್ಯ ವಾಟಾಳ್ ನಾಗರಾಜ್ ಅವರೇ.

ಶ್ರೀ ವಾಟಾಳ್ ನಾಗರಾಜ್ : ಐದು ನಿಮಿಷ ತಾಳಿ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಮಾತನಾಡಿದವರಿಗೆ ಮತ್ತೆ ಮಾತನಾಡಲು ಅವಕಾಶ ಕೊಟ್ಟರೆ ಬೇರೆ ಸದಸ್ಯರ ಗತಿ ಏನಾಗಬೇಕು ಅಧ್ಯಕ್ಷರೇ ?

ಅಧ್ಯಕ್ಷರು : ನೀವು 40 ನಿಮಿಷ ಮಾತನಾಡಿದ್ದೀರಿ, ದಯಮಾಡಿ.

ಶ್ರೀ ವಾಟಾಳ್ ನಾಗರಾಜ್ : ಇನ್ನು ಹತ್ತು ನಿಮಿಷದಲ್ಲಿ ಮುಗಿಸುತ್ತೇನೆ.

ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು : ಸಾರ್ ಈ ಭಾಗದಲ್ಲಿ 78 ಜನರು ಇದ್ದಾರೆ.

ಅಧ್ಯಕ್ಷರು : ಈಗ ಇತರ ಸದಸ್ಯರಿಗೆ ಇದ್ದದ್ದೇ 30 ನಿಮಿಷ. ಸ್ವಲ್ಪ ಅರ್ಥ ಮಾಡಿಕೊಳ್ಳಿ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ನಾವು 20 ಜನ ಸದಸ್ಯರ ಹೆಸರುಗಳನ್ನು ಕಳುಹಿಸಿ. ಒಬ್ಬೊಬ್ಬರಿಗೆ ಒಂದು ಐದು ನಿಮಿಷವಾದರೂ ಅವಕಾಶ ಕೊಡದಿದ್ದರೆ ಅವರ ಗತಿ ಏನಾಗಬೇಕು?

ಅಧ್ಯಕ್ಷರು : ಅವಕಾಶ ಕೊಡುತ್ತೇನೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಸಾಯಂಕಾಲ ಐದು ಗಂಟೆಗೆ ಅಡ್ಜರ್ನ್ ಮಾಡುತ್ತೀರಿ. ನಾಳೆ ಉತ್ತರ ಕೊಡಬೇಕು ಎಂದು ಹೇಳುತ್ತಿದ್ದೀರಿ. ಬೆಳಿಗ್ಗೆ ತಾವು ಇವತ್ತು ಸಂಜೆ ಐದು ಗಂಟೆಗೆ ಅಡ್ಜರ್ನ್ ಮಾಡುತ್ತೇವೆ ಎಂದು ಹೇಳುತ್ತೀರಿ. 25 ಜನಕ್ಕೆ ಐದೈದು ನಿಮಿಷ ಎಂದು ಲೆಕ್ಕ ಹಾಕಿ ಸಾರ್.

ಅಧ್ಯಕ್ಷರು : ಮಾನ್ಯ ವಾಟಾಳ್ ಅವರೇ, ದಯಮಾಡಿ ಬೇಗ ಮುಗಿಸಿ.

ಶ್ರೀ ವಾಟಾಳ್ ನಾಗರಾಜ್ : ಮುಗಿಸುತ್ತೇನೆ.

ಶ್ರೀ ಹೆಚ್. ಆಂಜನೇಯ : ಮಾನ್ಯ ಅಧ್ಯಕ್ಷರೆ, ಹೊಸದಾಗಿ ಆಯ್ಕೆ ಆಗಿ ಬಂದಿರತಕ್ಕ 105 ಮಂದಿ ನಾವು ಇದ್ದೇವೆ. ನಮಗೆ ಅವಕಾಶವೇ ಕೊಡದಿದ್ದರೆ ಹೇಗೆ ?

(ಗೊಂದಲ)

ಅಧ್ಯಕ್ಷರು : ಪಾರ್ಟಿಗಳಿಗೆ ಟೈಮ್ ಅಲಾಟ್‌ಮೆಂಟ್ ಪ್ರಕಾರ 140 ನಿಮಿಷ ಬಿಜೆಪಿಗೆ, ಕಾಂಗ್ರೆಸ್‌ನವರಿಗೆ 110 ನಿಮಿಷ ಜೆಡಿಎಸ್‌ನವರಿಗೆ 100 ನಿಮಿಷ. ಅದರಲ್ಲಿ ಅವರು ಉತ್ತರ ಕೊಡುವುದಕ್ಕೆ 60 ನಿಮಿಷ. ನಿಮಗೆ 10 ನಿಮಿಷ ಬರುತ್ತದೆ. ನಿಮ್ಮ ನಾಯಕರು 100 ನಿಮಿಷ ಮಾತನಾಡಿದ್ದಾರೆ. ಈಗ ಇತರರು ಅವರಿಗೆಲ್ಲಾ ಬರುವುದು 30 ನಿಮಿಷ. ಆದರೂ 40 ನಿಮಿಷ ಮಾತನಾಡಿದ್ದಾರೆ. ಏನೋ ಹಿರಿಯ ಸದಸ್ಯರು ಎಂದು ಸ್ವಲ್ಪ ಲೀನಿಯೆಂಟಾಗಿ ಇರಬೇಕಾಗುತ್ತದೆ. ಆದರೆ.....

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ನಮಗೆ ಮೂರು ನಿಮಿಷ ಬೇಡಾವ ?

(ಗೊಂದಲ)

ಅಧ್ಯಕ್ಷರು : ಸ್ವಲ್ಪ ಸಹಕರಿಸಿ. ತಾವು ಮುಗಿಸಿ.

ಶ್ರೀ ವಾಟಾಳ್ ನಾಗರಾಜ್ : ಮುಗಿಸುತ್ತೇನೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ನಾನು ಹೇಳಿದ್ದು ಬೆಳಿಗ್ಗೆಯಿಂದ 120 ನಿಮಿಷ ಆಗಿದೆ ಎಂದು.

ಅಧ್ಯಕ್ಷರು : ಆಯಿತು, ನಾನೂ ಸಹ ತಮ್ಮ ಪರವಾಗಿ ಅವರಲ್ಲಿ ವಿನಂತಿ ಮಾಡಿಕೊಂಡೆನಲ್ಲಾ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಮತ್ತೊಂದು ವಿಚಾರವನ್ನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಪು.ತಿ.ನಾ ಶತಮಾನೋತ್ಸವ ಆಚರಣೆ, ಬೇಂದ್ರೆ ಇವರ ಟ್ರಸ್ಟ್‌ಗಳಿಗೆ ಸರ್ಕಾರ ಧಾರಾಳವಾಗಿ ಆ ಟ್ರಸ್ಟ್‌ಗಳನ್ನು ಉಳಿಸುವುದಕ್ಕೆ, ಆ ಟ್ರಸ್ಟುಗಳನ್ನು ಬೆಳೆಸುವುದಕ್ಕೆ ಪ್ರಯತ್ನ ಆಗಬೇಕು. ಸಾಮಾನ್ಯವಾಗಿ, ಪ್ರಾಮಾಣಿಕವಾಗಿ ಆ ಟ್ರಸ್ಟ್‌ಗಳು ಉಳಿಯುವುದಕ್ಕೆ ಎಷ್ಟು ಹಣ ಬೇಕು ? ಯಾವ ರೀತಿ ? ವರ್ಷದಲ್ಲಿ ಅವರು ಮಾಡತಕ್ಕಂಥ ಕಾರ್ಯಕ್ರಮಗಳಿಗೆ ಎಷ್ಟು ಹಣ ತಗಲುತ್ತದೆ ? ಅದನ್ನು ಕೊಡತಕ್ಕ ವ್ಯವಸ್ಥೆ ಸರ್ಕಾರ ಮಾಡಬೇಕು. ಖಾದ್ರಿ ಶಾಮಣ್ಣ ಈ ಕರ್ನಾಟಕದ ಪತ್ರಿಕೋದ್ಯಮದಲ್ಲಿ ಬಹಳ ಅದ್ವಿತೀಯವಾದಂತಹ, ದೊಡ್ಡ ಹೆಸರನ್ನು ಮಾಡಿರತಕ್ಕವರು, ಪತ್ರಿಕೋದ್ಯಮದಲ್ಲಿ ದುಡಿದಿರತಕ್ಕವರು, ಆದ್ದರಿಂದ ಖಾದ್ರಿ ಶಾಮಣ್ಣ ಟ್ರಸ್ಟಿಗೆ ಪ್ರತಿ ವರ್ಷ ಗರಿಷ್ಟ ಎರಡು ಲಕ್ಷ ರೂಪಾಯಿ ಕೊಡಬೇಕೆಂದು ಹೇಳಿ ಜೆ.ಹೆಚ್. ಪಟೇಲ್ ಅವರು ಮುಖ್ಯಮಂತ್ರಿ ಆಗಿದ್ದಾಗಲೇ ಈ ಸದನದಲ್ಲಿ ತೀರ್ಮಾನ ಆಗಿತ್ತು. ಮಾನ್ಯ ಸಿದ್ಧರಾಮಯ್ಯನವರೇ, ತಮಗೂ ಗೊತ್ತಿದೆ. ಆ ಟ್ರಸ್ಟ್ ಬಹಳ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಅದರ ಬಗ್ಗೆ ವಿಚಾರ ಇಲ್ಲ. ಇದಾದ ಮೇಲೆ ನಮ್ಮ ಕರ್ನಾಟಕದ ಶಾಸಕರುಗಳಿಗೆ ನಿಮ್ಮ ಆಯವ್ಯಯದಲ್ಲಿ ನೀವು ಎಲ್ಲೂ ಹಣ ಒದಗಿಸಿಲ್ಲ. ನಾವೇನು ಮಾಡಬೇಕು ? ನಮಗೆ ಅರ್ಥ ಆಗುತ್ತಿಲ್ಲ. ಇವತ್ತಿನ ಪರಿಸ್ಥಿತಿಯಲ್ಲಿ, ಇವತ್ತಿನ ವ್ಯವಸ್ಥೆಯಲ್ಲಿ ಒಂದು ಗ್ರಾಮ ಪಂಚಾಯತಿ, ಇನ್ನೊಂದು ತಾಲ್ಲೂಕು ಪಂಚಾಯಿತಿ, ಇನ್ನೊಂದು ಜಿಲ್ಲಾ ಪಂಚಾಯಿತಿ ಇದೆ. ಎಲ್ಲಾ ಕೆಲಸಗಳೂ ತಾಲ್ಲೂಕು ಪಂಚಾಯಿತಿ ಗ್ರಾಮ ಪಂಚಾಯತಿ, ಜಿಲ್ಲಾ ಪಂಚಾಯಿತಿಯಲ್ಲಿ ನಡೆಯುತ್ತಿದೆ. ಇದು ಬಿಟ್ಟು ಬೇರೆ ಕಡೆಗೆ ಇಲ್ಲವೇ ಇಲ್ಲ. ಶಾಸಕರ ಪಾತ್ರ ಏನು? ಮಾನ್ಯ ಸಿದ್ಧರಾಮಯ್ಯನವರೇ, ಗಮನಿಸಿ. ಶಾಸಕರ ಕೆಲಸ ಏನು ? ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ ಅವರಿಗೇನೂ ವಿಕೇಂದ್ರಿಕರಣ ಮಾಡಬೇಡಿ ಎಂದು ಹೇಳಲು ಹೋಗುವುದಿಲ್ಲ. ಆದರೆ ಶಾಸಕರಿಗೆ ಕನಿಷ್ಟ ಒಂದು ಕೊಳವೆಬಾವಿ ಕೊಡುವುದಕ್ಕೂ ಇವತ್ತು ಶಕ್ತಿ ಇಲ್ಲ. ಒಂದು ಕೊಳವೆ ಬಾವಿ ಕೊಡಲು ನಮ್ಮಲ್ಲಿ ಶಕ್ತಿ ಇಲ್ಲ. ಲೋಕಸಭಾ ಸದಸ್ಯರಿಗೆ ಎರಡು ಕೋಟಿ ರೂಪಾಯಿ ಒಂದು ವರ್ಷದಲ್ಲಿ ಖರ್ಚು ಮಾಡುವುದಕ್ಕೆ ಅವಕಾಶ ಇದೆ. ನಮ್ಮ ಶಾಸಕರುಗಳಿಗೆ ಪಕ್ಷಾತೀತವಾಗಿ ನಾನು ಹೇಳುತ್ತಿದ್ದೇನೆ. ನಮ್ಮ ಶಾಸಕರುಗಳಿಗೆ ಕನಿಷ್ಟ 50 ಲಕ್ಷ ರೂಪಾಯಿಕೊಡಬೇಕು. ನಾನು ಒಂದು ಕೋಟಿ ರೂ. ಯನ್ನೇ ಕೇಳುತ್ತಿದ್ದೆ. ಇಡೀ ಸದನದ ಸದಸ್ಯರ ಪರವಾಗಿ ಒಕ್ಕೊರಲಿನಿಂದ ಹೇಳುತ್ತಿದ್ದೇನೆ 50 ಲಕ್ಷ ರೂಪಾಯಿ ಶಾಸಕರಿಗೆ ಕೊಡತಕ್ಕಂಥ ವ್ಯವಸ್ಥೆ ನೀವು ಮಾಡಿ. ಈಗ ಮಲೆನಾಡು ಮಂಡಲಿಯಲ್ಲಿ ದುಡ್ಡು ಇಲ್ಲ, ಅದನ್ನು ತೆಗೆಯಬಾಗದು

ಮಲೆನಾಡಿಗೆ ದುಡ್ಡು ಕೊಡಲೇ ಬೇಕು. ಗಡಿನಾಡಿಗೆ ದುಡ್ಡು ಇಲ್ಲ, ಅದಕ್ಕೆ ನೀವು ದುಡ್ಡು ಕೊಡಲೇಬೇಕು. ಅದನ್ನು ನೀವು ದುಡ್ಡು ಮಾಡಬಾರದು. ಗಡಿನಾಡಿಗೆ ದುಡ್ಡು ಕೊಡಲೇ ಬೇಕು. ಮತ್ತು ಬಯಲು ಸೀಮೆ ಅಭಿವೃದ್ಧಿಗೆ ದುಡ್ಡು ಇಲ್ಲ. ಬಯಲು ಸೀಮೆಗೆ ದುಡ್ಡು ಕೊಡಲೇ ಬೇಕು. ಆದರೆ ಶಾಸಕರಿಗೆ ಇಲ್ಲ. ನನಗೆ ಅನ್ನಿಸುತ್ತದೆ. ನಾವು ಶಾಸಕರಾಗುವ ಬದಲು ಗ್ರಾಮ ಪಂಚಾಯತಿಗೆ ಹೋಗಿ ಸದಸ್ಯರಾಗುವುದು ಈಗ ಒಳ್ಳೆಯದು. ಇಲ್ಲ ತಾಲ್ಲೂಕು ಪಂಚಾಯತಿಯ ಸದಸ್ಯರಾಗುವುದು ಒಳ್ಳೆಯದು. ಇಲ್ಲ ನಗರ ಮಹಾಪಾಲಿಕೆಯ ಸದಸ್ಯರು ಆಗುವುದು ಒಳ್ಳೆಯದು. ಈ ಶಾಸಕರು ನಾವೇ ಎಲ್ಲಾ ಶಾಸನ ಮಾಡುವವರು. ಹಣ ಕೊಡುವವರು ನಾವು. ಶಾಸನ ಮಾಡುವವರು ನಾವು ಈ ಸದನದಲ್ಲಿ ಒಪ್ಪಿಗೆ ಕೊಡುವುದು. ಹಣಕಾಸು ಪ್ರತಿ ಒಂದೂ ಇದ್ದಾಗ, ನಾವು ನಾಳೆ ನಮ್ಮ ಕ್ಷೇತ್ರಕ್ಕೆ ಹೋಗುತ್ತೇವೆ. ಹೋದಾಗ ಯಾರಾದರೂ ಬಂದು ಸ್ವಾಮಿ ಒಂದು ಕೊಳವೆ ಬಾವಿ ಹಾಕಿಸಿ ಎಂದರೆ ಇಲ್ಲ ಅಧಿಕಾರಿಗಳನ್ನು ಕೇಳಬೇಕು ಎನ್ನುತ್ತೇವೆ. ಅಧಿಕಾರಿಗಳನ್ನು ಕೇಳಿದರೆ ಅವರು ಗ್ರಾಮ ಪಂಚಾಯಿತಿಗೆ ಹೋಗಬೇಕು ಎನ್ನುತ್ತಾರೆ. ಈಗ ಗ್ರಾಮ ಪಂಚಾಯತಿಗೆ ಕೊಳವೆ ಬಾವಿ ರಿಪೇರಿಗೆ ಕೊಟ್ಟಿದ್ದೀರಿ. ಅವರಿಗೆ ದುಡ್ಡು ಕೊಟ್ಟಿಲ್ಲ. ಕೊಳವೆ ಬಾವಿ ಕೆಟ್ಟಿದೆ. ರಿಪೇರಿ ಆಗುವ ಹಾಗೆ ಇಲ್ಲ. ಜನಕ್ಕೆ ನೀರು ಇಲ್ಲ. ಇದೇನಿದು ಹಣೆ ಬರಹ ? ಗ್ರಾಮ ಪಂಚಾಯಿತಿಯಿಂದ ತೆಗೆದು ಅದನ್ನು ಬೇರೆ ಕಡೆಗೆ ಕೊಡಿ. ಆ ರಿಪೇರಿ ವ್ಯವಸ್ಯೆ ಏನು ಇದೆ ಆ ರಿಪೇರಿ ವ್ಯವಸ್ಥೆಗೆ ಒಂದು ಬೇರೆ ವ್ಯವಸ್ಥೆ ಮಾಡಿ, ಇಲ್ಲ ಎಂದರೆ ಕಷ್ಟ ಆಗುತ್ತದೆ. ನಾನು ಎಲ್ಲಿಯವರೆಗೆ ಹೋಗುತ್ತೇನೆ ಎಂದರೆ ಒಬ್ಬ ಚುನಾಯಿತನಾಗದೇ ಇರತಕ್ಕ ಒಬ್ಬ ಮಂಡಲಿಯ ಅಧ್ಯಕ್ಷರಿಗೆ ನೀವು ಕಾರಿಗೆ ಕೆಂಪು ದೀಪ ಹಾಕಲು ಅವಕಾಶ ಕೊಟ್ಟಿದ್ದೀರಿ. ಚುನಾಯಿತರಾದಂತಹ ಶಾಸಕರು ಏಕೆ ಹಾಕಿಕೊಳ್ಳಬಾರದು ಎಂದು ನಾನು ನೇರವಾಗಿ ಕೇಳುತ್ತೇನೆ. ಅವರಿಗೇನು ಎರಡು ಕೊಂಬಾ, ಎರಡು ಕೋಡು ಬಂದಿದೆಯಾ ? ಅವರು ಯಾರು ಎಂದು ನನಗೆ ಅರ್ಥ ಆಗಲಿಲ್ಲ. ಅವರು ಚುನಾವಣೆಯಲ್ಲಿ ಸೋತವರು. ಚುನಾವಣೆಯಲ್ಲಿ ಸೋತವರಿಗೆ, ಯಾವುದೋ ಒಂದು ಅನಾಥಾಶ್ರಮದಲ್ಲಿ ಕೊಟ್ಟ ಹಾಗೆ ಒಂದು ಬೋರ್ಡ್‌ಗಳನ್ನು ಹಾಗೂ ಇನ್ನಿತರ ಸೌಕರ್ಯ ಕೊಡುತ್ತಿದ್ದೀರಿ. ಇಲ್ಲಿ ಗೆದ್ದು, ಹಗಲೂ ರಾತ್ರಿ ಗೆದ್ದು ಹೋರಾಟ ಮಾಡಿ ಸೇವೆ ಮಾಡಿ ಬಂದಿರತಕ್ಕವರಿಗೆ ಕೊಡಿ. 224 ಜನ ಶಾಸಕರುಗಳಿಗೆ ಕಾರಿನ ಮೇಲೆ ಕೆಂಪು ದೀಪ ಹಾಕಲು ಅವಕಾಶ ಕೊಡಿ, ಕೆಂಪು ದೀಪ ಹಾಕಿಕೊಂಡರೆ ತಪ್ಪೇನೂ ಆಗುವುದಿಲ್ಲ ರಾಜ್ಯದಲ್ಲಿ ಲೋಕಸಭಾ ಸದಸ್ಯರಿಗೆ ಮಂತ್ರಿಯ ಸ್ಥಾನಮಾನ ಕೊಟ್ಟಿದ್ದೀರಿ. ಮತ್ತು ಎಲ್ಲಾ ಪಂಚಾಯಿತಿಯ ಅಧ್ಯಕ್ಷರಿಗೆ ಮಂತ್ರಿ ಸ್ಥಾನ ಕೊಟ್ಟಿದ್ದೀರಿ, ಉಪಾಧ್ಯಕ್ಷರಿಗೆ ಉಪ ಮಂತ್ರಿಯ ಸ್ಥಾನ ಕೊಟ್ಟಿದ್ದೀರಿ. ಶಾಸಕರನ್ನು ಏನು ಮಾಡಬೇಕು ಎಂದು ಇದ್ದೀರಿ ? ಇವರು ಎಲ್ಲಿಗೆ ಹೋಗಬೇಕು? ಯಾರ ಹತ್ತಿರ ಹೋಗಬೇಕು ? ಯಾರನ್ನು ಕೇಳಬೇಕು ? ನೀವೇ ಈ ಶಾಸಕರನ್ನು ರಕ್ಷಣೆ ಮಾಡಲಿಲ್ಲ ಎಂದರೆ, ನೀವೇ ಈ ಶಾಸಕರುಗಳಿಗೆ ಸಮಗ್ರವಾದ ಶಕ್ತಿಯನ್ನು

ಕೊಡಲಿಲ್ಲ ಎಂದರೆ ನಮ್ಮ ಕ್ಷೇತ್ರಗಳಲ್ಲಿ ಗತಿ ಏನು ? ಒಂದು ಸಾರಿ ಚುನಾವಣೆ ಆದ ಮೇಲೆ ಹಾಗೆ ಹೀಗೆ ಮಾಡಬಹುದು. ಪ್ರಾಮಾಣಿಕವಾಗಿ ನಾವು ವರ್ಷದಲ್ಲಿ ಕೆಲಸ ಮಾಡಬೇಕಾದರೆ ಜನ ನಾವು ಹೋದ ಕಡೆ ಕೇಳುತ್ತಾರೆ. ಇಲ್ಲಿಗೆ ಬನ್ನಿ ಅಲ್ಲಿಗೆ ಬನ್ನಿ ಎಂದು ಕೇಳುತ್ತಾರೆ, ಕೇಳಿದ ತಕ್ಷಣ, ಅಲ್ಲಿಗೆ ಹೋದ ತಕ್ಷಣ ನಾವೇನಾದರೂ ಕೆಲಸ ಮಾಡಬೇಕಾದರೆ, ಆ ಕೆಲಸಕ್ಕೆ ತಕ್ಷಣ ಕೊಡುವಂತಹ ಆ ಶಕ್ತಿ ನಮ್ಮಲ್ಲಿ ಇಲ್ಲ ಎಲ್ಲವನ್ನೂ ಕಿತ್ತು ಕೊಂಡಿದ್ದೀರಿ. ಆದ್ದರಿಂದ ಕನಿಷ್ಟ ನಿಮ್ಮ ಉತ್ತರದಲ್ಲಿ ಹೇಳಿ, ಉತ್ತರ ಕೊಡುವಾಗ ಶಾಸಕರುಗಳಿಗೆ 50 ಲಕ್ಷ ರೂಪಾಯಿ ಒಂದು ವರ್ಷಕ್ಕೆ ಕೊಡುತ್ತೇವೆಂದು ಹೇಳಿ. ಇದು ಸ್ಪಷ್ಟ ಆಗಲೇಬೇಕು, ನಿಮ್ಮ ಉತ್ತರದಲ್ಲಿ ಬರಲಿಲ್ಲ ಎಂದರೆ ಧರಣಿ ಮಾಡುತ್ತೇನೆ, ಅದನ್ನೂ ತಮಗೆ ಹೇಳಿದ್ದೇನೆ. ಕೊನೆಯದಾಗಿ ಒಂದು ವಿಚಾರ.

ಅಧ್ಯಕ್ಷರು : ಮಾನ್ಯ ನಾಗರಾಜ್ ಅವರೇ, ಬೇಗ ಮುಗಿಸಿ, 50 ನಿಮಿಷ ಆಗಿದೆ ದಯಮಾಡಿ, ತಾವು ದಯಮಾಡಿ ಮುಗಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ನಾನು ಇನ್ನು ಐದು ನಿಮಿಷದಲ್ಲಿ ಮುಗಿಸುತ್ತಿದ್ದೇನೆ. ನಾನು ಮಾನ್ಯ ಸಿದ್ಧರಾಮಯ್ಯನವರಲ್ಲಿ ಕಳಕಳಿಯ ಮನವಿ ಮಾಡುತ್ತಿದ್ದೇನೆ. ನಿಜಕ್ಕೂ ಎಲ್ಲರ ಅಭಿಪ್ರಾಯ. ಎಲ್ಲರ ಪ್ರೀತಿ ವಿಶ್ವಾಸ, ಒಂದು ನಿಮ್ಮ ಕಡೆಗೆ ಒಲವು ಬರುತ್ತದೆ, ಮುಂದೆ ನಿಮ್ಮ ಗ್ರಹಚಾರ ಹೇಗೆ ಇದೆಯೋ ಅದನ್ನು ನೋಡಿಕೊಳ್ಳೋಣ. ಆ ವಿಚಾರ ಬೇಡ. ನಾನು ಏಕೆ ಹೇಳುತ್ತೇನೆ ಎಂದರೆ ಈಗ ತಕ್ಷಣ ನೀವು ಆಯವ್ಯಯ ಮಂಡನೆ ಮಾಡುವಾಗ ಹೇಳಿ. 224 ಜನ ಅಂದರೆ ಸ್ವಲ್ಪ 125 ಕೋಟಿ ರೂಪಾಯಿ ಆಗುತ್ತದೆ. ಅಲ್ಲಿ ವಿಧಾನ ಪರಿಷತ್ ಸದಸ್ಯರು 75 ಎಲ್ಲಾ ಸೇರಿದರೆ 200 ಕೋಟಿ ರೂಪಾಯಿಗಿಂತ ಹೆಚ್ಚು ಆಗುವುದಿಲ್ಲ. ವರ್ಷಕ್ಕೆ 50 ಲಕ್ಷ ರೂ ಶಾಸಕರ ನಿಧಿಗೆ ನಾನು ಕೊಟ್ಟಿದ್ದೇ ಎಂದು ಈ ಸದನದಲ್ಲಿ ನೀವು ಹೇಳಿ. ಅದರ ಪರಿಸ್ಥಿತಿ ನಾನು ಹೇಳುತ್ತೇನೆ. ಇಡೀ ರಾಜ್ಯದ ಜನರೂ ನಿಮ್ಮನ್ನು ನಂಬುತ್ತಾರೆ. ಮತ್ತು ನಿಮ್ಮ ತೀರ್ಮಾನವೂ ಒಪ್ಪಿಗೆ ಆಗುತ್ತದೆ ಎನ್ನತಕ್ಕ ಮಾತನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನನಗೆ ಗೊತ್ತು, ಮುಗಿಸುತ್ತಿದ್ದೇನೆ ಬಹುಶಃ ಮುಖ್ಯಮಂತ್ರಿಗಳ ವಿಚಾರದಲ್ಲಿ ನನಗೆ ಅನಿಸುತ್ತಿದೆ. ಅನೇಕ ವಿಚಾರದಲ್ಲಿ ಮುಖ್ಯಮಂತ್ರಿಗಳು ಗೊಂದಲಲ್ಲಿರಬಹುದು. ಪಾಪ ಎರಡು ಪಕ್ಷದ ಸಮ್ಮಿಶ್ರ ಸರ್ಕಾರ ಅವರು ನಡೆಸತಕ್ಕಂಥದ್ದು ಇನ್ನು ಐದು ವರ್ಷ ಈ ಸರ್ಕಾರ ಬೀಳಬಾರದು ಎನ್ನತಕ್ಕ ಉದ್ದೇಶ ನನ್ನದು ಇದೆ. ಅದರಲ್ಲಿ ಏನೂ ಬೇರೆ ಮಾತಿಲ್ಲ. ಆದರೆ ಬೀಳತಕ್ಕಂಥ ವ್ಯವಸ್ಥೆಗೆ ನೀವು ಹೋಗಬಾರದೆಂಬುದು ನನ್ನ ಕಳಕಳಿಯ ಮನವಿ. ಏಕೆಂದರೆ, ಐದು ವರ್ಷಗಳ ಕಾಲ ಜನಪ್ರತಿನಿಧಿಗಳಾಗಿರಬೇಕೆಂದು ಜನರು ನಮ್ಮನ್ನು ಸಂವಿಧಾನಬದ್ಧವಾಗಿ ಚುನಾಯಿಸಿ ಕಳುಹಿಸಿದ್ದಾರೆ. ಆದರೆ, ನಿಮ್ಮ ಯಾವುದೋ ಪ್ರತಿಷ್ಠೆಗಳಿಗೆ, ಮುಖಂಡರ ಪ್ರತಿಷ್ಠೆಗಳಿಗೆ ಮಾನ್ಯ ಶಾಸಕರುಗಳು ಈಡಾಗದೆ, ತಾವುಗಳೆಲ್ಲರೂ ಎಚ್ಚರವಾಗಿದ್ದುಕೊಂಡು ಯಾವತ್ತಾದರೂ ಒಂದು ದಿವಸ 'ಸರ್ಕಾರ ಬೀಳುತ್ತದೆಂದಾಗ, ಈ ಸರ್ಕಾರವನ್ನು ಬೀಳಿಸುವುದಕ್ಕೆ ನಾವು ತಯಾರಾಗಿಲ್ಲ'

ಎಂದು ಆತ್ಮಸಾಕ್ಷಿಯಿಂದ ಹೇಳಲು ತಯಾರಾಗಿಬೇಕಾಗಿರುತ್ತದೆ. ಈಗಾಗಲೇ ನಿಮ್ಮ ರಾಷ್ಟ್ರೀಯ ನಾಯಕರು ಕಾರಿಡಾರ್ ಹಗರಣದ ಬಗ್ಗೆ ಸಿಬಿಐ ತನಿಖೆಯಾಗಬೇಕೆಂದು ಹೇಳುತ್ತಿದ್ದಾರೆ. ಹೊರಗಡೆ ಹೋರಾಟ, ಒಳಗಡೆ ಬೆಂಬಲ. ಇದೇನೆಂದು ನನಗೆ ಅರ್ಥವಾಗುತ್ತಿಲ್ಲ. ಒಳಗೆ ಬೆಂಬಲ ಕೊಡುವುದು. ಹೊರಗಡೆ ಹೋರಾಟ ಮಾಡುವುದು ಮುಖ್ಯಮಂತ್ರಿಗಳ ಗತಿ ಏನಾಗಿದೆಯೆಂಧರೆ, ಒಂದು ಕಡೆ ನಿಮ್ಮ ರಾಷ್ಟ್ರೀಯ ನಾಯಕರು ಅವರು ಈಗ ಅವರನ್ನು ಬರೀ ಉಳಿಸಿದ್ದೀರಿ, ಅದನ್ನು ರೆಡಿಯಾಗಿದ್ದಾರೆ. ಕಿತ್ತುಕೊಂಡರೆ ಮುಗಿದುಹೋಯಿತು Close ಅದಕ್ಕೋಸ್ಕರ ಕೀಳದ ರೀತಿಯಲ್ಲಿ ಎಲ್ಲಿಯೋ ಒಂದು ಕಡೆ ಮುಖ್ಯಮಂತ್ರಿಗಳನ್ನು ಉಳಿಸಬೇಕು, ಈಗಾಗಲೇ ಸಾಕಷ್ಟು ಒತ್ತಡಗಳಿಂದಾಗಿ ರಾಷ್ಟ್ರೀಯ ನಾಯಕರು ಅವರು ಕಿತ್ತುಕೊಂಡಿದ್ದಾರೆ. ಕಿತ್ತುಕೊಂಡಿದ್ದಾರೆ ಹೀಗೆ ಎಲ್ಲವನ್ನೂ ಕಿತ್ತುಕೊಂಡು ಈಗ ಅವರು ಒಂದು ನಮ್ಮ ರಾಜ್ಯದ ಮುಖ್ಯಮಂತ್ರಿಗಳು

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿ) : ನಮ್ಮ ರಾಷ್ಟ್ರೀಯ ಅಧ್ಯಕ್ಷರು ಎಲ್ಲಾ ಕಿತ್ತುಕೊಂಡಿದ್ದಾರೆಂದು.... ಈ ರೀತಿ ಹೇಳಬಾರದು It is not correct ತಾವು ಯಾರಿಗೆ ಈ ತರಹ ಹೇಳುತ್ತಿದ್ದೀರಿ ? ನಮ್ಮ ರಾಷ್ಟ್ರೀಯ ಅಧ್ಯಕ್ಷರನ್ನು ಕುರಿತಾಗಿಯೇ ?

ಶ್ರೀ ವಾಟಾಳ್ ನಾಗರಾಜ್ : ಹೌದು ಕುರಿತಾಗಿ ಹೇಳುತ್ತಿದ್ದೇನೆ.

ಶ್ರೀ ಸಿದ್ಧರಾಮಯ್ಯ : ಕಿತ್ತುಕೊಂಡಿದ್ದು ಯಾರು ?

ಶ್ರೀ ವಾಟಾಳ್ ನಾಗರಾಜ್ : ಈಗ ಧರ್ಮಸಿಂಗ್‌ರವರು ಮುಖ್ಯಮಂತ್ರಿ ತಾನೇ ?

ಶ್ರೀ ಸಿದ್ಧರಾಮಯ್ಯ ; ಮಾನ್ಯ ಅಧ್ಯಕ್ಷರೆ, ಅವರು ಯಾವ Context ನಲ್ಲಿ ಹೇಳಿದ್ದಾರೆಂದು ಗೊತ್ತಿಲ್ಲದೆ ನೀವು ಎಲ್ಲವನ್ನೂ ಪ್ರಸ್ತಾಪಿಸಲು ಹೋಗಬೇಡಿ, ಅವರು ಏನು ಹೇಳಿದ್ದಾರೆಂದರೆ, 'ಈ ಹಿಂದೆ ಕಾರಿಡಾರ್ ಹಗರಣಕ್ಕೆ ಸಂಬಂಧಿಸಿದಂತೆ ನೀವು ಸಿಬಿಐ ಎನ್‌ಕ್ವೇರಿ ಆಗಬೇಕೆಂದು ಕೇಳಿದ್ದೀರಿ, ಈಗಲೂ ಕೇಳುತ್ತಿದ್ದೀರಾ ? ಎಂಬ ಪ್ರಶ್ನೆಗೆ 'ಹೌದು, ಆ ನಿಲುವಿಗೆ ನಾನು ಬದ್ಧನಾಗಿದ್ದೇನೆ' ಎಂದು ಅವರು ಹೇಳಿದ್ದಾರೆ. ಆದುದರಿಂದ, ನಮ್ಮ ಸರ್ಕಾರ ನಡೆಸುವುದಕ್ಕೂ ಮುಖ್ಯ ಎಂದು ಹೇಳುವುದಕ್ಕೂ ಯಾವುದೇ ಸಂಬಂಧವಿಲ್ಲ, ಗೊತ್ತಾಯಿತಲ್ಲಾ ಸಾಮಾನ್ಯ ಕನಿಷ್ಠ ಕಾರ್ಯಕ್ರಮವನ್ನು ಸರ್ಕಾರದಲ್ಲಿರುವ ನಾವಿಬ್ಬರೂ ಒಪ್ಪಿಕೊಂಡು ನಡೆಸುತ್ತಿದ್ದೇವೆ. ಈ ಮಧ್ಯೆ ವಿಚಾರವನ್ನು ಇಲ್ಲಿ ಪ್ರಸ್ತಾಪಿಸುವುದು ಅನಗತ್ಯ.

ಶ್ರೀ ವಾಟಾಳ್ ನಾಗರಾಜ್ : ನಾನು ಹೇಳಲಿಲ್ಲ, ನಾನು ರಾಷ್ಟ್ರೀಯ ನಾಯಕರೆಂದು ಹೇಳಿದ್ದು ನೀವು ಯಾರೆಂದು ಕೇಳಿದಿರಿ, ಅದಕ್ಕೆ ನಾನು ಅವರ ಹೆಸರನ್ನು ಹೇಳಿದೆ.

ಶ್ರೀ ಸಿದ್ಧರಾಮಯ್ಯ : ನಮ್ಮ ಪಕ್ಷದ ರಾಷ್ಟ್ರೀಯ ನಾಯಕರು

ಮಾನ್ಯ ಸದಸ್ಯರು : ಹೇಳಲಿಲ್ಲವೆಂದು ಹೇಳುತ್ತಿದ್ದಾರೆ, ಹಾಗಾದರೆ, ನಾವು ರಾಷ್ಟ್ರೀಯ ಅಧ್ಯಕ್ಷರೆಂದು ಯಾರನ್ನು ಭಾವಿಸಬೇಕು ? ಅವರ ಮಾತು ಅನವಶ್ಯಕ.

ಮಾನ್ಯ ಸದಸ್ಯರು : ಸನ್ಮಾನ್ಯ ಅಧ್ಯಕ್ಷರೆ, ಬೇಕಾಗಿರುವ ವಿಷಯಗಳನ್ನು ಮಾತ್ರ ಪ್ರಸ್ತಾಪಿಸಲು ಅನುಮತಿ ಕೊಡಬೇಕು. ಬೇಡದಿರುವ ವಿಷಯಗಳನ್ನೇಕೆ ಇಲ್ಲಿ ಪ್ರಸ್ತಾಪಿಸಬೇಕು ? ರಾಷ್ಟ್ರೀಯ ಅಧ್ಯಕ್ಷರ ವಿಚಾರ ಇಲ್ಲೇಕೆ ಬರಬೇಕು ?

ಮಾನ್ಯ ಸದಸ್ಯರು : ಅವರ ವಿಚಾರವನ್ನು ಸದನದಲ್ಲಿ ಮಾತನಾಡುವುದು ತಪ್ಪು ಆಯವ್ಯಯದ ಮೇಲೆ ಮಾತ್ನಾಡುವಾಗ ದಯಮಾಡಿ ಅಷ್ಟಕ್ಕೆ ಮಾತ್ರ ಸೀಮಿತಗೊಳಿಸಿ ಮಾತನಾಡಬೇಕು. ಯಾವ ರಾಷ್ಟ್ರೀಯ ಪಕ್ಷದ ಅಧ್ಯಕ್ಷರ ಕುರಿತಾಗಿ ಮಾತನಾಡಿದ್ದರೋ, ಅದನ್ನು ಗಂಭೀರವಾಗಿ ಪರಿಗಣಿಸಬೇಕು. ಮತ್ತು ಈ ರೀತಿ ಮಾತನಾಡುವುದಕ್ಕೆ ಅವಕಾಶ ಕೊಡಬಾರದು. ಮಾನ್ಯ ವಾಟಾಳ್ ನಾಗರಾಜ್‌ರವರು ಸದನದಲ್ಲಿ ಆಡಿರುವ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ : ಈ ಸರ್ಕಾರ ಐದು ವರ್ಷಗಳ ಕಾಲ ಇರಬೇಕೆನ್ನುವ ಪೈಕಿ ನಾನೂ ಒಬ್ಬನಾಗಿದ್ದೇನೆ. ಈ ಸರ್ಕಾರ ಕೆಳಗೆ ಬೀಳುತ್ತದೆನ್ನುವ ಸಂದರ್ಭದಲ್ಲಿ ನಿಮಗೆ ಒಂದು ಮತ ಬೇಕಾದರೆ ನಾನು ಕೊಡುವುದಕ್ಕೆ ಸಿದ್ಧ. ಅದರ ಬಗ್ಗೆ ಬೇರೆ ಮಾತಿಲ್ಲ.

ಮಾನ್ಯ ಸದಸ್ಯರು : ಅವರು ತಮ್ಮ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಬೇಕು.

ಮಾನ್ಯ ಸದಸ್ಯರು ; ವಾಟಾಳ್ ನಾಗರಾಜ್‌ರವರು ನಮ್ಮ ರಾಷ್ಟ್ರೀಯ ಅಧ್ಯಕ್ಷರ ವಿಚಾರ ಪ್ರಸ್ತಾಪ ಮಾಡಿದ್ದಾರೆ. ಅವರು ತಮ್ಮ ಮಾತನ್ನು ವಾಪಸ್ಸು ತೆಗೆದುಕೊಳ್ಳಲೇಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

ಅಧ್ಯಕ್ಷರು : ಪ್ರಥಮ ಬಾರಿಗೆ ವಿಧಾನಸಭೆಗೆ ಆರಿಸಿ ಬಂದಿರುವ ಸದಸ್ಯರು ಸದನದಲ್ಲಿ ಈ ರೀತಿ ವರ್ತಿಸುವುದು ಸರಿಯಲ್ಲ.

ಮಾನ್ಯ ಸದಸ್ಯರು : ಮಾನ್ಯ ಸಭಾಧ್ಯಕ್ಷರೆ, ಸದಸ್ಯರಾದ ವಾಟಾಳ್ ನಾಗರಾಜ್‌ರವರು ಆಡಿರುವ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು : ದಯಮಾಡಿ ತಾವು ಕುಳಿತುಕೊಳ್ಳಬೇಕು.

ಮಾನ್ಯ ಸದಸ್ಯರು : ಆಯವ್ಯಯ ಅಂದಾಜು ಮೇಲೆ ಚರ್ಚೆ ಮಾಡುವ ಸಂದರ್ಭದಲ್ಲಿ ಸನ್ಮಾನ್ಯ ಬಗ್ಗೆ ಪ್ರಸ್ತಾಪಿಸುವುದು ತಪ್ಪು.

ಅಧ್ಯಕ್ಷರು : ನಾನು ಕಡತವನ್ನು ತರಿಸಿ, ನೋಡಿ, ತೆಗೆಸಿ ಹಾಕುತ್ತೇನೆ. ತಾವೆಲ್ಲರೂ ದಯಮಾಡಿ ಕುಳಿತುಕೊಂಡು ಸದನದ ಕಲಾಪ ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕು.

ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಯಾರ ಬಗ್ಗೆ ಮಾತನಾಡುತ್ತಿದ್ದೇವೆಂಬ ಎಚ್ಚರಿಕೆ ಅವರಿಗೆ ಇರಬೇಕು. ಅವರು ಹಿರಿಯ ಸದಸ್ಯರಾಗಿ ಈ ರೀತಿ ಮಾತನಾಡುವುದು ಸರಿಯಲ್ಲ. ತಾವು ಹಿರಿಯ ಸದಸ್ಯರಿಗೆ ಅವಕಾಶ ಕೊಡುವ ಸಂದರ್ಭದಲ್ಲಿ ಇಷ್ಟೊಂದು ಅವಕಾಶ ಕೊಟ್ಟು ಈ ರೀತಿ ಮಾತನಾಡಲು ಅವಕಾಶ ಕೊಡಬಾರದು.

ಅಧ್ಯಕ್ಷರು ; ದಯಮಾಡಿ ಕುಳಿತುಕೊಳ್ಳಿ. ಸದಸ್ಯರು ಮಾತನಾಡಲು ಅವಕಾಶ ಮಾಡಿಕೊಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಕೊನೆಯದಾಗಿ ತಮ್ಮ ಮೂಲಕ ನಾನು ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುವುದೇನೆಂದರೆ, ಸರ್ಕಾರಿ ಆಸ್ಪತ್ರೆಗಳು ಯಮಲೋಕದಂತಾಗಿದೆ ! ಸರ್ಕಾರಿ ಆಸ್ಪತ್ರೆಗಳತ್ತ ತಾವು ಸಮಗ್ರವಾಗಿ ಗಮನಹರಿಸಬೇಕು. ರಾಜ್ಯದ ಅನೇಕ ಆಸ್ಪತ್ರೆಗಳಿಗೆ ತಾವು ಭೇಟಿ ನೀಡಿ ಪರಿಸ್ಥಿತಿ ಏನೆಂದು ತಿಳಿದುಕೊಳ್ಳಬೇಕು. ತಾಲ್ಲೂಕು ಆಸ್ಪತ್ರೆಗಳು ಎಷ್ಟು ಹದಗೆಟ್ಟಿದೆಯೆಂದರೆ, ಕರ್ನಾಟಕದ ಬಹುತೇಕ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರಿಲ್ಲ, ಔಷಧಿಗಳಿಲ್ಲ. ಕನಿಷ್ಠ ಹಾವು ಕಡಿದರೆ, ನಾಯಿ ಕಚ್ಚಿದರೆ ಔಷಧಿ ಇಲ್ಲ ಮನುಷ್ಯನಿಗೆ ಕ್ಯಾನ್ಸರ್, ಹೃದಯ ರೋಗ ಇಲ್ಲದೆ ಹಾವು, ನಾಯಿ, ಚೇಳು ಕಡಿದರೆ, ಕಚ್ಚಿದರೆ ಚಿಕಿತ್ಸೆ ಮಾಡಲು ಉಪಯೋಗಿಸುವ ಔಷಧಿಯೂ ನಮ್ಮಲ್ಲಿಲ್ಲ. ದೊಡ್ಡ ದೊಡ್ಡ ಸರ್ಕಾರಿ ಆಸ್ಪತ್ರೆಗಳೆಲ್ಲವೂ ನಾನು ಆಗಲೇ ಹೇಳಿದಂತೆ ಯಮಲೋಕವನ್ನೂ ಮೀರಿಸುವ ಕೆಟ್ಟ ಪರಿಸ್ಥಿತಿಯಲ್ಲಿವೆ. ಈ ಆಸ್ಪತ್ರೆಗಳಿಗೆ ವೈದ್ಯರುಗಳು, ಪೀಠೋಪಕರಣಗಳು, ಒಳ್ಳೆಯ ಔಷಧಿ ಹಾಗು ಉತ್ತಮ ವ್ಯವಸ್ಥೆ ಇಲ್ಲ. ನಾನು ತಮಗೆ ಏಕೆ ಇದನ್ನೆಲ್ಲಾ ಹೇಳುತ್ತಿದ್ದೇನೆಂದರೆ, ಎಲ್ಲರೂ ಖಾಸಗಿ ನರ್ಸಿಂಗ್ ಹೋಮ್‌ಗಳಿಗೆ ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಆದುದರಿಂದ, ಯಮಲೋಕ ಸದೃಶವಾಗಿರುವ ಸರ್ಕಾರಿ ಆಸ್ಪತ್ರೆಗಳನ್ನು ಸಂಪೂರ್ಣವಾಗಿ, ಸಮಗ್ರವಾಗಿ ಪುನಶ್ಚೇತನಗೊಳಿಸುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮಾನ್ಯ ರಾಜೇಂದ್ರನ್‌ರವರೇ, ನಾನು ಸ್ವಲ್ಪ lenient ಆಗಿ ಸಮಯ ಕೊಡುತ್ತಿದ್ದೇನೆ. ನಿಮಿಗಿರುವುದು 30 ನಿಮಿಷ ಮಾತ್ರ. ಈಗ 50 ನಿಮಿಷಗಳ ಕಾಲ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ತೆಗೆದುಕೊಂಡಿದ್ದಾರೆ, ಆದುದರಿಂದ, ತಾವು ಆದಷ್ಟು ಬೇಗ ಮುಗಿಸಬೇಕು. ಅವರ (ಬಿಜೆಪಿ) ಕಡೆ 79 ಶಾಸಕರಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ : ನಮ್ಮ ಹಣೆಬರಹವೇನೆಂದರೆ, ನಮ್ಮ ಪಕ್ಷದ ವತಿಯಿಂದ 79 ಮಂದಿ ಗೆದ್ದು ಶಾಸಕರಾಗಿ ಬಂದಿದ್ದರೂ ಸದನದಲ್ಲಿ ಮಾತನಾಡಲು ಎರಡು ಗಂಟೆ ಇಲ್ಲವೇ ಎರಡೂವರೆ ಗಂಟೆ ಕಾಲವೂ ಸಿಗುವುದಿಲ್ಲ.

ಅಧ್ಯಕ್ಷರು : ತಾವು ಸಹಕರಿಸಬೇಕು.

†ಶ್ರೀ ಎಸ್. ರಾಜೇಂದ್ರನ್ (ಕೆಜಿಎಫ್) : ಸನ್ಮಾನ್ಯ ಸಭಾಧ್ಯಕ್ಷರೇ, ಈ ಬಜೆಟ್‌ನಲ್ಲಿ ಬಡವರಿಗೆ ಅನುಕೂಲವಾಗುವ ದೃಷ್ಟಿಯಿಂದ ಬಹಳ ಚೆನ್ನಾಗಿ ಮಾಡಿದ್ದೀರೆಂದು ಮಾನ್ಯ ಉಪ ಮುಖ್ಯಮಂತ್ರಿಯವರನ್ನು ಎದುರಿಗೆ ನೋಡಿದ ತಕ್ಷಣ ಎಲ್ಲರೂ ಹೊಗಳುತ್ತಾರೆ. Scheduled castes, scheduled tribes, backward classes, minorities ಗಳಿಗೆ ಸಂಬಂಧಿಸಿದಂತೆ ಬಜೆಟ್‌ನಲ್ಲಿ ಪ್ರಸ್ತಾಪಿಸಿದ್ದೀರಿ. scheduled caste, scheduled tribe, backward classes,

minorities ಇವರ ಹೊರತಾಗಿ ಇನ್ಯಾರಿದ್ದಾರೆ ? Upper caste - 0.1% ಇವರುಗಳ ಅಭಿವೃದ್ಧಿಗಾಗಿ ಆಯವ್ಯಯದಲ್ಲಿ ಏನು ತಿಳಿಸಿದ್ದಾರೆಂದರೆ, ತಮಗೆ ಪರಿಶಿಷ್ಟ ಜಾತಿಯವರ ಮೇಲೆ ಎಷ್ಟು ಪ್ರೀತಿ ಇದೆಯೆಂದರೆ, can't you give SC/ST this much, then backward classes this much, then minorities this much ? ಮೂರು ವರ್ಗದ ಜನರನ್ನೂ ಸೇರಿಸಿ, SC/ST, minority, backward class ಇಷ್ಟೇ ಜಾತಿಗಳು ಇರುವುದು. ಇನ್ಯಾರಿದ್ದಾರೆ? Normally, the upper caste is only two percent throughout India. In your budget, You have just given the backlog. Ten crores of rupees for scheduled caste ten crores of rupees for backward classes, five crores of rupees for minorities, five crores of rupees for SC/ST. I will not go deeply because you have made this very clearly. SC/ST development ನಲ್ಲಿ 30 residential school ಕೊಡುತ್ತೇವೆ ಎಂದು ಹೇಳಿದ್ದಾರೆ ಒಂದು ಉದಾಹರಣೆ ಕೊಡುತ್ತೇನೆ. ಪೂರ್ತಿ ಹೇಳಲು ಸನ್ಮಾನ್ಯ ಅಧ್ಯಕ್ಷರು ಸಮಯ ಕೊಟ್ಟಿಲ್ಲ. ಮೂವತ್ತರಲ್ಲಿ ಹೇಗೆ separate ಮಾಡಿದ್ದಾರೆಂದರೆ, 10 scheduled casteಗೆ, 10 backward class ಗೆ, ಇನ್ನೊಂದು 5 minorities ಮತ್ತು –5 scheduled tribesಗೆ. ಹಾಗಾದರೆ. ನೀವು overall ಏನು ಖರ್ಚು ಮಾಡುತ್ತಿರೋ. ಅದರಲ್ಲಿ ಶೆಡ್ಯೂಲ್ಡ್ ಕ್ಯಾಸ್ಟ್‌ಗೆ ಬರೀ 10 ಪರ್ಸೆಂಟ್ ಮಾತ್ರವೇ ಖರ್ಚು ಮಾಡುತ್ತೀರಿ. equal ಆಗಿ backward classಗೆ ಅದನ್ನೇ ಕೊಡುತ್ತೇವೆ. There is no question of your improving scheduled castes and scheduled tribes ? ನಾವು ಭಾಷಣ ಮಾಡುವುದೆಲ್ಲಾ ಬಡವರ ಪರವಾಗಿ, ಈಗ ಸಿ.ಇ.ಟಿ. ಬಗ್ಗೆ ಮಾತನಾಡಿದ್ದೇನು ? ಪಾಪ scheduled caste ಜನ, ಅವರ ಹತ್ತಿರ ದುಡ್ಡಿಲ್ಲ, ಅವರು ಹೇಗೆ ಮೆಡಿಕಲ್, ಇಂಜಿನಿಯರಿಂಗ್ ಓದುವುದು? ಇವೆಲ್ಲಾ ಭಾಷಣದಲ್ಲಿದೆ. Have you brought it practically ? you have not. I don't know how you are going to rectify this. ನಿಜ ತಾನೆ ? ಇದು. ಸುಮ್ಮನೆ ಹೇಳಿದ್ದನ್ನೇ ಹೇಳಿಕೊಂಡು ಹೋಗುವುದಕ್ಕೆ ನನಗೂ ಇಷ್ಟವಿಲ್ಲ. Come to the point. 'ಬೆಂಗಳೂರು ಪ್ರದೇಶದಲ್ಲಿ ಕನ್ನಡಿಗರೇ ಇಲ್ಲ' ಎಂದು ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಹೇಳಿದರು O.K. fine. ಕನ್ನಡಿಗರು ಇಲ್ಲವೆಂದರೆ, ಇನ್ಯಾರು ಇದ್ದಾರೆ ? ದುಬಾಯ್‌ನವರು ಇದ್ದಾರೆಯೇ ? ಅರಬ್‌ನಿಂದ ಬಂದವರಿದ್ದಾರೆಯೇ ? ಇದೆಲ್ಲವನ್ನೂ ಹೇಳುವುದಕ್ಕೆ ನಾನು ಹೋಗುವುದಿಲ್ಲ. ಕರ್ನಾಟಕದಲ್ಲಿ Universally, 40% of the revenue is coming from the Bangalore city, 50 ಪರ್ಸೆಂಟ್ ಎಂದೇ ಇಟ್ಟುಕೊಳ್ಳಿ. Let it be 40 or 45%. what improvements have you made in this Bangalore City ? Former Chief Minister Sri S.M. Krishna ರವರು Bangalore City ಯನ್ನು develop ಮಾಡಿಯೇ ಈಗ ಕಾಂಗ್ರೆಸ್‌ನಲ್ಲಿ ಅವರಿಗೆ ಸೀಟು ಸಿಗಲಿಲ್ಲ. ನಾವು ರೂರಲ್ ಸ್ಪೆಡ್ ತೆಗೆದುಕೊಂಡು ಹೋದರೆ ನಮಗೆ ಬೇಕಾದಷ್ಟು seat ಗಳು next time

ಸಿಕ್ಕತ್ತೆ ಎಂದು ತಾನೇ ನಿಮ್ಮ idea.? Otherwise, why have you not given more importance to this Bangalore City ? Are they not giving 45% revenue ? ಒಟ್ಟು 100% ನಲ್ಲಿ 45% revenue Bangalore City ಯಿಂದ ಬರುತ್ತದೆ. ಅದರ ಜೊತೆಗೆ ನಾವೇನು ಮಾತನಾಡಿದ್ದೇವೆ. Environment should be retained, pollution should not be there. If that is so, You are supposed to give more importance for I.T. technology park, ಎಲ್ಲಿ pollution ಇದೆ. ಎಲ್ಲಿ environment disturbance ಇದೆ ಅಲ್ಲಿಗೆ you have not given anything in this budget, what is the intention behind it, You are thinking in terms of political gain. Next election ನಲ್ಲಿ ನಾವು ಹೇಗೆ ಗೆದ್ದು ಬರುವುದು ಎಂಬ idea ತಾನೆ ? It is not in the interest of people which is important for you. No.2, you have stated very clearly in the budget on excise department. ಅದರಲ್ಲಿ ಏನು ಹೇಳುತ್ತೀರಿ ? ಪ್ರೈವೇಟ್‌ನವರಿಗೆ ಕೊಡುತ್ತೇವೆ ಎಂಬ. ನಮ್ಮ ಸರ್ಕಾರದಲ್ಲಿ ಅದನ್ನು ಸರಿಯಾಗಿ ಸರಿಪಡಿಸಿಲ್ಲ. control ಇಲ್ಲ. income ಕಡಿಮೆಯಾಗುತ್ತದೆ. They have not taken much care, Etc, ಸರ್ಕಾರದ ಬಟ್ಟೆಯನ್ನು ಒಬ್ಬ Constable ಹಾಕಿಕೊಂಡು ಹೋದರೆ ಸುಮಾರು ಹತ್ತು ಜನ alert ಆಗುತ್ತಾರೆ. ಸಾವಿರ ಜನರ ಮಧ್ಯೆ ಒಬ್ಬ Sub-Inspector ಹೋದರೆ ಆಗುತ್ತಾರೆ. ಅದು uniformಗೆ ಇರುವ ಗೌರವ. ಸರ್ಕಾರದ official ಇಲ್ಲದಿದ್ದರೆ ನಿಮಗೆ ಎಷ್ಟು ತೊಂದರೆಯಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. If you hand it over to the private people, will they manage better than the Government ? No. You just think over it.ಅದರ ಜೊತೆಗೆ most of the people are dying by spending all their earnings on the single digit lottery and on the line lottery. ಆದ್ದರಿಂದ ಜನರಿಗೋಸ್ಕರ ನಾವು ಅದನ್ನು ಸ್ಟಾಪ್ ಮಾಡಿದ್ದೇವೆ ಎಂದು ಹೇಳಿದ್ದೀರಿ. Good ಅಷ್ಟು ಪ್ರೀತಿ ಜನರ ಮೇಲೆ ಇಟ್ಟುಕೊಂಡಿರುವವರು ತಾವು ಪ್ರೈವೇಟ್‌ನವರಿಗೆ arrack manufacture ಮಾಡಲು ಕೊಟ್ಟರೆ ಅವನು ಅಷ್ಟು clean ಆಗಿ maintain ಮಾಡಿ ಜನರಿಗೆ ಒಳ್ಳೆಯ ರೀತಿ ಮಾಡಿಕೊಡುವವನಿದ್ದಾನಾ? No. He will appoint an agent to do it. ಯಾವುದೋ ಒಂದು ರೀತಿಯಲ್ಲಿ liquor ಮಾಡುತ್ತಾನೆ, ಜನರಿಗೆ sale ಮಾಡುತ್ತಾನೆ. He wants to make more money and earn more profit. That is his goal. ಸಾವಿರಾರು ಜನ ಸತ್ತು ಹೋದಮೇಲೆ ತಾವು red light car ನಲ್ಲಿ ಹೋಗಿ ಅವರನ್ನು convince ಮಾಡುವುದಾ ? ಇದು ಸರಿನಾ ? You think over it. Are they going to be more intersted than you ? How do you safeguard the people ? ಹೇಗೆ ಮಾಡುತ್ತಾರೆ ಅವರು ? ತಾವು ಹೇಳಬೇಕಾದರೆ ಹೇಳಿ. I will just clarify. Private agent ಸರ್ಕಾರಕ್ಕಿಂತ better ಕೆಲಸ ಮಾಡುತ್ತಾನಾ ? No, not at all. They will have an idea of profit motto.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) :. ಹೊಸದಾಗಿ arrack policy ಮಾಡಿದ್ದೇವಲ್ಲಾ ಅದನ್ನು ತಾವು ಸಂಪೂರ್ಣವಾಗಿ ಅರ್ಥ ಮಾಡಿಕೊಂಡಿಲ್ಲ ಎಂದು ನಾನು ಭಾವಿಸುತ್ತೇನೆ. ನಾವು ಪ್ರೈವೇಟ್‌ನವರಿಗೆ ಇದನ್ನು ಸಂಪೂರ್ಣವಾಗಿ ಕೊಟ್ಟುಬಿಟ್ಟಿಲ್ಲ. ಸರ್ಕಾರ rectified spirit ಕೊಡತಕ್ಕಂಥದ್ದು arrack manufacture ಮಾಡತಕ್ಕಂಥವರಿಗೆ. ಅವರು rectified spirit manufacture ಮಾಡುವುದನ್ನು ಅವರಿಗೇ ಕೊಟ್ಟಿದ್ದೇವೆ. Rectified spirit ಅವರೇ ತೆಗೆದುಕೊಳ್ಳಬೇಕು. ನಾವು supply ಮಾಡುತ್ತಿದ್ದದ್ದು ಇಲ್ಲ. ಆದರೆ rectified spirit ನಮ್ಮದು ಪಾನೀಯ ನಿಗಮ ಇದೆಯಲ್ಲಾ ಅದರ ಮೂಲಕ chanalize ಆಗುತ್ತದೆ. ನಮ್ಮ ಹಿಡಿತದಲ್ಲೇ ಇದೆ. Quality ಮತ್ತು quantity ಎರಡನ್ನೂ ಕೂಡ ನಾವೇ ನೋಡಿಕೊಳ್ಳುವಂಥದ್ದು. ಎಮ್.ಎಸ್.ಐ.ಎಲ್.ನವರೇ ನೋಡಿಕೊಳ್ಳತಕ್ಕಂಥದ್ದು ನಾವು ನೋಡುವುದಲ್ಲದೇ ಮೂರನೇ private agency quality control ಮಾಡತಕ್ಕಂಥದ್ದು quantity control ಮಾಡತಕ್ಕಂಥದ್ದೂ ಕೂಡ ಮಾಡುತ್ತೇವೆ, ಇದರ ಒಟ್ಟಾರೆ ಉದ್ದೇಶವೇನೆಂದರೆ seconds ಏನೂ ನಡೆಯುತ್ತಿತ್ತು ಅರ್ರ್ಯಾಕ್‌ನಲ್ಲಿ ಆ seconds ನ್ನು ತಪ್ಪಿಸಬೇಕೆನ್ನುವ ಉದ್ದೇಶಕ್ಕಾಗಿ, ಇದನ್ನು ಮಾಡಿದ್ದೇವೆ, ಸಾರಾಯಿಯನ್ನು ಕುಡಿಯತಕ್ಕಂಥ ಎಷ್ಟು ಜನ ಕುಡಿಯುತ್ತಾರೆ. ನಾವು ಹೆಚ್ಚು ಕುಡಿಯಿರಿ ಎಂದು ಹೇಳುವುದಕ್ಕೆ ಹೋಗಿಲ್ಲ. ಸಾರಾಯಿ ಕುಡಿಯದಿರುವವರಿಗೆಲ್ಲಾ ಕುಡಿಯಿರಿ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಯಾರು ಯಾರು ಸಾರಾಯಿ ಕುಡಿಯುತ್ತಾರೆ. ಕುಡಿದ ಮೇಲೆ ಅದರ ಮೇಲೆ duty ಹಾಕಬೇಕಲ್ಲಾ ? ಕೆಲವಕ್ಕೆ ಮಾತ್ರ duty paid arrack ಕೆಲವು non duty paid arrack ಆಗುವುದು ಇದು ನಡೆಯುತ್ತಿದೆಯಲ್ಲಾ ಇದನ್ನು ತಪ್ಪಿಸುವುದಕ್ಕೋಸ್ಕರವಾಗಿ secondsನ್ನು ತಪ್ಪಿಸುವುದಕ್ಕೋಸ್ಕರವಾಗಿ, thirdನ್ನು ತಪ್ಪಿಸುವುದಕ್ಕೋಸ್ಕರವಾಗಿ ಈ ಹೊಸ ಪಾಲಿಸಿಯನ್ನು ಮಾಡಿರತಕ್ಕದ್ದು. ಇದು ಸಂಪೂರ್ಣವಾಗಿ arrackನ್ನು ನಿಮಗೆ ಇಷ್ಟ ಬಂದಂತೆ ಮಾಡಿಕೊಂಡು ಹೋಗಿ ನಮಗೂ ನಿಮಗೂ ಏನೂ ಸಂಬಂಧ ಇಲ್ಲವೆಂದು ಹೇಳಿಲ್ಲ.

SRI S. RAJENDIRAN : You have said : `` putting in place third party inspection to certify quantity and quality" ಯಾರು third party? You have given in page number 42 - ``putting in place third party inspection to certify quantity and quality of rectified spirit and arrack". Third party ಎಲ್ಲಿಂದ ಬರುತ್ತಾರೆ? ಯಾರವರು ? ಸರ್ಕಾರದಿಂದ ಮಾಡುವುದು ಸರಿಯಿಲ್ಲ ಎಂದು third party.........

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) : ನಮ್ಮಲ್ಲೂ ಪಾಲಿಸಿ ಇದೆ. ಆ ರೀತಿ ಸರ್ಕಾರ ಮಾಡಿಯೂ ಈ ಸೆಕೆಂಡ್ಸ್ ನಡೆಯುತ್ತಿದೆ. Non duty paid ಸಾರಾಯಿ ನಡೆಯುತ್ತಿದೆ. ಅದನ್ನು ನಿಲ್ಲಿಸಬೇಕಲ್ಲಾ? ಸರ್ಕಾರಕ್ಕೆ ಆದಾಯ ಬರಬೇಕಲ್ಲಾ? ಅದು ಬರಬೇಕಾದರೆ ಈ ಪಾಲಿಸಿ ತಂದಿರುವುದು.

ಶ್ರೀ ಎಸ್. ರಾಜೇಂದ್ರನ್ ; ಸರ್ಕಾರದ ಕಡೆಯಿಂದ ಆದಾಯ ಬಂದಿಲ್ಲವೆಂದರೆ ಅದು ಸರ್ಕಾರದ mistake, They have not utilized the

services of their exectives, or bureaucrates or their officers properly. Therefore, ಮೂರನೇ ಪಾರ್ಟಿಗೆ ಕೊಟ್ಟು ಅದನ್ನು ನಾವು ಸರಿ ಪಡಿಸುತ್ತೇವೆ, ಎಂಬುದು ಇದರ ಅರ್ಥ. That is the meaning of that. ಅದನ್ನು ಹೇಗೆ ಸರಿಪಡಿಸುತ್ತೀರಿ ? Our Deputy Chief Minister Knows very well how to rectify it and to get more revenue for the Government. He knows better than us. ಆದ್ದರಿಂದ ನಾನೇನು ಹೇಳಿದೆ ಎಂದರೆ ಪ್ರೈವೇಟ್‌ನವರು ಯಾರಾದರೂ third party ಇದ್ದರೆ ಏಜೆನ್ಸಿಗಳನ್ನು ಏನಾದರೂ ತಾವು ಮಾಡಿದರೆ ಅವರಿಗೆ ಜನರ ಮೇಲೆ ಅಷ್ಟು ಪ್ರೀತಿ ಇರುತ್ತದೆಯೇ ? ಅದನ್ನು ತಾವು ಸರಿಪಡಿಸಬೇಕು. Then regarding development of North Karnataka. ತಾವು ಇಲ್ಲಿ ಕೊಟ್ಟಿದ್ದೀರಿ. You are a very learned and well Knowledgeable person and we are happy that you are the Finance Minister. Sir, our Kolar district comes in South Karnataka border. ನಮಗೂ ಅಪಾರವಾದ ಗೌರವ ರೈತರ ಮೇಲಿದೆ. They are the backbone of this country and this State. ಅವರಿಗೆ ಎಷ್ಟು importance ಕೊಟ್ಟು ಅವರನ್ನು ಹೇಗೆ ಮೇಲೆ ತೆಗೆದುಕೊಂಡು ಬರಬೇಕೆಂದು ಪ್ರಯತ್ನವನ್ನೇನು ತಾವು ಮಾಡುತ್ತಿದ್ದೀರಿ. ಅದನ್ನು ಸ್ವಾಗತಿಸುತ್ತೇನೆ. Sir, 106 members died in my constituency. Majority of them are scheduled caste people. For the past four and half years the BGML workers have not received salaries. Has it not come to the notice of the Government ? BGML is located in Kolar district in our State. ತಾವು ಅವರ ಮೇಲೆ ಗಮನವನ್ನೇ ಕೊಡಲಿಲ್ಲ. You have not given and opportunity to scheduled caste, scheduled tribe people to come up. But, You have concentrated on North Karnataka. ಈ ರೀತಿ ಇದೆ. ಸೌತ್ ಕರ್ನಾಟಕದಲ್ಲಿ ಕೂಡ ಸ್ವಲ್ಪ ನೋಡಬೇಕಲ್ಲವೆ ? You have to see the topography of my district. I would say that this Government has done discrimination. They have not given an opportunity to that real scheduled castes and scheduled tribes people to improve their economic conditions. ಬರೀ ಭಾಷಣದ ಮೇಲೆ, ಬಜೆಟ್ ಮೇಲೆ ಕೊಟೇಷನ್ ಮಾತ್ರ ಇದೆ. As I said earlier, 106 people in my constituency died due to non payment of salary. ಕೇಳುವವರು ಯಾರೂ ಇಲ್ಲವೇ ? If you don't take action, then no asker no teller in this Government ಎಂದು ಆಗುತ್ತದೆ. We must think about that. But we have not given more importance. Apart from that, education ಬಗ್ಗೆ ತಾವು ಹೇಳಿದಿರಿ. Education is very important ಎಂದು ಹೇಳಿದ್ದೀರಿ. Education loan ಗೆ interst ಕಡಿಮೆ ಮಾಡಿ ಎಂದರೆ increase ಮಾಡಿದ್ದೀರಿ. Will it serve your real intention to help rural or field students to get education ? If

you increase the interest rate on housing loan, ಬಡವರು ಮನೆ ಕಟ್ಟುವುದಕ್ಕೆ ಆಗುತ್ತಾ ? I request you to consider reducing the interst on education loan and also housing loan. I would like to bring to your kind notice that just recently, a safai Karmachari's son who is doing M.B.A. was not given the education loan by a Bank and due to this, he suffered a lot. This is an example to reiterate my request in this regard. Likewise, I can quote number of examples. Why can't you just reduce that bank interest for the education of students ? Why can't you reduce interest on housing loan for construction of houses. I request you to kindly consider it. ಬಡವರು ಮನೆ ಕಟ್ಟಲು ಸಿಮೆಂಟ್ ಬೇಕು. ನೀವು ಸಿಮೆಂಟ್ ಮೇಲೆ ತೆರಿಗೆ increase ಮಾಡಿದ್ದೀರಿ, ಆಶ್ರಯ ಸ್ಕೀಮ್‌ನಲ್ಲಿ ಏನು ಸಿಲ್ವರ್‌ನಲ್ಲಿ ಮನೆಯನ್ನು ಕಟ್ಟುತ್ತಿದ್ದಾರಾ ? Are they just constructing with mud ? No. ಅದಕ್ಕೂ ಸಿಮೆಂಟ್ ಉಪಯೋಗಿಸುತ್ತಾರೆ please you think over it. You are thinking about the most richest people. But most richest people ಸಹ ಸಿಮೆಂಟ್ ಕಟ್ಟಡವನ್ನೇ ಕಟ್ಟುವುದು. Even a poor man ಆಶ್ರಯ ಸ್ಕೀಮ್‌ನಲ್ಲಿ ಮನೆ ಕಟ್ಟುವುದೂ ಸಿಮೆಂಟ್ ಉಪಯೋಗಿಸೀನೇ. ಅದನ್ನೂ ಸ್ವಲ್ಪ think ಮಾಡಿ ಕಡಿಮೆ ಮಾಡಿದರೆ ಬಹಳ ಒಳ್ಳೆಯದು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನಿನ್ನೆ ಅದರ ಬಗ್ಗೆ ಹೇಳಿದ್ದಾರಲ್ಲಾ ?

ಶ್ರೀ ಎಸ್. ರಾಜೇಂದ್ರನ್ : ನಿನ್ನೆ ಹೇಳಿದ್ದರೆ ನಾನು ಇರಲಿಲ್ಲವಲ್ಲ ? ನಾನು ಪುಸ್ತಕದಲ್ಲಿರುವುದನ್ನು ನೋಡಿ ಹೇಳುತ್ತಿರುವುದು.

12.20 ಪಿಎಂ

ಕೆರೋಸಿನ್ ಬಗ್ಗೆ ಹೇಳಿದ್ದೀರಿ. ಈಗಲೇ ರೇಷನ್ ಡಿಪೋನಲ್ಲಿ below poverty line, above the poverty line, yellow cards, Green cards, Blue Kerosene, White Kerosene, ಬೇಕಾದಷ್ಟು ತರಹ ಕೊಟ್ಟು ಇವತ್ತು ಜನರಿಗೆ ಕೆರೋಸಿನ್ನೇ ಸಿಗುತ್ತಿಲ್ಲ. ಇಂತಹ ಸಂದರ್ಭದಲ್ಲಿ ಕೆರೋಸಿನ್ ಮೇಲೆ ತಾವು ತೆರಿಗೆ ಇನ್‌ಕ್ರೀಸ್ ಮಾಡಿದ್ದೀರಿ. ಹೀಗಾದರೆ ಬಡವನಿಗೆ ಎಲ್ಲಿ ಕೆರೋಸಿನ್ ಸಿಗುತ್ತದೆ ? ರೇಷನ್ ಡಿಪೋದಲ್ಲಿ ಮಾತ್ರ ಅದು ಕಡಿಮೆ ಇದೆ. Non-PDS Kerosene, 16-20% ಹೆಚ್ಚಳ ಮಾಡಿದ್ದೇವೆ. ಎಂದು ನೀವೇ ಬಜೆಟ್ ಭಾಷಣದಲ್ಲಿ ಹೇಳಿದ್ದೀರಿ. ಬಡವರೂ ಕೂಡ ಇದನ್ನು ಉಪಯೋಗಿಸುತ್ತಾರೆ. ಕೆರೋಸಿನ್ ಅವರಿಗೆ ರೇಷನ್ ಡಿಪೋದಲ್ಲಿ ಸಿಗದಿದ್ದರೆ ಅವರು ಎಲ್ಲಿಗೆ ಹೋಗಿ ಅದನ್ನು ತೆಗೆದುಕೊಳ್ಳಬೇಕು ? ಕೆರೋಸಿನ್ ಅನ್ನೇ ಡಿಪೋಗಳಲ್ಲಿ ಕೊಡುವುದಿಲ್ಲ ಆದ್ದರಿಂದ ಬಡವರೂ ಸಹ ಈ ಕೆರೋಸಿನ್ ಅನ್ನೇ ತೆಗೆದುಕೊಳ್ಳಬೇಕಾಗಿದೆ. Please apply your mind and think practically on this issue and drop the higher rate of tax on Non-PDS kerosene. ನಿಮ್ಮ ಮನೆಯಲ್ಲಿ ಗ್ಯಾಸ್ ಇದೆ ಎಂದು ಬರೆಯುತ್ತಾರೆ. ಗ್ಯಾಸ್ ಇದೆ ಎಂದು

ಸುಮ್ಮನೆ ಬರೆದು ಬಿಟ್ಟರೆ ಅವನಿಗೆ ಕೆರೋಸಿನ್ ಸಿಗುವುದಿಲ್ಲ. ಮತ್ತೆ ಅವರು ಹೋಗಬೇಕು. You have to think universally for that also. Apart from that, very clearly you have said that you would take more interest about the students. ಆದರೆ ಸ್ಪೋರ್ಟ್ಸ್ ಬಗ್ಗೆ ಇದರಲ್ಲಿ ಏನೂ ಕೊಟ್ಟಿಲ್ಲ. You have not given any encouragement for sports. Today ಕರ್ನಾಟಕ ರಾಜ್ಯದವನು ಒಲಂಪಿಕ್‌ಗೆ ಹೋಗುತ್ತಾನೆ ಎಂದರೆ, ಅವನಿಗೆ ಅವಾರ್ಡ್ ಸಿಕ್ಕಿದರೆ, flash news ಹಾಕುವುದು, ಮುಖ್ಯಮಂತ್ರಿಗಳು ಬಹುಮಾನ ಕೊಡುತ್ತಾರೆಂದು ಭರವಸೆ ನೀಡುವುದು ನಡೆಯುತ್ತಿದೆ. But i am sorry to say that you have not given any encouragement for sports nor shown any interest on the youths of the Karnataka state. You have not given any encouragement for them to show their talents. There is nothing in this budget regarding sports.

ಅಧ್ಯಕ್ಷರು : ದಯವಿಟ್ಟು ಬೇಗ ಮುಗಿಸಿ.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಅಧ್ಯಕ್ಷರೇ, ಇನ್ನು ಎರಡೇ ನಿಮಿಷಗಳಲ್ಲಿ ನಾನು ಮುಗಿಸುತ್ತೇನೆ. Sports ಗೆ ತಾವು ಏಕೆ importance ಅನ್ನು ಕೊಟ್ಟಿಲ್ಲ ? You have mentioned that you are giving all privilages for the students. But what is the real position ? ಸಿ.ಇ.ಟಿ. ಬಗ್ಗೆ ನಿನ್ನೆ ಎಷ್ಟೆಲ್ಲಾ ಚರ್ಚೆಯಾಯಿತು. Sports ಬಗ್ಗೆ ನಿಮ್ಮ ಗಮನಕ್ಕೆ ಬಂದಿಲ್ಲವೇ ? You don't want to encourage the Sports people in Karnataka? ದೇಶದಲ್ಲಿ ಕರ್ನಾಟಕ ರಾಜ್ಯದವರು ಯೂನಿವರ್ಸಿಟಿಗೆ ಹೋಗುತ್ತಾನೋ, ಆಲ್ ಇಂಡಿಯಾ ಹೋಗುತ್ತಾನೋ, ಏಷ್ಯನ್ ಗೇಮ್ ಹೋಗುತ್ತಾನೋ, ಒಲಂಪಿಕ್‌ಗೆ ಹೋಗುತ್ತಾನೋ, ಅದರ ಬಗ್ಗೆ ನಿಮಗೆ ಚಿಂತನೆಯೇ ಇಲ್ಲ. ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ್ದಕ್ಕೆ ಮಾತ್ರ ಗಮನ ಕೊಟ್ಟಿದ್ದೀರಿ, Cinema field ನಲ್ಲಿ re-make ಮಾಡಿದರೆ ಅವರಿಗೆ ನಾವು ಹಣ ಕೊಡಬಾರದು. Re-make ಮಾಡುವವರನ್ನು ಬ್ಯಾನ್ ಮಾಡುತ್ತೀರಾ ? Why do you want to encourge those who produce re-make films ? ಅವರು ಅದರಲ್ಲಿ ಕಾಸು ಮಾಡಿರಬಹುದು. ಜೊತೆಗೆ ಅವರು ಹೇಳಿದರು, ತಮಿಳು ಸಂಘದವರು ಬಂದು ಗಲಾಟೆ ಮಾಡಿದರು ಎಂದು. ನಾನು ಟೈಮ್ ವೇಸ್ಟ್ ಮಾಡಬಾರದು ಎಂದು ಅವರನ್ನು ಡಿಸ್ಟರ್ಬ್ ಮಾಡಲಿಲ್ಲ. ಅವರು ಕೊಲೆ ಮಾಡಲಿಕ್ಕೆ ಬಂದರು, ಅವರು ಹೀಗೆ ಮಾಡುವುದಕ್ಕೆ ಬಂದರು ಎಂದು ಹೇಳಿದರು. ನಾನು ಅವರನ್ನು ಡಿಸ್ಟರ್ಬ್ ಮಾಡಲಿಲ್ಲ. I have not distured him. Where is the evidence ? Where is the Proof ಎಂದು ನಾನು ಕೇಳಬಹುದಾಗಿತ್ತು. But, I did not ask because it is the issue which can be ignored Sir, Every human being is a human being. To-day in the Bangalore City, we are having Infosys and other I.T. companies. After seeing the budget, and found that there is no importance given to I.T. ಅಂತ ಅವರು they are

trying to move out of the city. Infosysನಲ್ಲಿ ಎಂದು ನಾನು ಕೇಳಬಹುದಾಗಿತ್ತು. ಅಂತ ಅವರು ನಲ್ಲಿ ಬರೇ ಕನ್ನಡ ಕಂಪ್ಯೂಟರ್ ಇಲ್ಲ. ಜೊತೆಗೆ ಇಂಗ್ಲೀಷೂ ಕೂಡ ಇದೆ. You are aware that our children are not getting proper employment in this sector because of the fact that we have not given proper importance. That is the main reason, Not only that, only they are stressing Kannada. In the computerised world, you have to give importance for the additional language i.e., English Infosys ಅವರು ಪ್ರೈವೇಟ್. They will concentrate worldwide, national-wide, Asia-wide, Therefore we should give importance to these I.T. companies. ಕೊನೆಯದಾಗಿ ಹೇಳುವುದಾದರೆ, Scheduled Caste ಜನಕ್ಕೆ ಈ ಬಜೆಟ್‌ನಲ್ಲಿ ನೀವು ಏನೂ ಕೊಟ್ಟಿಲ್ಲ. ತಮಗೆ ಗೊತ್ತಿದೆ. I brought to your notice, a number of times, that about 4500 Scheduled Caste people are suffering. ಮೈಸೂರು ಕಡೆಗೆ ಡೆವಲಪ್‌ಮೆಂಟ್‌ಗೆ ತಾವು ಆದ್ಯತೆ ಕೊಟ್ಟಿದ್ದೀರಿ. ತಾವು ಅಲ್ಲಿದ್ದೀರಿ. ಆದರೆ ನಾನು ಆ ಕಡೆಯಲ್ಲಿ ಇಲ್ಲವೇ ? North Karnatakaನಲ್ಲಿ ನಮ್ಮ Chief Minister ಇದ್ದಾರೆ, ಆದರೆ ಅಲ್ಲಿ ನಾನಿಲ್ಲವೇ ? please remove that feeling in our mind. Please ensure that due importance is given to an under developed areas in the state. The conditions of the Scheduled Castes Scheduled Tribes people throughtout the state are same. They should be treated on equal footing. I would like to bring to the notice of the Government that in this state, highest number of Scheduled Caste people are residing in Kolar Gold Fields. For the last $4^1/_2$ years. the mining has been closed. None of the Minister turned up for the past $4^1/_2$ years. Are you not suppressing my community ?. You are advocating that the whole Karnataka Government is for the Scheduled Caste and the Scheduled Tribes and Minorities. But what is the real position ? ತಾವು ಇದರಲ್ಲಿ ಹೇಳಿದ್ದೀರಿ. Wakf Board ಬಗ್ಗೆ ಹೇಳಿದ್ದೀರಿ. ಹಜ್‌ಗೆ ಹೋಗುವವರ ಬಗ್ಗೆ ಹೇಳಿದ್ದೀರಿ. Minoritiesನಲ್ಲಿ Christians ಕೂಡ ಇದ್ದಾರೆ. ಅವರ ಬಗ್ಗೆ ನೀವು ಒಂದು ಮಾತನ್ನು ಹೇಳಿದ್ದೀರಾ ? ಇಲ್ಲ. ಚುನಾವಣೆ ಸಂದರ್ಭದಲ್ಲಿ ಮಾತ್ರ ಬಿಷಪ್ ಪಕ್ಕದಲ್ಲೇ ಕುಳಿತುಕೊಂಡು ನಾವು ಪೋಸ್ ಕೊಡುತ್ತೇವೆ. ಆ ಒಂದು ಪೋಪ್ ಬಂದರೆ ಅವರ ಜೊತೆಗೂ ಕೂಡ ಹೋಗುತ್ತೀರಿ, ನಮಸ್ಕಾರ ಹೇಳುತ್ತೀರಿ. ಏಕೆಂದರೆ, entire Christian Community ನಮಗೆ Vote ಹಾಕುತ್ತಾರೆಂದು. ಈ ಬಜೆಟ್‌ನಲ್ಲಿ just for ನಾಮಕವಸ್ತೆಯೂ ಒಂದು ಮಾತೂ ಕೂಡ minority Chrisians ಬಗ್ಗೆ ಬಂದಿಲ್ಲ ಏಕೆ? ಇದೇ ಚುನಾವಣೆ ಬಂದಿದ್ದರೆ, ಈ ಬಜೆಟ್ ಹೇಗೆ, ಇದ್ದಿರಬಹುದು ? Christian ನವರನ್ನು particularly you would have

mentioned. All these things are really small mistakes. Of course, you are a great personality. I hope you would rectify these small mistakes. But, ನಮ್ಮ Kolar Gold Fields ಬಗ್ಗೆ ಒಂದು ಮಾತನ್ನು ಹೇಳಿಲ್ಲವಲ್ಲಾ ಸಾರ್. ಈ ಬಗ್ಗೆ ನಾನು ತಮಗೆ ಸುಮಾರು ಸಲ ಹೇಳಿದ್ದೇನೆ. Really in KGF, the people are in pathetic condition. ಹತ್ತು ಜನ ರೈತರು ಸತ್ತು ಹೋದರೆ, ಹೆಲಿಕಾಪ್ಟರ್‌ನಲ್ಲಿ ಹೋಗುತ್ತೀರಿ, ದೆಹಲಿಗೆ ಹೋಗುತ್ತೀರಿ, ಏನೆಲ್ಲಾ ಮಾಡುತ್ತೀರಿ. But 106 members, in my consituency had died, They were all Scheduled Caste people. Why the Government has not given attention to this incident? Is there any sympathy in the whole House for this incident ? Media wrote about Kolar Gold Fields several times, highlighting that there in no drainage, no water supply etc. In our place ನಮ್ಮ ಹೆಣ್ಣು ಮಕ್ಕಳು toilet ಗೆ ಹೋಗಬೇಕಾದರೆ 7'o clock ಗೆ sodium vapour Light off ಆಗುತ್ತದಾ ಎಂದು ಕಾಯುತ್ತಿರುತ್ತಾರೆ. ನಮ್ಮ ಕೆ.ಜಿ.ಎಫ್ ನಲ್ಲಿ toilet ಇಲ್ಲ, Drainage ಇಲ್ಲ, ಕುಡಿಯುವುದಕ್ಕೆ ನೀರು ಇಲ್ಲ. ಈಗ ಮಾನ್ಯ ಮುಖ್ಯಮಂತ್ರಿಯವರು ಸುಮಾರು 24 valves water supply works will be implemented in KGF ಎಂದು ಹೇಳಿದ್ದಾರೆ. ನಮ್ಮ ಕಷ್ಟ ಹೇಗೆ ಇರಬಹುದು ? Regarding BGML issue, no Government has taken our cause to the Central Government. ಬೇರೆಯವರಿಗೆ ಏನಾದರೂ ಇದ್ದರೆ. immediately ಕೇಂದ್ರ ಸರ್ಕಾರದ ಹತ್ತಿರ ಹೋಗೋಣ. ಪ್ರಧಾನ ಮಂತ್ರಿ ಮೇಲೆ ಒತ್ತಡ ತರೋಣ ಎನ್ನುತ್ತೀರಿ. ಆದರೆ ಇಲ್ಲಿ ನಾಲ್ಕು ಸಾವಿರ ಜನ ಸಾಯುತ್ತಿದ್ದಾರೆ. Why the Government has not done anything ? ಅದಕ್ಕೆ ತಾವು importance ಕೊಡಬೇಕಾಗಿತ್ತು. You are supposed to give importance. Really to be frank, from the bottom of my heart, ಭಾಷಣ ಮಾಡಬೇಕು, ಪತ್ರಿಕೆಗಳಲ್ಲಿ ನನ್ನ photo ಬರಬೇಕು, ಅದಕ್ಕೋಸ್ಕರ ನಾನು ಮಾತನಾಡುತ್ತಿಲ್ಲ. Really I am expressing my feelings to you. If you have feelings which a real human being hás, ಖಂಡಿತವಾಗಿಯೂ ತಾವು ಅದರ ಬಗ್ಗೆ ಉತ್ತರ ಕೊಡಲೇಬೇಕು. I am sure you will give more importance to my concern, because we have high regards, ಸಿದ್ಧರಾಮಯ್ಯನವರೆಂದರೇ, Yes, Mr, Siddaramaiah will give more importance for Backward Classes & Scheduled Castes. This is our feeling. ಆದರೆ ಈಗ ಏನಾಗುತ್ತಿದೆ ಎಂದರೆ, ಬರೀ Backward Classes ಹೀಗೆ ಹೋದರೆ Your image will not be enhanced. Now you are in top image. In future, you are like a shinning star image.ನಿಜವಾಗಿಯೂ ನಾನು ಹೇಳುತ್ತೇನೆ. Please keep it that in mind. ತಮ್ಮದು ಬಜೆಟ್ ಹೇಗಿದೆ ಎಂಬುದಕ್ಕೆ ಒಂದು example.....

ಅಧ್ಯಕ್ಷರು : ಅರ್ಧ ಗಂಟೆಯಾಯಿತು. ಬೇಗ ಮುಗಿಸಿ.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಅಧ್ಯಕ್ಷರೇ, ಇನ್ನು 30 seconds ನಲ್ಲಿ ಮುಗಿಸುತ್ತೇನೆ. 30 seconds ಬೇಕಾದರೆ ತಾವು count ಮಾಡಿಕೊಳ್ಳಿ.

ಶ್ರೀ ಎಸ್. ರಾಜೇಂದ್ರನ್ ; ನಮ್ಮ colleagues ಇನ್ನೂ ಮಾತನಾಡಬೇಕಾಗಿದೆ. ಎಂಬುದು ನನಗೆ ನೆನಪಿದೆ. ಮುಖ್ಯಮಂತ್ರಿಗಳ ಪಕ್ಕದಲ್ಲಿ ಉಪ ಮುಖ್ಯಮಂತ್ರಿ ಇದ್ದೀರಿ. OK. Both are good. Even our Chief Minister is also reasonable personality. ನಿಮ್ಮ ಬಜೆಟ್ ಹೇಗಿದೆ ಎಂದರೆ, two things can convince. one practical & psycholological. Psychological convincing ತಮ್ಮ ಹತ್ತಿರ ಜಾಸ್ತಿ ಇದೆ. ಹೇಗೆ ಎಂದರೆ, ಒಂದು ಊರಿನಲ್ಲಿ ಒಬ್ಬ ರಾಜ ಇದ್ದ, ಪಕ್ಕದಲ್ಲೇ ಅವರ ಮಂತ್ರಿ, ಅವನು ಬಹಳ intelligent, like you, ಅವರ ಜೊತೆಯಲ್ಲಿರುವವರಿಗೆಲ್ಲಾ ಯಾವಾಗಲೂ ಏನು ಈ ಮಂತ್ರಿ ಬಹಳ intelligent, importance ಪಡೆದುಕೊಂಡು ಈತ ರಾಜ ಜೊತೆಯಲ್ಲೇ ಯಾವಾಗಲೂ ಇರುತ್ತಾನೆ. ಇವನ ಪ್ರಾಮುಖ್ಯತೆಯನ್ನು ಹೇಗಾದರೂ ಮಾಡಿ ಕಡಿಮೆ

ಅಧ್ಯಕ್ಷರು : ಮಾನ್ಯ ಹೆಗ್ಡೆಯವರು ಮಾತನಾಡುವುದಕ್ಕೆ ತಮ್ಮದೇ ಆದಂತಹ ಒಂದು ಮಿತಿಯನ್ನು ಹಾಕಿಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

†ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಆಯಿತು, ನಾನೇ ಒಂದು ಮಿತಿಯನ್ನು ಹಾಕಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ, ಮಾನ್ಯ ಸಿದ್ಧರಾಮಯ್ಯನವರು ಮಂಡಿಸಿದಂತಹ ಆಯವ್ಯಯ ಸಂಪೂರ್ಣ ಒಳ್ಳೆಯದು ಎಂದು ಹೇಳಕ್ಕಾಗದಿದ್ದರೂ ಅದು harmful ಅಂತೂ ಅಲ್ಲ. ಹಿಂದಿನ ಸರ್ಕಾರ ಮಂಡಿಸಿದ ಬಜೆಟ್ ಮೇಲೆ he has scored a point. I appreciate. ಇದು ಏನಾಗಿದೆ ಎಂದರೆ, ಹಿಂದೆ ನಾನು ಅನೇಕ ಬಾರಿ ಸದನದಲ್ಲಿ ಹೇಳಿದ್ದೆ, ಬೇಡಿಕೆಯನ್ನು ಮಂಡಿಸಿದಾಗ ಸಂಬಂಧಪಟ್ಟ ಮಂತ್ರಿಗಳು ಉತ್ತರವನ್ನು ಕೊಟ್ಟರೆ, ಸ್ವಲ್ಪ ಚರ್ಚೆಗೆ ಅರ್ಥವಿರುತ್ತದೆ. ತಮ್ಮ ಮಂತ್ರಿ ಮಂಡಲ ಇನ್ನೂ ವಿಸ್ತರಣೆಯಾಗಿಲ್ಲ. ಮುಂದಿನ ಅವಧಿಯಲ್ಲಿ ಏಕೆಂದರೆ, ಹಿಂದೆ ಒಂದು ಸಲ ನಾನು ಮತ್ತು ಮಾನ್ಯ ಕೆ.ಬಿ. ಮಲ್ಲಿಕಾರ್ಜುನ್‌ರವರು ಮಂತ್ರಿಗಳಿಗೆ ಎಷ್ಟು ಕೋಟಿ ರೂಪಾಯಿಗಳಿಗೆ ಬೇಡಿಕೆಯನ್ನು ಮಂಡಿಸುತ್ತಿದ್ದೀರಿ ಎಂದು ಕೇಳಿದ್ದಕ್ಕೆ ಅವರಿಗೆ ಹೇಳಲಿಕ್ಕೇ ಗೊತ್ತಾಗಲಿಲ್ಲ. ಇವರು ಕೊಟ್ಟ ಪಟ್ಟಿಯನ್ನು ಓದಿದ್ದು ಬಿಟ್ಟರೆ, ಎಷ್ಟು ಕೋಟಿ ರೂ.ಗಳ ಬೇಡಿಕೆಯನ್ನು ಆ ಇಲಾಖೆಗಾಗಿ ಅವರು ಮಂಡಿಸುತ್ತಿದ್ದಾರೆ ಎನ್ನುವುದೇ ಅವರಿಗೆ ಗೊತ್ತಿರಲಿಲ್ಲ. ಅಂತಹ ಪರಿಸ್ಥಿತಿ ನಿರ್ಮಾಣವಾಗಲಾರದು. ಹಿಂದೆ ಕೊಟ್ಟ ಕೆಲವೊಂದು ಪ್ರಶ್ನೆಗಳಿಗೆ ಇವತ್ತು ಉತ್ತರ ದೊರಕಿದೆ. ನಾಲ್ಕೂವರೆ ಹಿಂದೆ ನಾವು ಏನು ಪ್ರಶ್ನೆಗಳನ್ನು ಕೇಳಿದ್ದೇವೆ. ಭಾಷಣದಲ್ಲಿ ಇಲ್ಲಿ ಮಾತನಾಡಿದ್ದೆವು, ಅದಕ್ಕೆ ಉತ್ತರ ಸಿಕ್ಕಿರಲಿಲ್ಲ. ಇಲ್ಲಿ ಕೆಲವು ಪ್ರಶ್ನೆಗಳಿಗೆ ಉತ್ತರ ಸಿಕ್ಕಿದೆ. ಅದಕ್ಕೆ ನಾನು ಸಂತೋಷ ಪಡುತ್ತೇನೆ. `Successs has made failures of many a men." ಹಿಂದೆ ಮಾನ್ಯ ಮುಖ್ಯ ಮಂತ್ರಿಗಳು ನಂಬರ್ ಒನ್ ಚೀಫ್ ಮಿನಿಸ್ಟರ್ ಆಗಿದ್ದರು. `He is the most successful Chief Minister' ಎಂದು ಪತ್ರಿಕೆಗಳಲ್ಲಿ ಬಂದಿತ್ತು. ಎಲ್ಲರೂ ಹೊಗಳಿದ್ದರು. ಆದರೆ ಚುನಾವಣೆ

ಸಂದರ್ಭದಲ್ಲಿ ಜನ ಏನು ತೀರ್ಮಾನ ಕೊಟ್ಟರು ಎನ್ನುವುದು ಬಹಳ ಪ್ರಮುಖವಾಗುತ್ತದೆ. ಪತ್ರಿಕೆಯವರು, ಹಾಗೂ ನಾವು ಹೊಗಳಿದ್ದು ಮುಖ್ಯವಲ್ಲ. ಯಾವ ರೀತಿಯಲ್ಲಿ ಜನ ಮನ್ನಣೆ ಕೊಟ್ಟಿದ್ದಾರೆ. ಏಕೆಂದರೆ, ಕೇವಲ ಮುಖ್ಯ ಮಂತ್ರಿಗಳು ಮಾತ್ರವಲ್ಲ, ಮಾಜಿ ಪ್ರಧಾನ ಮಂತ್ರಿಗಳ ಪರಿಸ್ಥಿತಿಯೂ ಹಾಗೆಯೇ ಆಗಿದೆ. ಕೇಂದ್ರದಲ್ಲಿ ಮಾನ್ಯ ಅಟಲ್ ಬಿಹಾರಿ ವಾಜಪೇಯಿ ಅವರಿಗೂ ಅದೇ ಆಯಿತು, ಇಲ್ಲಿ ಮಾನ್ಯ ಕೃಷ್ಣರವರಿಗೂ ಅದೇ ಆಯಿತು. ಇದು ಅವರು ಯಾವ ರೀತಿಯಲ್ಲಿ ಬಜೆಟನ್ನು ಮಂಡನೆ ಮಾಡಿದ್ದಾರೆ ಅದು ಇದಕ್ಕೆ ಸ್ವಲ್ಪ ಹೊಂದುಕೊಂಡು ಹೋಗುತ್ತದೆ. ಅವರ ಸರ್ಕಾರ ಯಾವ ರೀತಿಯಲ್ಲಿ ನಡೆಸಿಕೊಂಡು ಹೋಗುತ್ತಿದೆ ಎಂಬುದು ಗೊತ್ತಾಗುತ್ತದೆ. ನನಗಿಂತ ಇಂಟಲಿಜೆಂಟ್ ಯಾರೂ ಇಲ್ಲ, ನಾವು ಹೇಳಿದ್ದು ಬಜೆಟ್‌ನಲ್ಲಿ ತಿದ್ದುಪಡಿ ತರಲಿಕ್ಕೆ ನಾವು ಒಪ್ಪುವುದಿಲ್ಲವೆಂದು ಪಾಸ್ ಮಾಡಿಕೊಂಡು ಹೋದಿರಿ, ಅದರ ಪರಿಣಾಮವನ್ನು ಅವರು ಎದುರಿಸಬೇಕಾಯಿತು. ನಾನು ಹಿಂದೆ ಹೇಳಿದ್ದೆ. ಎರಡು ರೀತಿ ಸರ್ಕಾರ ಇತ್ತು. ಒಂದು ರಾಜ್ಯದ ಮಂತ್ರಿ ಮಂಡಲ, ಇನ್ನೊಂದು ಟಾಸ್ಕ್ ಫೋರ್ಸಸ್. ಬೆಂಗಳೂರು ಅಜೆಂಡಾ ಟಾಸ್ಕ್ ಫೋರ್ಸ್ ಒಂದು ಇತ್ತು, ಕೋಸ್ಟಲ್ ಅಜೆಂಡಾ ಟಾಸ್ಕ್‌ಫೋರ್ಸ್ ಒಂದು ಇತ್ತು, ಯಾವುದರಲ್ಲಿಯೂ ಏನೂ ಕೆಲಸವಾಗಲಿಲ್ಲ. ಅವರು ರಿಪೋರ್ಟನ್ನು ಕೊಟ್ಟಿದ್ದು ಬಿಟ್ಟರೆ, ಅದಕ್ಕೆ ಖರ್ಚನ್ನು ಮಾಡಿದ್ದು ಬಿಟ್ಟರೆ, ಯಾವ ರೀತಿಯಲ್ಲಿಯೂ ಅದು ಲಾಭವಾಗಲಿಲ್ಲ. ಅದಕ್ಕೆ ನಾನು ಹೇಳಿದ್ದೆ ಇಎಲ್‌ಆರ್‌ಟಿಎಸ್ ಎಂದು. ಸುಮಾರು ಟಾಸ್ಕ್ ಫೋರ್ಸ್ ಇತ್ತು. ಒಂದು ಮಾತ್ರವಲ್ಲ. ಆದರೆ ಮಂತ್ರಿ ಮಂಡಲಿ ಏನಾಯಿತು? ನಾನು ಅವರಿಗೆ ಹೇಳಿದ್ದೆ. ನಿಮ್ಮದು ಈಗ ನ್ಯಾರೋಗೇಜ್ ರೈಲ್ವೆಲೈನ್. ಈಗ ಇಂಜಿನ್ ಮಾತ್ರ ಉಳಿದುಕೊಂಡಿದ್ದೆ. ಬೋಗಿಗಳೆಲ್ಲಾ ಕಿತ್ತುಕೊಂಡು ಹೋಗಿವೆ. 31 ಮಂತ್ರಿಗಳು ಹೋಗಿಬಿಟ್ಟಿದ್ದಾರೆ. ಅವರು ಏನೂ ಕೆಲಸ ಮಾಡಲಿಲ್ಲವೆಂದು ಜನ ಅವರಿಗೆ ಸೋಲಿಸಿದ್ದಾರೆ. ಅವರು ಏನಾದರೂ ಮಾಡಿದ್ದರೆ ಜನರಿಗೆ ಗೊತ್ತಾಗುತ್ತಿತ್ತು. ಸದನಕ್ಕೂ ಏನೂ ತಿಳಿಸಲಿಲ್ಲ. ಅವರು ಇನ್ನೊಂದು ತಪ್ಪು ಏನು ಮಾಡಿದ್ದಾರೆಂದರೆ, tendency of self-restriction seem to be the inherent quality of some developed brain. ಅದಕ್ಕೋಸ್ಕರ ಎಂಟು ತಿಂಗಳು ಮುಂಚಿತವಾಗಿ ಅವರು ಚುನಾವಣೆ ಮಾಡಿದ್ದರು. ಕೇಂದ್ರ ಸರ್ಕಾರ ಚುನಾವಣೆ ಮಾಡಿತು ಎಂದು ರಾಜ್ಯ ಸರ್ಕಾರ ಇಲ್ಲಿಯೂ ಕೂಡ ಸೂಯಿಸೈಡ್ ಮಾಡಿಕೊಂಡಿತು. ಜನ ಒಂದು ರೀತಿಯ ವರ್ಡಿಕ್ ಕೊಟ್ಟಿದ್ದರಿಂದ ನೀವು ಸಮ್ಮಿಶ್ರ ಸರ್ಕಾರವನ್ನು ಮಾಡಿದಿರಿ. ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ ನಮಗೂ ಸಹ ಐದು ವರ್ಷ ಸರ್ಕಾರ ನಡೆಯಬೇಕೆಂದು ಇದೆ. ಒಳ್ಳೆಯ ಸರ್ಕಾರವನ್ನು ಕೊಡಿ ಎಂದು ನಾವು ಕೇಳಿಕೊಳ್ಳುತ್ತೇವೆ. ಬಜೆಟ್‌ನ ಕೆಲವು ಮುಖ್ಯವಾದ ಅಂಶಗಳನ್ನು ಇಲ್ಲಿ ನಾನು ಹೇಳುತ್ತೇನೆ. ಬಜೆಟ್‌ನಲ್ಲಿ ಕರಾವಳಿಯನ್ನು ಬಿಡುವಂಥದ್ದು ಸರ್ವೇ ಸಾಮಾನ್ಯವಾಗಿದೆ. ಆದರೆ ಈ ಸಾರಿ ಸ್ವಲ್ಪ ಜಾಸ್ತಿ ಕಡೆಗಾಣಿಸಿದ್ದೀರಿ. ಉತ್ತರ ಕರ್ನಾಟಕವನ್ನು ನಮ್ಮ ಕರಾವಳಿಯ ಉಡುಪಿ ಜಿಲ್ಲೆ. ಮಂಗಳೂರು ಜಿಲ್ಲೆ ಮಟ್ಟಕ್ಕೆ

ತನ್ನಿ, ಆದರೆ ನಮ್ಮನ್ನು ತೆಗೆದುಕೊಂಡು ಹೋಗಿ ಉತ್ತರ ಕರ್ನಾಟಕ ಮಾಡಬೇಡಿ. ನೀವು ನಮ್ಮ ಹೊಟ್ಟೆ ಮೇಲೆ ಹೊಡೆದಿದ್ದೀರಿ. ತೆಂಗಿನ ಎಣ್ಣೆಗೆ ನಾಲ್ಕು ಪರ್ಸೆಂಟ್ ಇದ್ದುದ್ದು 20 ಪರ್ಸೆಂಟ್ ಮಾಡಿದ್ದೀರಿ. ನಮ್ಮ ಭಾಗದಲ್ಲಿ ತಲೆಗೆ ಮಾತ್ರವಲ್ಲ, ಹೊಟ್ಟೆಗೂ ಅದೇ, ಅಡಿಗೆ ಮಾಡಲಿಕ್ಕೂ ಅದೇ ಇರುವುದು. ಇದರ ತೆರಿಗೆಯನ್ನು ಕಡಿಮೆ ಇದನ್ನು ಗಣನೆಗೆ ತೆಗೆದುಕೊಂಡು ಕಡಿಮೆ ಮಾಡಬೇಕೆಂದು ಕೇಳಿಕೊಳ್ಳುತ್ತಾ, ಡೀಸಲ್ ಮೇಲಿನ ತೆರಿಗೆಯನ್ನು ಹೆಚ್ಚಿಗೆ ಮಾಡಿದ್ದೀರಿ. It affects all walks of life. ಕೇವಲ ಟ್ರಾನ್ಸ್‌ಪೋರ್ಟೇಷನ್, ಕೆಲವು ಶ್ರೀಮಂತರು ದೊಡ್ಡ ದೊಡ್ಡ ಕಾರುಗಳಲ್ಲಿ ಓಡಾಡುವವರಿಗೆ ಅಲ್ಲ, ನಿನ್ನೆ ಮಾನ್ಯ ಮಾಧುಸ್ವಾಮಿಯವರು ಒಳ್ಳೆಯ ಮಾತನ್ನು ಹೇಳಿದ್ದಾರೆ. ನಾವು ಅದನ್ನು ಚರ್ಚೆ ಮಾಡುತ್ತಿದ್ದೆವು. ಒಂದು ಟ್ರಕ್ ತಮಿಳುನಾಡಿನಿಂದ ಬರುವಾಗ ಅಲ್ಲಿ ಡೀಸಲ್ ತುಂಬಿಕೊಂಡು, ಈ ಕಡೆಯಿಂದ ಪಾಸಾಗಿ ಇನ್ನೊಂದು ಸ್ಟೇಟ್‌ಗೆ ಹೋದ ಮೇಲೆ ಅಲ್ಲಿ ಡೀಸಲ್ ಫಿಲ್ ಮಾಡಿ ಕೊಳ್ಳುತ್ತಾರೆ. ಅದರಿಂದ ರಾಜ್ಯ ಸರ್ಕಾರಕ್ಕೆ ಆದಾಯ ಕಡಿಮೆಯಾಗುತ್ತದೆ. ಅದಕ್ಕೋಸ್ಕರ ಡೀಸಲ್ ಮೇಲಿನ ತೆರಿಗೆಯನ್ನು ಕಡಿಮೆ ಮಾಡಬೇಕು. ಹಿಂದೆ ಮೀನುಗಾರರಿಗೆ ಸೇಲ್ಸ್ ಟ್ಯಾಕ್ಸ್ ಎಕ್ಸಮ್‌ಷನ್ ಕೊಟ್ಟಿದ್ದಿರಿ. ಪ್ರಥಮ ಬಾರಿಗೆ ಎಕ್ಸಮ್‌ಷನ್ ಕೊಟ್ಟ ಕೀರ್ತಿ ತಮಗೆ ಬರುತ್ತದೆ. ಅದನ್ನು ಮುಂದಿನ ಅವಧಿಗಳಲ್ಲಿ ಏನು ಮಾಡಿದರು ಎನ್ನುವುದು ಗೊತ್ತಿದೆ. ಪ್ರತಿ ಸಾರಿ ಅವರು ಬೇಡಿದಾಗ ಮಾಡುವುದು, ನಂತರ ಬಿಡುವುದು ಹೀಗೆಯೇ ಮಾಡುತ್ತಿದ್ದಾರೆ. ನೀವು ಬಜೆಟ್‌ನಲಿ 50 ಸಾವಿರ ಕಿಲೋ ಲೀಟರನ್ನು ಬಜೆಟ್‌ನಲ್ಲಿ ಸೇರಿಸಿದ್ದೀರಿ. ನಾನು ಕೇಳಿಕೊಳ್ಳುತ್ತೇನೆ. ಬೋಟುಗಳು ಜಾಸ್ತಿಯಾಗಿದೆ. ಮೀನುಗಾರಿಕೆ ಕಡಿಮೆಯಾಗಿದೆ. ಸ್ವಲ್ಪ ಮೀನುಗಾರಿಕೆ ಬರ ಇದೆ. 50 ರಿಂದ 75ನ್ನು ಕೇಳಿದರೆ ಸ್ವಲ್ಪವಾದರೂ ಜಾಸ್ತಿ ಮಾಡಿ. ಅದರಿಂದ ಮೀನುಗಾರರಿಗೆ ಸ್ವಲ್ಪ ಲಾಭವಾಗುತ್ತದೆ. ಅದನ್ನು ಖಂಡಿತ ತಾವು ಮಾಡುತ್ತೀರಿ ಎಂದು ನಾನು ತಮ್ಮ ಹತ್ತಿರ ಕೇಳಿಕೊಳ್ಳುತ್ತಾ, ಸಮುದ್ರ ತಡೆ ಗೋಡೆಗಳ ಬಗ್ಗೆ ಯಾರೂ ಮಾತನಾಡುವುದಿಲ್ಲ. ಅದರ ಬಗ್ಗೆ ಸ್ವಲ್ಪ ಟಚ್ ಮಾಡಿಕೊಂಡು ಹೋಗುತ್ತೇನೆ. ಇಲ್ಲಿ ಒಂದು ಬಂದರು ಇಲಾಖೆ ಎಂದು ಇದೆ, ಬಂದರು ಇಲಾಖೆಗೆ ಇದ್ದಂತಹ ಎಲ್ಲಾ ಗ್ರ್ಯಾಂಟನ್ನು ವಿತ್‌ಡ್ರಾ ಮಾಡಿದ್ದಾರೆ. ಅದರಿಂದ ಆದಾಯ ಇತ್ತು. ರಾಜ್ಯದ ಅಭಿವೃದ್ಧಿಗೆ ಪೂರಕವಾಗಿ ಬಂದರು ಕೆಲಸ ಮಾಡುತ್ತದೆ. ಕಾರವಾರ ಪೋರ್ಟ್‌ನಿಂದ ಏನು ಬಿಸ್‌ನೆಸ್ ಆಗುತ್ತದೆ ಎಂಬುದನ್ನು ಗಣನೆಗೆ ತೆಗೆದುಕೊಳ್ಳಬೇಕು ಹಿಂದೆ ಇದರಿಂದ ನಾಲ್ಕು ಕೋಟಿ ರೂಯಿಂದ ಎಂಟು ಕೋಟಿ ರೂಪಾಯಿಗಳವರೆಗೆ ಆದಾಯ ಬಂದಿದೆ. ಹಿಂದಿನ ಮಂತ್ರಿ ಮಂಡಲಕ್ಕೆ ನಾನು ಒಂದು ಸಜೆಷನ್ ಹೇಳಿದ್ದೆ. ಪೋರ್ಟ್ ಆಥಾರಿಟಿ ಎಂದು ಮಾಡಿ, ಅಲ್ಲಿಯ ಸಂಪೂರ್ಣ ಬಿಸ್‌ನೆಸ್ ಅವರೇ ಹ್ಯಾಂಡ್‌ಲ್ ಮಾಡಿ. ಅಲ್ಲಿಗೆ ಒಬ್ಬ ಛೇರ್ಮನ್ ನೇಮಕ ಮಾಡಿ. ಇಲ್ಲಿ ಬೇರೆ ಬೇರೆ ಕಾರ್ಪೋರೇಷನ್ಸ್ ಹೇಗೆ ಮಾಡುತ್ತೀರಿ ಹಾಗೆ ಮಾಡಿ. ಗುಜರಾತಿನಲ್ಲಿ ಪೋರ್ಟ್ ಅಥಾರಿಟಿ ಎಂದು ಇದೆ. ಅಲ್ಲಿ ಬಂದರು ಇಲಾಖೆಯಿಂದ ಒಂದು ಪಟ್ಟಿ ತರಿಸಿಕೊಳ್ಳಿ. ಅಲ್ಲಿ ಎಷ್ಟು ಆದಾಯ

ಇದೆ. ಎಷ್ಟು ಖರ್ಚಾಗುತ್ತದೆ ಎಂಬುದನ್ನು ನೋಡಿ. ಆದರೆ ಆದಾಯಕ್ಕಿಂತ ಖರ್ಚು ಜಾಸ್ತಿಯಾಗುವುದಿಲ್ಲ. ಆದರೆ ಇನ್ನು ಆ ಕಾರವಾರ ಪೋರ್ಟನ್ನು ಡ್ರೆಜ್ಜಿಂಗ್ ಮಾಡಿ ಡ್ರ್ಯಾಫ್ಟ್ 10ನೇ ಮೀಟರ್‌ವರೆಗೆ ಹೋದರೆ, ಅದನ್ನು ನಾವು ಕಂಟೈನರ್ ಹ್ಯಾಂಡ್ಲಿಂಗ್‌ಗೆ ಕೊಟ್ಟಿದ್ದೇವೆ. ಈಗ ಅಲ್ಲಿ ಫೀಡರ್ ವೆಸಲ್ಸ್ ಮಾತ್ರ ಬರಲಿಕ್ಕೆ ಸಾಧ್ಯ. ದೊಡ್ಡ ದೊಡ್ಡ ಶಿಪ್‌ಗಳು ಬರಬೇಕಾದರೆ. 10 ಮೀಟರ್ ಡ್ರ್ಯಾಫ್ಟ್ ಮಾಡಿ ಕೊಟ್ಟಾಗ ದೊಡ್ಡ ವೆಸಲ್ಸ್ ಕಾರವಾರ ಪೋರ್ಟಿಗೆ ಬರುತ್ತದೆ. ಬೇರೆ ಉಳಿದ ಪೋರ್ಟ್‌ಗಳನ್ನು ಡೆವಲಪ್ ಮಾಡಲಿಕ್ಕಾಗುತ್ತದೆ. ನಮ್ಮ ಕರಾವಳಿ ಮೀನುಗಾರಿಕೆ ಪ್ರಾಡಕ್ಟ್ಸ್ ಕೊಚ್ಚಿನ್, ಗೋವಾ ಮತ್ತು ಮಹಾರಾಷ್ಟ್ರಕ್ಕೆ ಹೋಗುತ್ತದೆ. ಕಾಪಿ ತಮಿಳುನಾಡಿನ ಪೋರ್ಟಿಗೆ ಹೋಗುತ್ತದೆ. ಅದನ್ನೇ ಇದರ ಮುಖಾಂತರ ಕಳುಹಿಸಲಿಕ್ಕೆ ಸಾಧ್ಯವಾಗುತ್ತದೆ. ಇಂಟರ್ನಲ್ ಶಿಪ್ಸ್ ಅಂಡ್ ಪೋರ್ಟ್ ಸೆಕ್ಯುರಿಟಿ ಬಗ್ಗೆ, ಮತ್ತೆ ಹಳೆಯ ಬಾಕಿಗಳನ್ನು ಕೊಡಲಿಕ್ಕೆ ಒಂದು ನಯಾಪೈಸೆ ಇಟ್ಟಿಲ್ಲ. ಹಿಂದಿನ ಬಜೆಟ್‌ನಲ್ಲಿ ಮಾನ್ಯ ಮುಖ್ಯ ಮಂತ್ರಿಗಳು 10 ಕೋಟಿ ರೂಪಾಯಿಗಳನ್ನು ಇಟ್ಟಿದ್ದರು. ಅದರಲ್ಲಿ ಖರ್ಚಾಗಿದೆ. ಅದನ್ನು ವಿತ್‌ಡ್ರಾ ಮಾಡಿದ್ದೀರೋ ಅಥವಾ ಅದನ್ನು ಬಿಟ್ಟು ವಿತ್‌ಡ್ರಾ ಮಾಡಿದ್ದೀರೋ ಎಂಬುದು ನನಗೆ ಗೊತ್ತಿಲ್ಲ. ಸಮುದ್ರ ತಡೆ ಗೋಡೆ ಕೆಲಸ ಅಲ್ಲಿಗೆ ಬರುತ್ತದೆ. ಮೀನುಗಾರಿಕೆ ರಸ್ತೆಗಳಿಗೂ ಒಂದು ನಯಾ ಪೈಸೆ ಇಲ್ಲ. ಮೀನುಗಾರಿಕೆ ರಸ್ತೆಯನ್ನು ನಿರ್ವಹಣೆ ಮಾಡಲಿಕ್ಕೆ ಮೀನುಗಾರಿಕೆ ಇಲಾಖೆಗೆ ಹಣವನ್ನು ಕೊಡುವುದಕ್ಕೆ ಸಾಧ್ಯವಾಗದಿದ್ದರೆ ಅದನ್ನು ಲೋಕೋಪಯೋಗಿ ಇಲಾಖೆಗೆ ಶಿಫ್ಟ್ ಮಾಡಿ. ಈ ಪೋರ್ಟ್‌ಗಳೆಲ್ಲಾ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಗಳ ಕೆಳಗಡೆ ಇದ್ದರೆ ಅದನ್ನು ಅಭಿವೃದ್ಧಿ ಪಡಿಸಲಿಕ್ಕೆ ಸಾಧ್ಯವಾಗುತ್ತದೆ. ಇನ್ನೊಂದು ಒಳನಾಡು ಜಲ ಸಾರಿಗೆ, ಎಲ್ಲೆಲ್ಲಿ ಬ್ರಿಡ್ಜ್‌ಗಳನ್ನು ಮಾಡುವುದಕ್ಕೆ ಸಾಧ್ಯವಾಗಲಿಲ್ಲ ದೋಣಿಗಳ ಮುಖಾಂತರ ರೇವು ಹೋಗುತ್ತಿದೆ. ಐಲ್ಯಾಂಡ್‌ನಿಂದ ಮೇನ್ ಲ್ಯಾಂಡಿಗೆ ಬರುವುದಕ್ಕೆ ಇನ್‌ಲ್ಯಾಂಡ್ ಟ್ರಾನ್ಸ್‌ಪೋರ್ಟ್ ಮಾಡಬೇಕಾಗಿದೆ. ಅದಕ್ಕೆ ಡೀಸಲ್‌ಗೂ ದುಡ್ಡು ಇಲ್ಲ ಇಲ್ಲಿ. ಡೀಸಲ್‌ಗಾದರೂ ಹಣ ಕೊಟ್ಟರೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಏನಾಗುತ್ತದೆ ಎಂಬುದಕ್ಕೆ ನನ್ನದೇ ಒಂದು ಕ್ಷೇತ್ರದ ಉದಾಹರಣೆ ಕೊಡುತ್ತೇನೆ. ಒಂದು ಕಿ.ಮೀ. ದೂರವನ್ನು ದೋಣಿಯಲಿ ಬರುವುದು ಬಿಟ್ಟು, 20 ಕಿ.ಮೀ. ಭೂಮಿಯಲ್ಲಿ ಸುತ್ತು ಹಾಕಿಕೊಂಡು ಬರಬೇಕಾಗುತ್ತದೆ. ಅದಕ್ಕೋಸ್ಕರ ಈ ಬೋಟುಗಳಿಗೆ ಸ್ವಲ್ಪ ಹಣವನ್ನು ಒದಗಿಸುವಂತಹ ಕೆಲಸವನ್ನು ಮಾಡಬೇಕು. ಈಗ ಮಾತನಾಡಲಿಕ್ಕೆ ಹೆಚ್ಚು ಸಮಯ ಇಲ್ಲದೆ ಇರುವುದರಿಂದ ಅದರ ಒಂದು ಲೀಸ್ಟನ್ನು ನಾನು ತಮಗೆ ಕಳುಹಿಸಿಕೊಡುತ್ತೇನೆ. ಪೆಂಡಿಂಗ್ ಬಿಲ್ಸ್ ನಾಲ್ಕೂವರೆ ಕೋಟಿ ರೂಪಾಯಿ ಇದೆ. ಕಾರವಾರ ಪೋರ್ಟಿನ ಹಿಂದಿನ ಬಾಕಿ ಇದು. ಅನ್ ಗೋಯಿಂಗ್ ವರ್ಕ್ಸ್‌ಗೆ 12 ರಿಂದ 13 ರೂಪಾಯಿ ಬೇಕಾಗುತ್ತದೆ, ಮಲ್ಪೆ, ಮಂಗಳೂರು ಮತ್ತು ಕಾರವಾರ ಅಭಿವೃದ್ಧಿಗೆ ಈಗಾಗಲೇ ಅನುಮೋದನೆ ಕೊಟ್ಟಿದೆ. ಅದಕ್ಕೆ ಹಣ ಇಲ್ಲ. ಆದರೆ ಇನ್ನೊಂದು ಮಲ್ಪೆ ಪೋರ್ಟ್‌ನದ್ದು ಸೆಕೆಂಡ್ ಸ್ಟೇಜಿಗೆ ಕೊಟ್ಟ 11 ಕೋಟಿ ರೂಪಾಯಿಯನ್ನು ರಿವೈಸ್

ಎಸ್ಟಿಮೇಟ್‌ನಲ್ಲಿ 21 ಕೋಟಿ ರೂ.ಗೆ ಮಾಡಿದ್ದಾರೆ. ಅದರ ಬಗ್ಗೆ ತನಿಖೆ ಮಾಡಿ. ಏಕೆಂದರೆ ಒಂದೇ ಸಾರಿ 11 ಕೋಟಿ ರೂ ಯಿಂದ 21 ಕೋಟಿ ರೂಗೆ ಹೇಗೆ ಹೋಗುತ್ತದೆ ? ಅದರ ಬಗ್ಗೆ ಸ್ವಲ್ಪ ತನಿಖೆ ಮಾಡಿ ಅದನ್ನು ಕಡಿಮೆ ಮಾಡಿಸಲೇ ಬೇಕಾಗುತ್ತದೆ. ಇಷ್ಟು ಜಾಸ್ತಿ ಏಕೆ ಮಾಡಿದ್ದೀರಿ ಎಂದು ಕೇಂದ್ರದಿಂದ ವಾಪಸ್ ಬಂದಿದೆ ಎಂದು ನನಗೆ ಮಾಹಿತಿ ಬಂದಿದೆ. ಅದರ ಬಗ್ಗೆ ತನಿಖೆ ಮಾಡಿಸಬೇಕು. ನನ್ನ ಕ್ಷೇತ್ರದಿಂದ ಮಣ್ಣೂರು ಪಡಿಕೆರೆ, ಕೋಡಿ, ಕನ್ಯಾನ ಹಾಗೆಯೇ ಕಾಪು ಬೈಂದೂರು ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿಯ ಎಲ್ಲಾ ಕ್ಷೇತ್ರಗಳಲ್ಲಿ ಸಮುದ್ರ ತಡೆಗೋಡೆ ನಿರ್ಮಾಣ ಮಾಡಬೇಕಾಗಿದೆ. ಹಿಂದಿನ ಸೆಕ್ರೆಟರಿಯವರು ಸಚಿವರು ಮತ್ತು ಅಲ್ಲಿಯ ಶಾಸಕರು ಫ್ರಾನ್ಸ್‌ಗೆ ಹೋಗಿದ್ದರು. ಅದೊಂದು ಹೊಸ ಯೋಜನೆ ಮಾಡುತ್ತೇವೆಂದು ಹೇಳಿದ್ದರು. ಅಲ್ಲಿಂದ ಬಂದ 15 ದಿವಸಗಳಿಗೆ ಕಾರ್ಯದರ್ಶಿಯವರು ನಿವೃತ್ತರಾದರು. ನಾಲ್ಕು ತಿಂಗಳಲ್ಲಿ ಸರ್ಕಾರ ಹೋಯಿತು. ಮಂತ್ರಿಗಳು ಬದಲಾದರು. ಆ ಕಾರ್ಯಕ್ರಮ ಪೈಲಟ್ ಪ್ರಾಜಕ್ಟ್ ಏನು ತೆಗೆದುಕೊಂಡಿದ್ದರು ಅದು ಏನೂ ಪ್ರಾರಂಭವಾಗಲಿಲ್ಲ. ಒಂದು ವೇಳೆ ಅದನ್ನು ಮಾಡುವುದಕ್ಕೆ ಸಾಧ್ಯವಾಗದೇ ಇದ್ದರೆ ತಾತ್ಕಾಲಿಕ ತಡೆ ಗೋಡೆಗಳನ್ನು ಮಾಡಿ ಹಣವನ್ನು ವ್ಯಯ ಮಾಡುವುದಕ್ಕಿಂತ ಶಾಶ್ವತವಾದ ತಡೆಗೋಡೆಗಳನ್ನು ಮಳೆಗಾಲ ಬರುವುದಕ್ಕಿಂತ ಮುಂಚೆ ಪ್ರಾರಂಭ ಮಾಡಿದರೆ ಕರಾವಳಿ ಜನ ಏನಿದ್ದಾರೆ, ಮಳೆಗಾಲದಲ್ಲಿ ಅವರ ಆಸ್ತಿ ಪಾಸ್ತಿಗಳನ್ನು ಕಳೆದುಕೊಂಡು ಭೀತಿಯಲ್ಲಿ ಏನು ಬದುಕುತ್ತಿದ್ದಾರೆ ಅದನ್ನು ಉಳಿಸಲಿಕ್ಕಾದರೂ ಸಾಧ್ಯವಾಗುತ್ತದೆ. ಅದಕ್ಕೆ ಒಂದು ಸಭೆಯನ್ನು ಕರೆದು ನೀವು ತೀರ್ಮಾನವನ್ನು ತೆಗೆದು ಕೊಳ್ಳಬೇಕಾಗುತ್ತದೆ. ಸಂಪೂರ್ಣವಾಗಿ ಅಭಿವೃದ್ಧಿಯನ್ನು ಮಾಡಲಿಕ್ಕೆ ಬಂದರು ಇಲಾಖೆಗೆ ಹಣವನ್ನು ಕೊಡುವ ವ್ಯವಸ್ಥೆ ಮಾಡಬೇಕು. ಏಕೆಂದರೆ ಸಂಪೂರ್ಣವಾಗಿ ತೆಗೆದಿದ್ದನ್ನು ಪುನಃ ವಾಪಸ್ಸು ಕೊಟ್ಟರೂ ಇನ್ನೂ ಸ್ವಲ್ಪ ಹೆಚ್ಚು ಬೇಕಾಗುತ್ತದೆ. ಕೊಡದೇ ಇದ್ದರೆ ಕರಾವಳಿ ಪ್ರದೇಶಕ್ಕೆ ದೊಡ್ಡ ಹೊಡೆತ ಬೀಳುತ್ತದೆಂದು ಹೇಳಬಯಸುತ್ತೇನೆ. ಇನ್ನು ಎಕ್ಸೈಸ್ ಬಗ್ಗೆ ಎಲ್ಲರೂ ಚರ್ಚೆ ಮಾಡಿದ್ದಾರೆ. ಸ್ಪಿರಿಟ್‌ನ್ನು ಬಿವರೇಜ್ ಕಾರ್ಪೋರೇಷನ್‌ಗೆ ಕೊಟ್ಟದ್ದನ್ನು ನಾನು ವೆಲ್‌ಕಮ್ ಮಾಡುತ್ತೇನೆ. ಆದರೆ ಮೊಲ್ಯಾಸಿಸ್ ಸಮೇತ ಅದರ ಮೂಲಕ ಹೋದಾಗ ಸಂಪೂರ್ಣ ಲೆಕ್ಕ ಸಿಗುತ್ತದೆ. ಮೊಲ್ಯಾಸಸ್‌ನ್ನು ನೀವು ಪ್ರೈಮರಿ ಡಿಸ್ಟಿಲರಿಗೆ ಕೊಟ್ಟು, ಅದಕ್ಕೆ ಲೆಕ್ಕ ಇಲ್ಲದೇ ಸ್ಪಿರಿಟ್‌ನ್ನು ಅವರು ಮೊನುಫ್ಯಾಕ್ಚರ್ ಮಾಡಿ, ಅರ್ರ್ಯಾಕ್‌ನ್ನೂ ಅವರೇ ಮ್ಯಾನ್‌ಫ್ಯಾಕ್ಚರ್ ಮಾಡುವುದಾದರೆ ಈಗೇನು ನಿಮಗೆ ಸ್ಕೆಂಡ್ಸ್ ಬರುತ್ತಿದೆ ಅದು ಕಂಟಿನ್ಯೂ ಆಗುತ್ತಲೇ ಹೋಗುತ್ತದೆ. ಏಕೆಂದರೆ ಮೊಲ್ಯಾಸಸ್ ಎಷ್ಟು ಬಂದಿದೆ ಎಂಬುದು ನಿಮಗೆ ಲೆಕ್ಕ ಸಿಗುವುದಿಲ್ಲ. ಇವೊತ್ತು ಅರ್ರ್ಯಾಕ್‌ನಲ್ಲಿ ಲೆಕ್ಕವನ್ನು ತೆಗೆದುಕೊಂಡರೆ ಕಿಸ್ತ್ ಎಷ್ಟು ಕಟ್ಟುತ್ತಾರೆ. ಅವರು ಸರ್ಕಾರದಿಂದ ಎಷ್ಟು ಅರ್ರ್ಯಾಕ್‌ನ್ನು ಡ್ರಾ ಮಾಡುತ್ತಾರೆ ಅದಕ್ಕೆ ತಾಳೆ ಇಲ್ಲ, ತಂತಿ ಇಲ್ಲವಾಗಿದೆ. ಹಾಗಾದರೆ ಉಳಿದ ಅರ್ರ್ಯಾಕ್ ಎಲ್ಲಿಂದ ಬಂತು? ಇವರು ಹೇಗೆ ಕಿಸ್ತ್‌ನ್ನು ಕಟ್ಟಿದ್ದಾರೆ ಆ ವಿವರ ಬೇಕಾಗುತ್ತದೆ. ಆದಕಾರಣ ಈ

ಮೊಲ್ಯಾಸಸ್ ಸ್ಟೇಜ್‌ನಲ್ಲಿ ಒಟ್ಟು ಮೊಲ್ಯಾಸಸ್ ಎಷ್ಟು ಶುಗರ್ ಫ್ಯಾಕ್ಟರಿಯಲ್ಲಿ ಇರುತ್ತದೆ ಎಂಬ ಲೆಕ್ಕವನ್ನು ನೀವು ತೆಗೆದುಕೊಳ್ಳಬೇಕು. ಅದು ಕ್ಯಾಟಲ್ ಫೀಲ್ಡ್‌ಗೆ ಹೋಗುವ ಮುಖಾಂತರ ಈ ಸೆಕೆಂಡ್ಸ್ ಉತ್ಪಾದನೆ ಏನು ಆಗುತ್ತದೆ ಅದನ್ನು ನೀವು ನಿಲ್ಲಿಸಬೇಕಾಗುತ್ತದೆ. ಮಾನ್ಯ ಉದಾಸಿಯವರಿಗೂ ಇದರ ಬಗ್ಗೆ ಚೆನ್ನಾಗಿ ಗೊತ್ತಿದೆ. ಏಕೆಂದರೆ ನಾವಿಬ್ಬರೂ ಸಕ್ಕರೆ ಕಾರ್ಖಾನೆಗಳ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದೇವೆ. ಅಲ್ಲಿ ಏನೇನು ನಡೆಯುತ್ತಿದೆ ಎಂಬ ಬಗ್ಗೆ ನಮ್ಮಲ್ಲಿ ಸಂಪೂರ್ಣ ಲೆಕ್ಕ ನಮಗಿದೆ. ಒಂದು ವೇಳೆ ನೀವು ಮೊಲ್ಯಾಸಸ್ ಬಗ್ಗೆ ಲೆಕ್ಕ ತೆಗೆದುಕೊಳ್ಳದೇ ಡೈರೆಕ್ಟ್ ಸ್ಪಿರಿಟ್‌ನ್ನು ಮಾತ್ರ ಅವರು ಮ್ಯಾನುಫ್ಯಾಕ್ಚರ್ ಮಾಡಿ ಅದಕ್ಕೆ ಅರ್ರ್ಯಾಕ್ ಸ್ಯಾಚೆಟ್ಸ್‌ನ್ನು ಅವರು ಮಾಡುವಂತಾದರೆ ಆ್ಯಸ್ ಯ್ಯುಶುವಲ್ ಇವೊತ್ತೇನು ಅರ್ರ್ಯಾಕ್ ಗುತ್ತಿಗೆದಾರರು ಏನನ್ನು ಮಾಢುತ್ತಿದ್ದಾರೆ. ಅಂದರೆ ಕಿಸ್ತ್ ಒಂದು ರೀತಿ ಕಟ್ಟುವುದು, ಡ್ರಾ ಮಾಡುವುದೇ ಒಂದು ಆಗುತ್ತದೆ. ಅಂದರೆ ವಾಪಸ್ಸು ಹಿಂದಿನದಕ್ಕೇ ಬರುತ್ತದೆ. ಇನ್ನೊಂದು ವಿಚಾರ ನೀವು 20 ರೂಪಾಯಿ ಇದ್ದಂಥದ್ದನ್ನು 2 ರೂಪಾಯಿಗೆ ಇಳಿಸಿರುವಂಥದ್ದು ಆಗಿದೆ. ಅಂದರೆ 18 ರೂಪಾಯಿಯ ಮಾರ್ಜಿನ್‌ನ್ನು ನೀವು ಅವರಿಗೆ ಬಿಟ್ಟಿದ್ದೀರಿ.

ಶ್ರೀ ಸಿದ್ಧರಾಮಯ್ಯ : ಮರ್ಜ್ ಮಾಡುತ್ತೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮರ್ಜ್ ಮಾಡುವಂಥದ್ದು. ಇಲ್ಲದಿದ್ದರೆ ಏನಾಗುತ್ತದೆಯೆಂದರೆ ಅವರಿಂದ ಕಿಸ್ತ್ ಇನ್ನೂ ಜಾಸ್ತಿ ಬರುತ್ತದೆ ಎಂದು ದಯವಿಟ್ಟು ನೀವು ತಿಳಿದುಕೊಳ್ಳಬೇಡಿ. ಏಕೆಂದರೆ ಅವರು ರಿಂಗ್ ಮಾಡಿಕೊಂಡೇ ಬಿಡ್ ಮಾಡುವುದು. ನೀವು ಮೊನ್ನೆ ಹೇಳಿದಿರಿ, ಅವರ ಕಂಡಕ್ಟರೋ, ಯಾರದೋ ಒಬ್ಬರ ಹೆಸರಿನಲ್ಲಿ ಮಾಡುವುದು. ಆದರೆ ಒಂದು ಒಳ್ಳೆಯ ಸಂಗತಿಯಾದರೆ ಇವೊತ್ತು ಬ್ಯಾಂಕ್ ಗ್ಯಾರಂಟಿ ಇಲ್ಲದೇ ಯಾವುದೇ ಬಿಡ್ ಮಾಡುವುದಕ್ಕೆ ಆಗುವುದಿಲ್ಲ. ಆದರೆ ಮೊದಲು ಈ ರೀತಿ ಇರಲಿಲ್ಲ. ಅವರು ಕಿಸ್ತ್‌ನ್ನು ಕಟ್ಟುತ್ತಿರಲಿಲ್ಲ. ಮಧ್ಯದಲ್ಲಿ ಬಿಟ್ಟುಹೋಗುವುದು, ಕೋರ್ಟ್‌ನಲ್ಲಿ ತಡೆಯಾಜ್ಞೆಯನ್ನು ತೆಗೆದುಕೊಳ್ಳುವುದು ಆಗುತ್ತಿತ್ತು. ಆದರೆ ಒಂದು ವಿಚಾರ ನನಗೆ ಅರ್ಥವಾಗಲಿಲ್ಲ. ಮಾನ್ಯ ಉಪಮುಖ್ಯ ಮಂತ್ರಿಗಳೇ. ಯಾರ್‍ಯಾರಿಂದ ಎಷ್ಟೆಷ್ಟು ಬಾಕಿ ಇದೆ ಎಂಬ ಬಗ್ಗೆ ಪಟ್ಟಿಯನ್ನೇನೋ ನಮಗೆ ಕೊಟ್ಟಿದ್ದೀರಿ ಅಷ್ಟು ಬಾಕಿ ಇಟ್ಟುಕೊಂಡಿದ್ದರೂ ಕೂಡ ಅವರಿಗೇ ಪುನಃ ಮೆಡಿಕಲ್ ಕಾಲೇಜ್‌ನ್ನು ಕೊಡಲಾಗಿದೆ. ನೀವು ಕೊಟ್ಟಿಲ್ಲ. ಆದರೆ ಹಿಂದಿನ ಸರ್ಕಾರ ಅವರಿಗೆ ಕೊಟ್ಟಿದೆ. ಅವರಿಗೇ ಮೆಡಿಕಲ್ ಕಾಲೇಜ್‌ನ್ನು ಕೊಟ್ಟಿದೆ. ಅವರಿಗೇ ಪುನಃ ಭೂಮಿಯನ್ನು ಕೊಡಲಾಗಿದೆ. ಅವರ ಭೂಮಿಯನ್ನು ಸರ್ಕಾರ ಈ ಬಾಕಿ ಇಟ್ಟುಕೊಂಡಿರುವುದಕ್ಕಾಗಿ ಜಪ್ತಿ ಮಾಡುವ ಕೆಲಸ ಮಾಡಲಿಲ್ಲ. ಅವರಿಗೆ ಪುನಃ ಭೂಮಿಯನ್ನು ಕೊಟ್ಟಿದೆ. ಬೇರೆ ಬೇರೆ ಇಂಡಸ್ಟ್ರೀಗಳಿಗೆ ಪರ್ಮಿಶನ್‌ನ್ನು ಕೊಟ್ಟಿದ್ದೀರಿ. ಹೀಗಾದರೆ ಅವರಿಂದ ವಸೂಲಿಯನ್ನು ಯಾವಾಗ ಮಾಡುವುದು ? ಇನ್‌ಟೆನ್‌ಶನ್ಸ್ ಏನು ? ಸದನಕ್ಕೆ ಒಂದು ರೀತಿ ಹೇಳುವುದು, ಅವರಿಗೆ ಬೇರೆ ದಾರಿಯಲ್ಲಿ ಸಹಾಯವನ್ನು ಮಾಡುವಂಥದ್ದು. ಇದನ್ನು ತಾವು ಸ್ವಲ್ಪ ಗಮನ

ಕೊಟ್ಟು ನೋಡಬೇಕು. ನೀವು ಏನೇನು ಬಿನಿಫಿಟ್‌ನ್ನು ಸಬ್‌ಸಿಕ್ವೆಂಟ್‌ಲಿ ಕೊಟ್ಟಿದ್ದೀರಿ ಅದನ್ನೆಲ್ಲವನ್ನೂ ಅವರಿಗೆ ವಿತ್‌ಡ್ರಾ ಮಾಡಬೇಕು. ಇಲ್ಲಿ ಸೀಟ್‌ನ್ನೂ ಕೊಡುವುದಿಲ್ಲ. ಅಂಥವರ ಹೆಸರುಗಳ ಇಡೀ ಪಟ್ಟಿಯನ್ನೇ ಕೊಟ್ಟಿದ್ದೀರಿ. ಸುಮಾರು ಹತ್ತು ಮೂವತ್ತು ಜನ ಇದ್ದಾರೆ. ಇನ್ನು ಐ.ಎಂ.ಎಫ್.ಎಲ್.ನ ಕಾಸ್ಟ್‌ಲೀ ಬ್ರಾಂಡ್‌ಗೆ ಡ್ಯೂಟಿಯನ್ನು ಹಿಂದಿನ ಸರ್ಕಾರ ಕಡಿಮೆ ಮಾಡಿದೆ. ಆದರೆ ಚೀಪರ್ ಬ್ರಾಂಡ್‌ಗಳು ಇಂದೂ ಕೂಡ ಇನ್ನೂ ಎಕ್ಸ್‌ಪೆನ್‌ಸೀವ್ ಆಗಿಯೇ ಇದೆ. ಇದರಿಂದಾಗಿ ಡೂಪ್ಲಿಕೇಟ್ ಬರುವುದಕ್ಕೆ ಇದು ಮಾರ್ಗವಾಗಿದೆ. ಚೀಪರ್ ಬ್ರಾಂಡ್‌ನ್ ಡ್ಯೂಟಿಯನ್ನೂ ಕೂಡ ಕಡಿಮೆ ಮಾಡಿ. ಈ ಡೂಪ್ಲಿಕೇಟ್‌ಗಳು ಮಾರುಕಟ್ಟೆಗೆ ಬರದೇ ಇರುವ ಹಾಗೆ ಮಾಡಿ. ಹಿಂದೆ ನೀವು ಬಿವರೇಜ್ ಕಾರ್ಪೋರೇಷನ್‌ನಲ್ಲಿ ಹೆದರಿ ಮಾಡಲಿಲ್ಲ ಎಂಬುದು ನನಗೆ ಗೊತ್ತಿದೆ. ಜನರು ಏನಾದರೂ ತಪ್ಪು ತಿಳಿದುಕೊಳ್ಳುತ್ತಾರೆಂದು ತಾವು ಒಂದು ತೀರ್ಮಾನಕ್ಕೆ ಈ ವಿಚಾರದಲ್ಲಿ ಬರಲಿಲ್ಲ. ಆದರೆ ಅದನ್ನು ಹಿಂದಿನ ಸರ್ಕಾರ ಮಾಡಿದಾಗ ನಾವು ಆಗ ಅಭಿನಂದನೆಯನ್ನು ಸಲ್ಲಿಸಿದ್ದೇವೆ, ಇವೊತ್ತು ನೀವು ಇದನ್ನು ಮಾಡಿ. ಯಾವ ಡ್ಯೂಟಿ ಸೋರಿಹೋಗುತ್ತಿದೆಯೋ ಅದನ್ನು ಅಲ್ಲಿ ಟ್ಯಾಪ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಿ. ಯಾವ ಡೂಪ್ಲಿಕೇಟ್ ಮಾರುಕಟ್ಟೆಗೆ ಬರದಂತೆ ಕ್ರಮ ತೆಗೆದುಕೊಂಡು, ಡ್ಯೂಟಿಯನ್ನು ಕಡಿಮೆ ಮಾಡಿ ರೆಗ್ಯುಲರ್ ಆಗಿ ಅವರಿಗೆ, ಇವರಿಗೆ, ಡಿಪಾರ್ಟ್‌ಮೆಂಟ್‌ನವರಿಗೆ ಕೊಡುವಂಥಾದ್ದು ಹೋಗಲಿ, ಮಾಮೂಲು ಕೊಡುವುದು ಹೋಗಲಿ, ಈ ರೀತಿ ಹೋಗುವುದೆಲ್ಲಾ ನಿಂತರೆ ಸರ್ಕಾರಕ್ಕೆ ನಿಜವಾಗಿಯೂ ಆದಾಯ ಜಾಸ್ತಿ ಆಗುತ್ತದೆ. ಈಗಾಗಲೇ ವೈನ್‌ಶಾಪ್‌ನಲ್ಲಿ ಅಲ್ಲಿಯೇ ಕುಡಿಯುವುದಕ್ಕೆ ಲಿಕ್ಕರ್ ಕೊಡುತ್ತಾರೆ. ಅವರಿಗೆ ನೀವು ಇನ್ನೂ ಚಾರ್ಜ್ ಮಾಡಿ, ಬೇಕಾದರೆ ಅವರಿಗೆ ಲೈಸೆನ್ಸ್‌ನ್ನು ಕೊಡಿ, ಅದರ ಮೇಲೆ ಅವರಿಂದ ಲೈಸೆನ್ಸ್ ಫೀಯನ್ನು ತೆಗೆದುಕೊಳ್ಳಿ. ಏಕೆಂದರೆ ಈಗಾಗಲೇ ಅವರು ಮಾಡುವುದನ್ನು ಮಾಡುತ್ತಲೇ ಇದ್ದಾರೆ.

ಮಾನ್ಯ ಸದಸ್ಯರು : ಸಿ.ಎಲ್. 2 ರೀತಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಹೌದು ಸಿ.ಎಲ್. 2 ರೀತಿ. ಇದರಿಂದಲೂ ಸ್ವಲ್ಪ ಆದಾಯ ಜಾಸ್ತಿ ಬರುವುದಕ್ಕೆ ಸಾಧ್ಯವಾಗುತ್ತದೆ. ಇನ್ನು ಈ ಕಾರ್ಪೋರೇಟ್ ಸೆಕ್ಟಾರ್ಸ್ ಬಗ್ಗೆ ಹೇಳಬೇಕೆಂದರೆ ಈಗಾಗಲೇ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ ಅವರು ನಮ್ಮನ್ನು ಹೆದರಿಸುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಹಿಂದೆ ಅಮೆರಿಕದಲ್ಲೂ ಇದೇ ರೀತಿ ಇತ್ತು. ಅಲ್ಲೊಂದು ಬಾರಿ ನಾನು ಒಂದು ಮ್ಯಾಗಜೈನ್‌ನಲ್ಲಿ ಓದುತ್ತಿದ್ದೆ, ಅದರಲ್ಲಿ ಏನು ಹೇಳಲಾಗಿತ್ತೆಂದರೆ

> "We Must have a political state powerful enough to deal with the corporate wealth, But how are we going to keep the State with its augmenting power from being captured by the forces you want to control"

ಅವರು ನಮ್ಮನ್ನು ಕಂಟ್ರೋಲ್ ಮಾಡುತ್ತಾರೆ. ನಾವು ಅವರನ್ನು ಕಂಟ್ರೋಲ್ ಮಾಡುತ್ತಿಲ್ಲ ಇವೊತ್ತು. ಕಾರ್ಪೋರೇಟ್ ಸೆಕ್ಟಾರ್ಸ್ ಸರ್ಕಾರವನ್ನು ಕಂಟ್ರೋಲ್ ಮಾಡುತ್ತಿದೆ. ಸರ್ಕಾರ ಕಾರ್ಪೋರೇಟ್ ಸೆಕ್ಟಾರ್ಸ್ ಅನ್ನು ಕಂಟ್ರೋಲ್ ಮಾಡುತ್ತಿಲ್ಲ. ಆ ವ್ಯವಸ್ಥೆ ಬದಲಾಗಬೇಕು. ಏಕೆಂದರೆ ಅವರೇನೂ ಸುಮ್ಮನೆ ಬರಲಿಲ್ಲ. ಅವರೂ ಕೂಡ ಬಿಸಿನೆಸ್ ಮಾಡಿಕೊಳ್ಳುವುದಕ್ಕೆ ಇಲ್ಲಿಗೆ ಬಂದಿದ್ದಾರೆ. ನೀವೇನು ಅದಕ್ಕೆ ಸ್ವಲ್ಪ ಟ್ಯಾಕ್ಸ್‌ನ್ನು ಜಾಸ್ತಿ ಮಾಡಿದ್ದೀರಿ ಅದೇನೂ ತಪ್ಪಲ್ಲ. ಏಕೆಂದರೆ ಅವರ ಆದಾಯ ಜಾಸ್ತಿ ಇದೆ. ರೈತರಿಗೆ ನೀವೇನು ಕೊಟ್ಟಿದ್ದೀರಿ. I complaint you. ಏಕೆಂದರೆ ಈಗಾಗಲೇ ನೀವು ರೈತರಿಗೆ ಶೇಕಡ 6 ರ ಬಡ್ಡಿ ದರದಲ್ಲಿ ಸಾಲವನ್ನು ಕೊಡುತ್ತೇವೆಂದು ಹಣವನ್ನು ತೆಗೆದು ಇಟ್ಟುಕೊಂಡಿದ್ದೀರಲ್ಲಾ ಅದಕ್ಕೋಸ್ಕರ I really appreciate the stand taken by the Hon'ble Chief Ministery & Dr. Chief Minister ಇದರ ಜೊತೆಗೆ ಸಾಲ ಮನ್ನಾ ಮಾಡುವ ಬಗ್ಗೆ 950 ಕೋಟಿ ರೂಪಾಯಿ ಬೇಕಾಗುತ್ತದೆಂದು ಹೇಳಿದ್ದೀರಿ. ಸಾಲ ಮನ್ನಾ ಯಾರಿಗೆ ಮಾಡುತ್ತೇವೆ, ಎಲ್ಲರಿಗೂ ಒಂದೇ ಸಲ ಕಟ್ಟುವುದಕ್ಕೆ ಆಗುವುದಿಲ್ಲ. ಬೇಕಾಗುವುದು ಮುನ್ನೂರು : ನಾಲ್ಕು ನೂರು ಕೋಟಿ ರೂ ಅಷ್ಟೇ. ಏಕೆಂದರೆ ಎಲ್ಲರಿಗೂ ಒಂದೇ ಸಲ ಕಟ್ಟುವುದಕ್ಕೆ ಬರುವುದಿಲ್ಲ. ಎಷ್ಟು ಆಗುತ್ತದೋ ಅಷ್ಟನ್ನು ಕಟ್ಟುವುದಕ್ಕೆ ವ್ಯವಸ್ಥೆ ಮಾಡಿ. ಈಗಾಗಲೇ ಈ ಹಿಂದೆ ಸಾಲ ಕಟ್ಟಿರುವವರಿಗೆ ಬಿನಿಫಿಟ್ ಏನು ಸಿಗಬೇಕೋ ಅದನ್ನು ಕೊಡಬೇಕು. ಕೆ.ಪಿ.ಟಿ.ಸಿ.ಎಲ್. ನವರು ಯಾವ ರೀತಿಯಲ್ಲಿ ಈ ವಿಚಾರದಲ್ಲಿ ಮಾಡುತ್ತಿದ್ದಾರೋ ಅದೇ ರೀತಿಯಲ್ಲಿ ಸಾಲ ಕಟ್ಟಿರುವ ರೈತರಿಗೆ ಸ್ವಲ್ಪ ಬಿನಿಫಿಟ್‌ನ್ನು ಕೊಡಬೇಕು ಎಂದು ಹೇಳಬಯಸುತ್ತೇನೆ. ಇನ್ನೂ ಮಾನ್ಯ ಸಿಂಧ್ಯಾರವರು ಈಗ ಇಲ್ಲಿ ಇದ್ದಿದ್ದರೆ ಚೆನ್ನಾಗಿತ್ತು. ಏಕೆಂದರೆ ಕೆ.ಎಸ್.ಅಂಡ್ ಡಿ.ಎಲ್. ಬಗ್ಗೆ ಬಹಳ ಮಾತನಾಡುವ ವಿಚಾರಗಳು ನನ್ನ ಹತ್ತಿರ ಇತ್ತು. ಅದು ಪಬ್ಲಿಕ್ ಅಂಡರ್ ಟೇಕಿಂಗ್ ಸಂಸ್ಥೆ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ. ಯಾವ ಎಂ.ಡಿ. ಅಲ್ಲಿಗೆ ಬಂದು ಕಂಟ್ರೋಲ್ ಮಾಡುವುದಕ್ಕೆ ಹೋದರೂ ಕೂಡ ಆ ಎಂ.ಡಿ. ಯವರನ್ನೇ ವರ್ಗಾವಣೆ ಮಾಡುವಂಥ ಪರಿಸ್ಥಿತಿ ಆ ಸೋಪ್ ಅಂಡ್ ಡಿಟರ್ಜೆಂಟ್ ಕಾರ್ಖಾನೆಯಲ್ಲಿ ಇದೆ. ಅಲ್ಲಿ ಇಬ್ಬರೂ ಅಧಿಕಾರಿಗಳು ಸೇರಿಕೊಂಡು, ಎರಡ್ಮೂರು ಜನರು ಸೇರಿಕೊಂಡು, ಹಿಂದೆ ಇದ್ದ ಅಧಿಕಾರಿ ಇವರುಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಹೊರಟಾಗ ಅವರನ್ನೇ ವರ್ಗ ಮಾಡಿಸಿದರು. ಈಗ ಒಬ್ಬರು ಬಂದಿದ್ದಾರೆ ಪಾಪ. ಅವರಿಗೆ ನೀವು ಸ್ವಲ್ಪ ಸಪೋರ್ಟ್‌ನ್ನು ಜಾಸ್ತಿ ಮಾಡಿ. ಅಲ್ಲೇನಾಗಿದೆ ಒಬ್ಬ ಅಧಿಕಾರಿಯೇ ಕಂಪನಿ ಸೆಕ್ರೆಟರಿ ಆಗಿರುತ್ತಾನೆ. ಫೈನಾನ್ಸಿಯಲ್ ಅಡ್ವೈಸರ್ ಆಗಿರುತ್ತಾನೆ ಅಕೌಂಟ್ಸ್ ಆಫೀಸರ್ಸ್ ಕೂಡ ಅವನೇ ಆಗಿರುತ್ತಾನೆ. ಹಿಂದೆ ಸೆಕ್ರೆಟೇರಿಯೇಟ್‌ನಲ್ಲೂ ಕೂಡ ಅವರಿಗೆ ಸ್ವಲ್ಪ ಬೆಂಬಲ ಸಿಕ್ಕಿತ್ತು. ಹಿಂದಿನ ಎಂ.ಡಿ.ಯವರು ವರ್ಗಾವಣೆಯಾಗಿದ್ದಾಗ ಆ ನಡುವಿನ ಅವಧಿಯಲ್ಲಿ ಒಬ್ಬರು ಜಾಯಿಂಟ್ ಸೆಕ್ರೆಟರಿಯೋ, ಅಡಿಶನಲ್ ಸೆಕ್ರೆಟರಿಯೋ ಒಬ್ಬರು ಛಾರ್ಜ್‌ನಲ್ಲಿ

ಇದ್ದಾಗ ಆ ಹಿಂದಿನ ಎಂ.ಡಿ.ಯವರು ಮಾಡಿದ್ದ, ತೆಗೆದುಕೊಂಡಿದ್ದ ಕ್ರಮಗಳನ್ನು ರಿವರ್ಸ್ ಎಷ್ಟು ಮಾಡಿದ್ದಾರೆ ಎಂಬ ಬಗ್ಗೆ ತನಿಖೆಯನ್ನು ಮಾಡಬೇಕಾಗುತ್ತದೆ. ಏಕೆಂದರೆ ಒಬ್ಬ ಎಂ.ಡಿ. ಮಾಡಿದ್ದ ಕ್ರಮಗಳನ್ನು ಇನ್‌ಛಾರ್ಜ್ ಇರುವವರು ರಿವರ್ಸ್ ಮಾಡುವುದಕ್ಕೆ ಆಗುತ್ತದೆಯೆ ? ಇದರ ಬಗ್ಗೆ ಸ್ವಲ್ಪ ಗಮನವನ್ನು ಹರಿಸಿದಾಗ ಕೆ.ಎಸ್.ಅಂಡ್ ಡಿ.ಎಲ್.ನ ಅವರು ಮಾರಬೇಕೆಂದು ಏನು ಹೇಳಿದರು. ಆ ರೀತಿ ಮಾರುವ ಅಗತ್ಯವೇ ಇಲ್ಲ ಇನ್ನೂ ಹೆಚ್ಚು ಲಾಭವನ್ನು ತರುವಂತೆ ಮಾಡಲು ಸಾಧ್ಯವಾಗುತ್ತದೆ. ಎಂ.ಡಿ. ಗಮನಕ್ಕೇ ತರದೇ ವಿಪ್ರೋದವರನ್ನು ಕೆ.ಎಸ್. ಅಂಡ್ ಡಿ.ಎಲ್.ಗೆ ಕರೆದುಕೊಂಡು ಹೋಗುತ್ತಾರೆ. ಏಕೆಂದರೆ ಇದನ್ನು ಮಾರಾಟ ಮಾಡುವುದಕ್ಕಾಗಿ. ಇದರ ಬಗ್ಗೆ ನಾನು ಮುಂದೆ ಲ್ಯಾಂಡ್ಸ್ ಸ್ಕ್ಯಾಂಡಲ್ ಬಗ್ಗೆ. ಇಂಡಸ್ಟ್ರೀಸ್ ಬಗ್ಗೆ ಮಾತನಾಡುವಾಗ ಮಾತನಾಡುತ್ತೇನೆ. ಇನ್ನು ಈಗ ರೇಶನ್ ಕಾರ್ಡ್ ಬಗ್ಗೆ ಹೇಳುವುದೇನೆಂದರೆ ಹಿಂದೆ ಈ ಕಾರ್ಡ್‌ಗಳ ಬಣ್ಣವನ್ನು ಮಾತ್ರ ಬದಲಾವಣೆ ಮಾಡುತ್ತಾ ಹೋದರು. ಆದರೆ ಸಮಸ್ಯೆ ಮಾತ್ರ ಪರಿಹಾರವಾಗಲಿಲ್ಲ. ಹಳದಿ. ಕೆಂಪು, ನೀಲಿ ಬಣ್ಣವೆಲ್ಲವೂ ಆಯಿತು. ಅದರಲ್ಲೂ ಇನ್ನೊಂದು ತಪ್ಪು ಮಾಡಿದ್ದು ಏನೆಂದರೆ ಎಲ್ಲಾ ಕಾರ್ಡ್‌ಗಳನ್ನು ಸ್ಥಗಿತಗೊಳಿಸಿ ಅವರು ಈ ಬದಲಾವಣೆಯನ್ನು ಮಾಡುವುದಕ್ಕೆ ಹೊರಟರು. ಇದ್ದ ವ್ಯವಸ್ಥೆಯನ್ನೇ ಮುಂದುವರೆಸಿಕೊಂಡು ಹೋಗಿ ಬದಲಾವಣೆಯನ್ನು ಹೇಗೆ ಮಾಡಬಹುದು ಎಂಬ ಬಗ್ಗೆ ಅವರು ಆಲೋಚನೆಯುನ್ನು ಮಾಡಲಿಲ್ಲ. ಅದೆಲ್ಲವನ್ನೂ ಸ್ಥಗಿತಗೊಳಿಸಿಬಿಟ್ಟು ಬದಲಾವಣೆಯನ್ನು ಮಾಡುವುದಕ್ಕೆ ಹೊರಟರು. ಇದರಿಂದ ಏನಾಯಿತು ಎಂದರೆ ಹಿಂದೆ ಯಾರಿಗೆ ಕಾರ್ಡ್ ಇತ್ತೋ ಅವರಿಗೆ ಇಂದು ಕಾರ್ಡಿಲ್ಲದಂತಾಗಿದೆ. ಯಾರಿಗೆ ಕಾರ್ಡ್ ಪಡೆಯಲು ಅರ್ಹತೆ ಇಲ್ಲವೋ ಅವರಿಗೆ ಕಾರ್ಡ್‌ನ್ನು ಕೊಟ್ಟಿದ್ದಾರೆ. ಆದುದರಿಂದ ಈ ಬಗ್ಗೆ ತನಿಖೆಯನ್ನು ಮಾಡಿಸಿ ಯಾರ್ಯಾರಿಗೆ ಅಗತ್ಯವಿಲ್ಲವೋ, ಅರ್ಹತೆ ಇಲ್ಲವೋ ಅಂಥವರ ಕಾರ್ಡ್‌ಗಳನ್ನು ಕ್ಯಾನ್ಸಲ್ ಮಾಡಿಸಿ ಯಾರಿಗೆ ಅರ್ಹತೆ, ಅಗತ್ಯತೆ ಇದೆಯೋ ಅವರಿಗೆ ಕಾರ್ಡ್‌ನ್ನು ಕೊಡಿಸುವ ವ್ಯವಸ್ಥೆಯನ್ನು ಮಾಡಿಸಬೇಕೆಂದು ಕೇಳಬಯಸುತ್ತೇನೆ. ಇನ್ನು ಖಾಸಗಿ ಅನುದಾನಿತ ಶಾಲೆಗಳಿಗೂ "ಮಿಡ್ಡೇ ಮೀಲ್ಸ್" ಯೋಜನೆಯನ್ನು ಹಾಕಿಕೊಂಡಿದ್ದೀರಿ. ಅದು ನಿಜವಾಗಿಯೂ ಒಳ್ಳೆಯ ಕೆಲಸವಾಗಿದೆ. ಇದರಿಂದಾಗಿ ಸರ್ಕಾರಿ ಮತ್ತು ಖಾಸಗಿ ಶಾಲೆಗಳ ಮಧ್ಯೆ ಇದ್ದ ಅನಾರೋಗ್ಯಕರವಾದ ಸ್ಪರ್ಧೆಯನ್ನು ತಾವು ನಿಲ್ಲಿಸಿದ್ದೀರಿ. ಸರ್ಕಾರಿ ಶಾಲೆಗೆ ಯಾವ ರೀತಿ ಅನುಪಾತ ಇದೆಯೋ ಅದೇ ರೀತಿ ಖಾಸಗಿ ಶಾಲೆಗಳಿಗೂ ಶಿಕ್ಷಕರ ಅನುಪಾತ ಇರಬೇಕು. ಆ ರೀತಿ ಕೂಡ ನೀವು ಮಾಡಬೇಕು. ಮಿಡ್ಡೇ ಮೀಲ್ಸ್ ಕೊಡುವ ಬಗ್ಗೆ ಬಂದು ಒಳ್ಳೆ ಕೆಲಸ ಮಾಡಿದ್ದೀರಿ. ಇದೇ ರೀತಿ ಶಿಕ್ಷಕರ ಅನುಪಾತದ ಬಗ್ಗೆ ಕೂಡ ಕ್ರಮ ತೆಗೆದುಕೊಳ್ಳಬೇಕಾದ ಅವಶ್ಯಕತೆ ಇದೆ. ಏಕೆಂದರೆ ಖಾಸಗಿ ಶಾಲೆಯಲ್ಲಿ 40 ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕರು ಇದ್ದರೆ ಸರ್ಕಾರಿ ಶಾಲೆಯಲ್ಲಿ ಇಪ್ಪತ್ತು ವಿದ್ಯಾರ್ಥಿಗಳಿಗೆ ಒಬ್ಬರು ಶಿಕ್ಷಕರು ಇರುವಂಥದ್ದು. ಈ ರೀತಿ ಆಗಬಾರದು. ಇನ್ನು ವರ್ಗಾವಣೆ ಮಾಡುವುದನ್ನು ಜಿಲ್ಲಾ ಪಂಚಾಯತ್‌ಗೆ

ಕೊಟ್ಟಿರುವುದು ಸ್ವಲ್ಪ ತಪ್ಪು, ಅವರಿಗೆ ಕೊಟ್ಟಿಲ್ಲವಾದರೂ ಅವರು ನಮ್ಮ ಕಂಟ್ರೋಲ್‌ನಲ್ಲಿರಬೇಕು ಎನ್ನುತ್ತಾರೆ. ನಾನು ಉಡುಪಿಯಲ್ಲಿ ನಡೆದ ಒಂದು ಉದಾಹರಣೆಯನ್ನು ಸದನದಲ್ಲಿ ಹೇಳಲು ಬಯಸುತ್ತೇನೆ. ಒಬ್ಬ ಸದಸ್ಯರು ಒಬ್ಬ ಶಿಕ್ಷಕರ ಮೇಲೆ ಆಪಾದನೆಯನ್ನು ಮಾಡಿ ವರ್ಗಾವಣೆಯನ್ನು ಮಾಡುತ್ತಾರೆ, ಆಗ ನಾನು ಈ ರೀತಿ ಪರೀಕ್ಷೆ ಸಮಯದಲ್ಲಿ ಮಾಡಬೇಡಿ ಎಂದರೂ ನನ್ನ ಮಾತನ್ನು ಅವರು ಕೇಳಲಿಲ್ಲ. ನಂತರ ಅದೇ ಜಿಲ್ಲಾ ಪಂಚಾಯತಿ ಮೆಂಬರ್, ಅವರ ಮನೆಗೆ ಹೋಗಿ ಕಾಲು ಹಿಡಿದುಕೊಂಡರು ಎಂದು ಹೇಳಿ ಆ ಮೆಂಬರ್ ಇದನ್ನು ಕ್ಯಾನ್ಸಲ್ ಮಾಡಿ ಎಂದು ಪತ್ರವನ್ನು ಕೊಡುತ್ತಾರೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೆ, ನಾವು 78 ಸದಸ್ಯರು ಗೆದ್ದು ಬಂದಿದ್ದರೂ ನಮಗೆ ಹೆಚ್ಚು ಸಮಯ ಮಾತನಾಡುವುದಕ್ಕೆ ಕೊಡುವುದಿಲ್ಲ. ಆದರೆ ಬೇರೆ ಪಕ್ಷಗಳಲ್ಲಿ ಒಬ್ಬೊಬ್ಬರು ಗೆದ್ದು ಬಂದಿದ್ದರೂ ಅವರಿಗೆ ನೀವು ಒಂದೊಂದು ಗಂಟೆ ಮಾತನಾಡಲು ಅವಕಾಶ ಕೊಡುತ್ತೀರಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಇದನ್ನು ನೀವು ನಿಮ್ಮ ಲೀಡರ್ ಹತ್ತಿರ ಹೇಳಬೇಕು ನಾಯ್ಡುರವರೇ ನನ್ನ ಹತ್ತಿರ ಅಲ್ಲ. ಏಕೆಂದರೆ ನಿಮ್ಮ ಲೀಡರ್‌ಗಳೇ ಹೆಚ್ಚು ಸಮಯವನ್ನು ತೆಗೆದುಕೊಳ್ಳುತ್ತಾರೆ. They have taken more time ನಿಮ್ಮ ಲೀಡರ್ ಮಾತನಾಡುವಾಗ ನೀವೇಕೇ ಹೀಗೆ ಕೇಳುವುದಿಲ್ಲ ?

ಅಧ್ಯಕ್ಷರು : ನಾಯ್ಡುರವರೇ, ಇವರು ಫ್ಲೋರ್ ಲೀಡರ್ ಎಂದೇ ನಾನು ಸ್ವಲ್ಪ ಲೀನಿಯಂಟ್ ಆಗಿ ಅವಕಾಶ ಕೊಟ್ಟಿದ್ದೇನೆ.

ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು : ನಮಗೂ ಮಾತನಾಡಲು ಹೆಚ್ಚು ಸಮಯದ ಅವಕಾಶ ಕೊಡಿ.

ಅಧ್ಯಕ್ಷರು : ಕೊಡೋಣ. ಕೊಡೋಣ.

12.50 ಪಿಎಂ

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಪ್ರತಿ ಇಶ್ಯೂ ಮೇಲೆ ನಿಮ್ಮ ಲೀಡರ್ ಮಾತನಾಡುವಾಗ ಹೇಳಿ ಕಡಿಮೆ ಮಾಡಿ ಎಂದು.

ಅಧ್ಯಕ್ಷರು : ಏನು ಮಾಡೋದು ? ಅವರ ಮುಖಾಂತರ ಅವರ ಪಕ್ಷವನ್ನು ರೆಪ್ರೆಸೆಂಟ್ ಮಾಡುತ್ತಾರೆ. ಆ ಕಾರಣದಿಂದ ಸ್ವಲ್ಪ ಲೀನಿಯಂಟ್ ಆಗಿ ಕೊಟ್ಟಿದೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಒಬ್ಬೊಬ್ಬರು ಆರಿಸಿಬಂದವರಿಗೆ ಒಂದೊಂದು ಘಂಟೆ ಕೊಡಿ. 78 ಜನ ಆರಿಸಿಬಂದವರಿಗೂ ಒಂದು ಘಂಟೆ ಕೊಡಿ, ಅಲ್ಲಿಗೆ ಸರಿ ಹೋಗುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನನ್ನೊಬ್ಬರಿಗೆ ಜನ ಓಟು ಕೊಟ್ಟು ಬಂದಿದ್ದು, ನೀವು ಕಳುಹಿಹಿಸಿದ್ದಲ್ಲ ಇಲ್ಲಿಗೆ. ಜನ ಓಟು ಕೊಟ್ಟಿದ್ದರಿಂದ ನಾನು ಇಲ್ಲಿಗೆ ಬಂದಿದ್ದೇನೆ. ನೀವು ಪಾರ್ಟಿ ಹೆಸರಿನಲ್ಲಿ ಬಂದಿದ್ದೀರಿ. ನಾನು ವೈಯಕ್ತಿಕವಾಗಿ ಬಂದಿದ್ದೇನೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೆ, ನಾನು ಕೇಳಿದ್ದು. 78 ಜನ ಆರಿಸಿಬಂದವರೂ ಕೂಡ ನೀವು ಎಲ್ಲರಿಗೂ ಸೇರಿಸಿ ಒಂದೇ ಸಮಯ ಕೊಟ್ಟು ಈ ಕಡೆ ಇರುವವರು ಐದು ನಿಮಿಷ ಎಂದಾಗ ಕೊಡದೆ ಇರುವುದಕ್ಕಾಗಿ, ಸಮಯ ಕೊಡಿ ಎಂದು ನಾನು ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು : ತಾವು ಅರ್ಥ ಮಾಡಿಕೊಳ್ಳಬೇಕು. ನಾನು ಮೊದಲೆ ವಿನಂತಿ ಮಾಡಿಕೊಂಡೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಸಮಯ ಕೊಟ್ಟರೆ ಎಲ್ಲರಿಗೂ ಕೊಡಿ ಸ್ವಾಮಿ.

ಅಧ್ಯಕ್ಷರು : ಅವರಿಗೆ ಸ್ವಲ್ಪ ಲೀನಿಯಂಟ್ ಆಗಿ.....

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಛೇ, ಛೇ, ಅವರ ಬಗ್ಗೆ ನಾನು ವೈಯಕ್ತಿಕವಾಗಿ ದಯವಿಟ್ಟು ಹೇಳುತ್ತಿಲ್ಲ.

ಅಧ್ಯಕ್ಷರು : ಇನ್ನೇನು ? ಇನ್ನು ಯಾರ ಬಗ್ಗೆ ಹೇಳುತ್ತಿದ್ದೀರಿ ? ನನ್ನ ಬಗ್ಗೆ ಹೇಳುತ್ತಿದ್ದೀರಾ? ಆಯಿತು ಮುಗಿಸುತ್ತಾರೆ ಕುಳಿತುಕೊಳ್ಳಿ. ಬೇಗ ತಾವು ಮುಗಿಸಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನಾನು ಒಂದೈದು ನಿಮಿಷದಲ್ಲಿ ಮುಗಿಸುತ್ತೇನೆ.

ಡಾ; ವೈ. ನಾಗಪ್ಪ : ಮಾನ್ಯ ಅಧ್ಯಕ್ಷರೆ, ಬೇಕಾದರೆ ಈ ಸದನವನ್ನು ಎರಡು ದಿವಸ ಎಕ್ಸ್‌ಟೆಂಡ್ ಮಾಡಿ. ಅವರೂ ಮಾತನಾಡಲಿ. ಸಮಗ್ರವಾಗಿ ಚರ್ಚೆಯಾಗಲಿ.

ಅಧ್ಯಕ್ಷರು : ಆಗಲಿ ಬೇಗ ಮುಗಿಸಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಲೆನಾಡು ಅಭಿವೃದ್ಧಿ ಮಂಡಲಿಯಲ್ಲಿ ನಮ್ಮದೆಲ್ಲಾ ಕೆಲಸವಾಗಿದೆ. ಕೆಲಸವಾದರೆ ಅಲ್ಲಿ ಪೇಮೆಂಟ್ ಆಗಿಲ್ಲ. ಸ್ಯಾಂಕ್ಷನ್ ಆದ ಕೆಲಸಕ್ಕೆ ಟೆಂಡರ್ ಕರೆದು ವರ್ಕ್ಸ್ ಆಗುತ್ತಿಲ್ಲ ಅವು ಅನೇಕ ವರ್ಷಗಳಿಂದ ಬಾಕಿ ಇದೆ. ಅದಕ್ಕೆ ಇದೆಲ್ಲಾ close ಮಾಡಬೇಕು. ಇಲ್ಲದೆ ಇದ್ದರೆ ಹಣವನ್ನು ಕೊಡಬೇಕು. ಅದನ್ನು ಇಟ್ಟುಕೊಂಡು ಕೆಲಸ ಮಾಡುತ್ತೇವೆ ದುಡ್ಡು ಕೊಡದೆ ಮಾನ್ಯ ನಾಗರಾಜು ಅವರು ಹೇಳಿದರು, ಶಾಸಕರಿಗೆ ಏನೂ ಕೆಲಸ ಮಾಡುವುದಕ್ಕೆ ಆಗುತ್ತಿಲ್ಲ ಎಂದು ಅದು ಒಂದೇ ಇದ್ದದ್ದು. ಈ ಅಭಿವೃದ್ಧಿ ಮಂಡಲಿ ಮೂಲಕ ಕೆಲವು ಕೆಲಸವನ್ನು ಮಾಡಿಸುವುದಕ್ಕೆ ಅವಕಾಶ ಇತ್ತು. ಶಾಸಕರ ನಿಧಿ ಈಗ ಇಲ್ಲ. ಅಭಿವೃದ್ಧಿ ಮಂಡಳಿಗಳ ಮುಖಾಂತರ ಹಣವೂ ಇಲ್ಲ. ದಯವಿಟ್ಟು ಇವೆರಡನ್ನು ಕೊಡಬೇಕು. ಏಕೆಂದರೆ ಎಂಪಿ ಗಳು ಎರಡು ಕೋಟಿ ರೂಪಾಯಿ ಖರ್ಚು ಮಾಡುತ್ತಾರೆ. ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಅವರ ಹತ್ತಿರ ಕೂಡ ಹಣ ಇದೆ. ಗ್ರಾಮ ಪಂಚಾಯತ್‌ನಲ್ಲಿ ಕೂಡ ಕೆಲಸ ಮಾಡಿಸುವುದಕ್ಕೆ ಆಗುತ್ತದೆ. ಲೋಕಸಭೆಯವರು ಶಾಸನ ಮಾಡುವುದು, ನಮ್ಮದೂ ಕೂಡ ಅದೇ ಕೆಲಸ. ಅವರಿಗೆ ಹಣ ಇದೆ, ನಮಗೆ ಹಣ ಇಲ್ಲ ರಾಜ್ಯ ಸರ್ಕಾರದಿಂದ ಅವರಿಗೆ ಕಾರನ್ನು ಕೊಡುತ್ತೀರಿ. ಸ್ಟಾಫ್ ಅನ್ನು ಕೊಡುತ್ತೀರಿ. ಆದರೆ ಆ

ಕೋಟಿ ರೂಪಾಯಿ ಯಾವುದಕ್ಕೆ ಖರ್ಚು ಮಾಡುತ್ತಾರೆ ಎಂದು ಒಂದು ಪಟ್ಟಿಯನ್ನು ತರಿಸಿನೋಡಿ. ಇನ್ನೊಂದು ನೀವು ಆಯವ್ಯಯವನ್ನು ಮಂಡಿಸಿದ ಮೇಲೆ ಯಾವ್ಯಾವುದಕ್ಕೆ ಟ್ಯಾಕ್ಸ್ ಹಾಕುತ್ತೀರಿ, ಆ ಆಯವ್ಯಯಕ್ಕೆ ಸದನದ ಒಪ್ಪಿಗೆಯನ್ನು ಪಡೆಯುತ್ತೀರಿ. ಬಜೆಟ್ ಆದ ಮೇಲೆ ಟ್ಯಾಕ್ಸ್ ಕನ್ಸಿಷನ್ ಕೊಡುತ್ತೀರಲ್ಲಾ ಅದನ್ನು ನೇರವಾಗಿ ಟೇಬಲ್ ಮಾಡುತ್ತೀರಿ ಮತ್ತು ಪಾಸ್ ಮಾಡಿಕೊಂಡು ಹೋಗುತ್ತೀರಿ. ಅದನ್ನೂ ಸಹ ಬಜೆಟ್. ಆದಮೇಲೆ ಎಷ್ಟು ಕನ್ಸಿಷನ್ ಆಗಿದೆ ಎಂದು ನೀಮ್ಮ ರೆವಿನ್ಯೂ ರೆಸಿಟ್ ಕಡಿಮೆ ಆಗಬೇಕು. ನಂತರದ ಕನ್ಸಿಷನ್ ಕೊಟ್ಟಿರುವುದರಿಂದ ತಾವು ಹಿಂದೆ ಏನೇನಾಗಿದೆ ಎಂದು ಒಂದು ಪಟ್ಟಿಯನ್ನು ನೋಡಬೇಕು. ಏಕೆಂದರೆ ನೇರವಾಗಿ ಟೇಬಲ್ ಮಾಡಿದಾಗ ನಮಗೆ ಗೊತ್ತಾಗುವುದಿಲ್ಲ. ಸಿಎಜಿ ರಿಪೋರ್ಟ್ ಬಗ್ಗೆ ಸಹ ಗಮನವನ್ನು ಹರಿಸುತ್ತಾ, 'ಚೀಫ್ ಮಿನಿಸ್ಟರ್ ರೋಡ್ ಫಂಡ್' ಇದರಲ್ಲಿ ಯಾವ್ಯಾವ ರಸ್ತೆಗಳು ಬರುತ್ತವೆಂದು ಮಾನ್ಯ ಸಹೋದರಿಯಾದ ಭಾಗೀರಥಿಯವರು ನಿನ್ನೆ ಕೇಳಿದರು. ಇದಕ್ಕೆ ಜಿಲ್ಲಾ ಪಂಚಾಯತ್, ಪಿಡಬ್ಲ್ಯೂಡಿ ಎಲ್ಲಾ ರಸ್ತೆಗಳು ಬರುತ್ತದೆಯೋ ಅಥವಾ ಕೆಲವು ರಸ್ತೆಗಳನ್ನು ಮಾತ್ರ ಚೀಫ್ ಮಿನಿಸ್ಟರ್ ರೋಡ್ ಫಂಡ್‌ಗೆ ಒಳಗೆ ತರುತ್ತೀರಾ ಎಂದು.

ಶ್ರೀ ಎಸ್. ಸಿದ್ಧರಾಮಯ್ಯ : ಜಿಲ್ಲಾಪಂಚಾಯತ್‌ಗೆ ಬರುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಇದನ್ನು ಯಾರ ಮುಖಾಂತರ ಮಾಡುತ್ತೀರಿ? ಜಿಲ್ಲಾ ಪಂಚಾಯತ್ ಮುಖಾಂತರ ಆಗುತ್ತದೆ ? ಇದರಲ್ಲಿ ಶಾಸಕರ ಮಾತು ಏನಾದರೂ ನಡೆಯುತ್ತದಾ? ಅದು ಗೊತ್ತಾಗಬೇಕು. ಇಲ್ಲದೇ ಇದ್ದರೆ ನಮಗೆ ಏನು ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗದೆ ಇದ್ದರೆ ಹೇಗೆ ? ಜನ ಪ್ರತಿಯೊಬ್ಬ ಶಾಸಕರ ಹತ್ತಿರ ರೇಷನ್ ಕಾರ್ಡ್‌ನಿಂದ ರೋಡ್‌ರವರೆಗೂ ಸಹ ಕೇಳುತ್ತಾರೆ.. ಶಾಸಕರು ಏನೂ ಮಾಡುವುದಕ್ಕೆ ಇಲ್ಲ. ಅವರು ಬೇರೆ ಯಾವ ಜನರನ್ನೂ ಕೇಳುವುದಿಲ್ಲ. ಅದನ್ನು ದಯವಿಟ್ಟು ತಾವು ಪರಿಗಣಿಸಬೇಕೆಂದು ಹೇಳುತ್ತಾ ಇನ್ನು ಸೆಸ್ ಬಗ್ಗೆ ಹೇಳುವುದಾದರೆ, ಎಜುಕೇಷನ್ ಸೆಸ್ ಹಾಗೂ ರೋಡ್ ಸೆಸ್ ಕಲೆಕ್ಟ್ ಮಾಡುತ್ತೀರಿ ಆ ಸೆಸ್ ಅನ್ನು ಯಾವ ಪರ್ಪಸ್‌ಗೆ ಕಲೆಕ್ಟ್ ಮಾಡಿದ್ದೀರಿ ಅದೇ ಪರ್ಪಸ್‌ಗೆ ಉಪಯೋಗವಾಗಿದೆಯಾ ಅಥವಾ ಅದನ್ನು ಬೇರೆ ಪರ್ಪಸ್‌ಗೆ ಡೈವರ್ಟ್ ಆಗಿದೆಯಾ ? ಇದರ ಬಗ್ಗೆ ಸಹ ಮಾಹಿತಿಯನ್ನು ಕೊಡಬೇಕಾಗುತ್ತದೆ. ಏಕೆಂದರೆ ಇದು ಮೇನ್ ಪೂಲ್‌ಗೆ ಹೋಗಿದೆ ಎಂದು ನನ್ನ ಇನ್‌ಫರ್ಮೇಷನ್ ಪ್ರಕಾರ ಇದೆ. ಅದು ಆಗಬಾರದು. ಯಾವು ಪರ್ಪಸ್‌ಗೆ ಸೆಸ್ ಅನ್ನು ಕಲೆಕ್ಟ್ ಮಾಡಿದ್ದೀರಿ, ಆ ಪರ್ಪಸ್‌ಗೆ ಅದು ಯುಟಿಲೈಜ್ ಆಗಬೇಕೆಂದು ಹೇಳುತ್ತಾ, ಇನ್ನು ಕೊನೆಯದಾಗಿ ಒಂದು ವಿಷಯವನ್ನು ನಾನು ಹೇಳುವುದಾದರೆ ವ್ಯಾಟ್ ಸಿಸ್ಟಂ ಆನ್‌ಲೈನ್ ಲಾಟರಿ. ವ್ಯಾಟ್ ಸಿಸ್ಟಂನಲ್ಲಿ ನಾನು ಹೇಳಿದ್ದೆ ಕಳೆದ ಏಪ್ರಿಲ್ ಫಸ್ಟ್‌ಗೆ ಇಂಪ್ಲಿಮೆಂಟ್ ಮಾಡಬೇಕೆಂದು ಎಲ್ಲಾ ವ್ಯವಸ್ಥೆಯನ್ನು ಮಾಡಿ ಆ್ಯಕ್ಷನ್ ತೆಗೆದುಕೊಳ್ಳುವುದಕ್ಕೆ ಇನ್ನೊಂದು ವಾರ ಟೈಂ ಇರುವುದು, ನಿಮ್ಮ ಕೈಯಲ್ಲಿ ಆಗುವುದಿಲ್ಲವೆಂದು. ಆದರೆ ಮಾಡುತ್ತೇವೆಂದು ಹೇಳಿದರು. ಕೊನೆಗೆ ಅದನ್ನು

ಜಾರಿಗೆ ತಂದು ವಾಪಸ್ಸು ತೆಗೆದುಕೊಂಡು ಹೋಗುವ ಪರಿಸ್ಥಿತಿಗೆ ಬಂತು. ಎಲ್ಲಾ ರಾಜ್ಯಗಳಲ್ಲೂ ವ್ಯಾಟ್ ಅನ್ನು ಇಂಟ್ರಡ್ಯೂಸ್ ಮಾಡುತ್ತಾರೆಂದು ಇದ್ದಾಗ ಮಾತ್ರ ನಮ್ಮ ರಾಜ್ಯದಲ್ಲಿ ಮಾಡಬೇಕು. ಕೇವಲ ಕರ್ನಾಟಕ ರಾಜ್ಯದಲ್ಲಿ ಮಾಡಿ ಅದನ್ನು ಬೇರೆ ರಾಜ್ಯಗಳಲ್ಲಿ ಇಲ್ಲದೇ ಇದ್ದರೆ ನಮ್ಮ ರಾಜ್ಯಕ್ಕೆ ಅದರಿಂದ ತೊಂದರೆಯಾಗುತ್ತದೆಂದು ಹೇಳುತ್ತಾ ಆನ್‌ಲೈನ್ ಲಾಟರಿ ಬಗ್ಗೆ ಹೇಳುವುದಾದರೆ ನಾನು ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇದನ್ನು ನಿಲ್ಲಿಸುವುದಕ್ಕೆ ಒಂದು ತೀರ್ಮಾನ ತೆಗೆದುಕೊಂಡಿದ್ದಕ್ಕೆ ಅಭಿನಂದಾನರ್ಹ.. ಆದರೆ ರಾಜ್ಯಸರ್ಕಾರ ಏನು ಒಂದಂಕಿ ಲಾಟರಿ ನಡೆಸುತ್ತಿದೆ ಅದನ್ನು ನಿಲ್ಲಿಸಬೇಕಾಗುತ್ತದೆ. ಒಂದಂಕಿ ಲಾಟರಿ ಇದು ಮಟ್ಕಾ ತರಹ ಆಗಿದೆ. ಅದನ್ನು ನಿಲ್ಲಿಸುವಂತಹ ವ್ಯವಸ್ಥೆ ಮಾಡಬೇಕು. ಮತ್ತೆ ಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಳ್ಳುವ ಬಗ್ಗೆ it is not a lottery, it is a gambling ಇದನ್ನು ಹಿಂದಿನ ಮಾನ್ಯ ಮುಖ್ಯಮಂತ್ರಿಗಳು ಕಾನೂನು ಅಡಿಯಲ್ಲಿ ಮಾಡುತ್ತೇವೆಂದು ಹೇಳಿದರು. ಕಾನೂನು ಅಡಿಯಲ್ಲಿ ಏನಿದೆ ಎಂದರೆ ರಾಜ್ಯ ಸರ್ಕಾರ ಎಂಬ್ಲಮ್ ಇಲ್ಲದೆ ಯಾವ ಲಾಟರಿ ಟಿಕೇಟ್ ಹೊರಗೆ ಬರುವುದಿಲ್ಲ. ಎಲ್ಲಾ ಹಣ ಏನು ಬಂದಿದ್ದರೆ, ಅದು ರಾಜ್ಯ ಸರ್ಕಾರದ ಟ್ರೆಜರಿಗೆ ಹೋಗಿ ಅವರಿಗೆ ಕಮಿಷನ್ ಮಾತ್ರ ಹೋಗಬೇಕಾಗುತ್ತದೆ. ಇದು ಏನಾಗಿದೆ ಎಂದರೆ ಎಷ್ಟು ಟ್ರಾನ್ಸಾಕ್ಷನ್ ಆಗಿದೆ ಎನ್ನುವುದು ರಾಜ್ಯ ಸರ್ಕಾರಕ್ಕೆ ಗೊತ್ತಾಗಲಿಲ್ಲ. ಅದಕ್ಕೋಸ್ಕರ ಆನ್‌ಲೈನ್ ಲಾಟರಿ ಬ್ಯಾನ್ ಮಾಡಿರುವುದು ತಮಿಳುನಾಡು ಸರ್ಕಾರ ಎಂಟೈರ್ ಸ್ಟೇಟ್‌ನಲ್ಲಿ ಯಾವುದೇ ಲಾಟರಿಗಳನ್ನು ಮಾರಾಟ ಮಾಡಬಾರದೆಂದು ಗೌವರ್ನ್‌ಮೆಂಟ್ ಆರ್ಡರ್ ಮಾಡಿದ್ದು ಅದನ್ನು ಚಾಲೆಂಜ್ ಮಾಡಿದಾಗ ಹೈಕೋರ್ಟ್‌ನವರು ಅದನ್ನು ಎತ್ತಿ ಹಿಡಿದಿದ್ದಾರೆ. ಅದನ್ನು ಇಲ್ಲಿ ಮಾಡಿ. ಅದನ್ನು ಅವರು ಕೋರ್ಟ್‌ಗೆ ಹೋಗಿ ಸ್ಟೇ ಮಾಡುವುದು ಮತ್ತೊಂದು ಮಾಡಿದರೆ ಬೇರೆ ವಿಚಾರ. ಆದರೆ ನೀವು ಏನು ತೀರ್ಮಾನವನ್ನು ತೆಗೆದುಕೊಂಡಿದ್ದೀರಿ. ಎಂದು ಅದನ್ನು ಜಾರಿಗೆ ತನ್ನಿ. ಒಂದಂಕಿ ಲಾಟರಿಯನ್ನು ತೆಗೆಯಿರಿ. ಇದರಿಂದ ಅನೇಕ ಜನರ ಸಂಸಾರ ಉದ್ಧಾರವಾಗುತ್ತದೆಂದು ಹೇಳುತ್ತಾ, ತಾವೇನು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಅದಕ್ಕೆ ತಮ್ಮನ್ನು ವಂದಿನಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈ ದಿನ ಲಂಚ್ ಬ್ರೇಕ್ ಇರುವುದಿಲ್ಲ. ಆ ಕಾರಣದಿಂದ ಮಾನ್ಯ ಸದಸ್ಯರುಗಳು ಕೆಲವರುಗಳು ಹೋಗಿ ಊಟ ಮಾಡಿಕೊಂಡು ಬಂದು ಸಭೆ ನಡೆಯುವುದಕ್ಕೆ ಅವಕಾಶ ಮಾಡಿ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಈಗ ಮಾನ್ಯ ಏಸ್.ಎಸ್. ಪಾಟೀಲ್‌ರವರು ತಾವೇ ಕಾಲಮಿತಿ ಹಾಕಿಕೊಂಡು ಮಾತನಾಡಬೇಕು. ಇನ್ನು ಬಹಳ ಜನ ಮಾತನಾಡುವವರು ಇದ್ದಾರೆ. ಒಟ್ಟು ಇನ್ನೂ 42 ಜನ ಮಾತಾನಾಡುವುದಕ್ಕೆ ಬಯಸಿದ್ದಾರೆ. ಅವರ ಹೆಸರು ಕೊಟ್ಟಿದ್ದಾರೆ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಒಂದು ಕೆಲಸ ಮಾಡಿ, ಸದನವನ್ನು ಶನಿವಾರವೂ ಎಕ್ಸ್‌ಟೆಂಡ್ ಮಾಡಿ. ಆಗ ಒಂದು ದಿನ ಪೂರ್ತಿ

ಸಮಯ ಸಿಗುತ್ತದೆ. ಎಲ್ಲರಿಗೂ ನೀವು ಮಾತನಾಡುವುದಕ್ಕೆ ಅವಕಾಶ ಕೊಡುವುದಕ್ಕಾಗುತ್ತದೆ. we don't mind

ಅಧ್ಯಕ್ಷರು : ಅದು ಸಾಧ್ಯವಾಗುವುದಿಲ್ಲ.

ಶ್ರೀ ಹೆಚ್.ಡಿ. ಬಸವರಾಜ್ : ಮಾನ್ಯ ಅಧ್ಯಕ್ಷರೆ, ನನ್ನ ಸಲಹೆ ಏನೆಂದರೆ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಈಗ ಮಧ್ಯಾಹ್ನದ ಲಂಚ್ ಬ್ರೇಕ್ ಅನ್ನು ಇವತ್ತಿನಿಂದ ಬೇಡ ಎಂದು ಹೇಳಿದ್ದೀರಿ. ಅದು ಏಕೆಂದರೆ ಈ ಒಂದು ಚರ್ಚೆ ಮುಂದುವರೆಯಲಿ ಎನ್ನುವ ಸದುದ್ದೇಶದಿಂದ. ಇವತ್ತು ಸಾಯಂಕಾಲ ಕೂಡ ಒಂದೆರಡು ತಾನು ಹೆಚ್ಚು ಚರ್ಚೆ ಮಾಡುವುದಕ್ಕೆ ವ್ಯವಸ್ಥೆ ಮಾಡಿದರೆ, ಒಳ್ಳೆಯದು ಏಕೆಂದರೆ, ಶನಿವಾರ ಮತ್ತು ಭಾನುವಾರಗಳಿಗೆ ನಾವು ಈಗಾಗಲೇ ಪ್ರೋಗ್ರಾಂಗಳನ್ನು ಗೊತ್ತು ಮಾಡಿಕೊಂಡಿದ್ದೇವೆ.

ಅಧ್ಯಕ್ಷರು : ಇವತ್ತು ಐದು ಗಂಟೆಗೆ ಸಭೆ ಮುಂದೂಡಬೇಕಾಗುತ್ತದೆ. ಏಕೆಂದರೆ ಇವತ್ತು ಗೌವರ್ನರ್ ಬರುತ್ತಾರೆ, ಒಂದು ಸಮಾರಂಭ ಇದೆ. ಆ ಕಾರಣದಿಂದ ದಯಮಾಡಿ ಸಹಕರಿಸಿ.

†ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) : ಮಾನ್ಯ ಅಧ್ಯಕ್ಷರೆ, ತಾವು ನನಗೆ ಆಯವ್ಯಯಕ್ಕೆ ಸಂಬಂಧಪಟ್ಟ ಹಾಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ಅರ್ಪಿಸುತ್ತೇನೆ.

1. ದುರ್ವ್ಯಸನಿ ದುರಾಚಾರಿ ಎಂದೆನಿಸದಿರಯ್ಯ
ಎನ್ನ ಲಿಂಗವ್ಯಸನಿ ಜಂಗಮಪ್ರೇಮಿ ಎಂದೆನಿಸಯ್ಯ
ಕೂಡಲಸಂಗಮ ದೇವ ಸೆರಗೊಡ್ಡಿ ಬೇಡುವೆ.

2. ಬೆಳೆವ ಭೂಮಿಯಲ್ಲೊಂದು ಪ್ರಳಯದ ಕಸಹುಟ್ಟಿ,
ತಿಳಿಯಲೇನು, ಎಚ್ಚರಲೀಯದು
ಎನ್ನವಗುಣವೆಂಬ ಕಸವ ಕಿತ್ತು ಸಲಹಯ್ಯಾ ಲಿಂಗತಂದೆ
ಸುಳಿದೊಗೆದು ಬೆಳಗನು ಕೂಡಲ ಸಂಗಮದೇವ.

3. ಪಾಪಿಯ ಧನ ಪ್ರಾಯಶ್ಚಿತಕಲ್ಲದೆ ಸತ್ಪಾತ್ರಕ್ಕೆ ಸಲ್ಲದಯ್ಯ
ನಾಯಿಯ ಹಾಲು ನಾಯಿಗಲ್ಲದೆ ಪಂಚಾಮೃತಕ್ಕೆ ಸಲ್ಲದಯ್ಯ
ಕೂಡಲ ಸಂಗನ ಶರಣರಿಗಲ್ಲದೆ ಮಾಡುವ ಅರ್ಥ ವ್ಯರ್ಥ ಕಾಣಯ್ಯ

4. ಒಕ್ಕಲನು ನಲುಗಿಸದೆ, ಲೆಕ್ಕವನ್ನು ಸಿಕ್ಕಿಸದೆ, ಕಕ್ಕುಲತೆಯಿಂದ
ನಡೆಸುವ ಅರಸು ತಾ ಚಿಕ್ಕಂದದಿ ಇರುವ ಸರ್ವಜ್ಞ

ಶ್ರೀ ಹೆಚ್. ಆಂಜನೇಯ : ಇದನ್ನು ಮಾನ್ಯ ಸಿದ್ಧರಾಮಯ್ಯನವರಿಗೆ ಏನಾದರೂ ಹೇಳುತ್ತೀರಾ ? ಅವರನ್ನು ಕುರಿತು ಏನಾದರೂ ವಚನ ಬರೆದಿದ್ದೀರೋ ಎಂದು ನಾನು ತಿಳಿದುಕೊಂಡಿದ್ದೆ.

ಶ್ರೀ ಎಸ್.ಎಸ್. ಪಾಟೀಲ್ : ಈಗ ಹೇಳುತ್ತೇನೆ ಏನು ನಡೆಯುತ್ತದೆ ಎಂದು ತಾವು ಈಗ ಬಂದಿದ್ದೀರಿ ಪಾಪ. ತಮ್ಮ ಜಾಗದಲ್ಲಿ ಕುಳಿತಿದ್ದೆ. ಇದೇ ವಚನಗಳನ್ನು ಹೇಳಿ ಇವರನ್ನೆಲ್ಲಾ ತರಾಟೆಗೆ ತೆಗೆದುಕೊಂಡಿದ್ದೇನೆ. ಅದನ್ನೇ ಪುನಃ ಹೇಳುತ್ತಿದ್ದೇನೆ.

ಸರ್ವಜ್ಞ ಮತ್ತು ಬಸವಣ್ಣನವರು ಒಕ್ಕಲುತನದ ಬಗ್ಗೆ ಹೇಳುತ್ತಿದ್ದಾರೆ. ಸರ್ಕಾರ ಏನು ಮಾಡಬೇಕೆಂಬುದನ್ನು ಹೇಳುತಿದ್ದಾರೆ. ಆ ಅಸೆಂಬ್ಲಿಗಳು ಅನುಭವ ಮಂಟಪಗಳು ಆಗಬೇಕು, ಲೋಕಸಭೆಗಳು ಅನುಭವ ಮಂಟಪಗಳು ಆಗಬೇಕಾಗುತ್ತದೆ. ಆ ಹಿನ್ನೆಲೆಯಲ್ಲಿ ನಾನು ಇಲ್ಲಿ ವಚನಗಳನ್ನು ಹೇಳುತ್ತಿದ್ದೇನೆ, ಅಸೆಂಬ್ಲಿ ಎಂದರೆ ಏನೋ ಮಾತನಾಡುವುದಿಲ್ಲ. ಮಾನ್ಯ ಹನುಮಂತ್ಯನವರು ವಿಧಾನಸೌಧದ ಮೇಲೆ "ಸರ್ಕಾರದ ಕೆಲಸ ದೇವರ ಕೆಲಸ" ವೆಂದು ಬರೆಸಿದ್ದಾರೆ. ಆ ಕಾರಣದಿಂದ ಈ ಅಸೆಂಬ್ಲಿಗಳು ಅನುಭವ ಮಂಟಪಗಳಾಗಬೇಕು, ಈಗ ನಾನು ಹೇಳುತ್ತೇನೆ.

" ಭಂಡಾರ ತುಂಬಲಿ ಬಂಡಿಯಲಿ ಹೇರುವರೇ,
ಮಂಡಲವನ್ನಾಳಿ ನಿ ಮೆರೆವರೇ,
ಒಕ್ಕಲನು ಕೊಂಡಾಡಬೇಕು, ಸರ್ವಜ್ಞ "
ಒಕ್ಕಲಿಗನೊಕ್ಕೆದರೆ ಉಕ್ಕುವುದು ಜಗವೆಲ್ಲಾ,
ಒಕ್ಕಲಿಗನೊಕ್ಕದಿರೆ ಬಕ್ಕುವುದು ಜಗವೆಲ್ಲಾ, ಸರ್ವಜ್ಞ "

ಮಾನ್ಯ ಅಧ್ಯಕ್ಷರೇ, ಇವೆಲ್ಲಾ ಅವಶ್ಯಕವಿದೆ. ಇವೆಲ್ಲವನ್ನೂ ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

" ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೆ ಮೇಲು,
ಮೇಟಿಯಿಂ ರಾಟಿ ನಡೆದುದಲ್ಲದೇ,
ದೇಶದಾಟವೇ ಕೆಡುತು ಸರ್ವಜ್ಞ "

" ಬೆಕ್ಕು ಮನೆಯೋಳು ಲೇಸು,
ಮುಕ್ಕು ಕಲ್ಲಿಗೆ ಲೇಸು.
ನಕ್ಕು ನಲಿಸುವ ನುಡಿ ಲೇಸು.
ಊರಿಂಗೆ ಒಕ್ಕಲಿಗನೇ ಲೇಸು, ಸರ್ವಜ್ಞ "

ಈ ರೀತಿಯಾಗಿ ಅಣ್ಣ ಬಸವಣ್ಣನವರು ಮತ್ತು ಸರ್ವಜ್ಞರು ಈ ಮಾತುಗಳನ್ನು ಹೇಳುತ್ತಾರೆ. ಈ ಮಾತುಗಳನ್ನು ಈಗ ಹೇಳಿರುವಂಥಾದ್ದಲ್ಲ. ಬಸವಣ್ಣನವರು 800 ವರ್ಷಗಳ ಹಿಂದೆಯೇ ಹೇಳಿದ್ದಾರೆ. ಸರ್ವಜ್ಞರು 400 ವರ್ಷಗಳ ಹಿಂದೆ ಹೇಳಿದ್ದಾರೆ. ಒಕ್ಕಲುತನದ ಮಹತ್ವವನ್ನು ಹೇಳಿದ್ದಾರೆ. ನಾನು ತಿಳಿದಂತೆ ಈ ಕರ್ನಾಟಕ ರಾಜ್ಯವಾದ ಮೇಲೆ, ಮೊಟ್ಟಮೊದಲನೆಯ ಬಾರಿಗೆ ನಮ್ಮ ಸಮ್ಮಿಶ್ರ ಸರ್ಕಾರದ ಅರ್ಥ ಸಚಿವರಾದ ಮಾನ್ಯ ಸಿದ್ಧರಾಮಯ್ಯನವರು, ಹಿಂದೆ ಯಾರೂ ಮಹತ್ವ ಕೊಡದೇ ಇದ್ದಂಥಾದ್ದಕ್ಕೆ ಅದು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಗೆ ಒತ್ತು ಕೊಟ್ಟಂತಹ ಮೊಟ್ಟ ಮೊದಲನೆಯ ಬಜೆಟ್ ಇದು ಎಂದು ಹೇಳುತ್ತಿದ್ದೇನೆ. ಇಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು ಇಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಬಜೆಟ್ ಬಗ್ಗೆ ಮಾತನಾಡಿದ. ಎಲ್ಲವನ್ನೂ ಕೇಳಿದೆ. ನಾನು ಅವರು ಬಹಳ ಟೀಕೆ ಮಾಡುತ್ತಾರೆಂದು ನಾನು ತಿಳಿದಿದ್ದೆ. ಆದರೆ ಇದರಲ್ಲಿ ಅವರು ಟೀಕೆ ಮಾಡುವುದಕ್ಕೆ ಏನೂ ಸಿಗಲಿಲ್ಲ. ಮಾನ್ಯ ಯಡಿಯೂರಪ್ಪನವರು ಹಿರಿಯರು, ಅವರು ರೈತರ

ಪರ ಹೋರಾಟ ಮಾಡಿಕೊಂಡು ಮಂಚೂಣಿಗೆ ಬಂದಂತಹ ನಾಯಕರಾಗಿದ್ದಾರೆ. ಅವರ ಬಾಯಲ್ಲಿ ಹೆಚ್ಚಿಗೆ ಟೀಕೆ ಬರಲಿಲ್ಲ. ಕೇವಲ ಅವರು ಮಾಡಿದ್ದು ಏನೆಂದರೆ, ನೀವೆಲ್ಲಾ ಬೈಯ್ದಾಡಿಕೊಂಡು ಅಡ್ಡಾಡಿದ್ದೀರಿ. ನಿಮ್ಮ ಸರ್ಕಾರವನ್ನು ಇಬ್ಬರೂ ಕೂಡಿಕೊಂಡು ಮಾಡಿಕೊಂಡಿದ್ದೀರಿ, ಹಾಗೆ ಬೈಯ್ದಿದ್ದಿರಿ. ಹೀಗೆ ಬೈಯ್ದಿದ್ದಿರಿ ಎಂಬುದನ್ನು ಹೇಳಿದರೇ ಹೊರತು, ಆದರೆ ನಾನು ಒಂದು ಮಾತನ್ನು ಹೇಳುತ್ತೇನೆ. ದುರ್ದೈವದಿಂದ ತಮಗೆ ಹೇಳುತ್ತೇವೆ. ಈಗ ನಾವು ಸಮ್ಮಿಶ್ರ ಸರ್ಕಾರ ಮಾಡಿದರೆ ಬಹಳ ಹಾನಿಯಾಗುತ್ತದೆಂದು ಹೇಳಿದಿರಿ, ನೀವು ಮಾನ್ಯ ಸಿದ್ಧರಾಮಯ್ಯನವರನ್ನು ಮುಖ್ಯಮಂತ್ರಿಗಳನ್ನು ಮಾಡುತ್ತೇವೆಂದು, ನೀವು ಹೊರಗಿನಿಂದ ಬೆಂಬಲವನ್ನು ಕೊಡುತ್ತೇವೆಂದು ಹೇಳಿದ್ದಿರಲ್ಲಾ, ಇಲ್ಲಿ ನೀವು ಮಾಡಿದ್ದು ಸರಿನಾ ? ನೀವಿಬ್ಬರೂ ಕೂಡಿ ಸರ್ಕಾರ ಮಾಡಿ, ಅವರಿಗೆ ಹೊರಗಿನಿಂದ ಬೆಂಬಲವನ್ನು ಕೊಟ್ಟು, ಅವರ ಕಿವಿ ಹಿಂಡಿಕೊಂಡು ಇದ್ದರೆ, ಸರಿನಾ ? ಇದು ಏನೇ ಇದ್ದರೂ ಕೂಡ, ಇವತ್ತು ರೈತರ ಪರವಿರುವಂತಹ ಎರಡು ಪಕ್ಷಗಳು, ಬಡವರ ಪರವಾಗಿರುವಂತಹ ಎರಡು ಪಕ್ಷಗಳು, ಹಿಂದುಳಿದವರ ಪರವಾಗಿರುವಂತಹ ಎರಡು ಪಕ್ಷಗಳು, ಒಂದೇ ಒಂದು ನೈತಿಕ ನೀತಿಯ ಆಧಾರದ ಮೇಲೆ ನಿಂತಿರುವಂತಹ ಎರಡು ಪಕ್ಷಗಳು ಸೇರಿ ಇವತ್ತು ಸರ್ಕಾರವನ್ನು ಮಾಡಿದ್ದೇವೆ, ಇಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಇಲ್ಲ. ಅವರು ಇದ್ದಿದ್ದರೆ ನಾನು ಹೇಳುತ್ತಿದ್ದೆ, ಯಾವು ಸಂಶಯವೂ ಬೇಡ ಅಧ್ಯಕ್ಷರೇ, ಇನ್ನೂ ಮುಂದಿನ ಐದು ವರ್ಷಗಳಲ್ಲಿ ಮಾನ್ಯ ಸಿದ್ಧರಾಮಯ್ಯನವರು ಬಜೆಟ್‌ಅನ್ನು ಮಂಡಿಸುತ್ತಾರೆ. ಇದರಲ್ಲಿ ಯಾರೂ ಸಂಶಯವನ್ನು ಪಡಬೇಕಾಗಿಲ್ಲ. ನಿಮಗೂ ಬೇಕಾಗಿಲ್ಲ, ಅದು ನಮಗೆ ಗೊತ್ತಿದೆ, ನೀವು ಮತ್ತೆ ಚುನಾವಣೆಗೆ ಹೋದರೆ 77ರ ಸಂಖ್ಯೆಯಲ್ಲೂ ಇರುವುದಿಲ್ಲ. ಅದು ಬರೀ 7ಕ್ಕೆ ಬರುತ್ತದೊ ಏನೋ, ಅದನ್ನು ಹೇಳುವುದಕ್ಕೆ ಆಗುವುದಿಲ್ಲ. ಇದು ಅಂತಹ ಬಜೆಟ್ ಆಗಿದೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೇ, ಕಾಂಗ್ರೆಸ್ ಸರ್ಕಾರ 23,000 ಕೋಟಿ ರೂಪಾಯಿಗಳ ಸಾಲವನ್ನು ತಂದ ಬಗ್ಗೆ ಹೇಳಿ, ಈ 23,000 ಕೋಟಿ ರೂಪಾಯಿಗಳನ್ನು ಸಾಲ ತಂದು ಅದರಲ್ಲಿ ಶೇಕಡಾ 2ರಷ್ಟು ಗ್ರಾಮೀಣಾಭಿವೃದ್ಧಿಗೆ ಕೊಟ್ಟಿದ್ದೀರಿ, ಸಣ್ಣ ಕೈಗಾರಿಕೆಗೆ 450 ಕೋಟಿ ರೂಪಾಯಿಗಳ ಸಬ್ಸಿಡಿ ಹಣವನ್ನು ನಿಮ್ಮ ಕೈಯಲ್ಲಿ ಕೊಡುವುದಕ್ಕೆ ಆಗಲಿಲ್ಲ. ಇದು ಅತ್ಯುತ್ತಮವಾದಂತಹ ಬಜೆಟ್ ಇದಕ್ಕೆ ಪ್ರಶಂಸೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಕಟ್ಟಾ ಸುಬ್ರಮಣ್ಯನಾಯ್ಡುರವರೇ, ನಾವು ನೀವು ಅಲ್ಲಿ ಕುಳಿತುಕೊಂಡಿದ್ದಾಗ, ಇದೇ ವಚನಗಳನ್ನು ಹೇಳಿ, ಇವರನ್ನು ತರಾಟೆಗೆ ತೆಗೆದುಕೊಂಡಿದ್ದೇನೆ.

ಶ್ರೀ ಗೋವಿಂದ ಎಂ. ಕಾರಕೋಳ : ಮಾನ್ಯ ಅಧ್ಯಕ್ಷರೇ, ಮುಂದಿನ ಸಾಲಿನಲ್ಲಿ ಮಂತ್ರಿಗಳು ಯಾರೂ ಇಲ್ಲ, ಆದುದರಿಂದ ನಾವು ಇಲ್ಲಿ ಭಾಷಣವನ್ನು ಮಾಡುವುದರ ಬದಲು ಮೆಜೆಸ್ಟಿಕ್‌ಗೆ ಹೋಗಿ ಭಾಷಣವನ್ನು ಮಾಡಬಹುದಲ್ಲಾ, ಸರ್ಕಾರದ ವತಿಯಿಂದ ಮುಂದಿನ ಲೈನ್‌ನಲ್ಲಿ ಯಾರಾದರೂ

ಜವಾಬ್ದಾರಿಯುತವಾದಂತಹ ಮಂತ್ರಿಗಳು ಬೇಕಲ್ಲಾ, ಆ ಜವಾಬ್ದಾರಿ ಮಂತ್ರಿಗಳು ಇಲ್ಲ, ಅಧಿಕಾರಿಗಳು ಇಲ್ಲ. ಅಂದಮೇಲೆ ಇಲ್ಲಿ ಏಕೆ ಭಾಷಣವನ್ನು ಮಾಡಬೇಕು?

ಶ್ರೀ ಹೆಚ್.ಡಿ. ಬಸವರಾಜ್ : ಮಾನ್ಯ ಅಧ್ಯಕ್ಷರೇ, ನನಗೆ ಒಂದು ಸಂಶಯ ಬಂದಿದೆ. ಮಾನ್ಯ ಡಿ.ಟಿ. ಜಯಕುಮಾರ್‌ರವರು, ಯಾವತ್ತಿನಿಂದ ಮಂತ್ರಿಗಳಾದರು ?

ಅಧ್ಯಕ್ಷರು : ದಯಮಾಡಿ ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ, ಮೊದಲೇ ಕಾಲವಕಾಶವಿಲ್ಲ, ಈಗ ಕಾಲವಿಲ್ಲದೇ ಇರುವಾಗ ಈ ರೀತಿಯಾದರೆ ಸರಿಯಿಲ್ಲ.

ಶ್ರೀ ಹೆಚ್.ಡಿ. ಬಸವರಾಜ್ : ಮಾನ್ಯ ಅಧ್ಯಕ್ಷರೇ, ನಾವು ಸಹಕಾರವನ್ನು ಕೊಡುತ್ತಿದ್ದೇವೆ, ಇಲ್ಲಿ ಮಾನ್ಯ ಡಿ.ಟಿ. ಜಯಕುಮಾರ್‌ರವರು ಯಾವತ್ತಿನಿಂದ ಮಂತ್ರಿಗಳಾದರು. ಇದು ನಮಗೆ ಸಂಶಯವಾಗಿದೆ, ನಾವು ಖಂಡಿತವಾಗಿ ಸಹಕಾರವನ್ನು ಕೊಡುತ್ತೇವೆ. ನಿಮ್ಮ ಮಾತಿಗೆ ಗೌರವವನ್ನು ಕೊಡುತ್ತೇವೆ, ಈ ರೀತಿಯಾಗಿ ಎಷ್ಟು ಜನರನ್ನು ಮಂತ್ರಿಗಳಾಗಿ ಮಾಡಬಹುದು. ಅದಕ್ಕೆ ಒಂದು ಪಟ್ಟಿ ಬೇಕಲ್ಲಾ, ಹಾಗಾದರೆ ಶ್ರೀ ಡಿ.ಟಿ. ಜಯಕುಮಾರ್‌ರವರು ಯಾವ್ಯಾವ ಖಾತೆಗಳನ್ನು ಹೊಂದಿದ್ದಾರೆಂಬುದನ್ನು ಹೇಳಿಬಿಡಿ. ಆ ಖಾತೆಗಳಿಗೆ ಜವಾಬ್ದಾರಿನಾ, ಅಥವಾ ಈಗ ಇರುವುದು ಅವರಿಗೆ ಖಾತೆಗಳನ್ನು ವಹಿಸಿಕೊಟ್ಟಿದ್ದಾರಾ ಆ ರೀತಿಯ ಪದ್ಧತಿ ಇದೆಯಾ ? ಅದನ್ನು ನಾವು ತಿಳಿದುಕೊಳ್ಳಬೇಕು. ತಾವು ಹಿರಿಯರಿದ್ದೀರಿ.

ಅಧ್ಯಕ್ಷರು : ಮಾನ್ಯ ಬಸವರಾಜ್‌ರವರೇ, ತಾವು ಏಕೆ ಹೀಗೆ ಮಾಡುತ್ತೀರಿ, ನಾನು ಪದೇ ಪದೇ ವಿನಂತಿ ಮಾಡಿದರೂ ಈ ರೀತಿ ಮಾಡಿದರೆ ಸರಿಯಲ್ಲ, ತಾವು ದಯಮಾಡಿ ಕುಳಿತುಕೊಳ್ಳಿ. ಮೊದಲೇ ಕಾಲಾವಕಾಶ ಕಡಿಮೆ ಇದೆ. ಮಾನ್ಯ ಪಾಟೀಲ್‌ರವರೇ, ತಾವು ದಯಮಾಡಿ.

ಶ್ರೀ ಹೆಚ್.ಡಿ. ಬಸವರಾಜ್ : ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಗಮನಕ್ಕೆ ತಂದಿದ್ದೇನೆ.

ಅಧ್ಯಕ್ಷರು : ಆಯಿತು, ನಾನು ಹೇಳಿ ಕಳುಹಿಸಿದ್ದೇನೆ, ವಿಪ್‌ರವರೇ, ಹೋಗಿ ಯಾರಾದರೂ ಹೋಗಿ ಯಾರಾದರೂ ಹೋಗಿ ಮಂತ್ರಿಗಳನ್ನು ಕರೆದುಕೊಂಡು ಬನ್ನಿ. ಮಾನ್ಯ ಎಸ್.ಎಸ್. ಪಾಟೀಲ್‌ರವರೇ, ದಯಮಾಡಿ ತಮ್ಮ ಭಾಷಣವನ್ನು ಮುಂದುವರೆಸಿ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಿದ್ಧರಾಮಯ್ಯನವರು ಇಲ್ಲಿ ಇದ್ದಾರೆ, ಏನೋ ಅನಿವಾರ್ಯ ಕೆಲಸವಿದ್ದು ಹೊರಗಡೆ ಹೋಗಿರಬಹುದು. ಅವರು ಇಲ್ಲೇ ಕುಳಿತಿದ್ದಾರೆ. ಇಲ್ಲಿ ನಮ್ಮ ಮಾನ್ಯ ಬಸವರಾಜ್‌ರವರಿಗೆ ಜನರು ಐದು ವರ್ಷಗಳ ಕಾಲ ವಿಶ್ರಾಂತಿಯನ್ನು ಕೊಟ್ಟಿದ್ದರು. ಈಗ ಚುನಾಯಿಸಿ ಇಲ್ಲಿ ಕಳುಹಿಸಿದ್ದಾರೆ. ಅದೆಲ್ಲವನ್ನೂ ಮುಗಿಸಿಬಿಡಬೇಕು.

ಶ್ರೀ ಹೆಚ್.ಡಿ. ಬಸವರಾಜ್ : ಆ ರೀತಿ ವಿಶ್ರಾಂತಿಯನ್ನು ನಾವು ಯಾವತ್ತೂ ಪಡೆಯುವುದಿಲ್ಲ. ನಮಗೆ ಅಧಿಕಾರ ಇರಲಿ, ಇಲ್ಲದೇ ಇರಲಿ, ನಾವು

ಖಂಡಿತವಾಗಿಯೂ ಜನಸೇವೆಯನ್ನು ಮಾಡುವವರು. ಆದುದರಿಂದಲೇ ಜನರು ಮತ್ತೆ ನನ್ನನ್ನು ಇಲ್ಲಿಗೆ ಕಳುಹಿಸಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ : ಅದೇ ಮೊದಲು ಹೊರಗಡೆ ಮಾಡುತ್ತಿದ್ದಿರಿ, ಈಗ ಒಳಗಡೆ ಮಾಡುತ್ತಿದ್ದೀರಿ.

ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೇ, ನಮ್ಮ ಸ್ನೇಹಿತರು ಹೇಳಿದರಲ್ಲಾ, ಈ ಸದನದಲ್ಲಿ ಇರುವವರೆಲ್ಲಾ ಜನಸೇವೆಯನ್ನು ಮಾಡಿಯೆ ಇಲ್ಲಿಗೆ ಬಂದಿರುವುದು.

ಅಧ್ಯಕ್ಷರು : ಈಗ ಅಡ್ಡ ಮಾತುಗಳು ಬೇಡ, ದಯಮಾಡಿ ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ, ಮೊದಲೇ ಕಾಲವಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಈ ಕರ್ನಾಟಕ ರಾಜ್ಯವಾದ ಮೇಲೆ ಮೊಟ್ಟ ಮೊದಲನೆಯ ಬಾರಿಗೆ ಗ್ರಾಮೀಣಾಭಿವೃದ್ಧಿಗೆ, ಕೃಷಿಗೆ, ಬಡವರಿಗೆ ಹೆಚ್ಚು ಒತ್ತು ಕೊಟ್ಟಿರುವಂತಹ ಮೊದನೆಯ ಬಜೆಟ್ ಇದು ಹೇಗಿದೆ. ನಾನು ಇದನ್ನು ಹೇಳುತ್ತಾ ಇಲ್ಲ, ಇದನ್ನು ನಾನು ಹೇಳಿದರೆ, ಈ ಪಕ್ಷದಿಂದ ಬಂದಿದ್ದೇನೆ. ಹೊಗಳುತ್ತಿದ್ದೇನೆಂದು ಹೇಳುತ್ತೀರಿ. ಇಲ್ಲಿ ಪತ್ರಿಕೆಗಳು ತಮ್ಮ ಸಂಪಾದಕೀಯದಲ್ಲಿ ಬರೆದಿರುವುದನ್ನು ನಾನು ಇಲ್ಲಿ ಹೇಳುತ್ತೇನೆ, ಮತ್ತೆ ಆರ್ಥಿಕ ತಜ್ಞರು ಹೇಳಿದಂತಹ ಮಾತುಗಳನ್ನು ಹೇಳುತ್ತೇನೆ. ನೀವು ನನ್ನನ್ನು ಪಕ್ಷದ ಪರವಾಗಿ ಹೊಗಳುತ್ತಿದ್ದೇನೆಂದು ತಿಳಿದುಕೊಳ್ಳಬಹುದು. ಆದರೆ "ವಿಜಯ ಕರ್ನಾಟಕ- ಪತ್ರಿಕೆಯವರು ಈ ರೀತಿ ಬರೆದಿದ್ದಾರೆ. ಕಾಂಗ್ರೆಸ್ ಪಕ್ಷ ಮತ್ತು ಜಾತ್ಯಾತೀತ ಜನತಾದಳ ಪಕ್ಷಗಳ ಸಮ್ಮಿಶ್ರ ಸರ್ಕಾರದ ಮೊದಲ ಬಜೆಟ್ ನಿರೀಕ್ಷೆಯಂತೆ ಆಶಾದಾಯಕ ದೃಷ್ಟಿಯಲ್ಲಿದೆ. ವೊನ್ನೆ ಪ್ರಕಟಿಸಿದ ಸಾಮಾನ್ಯ ಕನಿಷ್ಟ ಕಾರ್ಯಕ್ರಮಗಳನ್ನು ಬಜೆಟ್‌ನಲ್ಲಿ ಪ್ರತಿಬಿಂಬಿತವಾಗಿದೆ. ಎಂಟು ವರ್ಷಗಳ ಸುದೀರ್ಘ ಅವಧಿಯ ನಂತರ, ಪ್ರಥಮ ಬಾರಿಗೆ 72,83 ಕೋಟಿ ರೂಪಾಯಿಗಳ ಉಳಿತಾಯ ಬಜೆಟ್ ಅನ್ನು ಮಂಡಿಸುತ್ತಿರುವ, ಸಂತಸ, ಸಮಾಧಾನ ಹಣಕಾಸು ಸಚಿವರಾದ ಮಾನ್ಯ ಸಿದ್ಧರಾಮಯ್ಯನವರಿಗೆ ಇದೆ. ಇದು ನಾವು ಹೇಳಿರುವಂತಹ ಮಾತಲ್ಲ.

ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು : ಕಾಂಗ್ರೆಸ್ ಸರ್ಕಾರ ಎಲ್ಲಾ ಹಾಳು ಮಾಡಿದೆಯಾ, ಹಾಗಿದ್ದರೆ..

ಅಧ್ಯಕ್ಷರು : ಮಾನ್ಯ ಕಟ್ಟಾಸುಬ್ರಮಣ್ಯನಾಯ್ಡುರವರೇ, ಈಗ ಅವರು ಬಜೆಟ್ ಮೇಲೆ ಮಾತನಾಡುತ್ತಿದ್ದಾರೆ. ನೀವು ಹಳೆಯದನ್ನು ಏಕೆ ಮಾತನಾಡುತ್ತೀರಿ?

ಶ್ರೀ ಎಸ್.ಎಸ್. ಪಾಟೀಲ್ : ನಾನು ಅದನ್ನೇ ಹೇಳುತ್ತೇನೆ.

ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು : ತಾವೇ ನಾಲ್ಕು ವರ್ಷಗಳು ಸರಿಯಾಗಿರಲಿಲ್ಲವೆಂದು ಹೇಳಿದ್ದೀರಿ, ಆದುದರಿಂದ ಕಾಂಗ್ರೆಸ್ ಸರ್ಕಾರ ಪೂರ್ತಿ ಹಾಳು ಮಾಡಿತ್ತಾ ? ತಾವು ಹೇಳಿದನ್ನೇ ನಾನು ಹೇಳುತ್ತಿದ್ದೇನೆ.

ಶ್ರೀ ಎಸ್.ಎಸ್. ಪಾಟೀಲ್ : ಇದಕ್ಕೆ ಹೆಚ್ಚು ಒತ್ತು ಕೊಟ್ಟಿದ್ದನ್ನು ನಾನು ಹೇಳಿದ್ದು, ಹಿಂದಿನ ಬಜೆಟ್‌ಗಳು ಕೆಟ್ಟದೆಂದು ನಾನು ಹೇಳಿಲ್ಲ. ಅವರೂ ಸಹ ರೈತರಿಗೆ ಸಹಾಯವಾಗುವಂತೆ ಮಾಡುತ್ತಾ ಬಂದಿದ್ದಾರೆ. ಅಭಿವೃದ್ಧಿಯನ್ನು

ಮಾಡಿಕೊಂಡು ಬಂದಿದ್ದಾರೆ. ನಾನು ಇಲ್ಲವೆಂದು ಹೇಳಲಿಲ್ಲ, ಆದರೆ ಹೆಚ್ಚು ಒತ್ತು ಕೊಟ್ಟು ಈ ಬಜೆಟ್ ಮಾಡಲಾಗಿದೆಯೆಂದು ಹೇಳಿದ್ದೇನೆ. ನಿರೀಕ್ಷೆಯಂತೆ ಮಾನ್ಯ ಸಿದ್ಧರಾಮಯ್ಯನವರು, ಸೋಮವಾರ ವಿಧಾನಮಂಡಲದಲ್ಲಿ ಮಂಡಿಸಿದ ಬಜೆಟ್, ರಾಜ್ಯದ ಆಳುವ ಪಕ್ಷಗಳು ಪ್ರಕಟಿಸಿರುವ ಕನಿಷ್ಟ ಕಾರ್ಯಕ್ರಮಗಳ ಪ್ರಮುಖ ಅಂಶಗಳ ಈಡೇರಿಕೆಗೆ ತನ್ನ ಬದ್ಧತೆಯನ್ನು ಪ್ರದರ್ಶಿಸಿದೆ, ಇದು ಕನ್ನಡ ಪ್ರಭಪತ್ರಿಕೆಯಲ್ಲಿ ಬಂದಿದೆ. ಇನ್ನೂ ಬೇರೆ ಬೇರೆ ಪತ್ರಿಕೆಯಲ್ಲಿ ಹೇಳಿದ್ದು ಸಮಯಭಾವದಿಂದ ಅದನ್ನೆಲ್ಲಾ ಓದುವುದಕ್ಕೆ ಹೋಗುವುದಿಲ್ಲ. ಎಲ್ಲಾ ಪತ್ರಿಕೆಯ ಸಂಪಾದಕೀಯದಲ್ಲಿ ರಾಜ್ಯದ ಬಜೆಟ್ ಬಗ್ಗೆ ಬೈದಿಲ್ಲ. ಇನ್ನು ಇಡೀ ದೇಶದಲ್ಲಿಯೇ ಒಳ್ಳೆಯ ಆರ್ಥಿಕ ತಜ್ಞ ಎಂದು ಹೆಸರು ಪಡೆದಂಥವರು ಡಾ; ನಂಜುಂಡಪ್ಪನವರು, ಅವರು ತಮ್ಮ ಅಭಿಪ್ರಾಯವನ್ನು ಇಲ್ಲಿ ಕೊಟ್ಟಿದ್ದಾರೆ. ಬಹುಶಃ ಅವರಿಗೆ ರಾಷ್ಟ್ರಪತಿ ಸಿಗಬೇಕಾಗಿತ್ತು. ಅಂಥವರು ಇವರಾಗಿದ್ದಾರೆ. ಇಂಥವರೆಲ್ಲಾ ಇವತ್ತು ಎಲ್ಲಿಯೋ ಉಳಿದುಬಿಡುತ್ತಾರೆ. ಅವರು ಯಾರಿಗೂ ಲಕ್ಷ್ಯ ಹಾಕುವವರೂ ಅಲ್ಲ. ಯಾರಿಗೂ ವಸೂಲಿಗೂ ಹಚ್ಚುವವರೂ ಅಲ್ಲ. ಇವತ್ತು ಅವು ಸಹಿತ ವಸೂಲಿ ಮೇಲೆ ನಡೆಯುತ್ತವೆ, ಆದರೆ ಅಂಥ ಒಬ್ಬ ಆರ್ಥಿಕ ತಜ್ಞರು ಏನು ಇಂಗ್ಲೀಷ್‌ನಲ್ಲಿ ಹೇಳುತ್ತಾರೆಂದರೆ " Generally the budgets are being prepared each year Keeping in view two important parameters like growth and fiscal deficit. It is however refreshing that the Finance Minister Sri. Siddaramaiah has changed his approach and switched on to a perspective of better orientation for agriculture and rural development, thsu keeping the common man in view and adopting a radial change in approach, which are absolutely necessary " ಶ್ರೀ ಉದಾಸಿಯವರೇ, ಇದನ್ನು ನಾನು ಹೇಳಿದ ಮಾತಲ್ಲ. ನಾನು ಶ್ರೀ ಈಶ್ವರಪ್ಪನವರಿಗೆ ಹೇಳುತ್ತಿದ್ದೇನೆ. ಇದು ನಾನು ಹೇಳಿದ ಮಾತಲ್ಲ. ಬಹುಶಃ ನಾನು ವಿರೋಧ ಪಕ್ಷದಲ್ಲಿದ್ದಾಗ ಆನ್‌ಲೈನ್ ಲಾಟರಿ ಬಗ್ಗೆ ಮಾತನಾಡುತ್ತಿದ್ದಾಗ ಇದೇ ಮಾತನ್ನು ಹೇಳಿದ್ದೆ. ಅಂದಿನ ನಮ್ಮ ಕಾಂಗ್ರೆಸ್ ಸರ್ಕಾರಕ್ಕೆ ನಾನು ಅಲ್ಲಿ ಕುಳಿತಿದ್ದಾಗ ಹೇಳಿದ್ದೆ. ಆ ಸಂದರ್ಭದಲ್ಲಿ ಡಾ; ಪರಮೇಶ್ವರರವರು ಇಲ್ಲಿ ಕುಳಿತಿದ್ದಾಗ ನಾನು ಹೇಳಿದ್ದೆ.

"ದುರ್ವೆಸನಿ ದುರಾಚಾರಿ ಎಂದೆನಿಸದರಯ್ಯ..."

ಎಂದು ಬಸವಣ್ಣ ಹೇಳಿದರೆ ನೀವು "ಸರ್ಕಾರದ ಕೆಲಸ ದೇವರ ಕೆಲಸ" ಎಂದು ಏನು ಬರೆದಿದ್ದೀರಲ್ಲಾ. ಅದನ್ನು ತೆಗೆದು "ಸರ್ಕಾರದ ಕೆಲಸ ಜನರನ್ನು ದುರ್ವೆಸನಿ ದುರಾಚಾರಿಗಳನ್ನು ಮಾಡುವುದು" ಎಂದು ಬರೆಯಿರೆಂದು ಅಲ್ಲಿ ಕುಳಿತುಕೊಂಡು ಹೇಳಿದ್ದೆ. ಅದಕ್ಕೆ ಇವತ್ತು ಈ ವಚನವನ್ನು ಹೇಳುತ್ತಿದ್ದೇನೆ. ಕರೆಕ್ಟ್ ಪಾಟೀಲರೆ, ಮುಂದಿನ ಸಲ ಇದನ್ನು ತೆಗೆಯೋಣ ಎಂದು ಕೊನೆಗೆ ಶ್ರೀ ಕೃಷ್ಣಾ ಅವರೂ ಕೂಡ ಹೇಳಿದ್ದರು. ಅವರೂ ಕೂಡ ಒಪ್ಪಿಕೊಂಡಿದ್ದರು. ಕೆಲವು ಸಲ ಪ್ರಯೋಗ ಮಾಡಿ ಕೆಲವು ಸಲ ತೆಗೆಯಬೇಕಾಗುತ್ತದೆ. ಹಾಗಾಗಿ ಈ ಸಲ ಮಾನ್ಯ

ಸಿದ್ಧರಾಮಯ್ಯನವರು ಬಂದ ತಕ್ಷಣವೇ ನಿಜವಾಗಿ ನಮ್ಮ ಸಮ್ಮಿಶ್ರ ಸರ್ಕಾರ ಅದರಲ್ಲಿ ಒಬ್ಬ ಹಿಂದುಳಿದ ಮುಖ್ಯಮಂತ್ರಿ ಮತ್ತು ಒಬ್ಬ ಹಿಂದುಳಿದ ಉಪ ಮುಖ್ಯಮಂತ್ರಿ ಈ ದಿವಸ ಈ ರಾಜ್ಯದ ಚಿತ್ರಣವನ್ನೇ ಇಲ್ಲಿ ಬಜೆಟ್ ಮುಖಾಂತರ ಬದಲಾವಣೆ ಮಾಡಿದ್ದಾರೆ. ಬಡವರಿಗೆ ಬಹಳ ಮಾರಕವಾದಂಥ ಈ ಒಂದು ಆನ್‌ಲೈನ್ ಲಾಟರಿ ಬಗ್ಗೆ ಮಾತನಾಡಿದ್ದೆವು. ಇವತ್ತು ಆನ್‌ಲೈನ್ ಲಾಟರಿಯನ್ನು ತೆಗೆದುಹಾಕಿದ್ದಾರೆ. ಆ ಕಾರಣದಿಂದ ಈ ವಚನವನ್ನು ಇವತ್ತು ಹೇಳುತ್ತಿದ್ದೇನೆ. ಅಲ್ಲಿ ಇದ್ದಾಗ ಈ ವಚನದ ಮುಖಾಂತರ ನಾನು ಸರ್ಕಾರಕ್ಕೆ ಬೈಯ್ದಿದ್ದೆ. ನಿಜವಾಗಿಯೂ ಬಸವಣ್ಣನವರು ಏನು ಹೇಳಿದ್ದಾರೆಂದರೆ. 'ದುರ್ವಸನಿ ದುರಾಚಾರಿಗಳಾಗಬೇಡಿ. ಎಂದು ಹೇಳಿದ್ದಾನೆ. ಆ ಒಂದು ದೃಷ್ಟಿಯಿಂದ ಈ ರಾಜ್ಯದ ಜನರನ್ನು ಆ ವ್ಯಸನಗಳಿಂದ ದೂರ ಇಡತಕ್ಕಂಥ ಒಂದು ದೊಡ್ಡ ಪ್ರಯತ್ನವನ್ನೂ ಕೂಡ ನಮ್ಮ ಈ ಬಜೆಟ್‌ನಲ್ಲಿ ಶ್ರೀ ಸಿದ್ದರಾಮಯ್ಯನವರು ಮಾಡಿದ್ದಾರೆ ಇನ್ನು

" ಒಕ್ಕಲನು ನಲುಗಿಸದೆ ಲೆಕ್ಕವನು ಸಿಕ್ಕಿಸದೆ
ಕಕ್ಕುಲತೆಯಿಂದ ನಡೆಸುವ ಅರಸು ತಾ ಚಿಕ್ಕಂದದಿ ಇರುವ ಸರ್ವಜ್ಞ"

ಎಂದು ಹೇಳುತ್ತಾನೆ. ಒಕ್ಕಲಿಗರನ್ನು ಯಾರು ಸುಖಸಂತೋಷದಿಂದ ಇಡುತ್ತಾರೋ ಆತ ಆವತ್ತಿನ ರಾಜ, ಅವನು ಸುಖವಾಗಿರುತ್ತಾನೆ. ಸಂತೋಷದಿಂದ ಇರುತ್ತಾನೆ ದೇಶ ಸುಖವಾಗಿರುತ್ತದೆ ಎಂದು ಸರ್ವಜ್ಞ ಹೇಳುತ್ತಾನೆ.

" ಭಂಡಾರ ತುಂಬಲಿ, ಬಂಡಿಯಲಿ ಹೇರುವರೆ,
ಮಂಡಲವ ನೀ ಆಲಿ ಮೆರೆಯುವರೆ, ಒಕ್ಕಲನು ಕೊಂಡಾಡಬೇಕು ಸರ್ವಜ್ಞ "

ಎಂದು ಹೇಳುತ್ತಾನೆ. ಅಂದರೆ ಅವರಿಗೆಲ್ಲಾ ಸಹಾಯ ಮಾಡಬೇಕು. ನಮ್ಮ ರಾಜ್ಯದ ಭಂಡಾರ ತುಂಬಬೇಕಾದರೆ ಒಕ್ಕಲಿಗ ಸುಖವಾಗಿರಬೇಕು. ಸರಿಯಾಗಿ ಉತ್ಪನ್ನ ಬರಬೇಕಾಗುತ್ತದೆ. ಒಕ್ಕಲಿಗ ಕಷ್ಟಸುಖಗಳನ್ನು ನೋಡಬೇಕಾಗುತ್ತದೆ. ಇವತ್ತು ಏಕೆ ಈ ದೇಶದಲ್ಲಿ ಕಷ್ಟ ಬರುತ್ತದೆ.. ಬಡವರಿಗೆ ಮತ್ತೊಬ್ಬರಿಗೆ, ಇವತ್ತು ಅಕ್ಕಿ ಹಗರಣ ಬಂದಿರುವುದು ಅದು ಏತಕ್ಕೆ ? ಒಕ್ಕಲಿಗ ಸರಿಯಾಗಿ ಬೆಳೆದುಬಿಟ್ಟಿದ್ದರೆ ಈ ಹಗರಣದ ಪ್ರಶ್ನೆಯೇ ಬರುತ್ತಿರಲಿಲ್ಲ. ಈ ವರ್ಷ ಮಳೆಯಾಗಿದೆ ನೋಡಿ. ಎಲ್ಲರನ್ನು ಸುಖವಾಗಿ ಇಟ್ಟರೆ ಎಲ್ಲಾ ಬಡವರು ಸುಖವಾಗಿ ಇರುತ್ತಾರೆ. ನಾವು ಬರಗಾಲದಲ್ಲಿ ಅಕ್ಕಿ ಕೊಡುತ್ತೇವೆಂದು ಹೇಳಿದರೆ ಎಷ್ಟು ದಿವಸ ಕೊಡುತ್ತೇವೆ ? ಬಡವರಿಗೆ ತಿಂಗಳಿಗೆ ಎರಡು ದಿವಸ ಮೂರು ದಿವಸ ಕೊಟ್ಟಿದ್ದೇವೆ. ಆದರೆ ಒಕ್ಕಲಿಗ ಪ್ರತಿ ದಿವಸವೂ ಜನರನ್ನು ಬದುಕಿಸುತ್ತಿದ್ದಾನೆ. ಬೆಳೆ ಬೆಳೆಯುತ್ತಿದ್ದಾನೆ. ಅದೇ ರೀತಿ ಈ ವರ್ಷ ಟ್ಯಾಕ್ಸ್ ಕೂಡ ಈ ಒಂದು ಭಂಡಾರ ತುಂಬಬೇಕಾದರೆ ಒಕ್ಕಲಿಗ ಬೆಳೆಯಬೇಕಾಗುತ್ತದೆ. ಆ ಕಾರಣದಿಂದ ಇವತ್ತಿನ ನಮ್ಮ ಬಜೆಟ್‌ನಲ್ಲಿ ಆ ಒಕ್ಕಲಿಗರಿಗೆ ಹೆಚ್ಚು ಒತ್ತು ಕೊಟ್ಟಂಥ ಬಜೆಟ್ ಇದಾಗಿದೆ ಎನ್ನುವ ಮಾತನ್ನು ಹೇಳುತ್ತಾ ಅದಕ್ಕೆ ಉದಾಹರಣೆಯಾಗಿ ಇಲ್ಲಿ ಎಷ್ಟು ಚಂದವಾಗಿ ಸರ್ವಜ್ಞ

ಹೇಳುತ್ತಾನೆಂದರೆ ಎಷ್ಟು ಸಲ ಹೇಳಿದರೂ ಅದನ್ನು ಹೇಳಬೇಕೆನ್ನಿಸುತ್ತದೆ. ಅಲ್ಲಿ ಕುಳಿತಿದ್ದವರು ಪಾಪ ಅವರು ಹೋಗೇ ಬಿಟ್ರಲ್ಲಾ ಅವರು ಎಲ್ಲಿ ಹೋದರು? ಅವರು ಇರಬೇಕು. ಸದನದಲ್ಲಿ ಕುಳಿತುಕೊಂಡು ಕೇಳಬೇಕು. ಅಂಥವರಿಗೆ ಇನ್ನೂ ಹೇಳಬೇಕು. ಅವರು ಇನ್ನೂ ಹೊಸಬರು. ಹಿಂದೆ ನಮ್ಮ ಹರಪನಹಳ್ಳಿ ನಾಯಕರು ಮಾತನಾಡುತ್ತಾ 'ಇದೇನು ಶಿವಾನುಭವ ಕಾರ್ಯಕ್ರಮವೋ ಅಥವಾ ಬಜೆಟ್ ಭಾಷಣವೋ ' ಎಂದು ನನ್ನನ್ನು ಅವತ್ತು ಕೇಳಿದ್ದರು. ಹೌದು, ಇದು ಶಿವಾನುಭವವೇ ಆಗುತ್ತದೆ. ಇದು ಕಲ್ಯಾಣ ಆಗಬೇಕಾಗುತ್ತದೆ. ಇದೊಂದು ಅನುಭವ ಮಂಟಪವಾಗುತ್ತದೆ. ಇಲ್ಲಿ ಎಲ್ಲಾ ನಡೆಯಬೇಕಾಗುತ್ತದೆ. ಪ್ರಾಮಾಣಿಕತೆ, ಸತ್ಯ ನ್ಯಾಯ ಇಲ್ಲಿರಬೇಕಾಗುತ್ತದೆ ಅದರಂತೆ ನಡೆಯಬೇಕಾಗುತ್ತದೆ. ಅದು ಆಡಳಿತ ಪಕ್ಷ ಮತ್ತು ವಿರೋಧ ಪಕ್ಷ ಹೀಗೆ ನಾವಿಬ್ಬರೂ ಸೇರಿಕೊಂಡು ಈ ರಾಜ್ಯವನ್ನು ಉದ್ಧಾರ ಮಾಡಬೇಕಾಗುತ್ತದೆ. ಅಣ್ಣ ಬಸವಣ್ಣನವರು ನಡೆದಂಥ ದಾರಿಯಲ್ಲಿ ನುಡಿದಂಥ ಧಾರೆಯಲ್ಲಿ ಸರ್ವಜ್ಞ ನಡೆದು ನುಡಿದಂಥ ದಾರಿಯಲ್ಲಿ ನಾವು ನಡೆಯಬೇಕಾಗುತ್ತದೆ.

" ಬೆಕ್ಕು ಮನೆಯೊಳಗೆ ಲೇಸು; ಮುಕ್ಕು ಕಲ್ಲಿಗೆ ಲೇಸು.
ನಕ್ಕು ನಗಿಸುವ ನುಡಿ ಲೇಸು.

ನುಡಿಯುವ ನುಡಿ ಕೂಡ ನಕ್ಕು ನಗಿಸುತ್ತಿರಬೇಕು. ಅಸೆಂಬ್ಲಿಯಲ್ಲಿ ಏನಾದರೂ ಮಾತನಾಡುವುದಿಲ್ಲ. ನ್ಯಾಯ ಮಾಡಿ ಇನ್ನೊಂದು ಮಾಡಿ ಅದನ್ನು ತೆಗೆಯಿರಿ ಇದನ್ನು ತೆಗೆಯಿರಿ. ವಜಾ ಮಾಡಿರಿ ಎನ್ನುವ ಮಾತಲ್ಲ. ಅದನ್ನೂ ಕೂಡ ಇಲ್ಲಿ ಹೇಳುತ್ತಾರೆ.

" ನಕ್ಕು ನುಡಿಸುವ ನುಡಿ ಲೇಸು.
ಊರಿಗೆ ಒಕ್ಕಲಿಗ ಲೇಸು ಸರ್ವಜ್ಞ "

ಊರಿಗೆ ಒಬ್ಬ ಒಕ್ಕಲಿಗ ಇರಬೇಕಾಗುತ್ತದೆ. ಒಕ್ಕಲಿಗನೇ ಇವತ್ತು ಈ ದೇಶಕ್ಕೆ ಅನ್ನ ಹಾಕುವವ, ಅನ್ನದಾತ ಎನ್ನುವ ಮಾತನ್ನೂ ಕೂಡ ಇಲ್ಲಿ ಹೇಳುತ್ತಾರೆ. ಆ ಮೇಲೆ ಇನ್ನೊಂದನ್ನು ಇಲ್ಲಿ ಸರ್ವಜ್ಞ ಹೇಳುತ್ತಾನೆ. ಆಗಲೇ ನಾನು ಹೇಳಿದಂತೆ ಶ್ರೀ ಸಿದ್ಧರಾಮಯ್ಯನವರು ಇದಕ್ಕೆ ಹೆಚ್ಚು ಒತ್ತು ಕೊಟ್ಟಿದ್ದಾರೆ.

" ಸಾಲವನು ತರುವಾಗ ಹಾಲು ಜೇನುಂಡಂತೆ.
ಸಾಲಿಗನು ಬಂದು ಕೇಳಿದರೆ ಕುಂಡಿಗೆ ಚೇಳು ಕಡಿದಂತೆ ಸರ್ವಜ್ಞ "

ಎಂದು ಹೇಳುತ್ತಾನೆ. ಈಗ ಸಾಲವನ್ನು ಹುಟ್ಟಿಸಿಕೊಂಡು ಹುಟ್ಟಿಸಿಕೊಂಡು ಹೋಗಿಬಿಟ್ಟರೆ ಮುಂದೆ ಏನು ಮಾಡುವುದು ? ಈ ದೇಶವನ್ನು ಈ ರಾಜ್ಯವನ್ನು ಯಾರಿಗೆ ಒತ್ತೆ ಹಾಕುವುದು ? ಆ ಕಾರಣಕ್ಕಾಗಿ ಸಾಲ ಕಡಿಮೆ ಮಾಡುವುದಕ್ಕೆ ಕೂಡ ಇವತ್ತು ಒತ್ತು ಕೊಟ್ಟಿದ್ದಾರೆ. ಸಾಲ ತರಲಿಕ್ಕಿಲ್ಲ ಸಾಲ ತರದೆ ಮಾಡುವುದಕ್ಕೆ ಪ್ರಯತ್ನ ಮಾಡುವುದು. ಆ ಕಡೆಗೂ ಕೂಡ ಇವತ್ತು ಹೆಚ್ಚು ಒತ್ತು ಕೊಟ್ಟಿದ್ದಾರೆ ಎನ್ನುವ ಮಾತನ್ನು ಹೇಳಿ. ಇನ್ನು ರೈತರ ಬಗ್ಗೆ ಸರ್ಕಾರ ಏನು ಮಾಡಿದ್ದಾರೆ ಎಂದು ನಮ್ಮ ಮಿತ್ರರು ಕೇಳಿದರು. ಕರೆಕ್ಟ್ ಕೇಳಬೇಕಾಗುತ್ತದೆ. ವಿರೋಧ ಪಕ್ಷದಲ್ಲಿ

ಸುಮ್ಮನೆ ಕೂಲಿತುಕೊಳ್ಳುವುದಕ್ಕೆ ಬಂದಿಲ್ಲ. ತಾವೆಲ್ಲಾ ಹೊಸಬರು ಕುಳಿತು ಕೇಳಬೇಕು. ಬಹಳ ಜನ ಸದನದೊಳಗಡೆ ಇಲ್ಲ ಬಹುಶಃ ತಾವು 100 ಜನರಿಗೆ ಟ್ರೈನಿಂಗ್ ಕೊಟ್ಟಿದ್ದೀರಿ. ಆದರೆ ದುರ್ದೈವದಿಂದ ನಾನು ಅವರ ಪರವಾಗಿಯೇ ಇದ್ದೇನೆ. ನೀವು ಐದು ನಿಮಿಷದಲ್ಲಿ ಮಾತನಾಡಿ ಮುಗಿಸಿ, 10 ನಿಮಿಷದಲ್ಲಿ ಮಾತನಾಡಿ ಮುಗಿಸಿ ಎಂದು ಹೇಳಿದರೆ ಅವರು ಹೇಗೆ ಮಾತನಾಡುವುದು ? ನೀವು ಹೇಗೆ ಹೇಳಿದ್ದೀರಿ ಎಂದರೆ ಎಲ್ಲರೂ ಓದಿಕೊಂಡು ಬಂದು ಸರಿಯಾಗಿ ಮಾತನಾಡಿ ಎಂದು 100 ಮಂದಿಗೆ ಟ್ರೈನಿಂಗ್‌ನಲ್ಲಿ ಹೇಳಿದ್ದೀರಿ. ನಾನೂ ಸಹ ಆ ಟ್ರೈನಿಂಗ್‌ನಲ್ಲಿ ಕುಳಿತಿದ್ದೆ ನೀವ್ಯಾಕೆ ಈವಾಗ ಇಲ್ಲಿಗೆ ಬಂದಿದ್ದೀರಿ ಎಂದು ಅಲ್ಲಿ ಎಲ್ಲರೂ ಹುಡುಗಾಟ ಮಾಡಲಿಕ್ಕೆ ಶುರುಮಾಡಿದರು. ಆದರೂ ಕೂಡ ಎಲ್ಲರಿಗೂ ಕಲಿಯುವುದು. ಇದ್ದೇ ಇರುತ್ತದೆ. ಶ್ರೀ ಸಿದ್ಧರಾಮಯ್ಯನಂಥವರು ಏನು ಬಜೆಟ್ ಮಂಡನೆ ಮಾಡಿದ್ದಾರೆ ಅವರಿಗೂ ಕಲಿಯುವುದು ಇರುತ್ತದೆ. ಇಲ್ಲವೆಂದೇನಿಲ್ಲ. ಶ್ರೀ ಧರ್ಮಸಿಂಗ್‌ರವರು 6–7–8 ಸಲ ಆರಿಸಿ ಬಂದಿದ್ದರೂ ಸಹ ಇನ್ನೂ ಕಲಿಯುವುದು ಇರುತ್ತದೆ. ಸಂಪ್ರದಾಯದಂತೆ ನಮ್ಮ 100 ಜನ ಹೊಸಬರಿಗೆ ನೀವು ಒಳ್ಳೆಯ ಒಂದು ಟ್ರೈನಿಂಗ್ ಕೊಟ್ಟಿದ್ದೀರಿ. ಆ ದೃಷ್ಟಿಯಿಂದ ನಿಜವಾಗಿ ನಾನು ತಮಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಹಾಗೆಯೇ ಅವರೆಲ್ಲಾ ಒಬ್ಬೊಬ್ಬರು ಹತ್ತತ್ತು ನಿಮಿಷ ಮಾತನಾಡಬೇಕೆಂದರೆ 100 ಮಂದಿಗೆ ಎಷ್ಟು ನಿಮಿಷ ಆಗುತ್ತದೆ ? 10 ನಿಮಿಷದಲ್ಲಿ ಏನು ಮಾತನಾಡಬಹುದು ? ನಾನು ಮಾತನಾಡುವುದಕ್ಕೆ ಪ್ರಾರಂಭ ಮಾಡಿ 10 ನಿಮಿಷವಾಯಿತು. ನಾನು ಇನ್ನೂ ಪೀಠಿಕೆಯಲ್ಲಿಯೇ ಇದ್ದೇನೆ, ನಿಜವಾಗಿ ಹೇಳುವುದಾದರೆ ಈ ದೊಡ್ಡ ಬಜೆಟ್ ಬಗ್ಗೆ ವಾರಗಟ್ಟಲೆ ಚರ್ಚೆ ನಡೆಯಬೇಕು.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಮೂರ್ತಿ ಬಸವಣ್ಣನವರ ಪುಸ್ತಕವನ್ನೇ ಹೇಳಿಬಿಟ್ಟರೆ ಎಲ್ಲಿ ಪ್ರಾರಂಭವಾಗುತ್ತದೆ ಹೇಳಿ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಬಸವಣ್ಣನವರ ವಚನವನ್ನು ಏಕೆ ಹೇಳುತ್ತಿದ್ದಾರೆಂದರೆ, ಅರ್ಥಗರ್ಭಿತವಾಗಿ ಒಂದು ಗಂಟೆ ಹೇಳುವುದನ್ನು ಐದೇ ನಿಮಿಷದಲ್ಲಿ ಮುಗಿಸುತ್ತಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ : ಅದನ್ನೇ ಹೇಳುವುದಕ್ಕೆ ಹೊರಟಿದ್ದೇನೆ. ಈಗ ಒಂದೊಂದು ವಚನದ ಮೇಲೆ ಒಂದೊಂದು ದಿವಸ ಮಾತನಾಡಬಹುದು. ಅದು ಆಗುವುದಿಲ್ಲ. ಇಲ್ಲಿ ಎಷ್ಟು ಬೇಕೋ ಅಷ್ಟೇ ಹೇಳುವುದು. ಯಾವುದು ಬೇಕೋ ಅದನ್ನು ಇಲ್ಲಿ ಹೇಳುತ್ತೇನೆ. ಇನ್ನು ಕೆಲವು ಪದಗಳನ್ನು ಹೋದ ಸಲ ಅಲ್ಲಿ ನಿಂತುಕೊಂಡು ಇವರಿಗೆ ಹಂದಿ. ಕತ್ತೆ ಕುದುರೆ ನಾಯಿ ಎಂದೆಲ್ಲಾ ಹೇಳಿದ್ದೇನೆ. ನನಗೆ ಗೊತ್ತಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ. ಸಾಹಿತ್ಯದ ಬಗ್ಗೆ ಬಸವಣ್ಣನವರ ವಿಚಾರಗಳ ಬಗ್ಗೆ ಮಾನ್ಯ ಪಾಟೀಲರು ತಿಳಿದುಕೊಂಡಿರುವ ಬಗ್ಗೆ ಹ್ಯಾಟ್ಸ್‌ಆಫ್ ನಾವು ತಲೆಬಾಗಿಸುತ್ತೇನೆ. ಈ ನಾಡಿನಲ್ಲಿ ಬಸವಣ್ಣನ ಸೇವೆ ಅನೇಕ ಜನ ಸಾಧುಸಂತರು ಸೇರಿಕೊಂಡು ಅನೇಕ ವಿಷಯಗಳನ್ನು

ಹೇಳಿದ್ದಾರೆ. ಅದೆಲ್ಲಾ ಪೂಜೆ ಪುರಸ್ಕಾರ ಪ್ರವಚನಕ್ಕೆ ಉಪಯೋಗವಾಗುತ್ತದೆಯೇ ಹೊರತು ಸ್ವಾತಂತ್ರ್ಯ ಬಂದು 56 ವರ್ಷ ಕಳೆದರೂ ಸಹ ಗ್ರಾಮೀಣ ಪ್ರದೇಶದ ರೈತ ಕೃಷಿ ಕಾರ್ಮಿಕ ಆ ಜನ ನೆಮ್ಮದಿಯಿಂದ ಬದುಕುವ ವ್ಯವಸ್ಥೆ ಮಾಡುವುದಕ್ಕೆ ನಮ್ಮಿಂದೇನಾದರೂ ಆಗಿದೆಯೇ ? ಇಲ್ಲಿ ಪ್ರಶ್ನೆ ಇರುವಂಥದ್ದು ಏನೆಂದರೆ. ಈ ಎಲ್ಲಾ ವಚನ ಸಾಹಿತ್ಯವನ್ನು ಅರ್ಥ ಮಾಡಿಕೊಂಡ ಮೇಲೆ ಈ ಚುನಾಯಿತ ಪ್ರತಿನಿಧಿಗಳಾಗಿ ನಾವು ಇಲ್ಲಿ ಕುಳಿತು ಪಕ್ಷಭೇದ ಮರೆತು ಆ ಸಮಸ್ಯೆಗೆ ಪರಿಹಾರವನ್ನು ಹುಡುಕುವುದರಲ್ಲಿ ಯಶಸ್ವಿಯಾದೆವು ಎಂದರೆ ಎಲ್ಲಾ ತರ್ಕಕ್ಕೂ ಮಾತಿಗೆ ಬಸವಣ್ಣನವರ ವಚನಕ್ಕೆ ಅರ್ಥ ಬರುತ್ತದೆ. ಆ ವಚನವನ್ನು ಅಲ್ಲಿಯೇ ಬಿಟ್ಟು ನಾವು ಸರಿ ಕಂಡ ದಾರಿಯಲ್ಲಿ ಹೊರಟಿದ್ದರಿಂದ ಆ ದುಷ್ಪರಿಣಾಮ ಆಗಿದೆ. ಇವತ್ತೇನು ನೀವು ಈ ರೈತ ಸಮುದಾಯದ ಬಗ್ಗೆ ಇಷ್ಟೊಂದು ಕಳಕಳಿಯನ್ನು ವ್ಯಕ್ತಪಡಿಸಿದ್ದೀರಿ. ಬಡ್ಡಿ ಮನ್ನಾವನ್ನು ನಮ್ಮ ಸಿದ್ಧರಾಮಯ್ಯನವರು ಕಷ್ಟಪಟ್ಟು ಮಾಡಿದ್ದಾರೆ. ಆದರೆ ಇವತ್ತು co-operative ನಲ್ಲಿ ಇರುವಂಥವರು ಎಷ್ಟು ? ಉಳಿದಂಥ ಬ್ಯಾಂಕ್‌ಗಳಿಂದ total ತೆಗೆದುಕೊಂಡಿರುವಂಥದ್ದು 5000 ರೂ ಸಾಲ ತೆಗೆದುಕೊಂಡಿದ್ದಾರೆ. ಒಂದು ಒಂದೂವರೆ ಸಾವಿರ ಕೋಟಿ ರೂಪಾಯಿಗಳ concession ಅನ್ನು ನಾವು ಕೊಡುತ್ತಿದ್ದೇವೆ. Remaining ರೈತರ ಏನು ? ಅವರನ್ನು ನಾವು ಎಲ್ಲಿ ಚಿಂತನೆ ಮಾಡುವುದಕ್ಕೆ ಅವಕಾಶವಾಗಿದೆ ? ಒಂದು ಕಣ್ಣಿಗೆ ಬಣ್ಣ ಒಂದು ಕಣ್ಣಿಗೆ ಸುಣ್ಣವೇ ?

1.20 ಪಿಎಂ

ಈ ಪರಿಸ್ಥಿತಿಯಲ್ಲಿ ಇವತ್ತು ಆರ್ಥಿಕ ಪರಿಸ್ಥಿತಿ ಹದಗೆಡುತ್ತಿರುವಾಗ ನಾವೆಲ್ಲಾ ಕುಳಿತು ಸಮಾಲೋಚನೆ ಮಾಡಿ ಸರಿಯಾದ ಮಾರ್ಗ ಹುಡುಕೋಣ. ಆದರೆ. ರೈತ ಸಮುದಾಯ 3 ವರ್ಷಗಳಿಂದ ಬರಗಾಲಕ್ಕೆ ಸಿಕಿ ಇನ್ನೊಂದು ಬರಗಾಲಕ್ಕೆ ಎದುರಿಸುವ ಪರಿಸಿತಿ ಇರಬೇಕಾದರೆ, ಈ ಜನ ಮಳೆ, ಕೆರೆ ಆಶ್ರಯದ ಒಣ ಬೇಸಾಯುದವರು, ಸಾಯುತ್ತಿರಬೇಕಾದರೆ, ಅವನಿಗೆ ಕೊಟ್ಟ ಅಕ್ಕಿಯನ್ನು ಕಾಳಸಂತೆಯಲ್ಲಿ ಮಾರಾಟ ಮಾಡಿಕೊಳ್ಳುವ ಜನರಿಗೆ ಬೆಂಬಲ ಕೊಡುವಂಥ ಜನ ಇರಬೇಕಾದರೆ, ಇದು ಎಲ್ಲಿಗೆ ಹೋಗಿ ಮುಟ್ಟುತ್ತದೆ ? ಯಾರನ್ನು ಜೈಲಿಗೆ ಕಳುಹಿಸಿದೆವು ? ಚರ್ಚೆಯ ಪರಿಣಾಮದಿಂದ ಒಬ್ಬ ಅಧಿಕಾರಿಯನ್ನಾದರೂ ಮನೆಗೆ ಕಳುಹಿಸಿದ್ದಾರೆಯೇ ? ಯಾರು ಜೈಲಿಗೆ ಹೋಗಿದ್ದಾರೆ ? ಇದರ ಬಗ್ಗೆ ನಾವು, ನೀವು ಕುಳಿತು ಒಂದು ರೀತಿಯ ಪರಿಹಾರ ಹುಡುಕೋಣ. ಆಗ ನಿಮ್ಮ ಮಾತಿಗೆ ಅರ್ಥ ಬರುತ್ತದೆ, ನಾವು ನಿಮಗೆ ಬೆಂಬಲ ಕೊಡುತ್ತೇವೆ, ನಿಮ್ಮ ಅನುಬಂಧ ಮಾತಿಗೆ ಬೆಂಬಲ ಕೊಡುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಯಡಿಯೂರಪ್ಪನವರು ಒಳ್ಳೆಯ ಮಾತನ್ನು ಹೇಳಿದರು. ಆಡಳಿತ ಮತ್ತು ವಿರೋಧ ಪಕ್ಷದವರು ನಾವಿಬ್ಬರೂ ಸೇರಿ ಇದನ್ನು ಮಾಡಬೇಕಾಗುತ್ತದೆ. ಅದೇ ರೀತಿ, ಆ ವಚನದ ಪ್ರಕಾರ, ಮಾನ್ಯ ಸಿದ್ಧರಾಮಯ್ಯನವರು ಆ ರೀತಿಯಾಗಿ ಒತ್ತು ಕೊಟ್ಟು. ಈ ದಿಸೆಯಲ್ಲಿ

ಮುನ್ನುಗ್ಗುತ್ತಿದ್ದಾರೆ. ಈ ದೃಷ್ಟಿಯಿಂದ ನಾನು ಈ ಮಾತನ್ನು ಹೇಳಿದ್ದೇನೆ. ರೈತರ ಪರವಾದ ಆಯವ್ಯಯ ಅನ್ನಲಿಕ್ಕೆ ಮೊದಲನೆಯದಾಗಿ, ಶೇ. 6ರ ಬಡ್ಡಿದರದಲ್ಲಿ ಸಾಲ ಕೊಡುತ್ತೇವೆಂದಿದ್ದಾರೆ. ಯಾವಾಗ ಕೊಡುವುದಕ್ಕಾಗಿತ್ತು ? ಮಾನ್ಯ ಹೆಗಡೆಯವರಿದ್ದಾಗ, 7 ಪರ್ಸೆಂಟ್‌ಗೆ ಕೊಡಬೇಕೆಂದು 5 ಪರ್ಸೆಂಟ್ ಸಬ್ಸಿಡಿ ಕೊಡಬೇಕೆಂದು ಮಾಡಿದ್ದರು. ಅದನ್ನು ಬಿಟ್ಟರೆ. ಇವತ್ತು ರೈತರಿಗೆ ಶೇ. 6ರ ಬಡ್ಡಿ ದರದಲ್ಲಿ ಸಾಲ ಕೊಡುವುದು ಇದು ರೈತರ ಪರ ಬಡ್ಜೆಟ್ ಅನ್ನಲು ಒಂದು ಉದಾಹರಣೆ. ಇದರಲ್ಲಿ ಚಕ್ರ, ಸುಸ್ತಿ ಬಡ್ಡಿ ಇಲ್ಲವೆಂದಿದ್ದಾರೆ. ಮಾನ್ಯ ಮಾಧುಸ್ವಾಮಿಯವರು, ಪಾಟೀಲರೆ, ಇದು ಹೇಗೆ ? ಅದಾಗುವುದಿಲ್ಲ, ಸಾಧ್ಯವಿಲ್ಲವೆಂದು ನನ್ನನ್ನು ಕೇಳಿದರು. ಸಾಧ್ಯವಿದೆ. ಏಕೆ ಸಾಧ್ಯವಿಲ್ಲ ? ಚಕ್ರ ಬಡ್ಡಿ, ಸುಸ್ತಿ ಬಡ್ಡಿಯನ್ನು ಯಾವಾಗ ಹಾಕುತ್ತಾರೆಂದರೆ, ಇವತ್ತು ಅಪೆಕ್ಸ್ ಬ್ಯಾಂಕ್‌ನವರು ದಂಡದ ಬಡ್ಡಿ ಎಂದು ತೆಗೆದುಕೊಂಡಿದ್ದಾರೆ. ಅಲ್ಲಿ ಬಿಡಿಸಬೇಕು. ಕೇವಲ ಪ್ರೈಮರಿಗೆ ಎಂದು ಹೇಳಿದರೆ ಆಗುವುದಿಲ್ಲ. ಯಾರೂ ದಂಡದ ಬಡ್ಡಿ ಹಾಕದಂತೆ ಮಾಡಬೇಕು. ದಂಡದ ಬಡ್ಡಿ ಎಂದು ಇಟ್ಟುಕೊಂಡು ಕುಳಿತಿದ್ದರೆ. ರೈತರ ಪರಿಸ್ಥಿತಿ ಏನಾಗುತ್ತದೆಂದರೆ, ಬೆಳೆ ಬರುವುದಿಲ್ಲ. ಮಾರ್ಚ್ ಎಂದು ಇಟ್ಟಿರುತ್ತಾರೆ, ಮಾರ್ಚ್‌ಗೆ ತುಂಬಲಾಗುವುದಿಲ್ಲ. ಏಪ್ರಿಲ್ 1ಕ್ಕೆ ತುಂಬಿದರೆ ದಂಡದ ಬಡ್ಡಿ ಹಾಕುತ್ತಾರೆ. 12 ರೂ. ಇದ್ದದ್ದು 14–18 ರೂ. ಹಾಕುತ್ತಾರೆ. ಅದನ್ನು ಅವರವರ ನಿರ್ಧಾರದಂತೆ ಮಾಡಿಕೊಂಡಿದ್ದಾರೆ. ಆದುದರಿಂದ, ದಂಡದ ಬಡ್ಡಿ ತೆಗೆದಿದ್ದು ಒಳ್ಳೆಯದಾಗಿದೆ. ದಂಡದ ಬಡ್ಡಿ ಇಲ್ಲದೆ ಸಾಲ ಕೊಡಲಿಕ್ಕೆ ಸಾಧ್ಯವಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದರ ಬಗ್ಗೆ ವಿವರವಾದ ಚರ್ಚೆಗೆ ಬೇಕಾದರೆ ನಾನು ಸಿದ್ಧನಿದ್ದೇನೆ. ದೀರ್ಘಾವಧಿ ಸಾಲದ ಮೇಲೆ 40 ಕೋಟಿ ರೂ. ಬಡ್ಡಿ ಮನ್ನಾ ಎಂದು ಹೇಳಿದ್ದಾರೆ. ಮಾನ್ಯ ಯಡಿಯೂರಪ್ಪನವರೆ, ಈ ಕಡೆ ಗಮನ ಕೊಡಿ. ಎಲ್ಲರೂ ಕೂಡಿ ಮಾಡುವ ಕೆಲಸವಿದು. ಸಿದ್ಧರಾಮಯ್ಯನವರಿಗೆ ನಾನು ಹೇಳುತ್ತಿದ್ದೇನೆ. ಸಿದ್ಧರಾಮಯ್ಯನವರು ಈ ಕಡೆ ಲಕ್ಷ್ಯ ಕೊಡಬೇಕು. ಇಷ್ಟೆಲ್ಲಾ ಮಾಡಿದ್ದೀರಿ. ಇಲ್ಲಿವರೆಗಿನ ಎಲ್ಲಾ ಸಾಲ ಮೇಲೆ ಬಡ್ಡಿ ಒನ್‌ಟೈಮ್ ಮನ್ನಾ ಮಾಡಿ, ಏಕೆಂದರೆ, ಇಷ್ಟೆಲ್ಲಾ ಮುನ್ನುಗ್ಗಿ, ಇಷ್ಟೆಲ್ಲಾ ಮಾಡಿರುವ ಕಾಲದಲ್ಲಿ ಅವರ ಅಸಲನ್ನು ಕಂತು ಮಾಡಿಕೊಡಿ. ನೀವು ಅಸಲನ್ನು ಕಟ್ಟಿ ಎಂದರೆ, ಹೇಗೆ ಸಾಧ್ಯ ? ಇಲ್ಲಿವರೆಗೆ ಬರವಿದೆ. ನಾವೆಲ್ಲರೂ ರೈತರ ಮಕ್ಕಳು. ನಾವೆಲ್ಲರೂ ಈ ವಿಚಾರದ ಬಗ್ಗೆ ಯೋಚನೆ ಮಾಡಬೇಕಾಗಿದೆ. ಅವರೆಲ್ಲಾ ಸಾಲ ಮಾಡಿ ತಂದು ಕಟ್ಟಿದ್ದಾರೆ. ಬ್ಯಾಂಕ್‌ನವರು ಮತ್ತೆ ಅವರಿಗೆ ಕೊಡುತ್ತಿಲ್ಲ. 4–5 ರೂ. ಬಡ್ಡಿಗೆ ಸಾಲ ತಂದು ಇಲ್ಲಿ ಕಟ್ಟಿದ್ದಾರೆ. ಇದರಿಂದ ಯಾವ ರೈತರಿಗೆ ಸಹಾಯವಾಗುತ್ತದೆ ? 8ನೇ ತಾರೀಖು ಕಟ್ಟಬೇಕೆಂದರೆ, ಅಲ್ಲಿ ಬೆಳೆ ಇಲ್ಲ, ಬರ ಇದೆ. ಆ ರೀತಿ ಕೊಡುವುದು ನಮಗೆ ನಿಮಗೆ ಗೊತ್ತಿದೆ. ಸಮ್ಮಿಶ್ರ ಸರ್ಕಾರದವರು ಇಷ್ಟೆಲ್ಲಾ ಮಾಡಿದ್ದೇವೆ. ಒಳ್ಳೆಯ ಬಡ್ಜೆಟ್ ಮಂಡಿಸಿದ್ದಾರೆ, ಅದಕ್ಕೂ ಪ್ರಯತ್ನ ಮಾಡಿ. ಒನ್‌ಟೈಂ ಎಲ್ಲಾ ಬಡ್ಡಿ ಮನ್ನಾ ಮಾಡಿ. ಅಸಲು ಏನಿದೆ ಅದನ್ನು 8–10 ಕಂತು ಮಾಡಿ. ಮಾಡಲಿಕ್ಕೆ ಸಾಧ್ಯವಿದೆ. ಅದನ್ನೆಲ್ಲಾ ಕುಳಿತುಕೊಂಡು

ಚರ್ಚೆ ಮಾಡಿ ಮಾಡೋಣ. ದಯುವಿಟ್ಟು, ಮಾಡಿ ಮಾಡಿ ಎಂದು ಯಡಿಯೂರಪ್ಪನವರೇ ನಾನೂ ಕೂಡ ಸರ್ಕಾರಕ್ಕೆ ಸಲಹೆ ಮಾಡುತ್ತಿದ್ದೇನೆ. ಇಲ್ಲಿ ಕುಳಿತುಕೊಂಡು ನಾನು ಸರ್ಕಾರಕ್ಕೆ ಸಲಹೆ ಮಾಡಬಾರದೆಂದೇನೂ ಇಲ್ಲ. ಮಾಡುತ್ತೇವೆ. ನಮ್ಮ ಸರ್ಕಾರ ಅಂತಹದ್ದು. ಏಕೆಂದರೆ, ಸಾಮಾನ್ಯವಾಗಿ ನಾವು ಆ ರೀತಿಯಾಗಿ ಮಾಡಬೇಕಾಗುತ್ತದೆ. ಸಿದ್ಧರಾಮಯ್ಯನವರು, ಎಲ್ಲರೂ ಕೇಳಬೇಕು. ಉದಾಸಿಯವರು ಇದರಲ್ಲಿ ಎಕ್ಸ್‌ಪರ್ಟ್. ನಾನು ಉದಾಸಿಯವರಿಗೆ ಬೆಳೆ ವಿಮೆ ಎಕ್ಸ್‌ಪರ್ಟ್ ಎಂದು ಹೆಸರಿಟ್ಟಿದ್ದೇನೆ. ಬೆಳೆ ವಿಮೆ ಬಗ್ಗೆ ಮಾತನಾಡಬೇಕಾದರೆ ಅವರಿಗೆ ಎಲ್ಲವನ್ನೂ ತಂದುಕೊಡುತ್ತಿದ್ದೆ. ಈಗ ಅವರು ಅಲ್ಲಿ ಕುಳಿತಿದ್ದಾರೆ. ಈ ಬೆಳೆ ವಿಮೆ ಹೇಗಿದೆ ಎಂದರೆ, ಇದೊಂದು ರೈತರಿಗೆ ಮಾಡುವ ಕಡು ಮೋಸ. ಎಲ್ಲಿ ಕಷ್ಟವಿದೆ, ಎಲ್ಲಿ ಬರ ಇದೆ. ಎಲ್ಲಿ ಬೆಳೆ ವಿಮೆ ಸಿಗುತ್ತಿಲ್ಲ. ಇದು ಕೇಂದ್ರ ಸರ್ಕಾರ ಮಾಡುವ ಕೆಲಸ. ಯಡಿಯೂರಪ್ಪನವರೇ ಹಿಂದೆ ನಾನು ಹೇಳಿದ್ದೆ. ಎಲ್ಲರಿಗೂ ನಾನು ಪತ್ರ ಬರೆದೆ. ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದು. ಬದಲಾವಣೆ ಮಾಡಿ ಎಂದೆ. ನಿಮ್ಮದು ಸರಿ ಎಂದರು. ನಂತರ, ಕೇಂದ್ರ ಸರ್ಕಾರದಲ್ಲಿ, 10 ಸಾವಿರ ಕೋಟಿ ರೂ. ರೈತರ ಕಲ್ಯಾಣ ನಿಧಿ ಎಂದು ತೆಗೆದಿಡಿ ಎಂದೆ. ದೇವೇಗೌಡರು, ಈ ರಾಷ್ಟ್ರದ ಒಬ್ಬ ಮಣ್ಣಿನ ಮಗ ಮೊಟ್ಟ ಮೊದಲನೇ ಬಾರಿಗೆ ಪ್ರಧಾನ ಮಂತ್ರಿಗಳಾದಾಗ ನಾನು ಅಲ್ಲಿಗೆ ಹೋಗಿದ್ದೆ. ಈ ಇನ್‌ಶೂರೆನ್ಸ್ ಬದಲಾವಣೆ ಮಾಡಬೇಕು ಮತ್ತು ರೈತರ ಕಲ್ಯಾಣ ನಿಧಿ ಎಂದು 10 ಸಾವಿರ ಕೋಟಿ ರೂ. ತೆಗೆದಿಡಬೇಕೆಂದು ಹೇಳಿದೆ. ಅದು ಅವರ ತಲೆಗೆ ಹೋಯಿತು. ಮರು ದಿವಸ ನಮ್ಮ ಪಾಟೀಲರು ಹೇಳಿದರೆಂದು ಎಲ್ಲಾ ನಬಾರ್ಡ್, ಫೈನಾನ್ಸ್ ಸೆಕ್ರೆಟರಿ, ಎಲ್ಲರನ್ನೂ ತಮ್ಮ ಮನೆಗೆ ಕರೆಸಿದರು. ಎಲ್ಲರೂ ಕೂಡಿದೆವು. ಇದು ಬಡ್ಜೆಟ್ ಆಗುವ ಮುಂಚಿನ ವಿಷಯ. ನಮ್ಮ ಪಾಟೀಲರು, ಬಡ್ಜೆಟ್‌ನಲ್ಲಿ 10 ಸಾವಿರ ಕೋಟಿ ರೂ. ತೆಗೆದಿಡಿ ಎಂದು ಹೇಳಿದ್ದಾರೆ ಎಂದು ಅಧಿಕಾರಿಗಳನ್ನು ಕೇಳಿದರು. ಅದಕ್ಕೆ ಅಧಿಕಾರಿಗಳು, ಹೇಗಾಗುತ್ತವೆ, ಎಲ್ಲಿದೆ ಹಣ ಸಾಧ್ಯವಿಲ್ಲ, ಆಗುವುದಿಲ್ಲ ಸಾರ್ ಎಂದರು. ಕಡೆಗೆ, ದೇವೇಗೌಡರು, ತೆಗೆಯಲು ಬರುತ್ತದೆ. ನಾವು, ನಮ್ಮ ಪಾಟೀಲರು ಕೂಡಿ ತೆಗೆಯುತ್ತೇವೆಂದು ಹೇಳಿದರು, ಒಂದು ವಾರ ಟೈಂ ಕೊಡುತ್ತೇನೆ. ಹೊಂದಿಸಿ ಎಂದರು. ಒಂದು ವಾರ, 15 ದಿವಸ ಆಯಿತು. ಎಲ್ಲರೂ ಕೂಡಿ ಸರ್ಕಾರ ಕೆಡವಿದರು. ಒಬ್ಬ ರೈತನ ಮಗನನ್ನು ಮತ್ತೆ ಹರದನಹಳ್ಳಿಗೆ ಕಳುಹಿಸಿದರು. ಮತ್ತೆ ಅವರು ಬಂದರು. ಬಂದ ಮೇಲೆ, ಇದೇ ಅಧಿಕಾರಿಗಳು ಯಾರು ಹೇಳಿದ್ದರಲ್ಲಾ, ಅವರು 35 ಸಾವಿರ ಕೋಟಿ ರೂ.ಗಳನ್ನು ನೌಕರರ ಪಗಾರಕ್ಕೆ ತೆಗೆದುಕೊಂಡರು. ಹೇಗೆ ಬಂತು ಅದು ? ಸಿದ್ಧರಾಮಯ್ಯನವರು ಇದ್ದಾಗ, ಒಂದು ಸಾವಿರ ಕೋಟಿ ರೂ. ಕೊಟ್ಟಿದ್ದೇವೆ. ನಮ್ಮಲ್ಲಿ ರೈತರಿಗೆ ಕೊಡಲು 5 ಪರ್ಸೆಂಟ್ ಇರಲಿಲ್ಲ. ಈಗಲೂ ಕೂಡ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ಸಿಪ್ಪೇಗೌಡರು ಸಂಬಳ ಹೆಚ್ಚಿಸಿ, ಇಲ್ಲದಿದ್ದರೆ ಸತ್ಯಾಗ್ರಹ ಮಾಡುತ್ತೇವೆ ಎಂದು ಹೇಳುತ್ತಾರೆ, ಅದಕ್ಕೆ. ಮತ್ತೆ ಒಂದು ಸಾವಿರ ಕೋಟಿ ರೂ. ಕೊಡುವುದು. ಅದಕ್ಕೆ ಹಣ ಎಲ್ಲಿಂದಾದರೂ ಬರಲಿ.

ನಾವು, ಎಲ್ಲರೂ ಪಗಾರದವರೇ, ಮುಂದೆ ಯಾರಿಗೂ ಪಗಾರ ಇರದಂತಾಗುತ್ತದೆ. ಅಸೆಂಬ್ಲಿ ಸಹ ನಡೆಯುವುದಕ್ಕೆ ಹಣವಿಲ್ಲ ಎಂಬ ಪರಿಸ್ಥಿತಿ ಈಗ ದೇಶಕ್ಕೆ ಬರುತ್ತದೆ. ಎಲ್ಲರೂ ಎಚ್ಚರಾಗಬೇಕಾಗುತ್ತದೆ. ನಮ್ಮದು ನಡೆಯುತ್ತದೆಂದು ಸುಮ್ಮನೆ ಸತ್ಯಾಗ್ರಹ ಮಾಡಿದರೆ, ಸರ್ಕಾರವನ್ನು ಅಂಜಿಸಿ ಇವತ್ತು ಹಣ ತೆಗೆದುಕೊಂಡರೆ. ನಾಳೆ ಪಗಾರ ಇಲ್ಲದ ಗತಿ ಬರುತ್ತದೆ. ಕೇರಳದ ಮುಖ್ಯಮಂತ್ರಿಗಳು ಹೇಳಿದ ಮಾತು ನಮಗೆ ನೆನಪಿನಲ್ಲಿರಂತಿದೆ ಇರಬೇಕು. ನನಗೆ ಡೆಲ್ಲಿಗೆ ಹೋಗಲು ಫ್ಲೈಟ್ ಚಾರ್ಜ್‌ಗೆ ಹಣವಿಲ್ಲವೆಂದು ಕೇರಳದ ಮುಖ್ಯಮಂತ್ರಿಗಳು ಹೇಳಿದ್ದರು. ಅಂಥ ಸ್ಥಿತಿ ಈ ರಾಜ್ಯಕ್ಕೆ ಬಂದರೆ ಆಶ್ಚರ್ಯಪಡಬೇಕಾಗಿಲ್ಲ. ಆ ಕಾರಣದಿಂದ ನಾವೆಲ್ಲರೂ ಎಚ್ಚರಾಗಬೇಕು. ನೌಕರರು ಈಗಾಗಲೇ ಪೇ ಕಮಿಷನ್ ಮಾಡಿ ಎಂದು ಹೇಳಿತ್ತಿದ್ದಾರೆ. ಹಿಂದೆ ಅವರು ಮಾಡಿ, 35 ಸಾವಿರ ಕೋಟಿ ರೂ. ಏರಿಸಿ, ನಮಗೆ ಒಂದು ಸಾವಿರ ಕೋಟಿ ರೂ. ತಂದು, ಇಲ್ಲಿ ಹಣವಿಲ್ಲದಂತಾಗಿದೆ. ಏನು ಮಾಡುತ್ತೀರಿ ? ಸಿದ್ಧರಾಮಯ್ಯನವರು ಕೊಟ್ಟರು. ಹೇಗೆ ಕೊಟ್ಟರು? ಪ್ಲಾನ್‌ಸೈಟ್ ಕಟ್ ಮಾಡಿ ಕೊಟ್ಟರು. ಪ್ಲಾನ್ ಹೋಯಿತು. ಇಲ್ಲಿ ಕುಳಿತು ಬರೆದುಕೊಂಡಿದ್ದು ಸುಳ್ಳಾಗುತ್ತದೆ. ಇಂಥ ಕೆಲಸ ನಡೆಯುತ್ತಿದೆ. ಇನ್‌ಶೂರೆನ್ಸ್ ಬಗ್ಗೆ ಹೇಳುತ್ತೇನೆ. ತಾವೆಲ್ಲಾ ಗಮನ ಕೊಡಬೇಕು. ಉದಾಸಿಯವರೇ ಇಲ್ಲಿ ಕೇಳಿ. ಇದು ಮಹತ್ವದ ವಿಚಾರ. ಇನ್‌ಶೂರೆನ್ಸ್ ಹೇಗಿದೆ ಎಂದು ಹೇಳುತ್ತೇನೆ. ಇನ್‌ಶೂರೆನ್ಸ್‌ಗೆ ಥ್ರೆಶ್‌ಹೋಲ್ಡ್ ಯೀಲ್ಡ್ ಇರಬೇಕೆಂದು ಹೇಳುತ್ತಾರೆ. ನಾನು ಉದಾಹರಣೆಗೆ ಹೇಳುತ್ತೇನೆ. ಬೆಟಗೇರಿ, ಗದಗದಲ್ಲಿ ಒಂದು ಹೆಕ್ಟೇರ್‌ಗೆ 205 ಕೆ.ಜಿ. ಶೇಂಗಾ ಉತ್ಪನ್ನ ಬಂದಿದೆ. ಬಹಳವಲ್ಲ. ಆದರೂ ಬಂದಿದೆ. ಅದಕ್ಕೆ 47 ಪರ್ಸೆಂಟ್ ಇನ್‌ಶೂರೆನ್ಸ್ ಸಿಗುತ್ತದೆ. ನಮ್ಮ ಸಂಬಳಕ್ಕೆ 99 ಕೆ,ಜಿ. ಉತ್ಪನ್ನ ಬಂದಿದೆ. ಅದಕ್ಕೆ ಇನ್‌ಶೂರೆನ್ಸ್ ಸಿಗುವುದಿಲ್ಲ. ಏಕೆಂದರೆ, ಥ್ರೆಶ್‌ಹೋಲ್ಡ್ ಯೀಲ್ಡ್ ಕಡಿಮೆ ಇರುತ್ತದೆ. ಅಂದರೆ, ಬರಗಾಲದಲ್ಲಿ ಥ್ರೆಶ್‌ಹೋಲ್ಡ್ ಯೀಲ್ಡ್ ಇರುವುದಿಲ್ಲ. ಇದು ಇನ್‌ಶೂರೆನ್ಸ್ ? ಇದು ರೈತರಿಗೆ ಮಾಡುವ ಮೋಸವಲ್ಲವೇ? ಇದು ಕೇಂದ್ರ ಸರ್ಕಾರ ಮಾಡುವ ಮೋಸವಲ್ಲವೆ ? ಯಾವ ಸರ್ಕಾರವೇ ಇರಬಹುದು. ಕೇಂದ್ರ ಸರ್ಕಾರ ಮಾಡುವ ಕೆಲಸವಿದು. ಇವತ್ತಿನ ಕಾಂಗ್ರೆಸ್ ನೇತೃತ್ವದ ಸರ್ಕಾರದವರು ಒತ್ತು ಕೊಡುತ್ತೇವೆಂದು ಹೇಳಿದ್ದಾರೆ. ನಾವೆಲ್ಲರೂ ಪಕ್ಷಭೇದ ಮರೆತು ಹೋಗಬೇಕಾಗುತ್ತದೆ. ರೈತರಿಗೆ ಎಂಥ ಇನ್‌ಶೂರೆನ್ಸ್ ಬೇಕು? ಸಿದ್ಧರಾಮಯ್ಯನವರು ನೋಡಿರುವುದಿಲ್ಲ ಎಂದು ತಿಳಿದು ಕೊಂಡಿದ್ದೇನೆ . ಒಂದು ಆದೇಶ ಹೊರಡಿಸಿದ್ದಾರೆ. ಅದು ನನಗೆ ಸಿಗಲಿಲ್ಲ. ಉದಾಸಿಯವರೇ ನಿಮ್ಮ ಕಡೆ ಏನಾದರೂ ಸಿಕ್ಕಿದರೆ ಕೊಡಿ. ಕೃಷಿ ಇಲಾಖೆಯು ಕಳೆದ 13 ರಂದು ಸುತ್ತೋಲೆ ಹೊರಡಿಸಿ, ಜೂನ್ ಪೂರ್ವದಲ್ಲಿ ಸಾಕಷ್ಟು ಮಳೆ ಬಿದ್ದು, ಬಿತ್ತನೆ ಕೂಡ ಮೊದಲೇ ಆದ ಕಾರಣ. ಇಲ್ಲಿ ಹೇಳುತ್ತಾರೆ ನೋಡಿ, ರೈತರಿಗೆ ಬೆಳೆ ವಿಮೆಯಲ್ಲಿ ಪಾಲ್ಗೊಳ್ಳಲು ಜುಲೈ 31 ಕೊನೆ ದಿನವೆಂದು ಈಗಾಗಲೇ ಪ್ರಕಟಿಸಿದೆ. ಬೆಳೆ ಬಿತ್ತಿದ ಅಥವಾ ನಾಟಿ ಮಾಡಿದ ನಂತರ 30 ದಿನಗಳಾಗಿರಬೇಕು. ಬೆಳೆ ಆರೋಗ್ಯಕರವಾಗಿರಬೇಕು. ಇಲ್ಲಿದೆ ನೋಡಿ, ಬೆಳೆ ಸರಿ ಇಲ್ಲದಿದ್ದರೆ ಅವನು ತುಂಬಬಾರದು. ಇದು ಹೇಗೆ ?

ಇದೆಂಥ ಆರ್ಡರ್ ? ನಾವು 280 ಕೋಟಿ ರೂ. ಇಟ್ಟರೆ, 500 ಕೋಟಿ ರೂ. ಇಟ್ಟರೇನು ? ನಮ್ಮ ಮುಖಂಡರಿಗೆ ಈ ಸಲ ಇನ್‌ಶೂರೆನ್ಸ್ ಸಿಕ್ಕಿಲ್ಲ. ನನ್ನನ್ನು ಅಲ್ಲಿ ಹೋಗಗೊಡುವುದಿಲ್ಲ. ಒಂದು ಹೆಕ್ಟೇರ್‌ಗೆ 90 ಕೆಜಿ ಶೇಂಗಾ ಬಂದರೆ, 2 ಕ್ವಿಂಟಾಲ್ ಬಿತ್ತನೆ ಬೀಜ ಹಾಕುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬಹಳ ಒಳ್ಳೆಯ ವಿಷಯ ಪ್ರಸ್ತಾಪಿಸುತ್ತಿದ್ದಾರೆ. ನಮ್ಮ ಅಧಿಕಾರಿಗಳು ಇಲ್ಲಿದ್ದಾರೆ. ಮಾನ್ಯ ಸಿದ್ಧರಾಮಯ್ಯನವರು ಬಹಳ ಅನುಭವವವಿರುವವರು. ನಾನು ಮೊನ್ನೆ ಮಾತನಾಡಬೇಕಾದರೆ ಹೇಳಿದೆ. ಈ ಸದನದಲ್ಲಿರುವವರು ಒಂದು ನಿಮಿಷ ಆಲಿಸಿ. ಶಿಕಾರಿಪುರ ತಾಲ್ಲೂಕಿನಲ್ಲಿ ಉಡುಗುಣಿ ಎನ್ನುವ ಒಂದು ಹೋಬಳಿ ಇದ್ದು ಅದು ಬರಗಾಲ ಪೀಡಿತ ಪ್ರದೇಶವಾಗಿದ್ದು ಅಲ್ಲಿ ನೀರಾವರಿ ಇಲ್ಲವೇ ಇಲ್ಲ. ಹೋದ ವರ್ಷದ ಬೆಳೆ ವಿಮೆ ನೋಡುವುದಕ್ಕೋಸ್ಕರ ಈ ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರು ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟ್‌ನವರು ಹೋಗುತ್ತಾರೆ, ಒಂದು ಏರಿಯಾದಲ್ಲಿ 12 ರ್‍ಯಾಂಡಮ್ ಸ್ಯಾಂಪಲ್‌ಗಳನ್ನು ತೆಗೆದುಕೊಳ್ಳುತ್ತಾರೆ. 9 ಪಂಪುಸೆಟ್ಟು ಇರುವಂಥವರದ್ದು. ಮೂರು ಬೇರೆ ಜನ ರೈತರದು. ಆ ಮೂರು ಜನ ರೈತರಿಗೆ ಒಂದು ಕ್ವಿಂಟಾಲ್ ಒಂದೂವರೆ ಕ್ವಿಂಟಾಲ್ ಇಳುವರಿ ಬಂದಿದೆ. 9 ಪಂಪುಸೆಟ್ಟು ಇದ್ದಂಥವರಿಗೆ 18–20 ಕ್ವಿಂಟಾಲ್ ಇಳುವರಿ ಬಂದಿದೆ. ಇದರ ಆಧಾರದ ಮೇಲೆ entire ಉಡುಗುಣಿ ಹೋಬಳಿಗೆ ಬೆಳೆ ವಿಮೆ ಇಲ್ಲ. ಅಂದರೆ ಅಧಿಕಾರಿಗಳಿಗೆ ಕೈ ಕತ್ತರಿಸಬೇಕೇ ? ಅವರು ರೈತರ ಮಕ್ಕಳಲ್ಲವೇ ? ಅಲ್ಲಿ ಪಂಪುಸೆಟ್ಟು ಇರುವಂಥ ರೈತರು ಬೆಳೆದ ಇಳುವರಿ ತೆಗೆದುಕೊಳ್ಳಬಾರದು. ಬೇರೆಯದು ತೆಗೆದುಕೊಳ್ಳಬೇಕೆನ್ನುವಷ್ಟು ಅವರಿಗೆ ಜ್ಞಾನೋದಯ ಇಲ್ಲವೇ ? ಸ್ವಾಮಿ, ಇವರಿಗೆ ಹೇಳುವವರು ಏನು ಮಾಡಬೇಕೆಂದು ಗೊತ್ತಾಗುವುದಿಲ್ಲ. ಇವರಿಗೆ ಏನಾದರೂ ತಲೆ ಕೆಟ್ಟಿದೆಯೇ ? ಇವರಿಗೆ ಹೇಳುವವರು ಕೇಳುವವರು ಯಾರು ಇಲ್ಲವೇ ? ಏನೋ ಒಂದು ನಾನು Opposition Party Leader ಆದಮೇಲೆ ಬೆಲೆ ಇದೆಯೆಂದು ಅವರನ್ನು ನನ್ನ ಚೇಂಬರ್‌ಗೆ ಕರೆದು ಚರ್ಚೆ ಮಾಡಿದರೆ ಹೌದು ಸಾರ್ ತಪ್ಪಾಗಿದೆ ಎಂದು ಒಪ್ಪಿಕೊಳ್ಳುತ್ತಾರೆ. ಪಕ್ಕದ ಹೋಬಳಿಗೆ ಪೂರ್ತಿ ಬೆಳೆ ವಿಮೆ ಬಂದಿದೆ. ಇವರಿಗೆ ದುಡ್ಡು ಬಂದಿಲ್ಲ ಎಂದು ಹೇಳುತ್ತಾರೆ. ತಪ್ಪು ಎಂದು ಇವರ, ಗಮನಕ್ಕೆ ಬಂದ ಮೇಲೆ ಚರ್ಚೆ ಮಾಡಿ ಮಂತ್ರಿಗಳ ಗಮನಕ್ಕೆ, ಸರ್ಕಾರದವರ ತರುವುದಕ್ಕಾಗಿಯೇ ಅಲ್ಲವೇ ಈ ಅಧಿಕಾರಿಗಳನ್ನು ಇಲ್ಲಿ ಕೂರಿಸಿರುವುದು ? ಉಪಕಾರ ಮಾಡುವುದಕ್ಕೆ ಈ ಅಧಿಕಾರಿಗಳು ಬಂದಿದ್ದಾರೆಯೇ? ಇವರು ರೈತರ ಮಕ್ಕಳಲ್ಲವೇ ? ಮನುಷ್ಯತ್ವ ಇದೆಯೇನ್ರಿ ಇವರಿಗೆ ?

ಶ್ರೀ ಎಸ್. ಕುಮಾರ ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಏನು ಪ್ರಸ್ತಾಪ ಮಾಡಿದರು ಇದು General Insurance Company ಯವರು ತಮ್ಮದೇ ಆಗಿರುವಂಥ ವಾದದ ಮೇಲೆ ಯಾರಿಗೂ ಕೂಡ inform ಮಾಡುವುದಿಲ್ಲ. ಅಲ್ಲಿ ರೈತರಿಗೂ ಅಥವಾ ಯಾರಿಗೂ ಗೊತ್ತಾಗುವುದಿಲ್ಲ.

ನಾವು ಅದಕ್ಕೆ ಈ ಸಾರಿ ಏನು ಮಾಡಿದ್ದೇವೆಂದರೆ, ಹೋದ ಸಾರಿ ಯಾವ Agricultural Department ನವರನ್ನೂ ಕರೆಯಲಿಲ್ಲ. ಯಾವ Revenue Officers ಅನ್ನು ಕರೆಯಲಿಲ್ಲ. ಯಾರು ಇವರೆಲ್ಲರೂ ಕೂಡ ಮೊದಲೇ ಅಣೆವಾರಿ ಮಾಡಿಕೊಂಡಿದ್ದರು ಅಣೆವಾರಿಯನ್ನು ಬಿಟ್ಟುಬಿಟ್ಟರು. ಅವರದೇ ಆಗಿರತಕ್ಕಂಥ ವಾದದ ಮೇಲೆ ಹೋಗಿಬಿಟ್ಟು inspection ಎಂದು ಮಾಡಿದರು. ಅವರು ಏನು ಬರೆದಿದ್ದರೋ ಅದರ ಮೇಲೆಯೇ insurance ಎಂದು ಮಾಡಿ ಕಡೆಗೆ ಅಲ್ಲಿ ಪರ್ಸೆಂಟೇಜ್ ಹಾಕಬೇಕಾದರೆ ಪೂರ್ತಿ ಹೋಬಳಿಯನ್ನೆಲ್ಲಾ ಬರ ಎಂದು ಘೋಷಣೆ ಮಾಡುವುದನ್ನು ಬಿಟ್ಟು ತಮ್ಮದೇ ಆಗಿರತಕ್ಕಂಥ ವಾದವನ್ನು ಬರೆದು ಬಂದರು. ಅದಕ್ಕೆ ಈ ಸಾರಿ ನಾವು Videograph ಮಾಡಬೇಕೆಂದು ಹೇಳಿ ಇವಾಗ video ಮಾಡಿಸುತ್ತಿದ್ದೇನೆ. ಏಕೆಂದರೆ ಇವರಿಗೆ presentation ನಾವೇ ಕೊಡುವ ಲೆವೆಲ್‌ಗೆ Agriculture Department ಮತ್ತು General Insurance Company ಗೆ ಆಗುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ. ಈ insurance ಹೇಗಿದೆ ಎಂದರೆ ಬೆಳೆ ಚೆನ್ನಾಗಿರಬೇಕೆಂತೆ, ಅದನ್ನು ಬಿತ್ತಿ 30 ದಿವಸ ಆಗಿರಬೇಕಂತೆ, ನಂತರ ಇಂತಿಷ್ಟು ಹಣ ಎಂದು ಆ ರೈತ ತುಂಬಬೇಕಂತೆ, ಆ ರೈತರು insurance ಬರಲಿ ಎಂದು ಹಣವನ್ನು ತುಂಬುವುದಕ್ಕೆ ಬಡ್ಡಿ ಸಾಲ ತಂದು ತುಂಬಿದ್ದಾರೆ. ಬರ ಇನ್ನೂ ಇದೆ. ಈ ವರ್ಷ ಜನ insurance ಹಣವನ್ನು ತುಂಬಬೇಕೇ ಎಂದು ಬಂದರು. ಏನು ಮಾಡಬೇಕೋ ಮಾಡ್ರಪ್ಪ ಎಂದು ಹೇಳಿ ಬಂದಿದ್ದೇನೆ. ನಮ್ಮ ಮುಂಡರರಿಗೆ ಎಂದೂ ಬೆಳೆ ವಿಮೆ ಸಿಗುವುದಿಲ್ಲ. ಮುಂಡರಗಿಯಂತ ಬರಗಾಲ ಪ್ರದೇಶಕ್ಕೆ ಈ insurance ಸಿಗುವುದಕ್ಕೆ ಸಾಧ್ಯವಿಲ್ಲ. ಆ ರೀತಿಯ insurance ಇದೆ. ಆ ಕಾರಣದಿಂದ ಇದನ್ನು ಬದಲಾವಣೆ ಮಾಡಬೇಕಾದರೆ ಕೇಂದ್ರ ಸರ್ಕಾರ ನೀತಿಯ ವಿರುದ್ಧ ಹೋರಾಟ ಮಾಡಬೇಕಾಗುತ್ತದೆ.

ಶ್ರೀ ಸಿ.ಎಂ. ಉದಾಸಿ : ಸನ್ಮಾನ್ಯ ಸಭಾಧ್ಯಕ್ಷರೆ, ಈ ಬೆಳೆ ವಿಮೆ ಬಗ್ಗೆ ಹಿಂದಿನ ಐದು ವರ್ಷದ ಸರಾಸರಿ ಇಳುವರಿ ಶೇಕಡಾವಾರು 90ಕ್ಕಿಂತ ಕಡಿಮೆ ಇದ್ದಾಗ ಈ ವರ್ಷದ ಪ್ರಾರಂಭಿಕ ಇಳುವಳಿ ಏನು ಬಂದಿರುತ್ತದೆ ಅದರ ಮೇಲೆ ಶೇಕಡಾವಾರು ಕಡಿಮೆಯಾಗುತ್ತದೆ.

(ಈ ಹಂತದಲ್ಲಿ ಶ್ರೀ ಅಂಜನಮೂರ್ತಿ ಅವರು ಅಧ್ಯಕ್ಷರ ಪೀಠವನ್ನಲಂಕರಿಸಿದರು)

ಈ ಶೇಕಡಾವಾರು ಕಡಿಮೆ ಮಾಡಬೇಕಾಗಿರುವ ಬಗ್ಗೆಯೇ ಮೂಲವಾಗಿ ಬದಲಾವಣೆಯಾಗಬೇಕಾಗಿದೆ. 5 ವರ್ಷದಲ್ಲಿ 3 ವರ್ಷ ಅಥವಾ ನಾಲ್ಕು ವರ್ಷ ಬರಗಾಲ ಬಂತು ಎಂದು ತಿಳಿದುಕೊಳ್ಳಿ. 3 ವರ್ಷ ಸತತವಾಗಿ ಬೆಳೆ ವಿಮೆ ಪರಿಹಾರ ಬಂದರೆ 4ನೇ ವರ್ಷಕ್ಕೆ ಸರಾಸರಿ ಮತ್ತೆ ಅತ್ಯಂತ ಕಡಿಮೆ ಆದಾಗ ಅವನಿಗೆ ಬೆಳೆ ವಿಮೆ ಪರಿಹಾರ ಸಿಗಲಿಕ್ಕೆ ಸಾಧ್ಯವಿಲ್ಲ. ಇದು normal yield ಎನ್ನುವುದರ ಬಗ್ಗೆ ಬರಬೇಕೇ ಹೊರತು ಹಿಂದಿನ 5 ವರ್ಷದ ಸರಾಸರಿ ಇಳುವರಿ

ಎನ್ನುವುದು ಏನಿದೆ, ಇದು ಮೂಲಭೂತವಾಗಿ ಬದಲಾವಣೆಯಾಗದಿದ್ದರೆ ಬೆಳೆ ವಿಮೆ ಪರಿಹಾರ ಸಿಗುವುದು ಕನಸಿನ ಗಂಟಾಗುತ್ತದೆಯೇ ಹೊರತು ಕನ್ನಡಿಯ ಗಂಟಾಗುತ್ತದೆ ಎನ್ನುವುದನ್ನು ಸಹಿತ ಅರ್ಥ ಮಾಡಿಕೊಳ್ಳಬೇಕಾಗಿದೆ.

ಶ್ರೀ ಎಸ್.ಎಸ್. ಪಾಟೀಲ್ : ನನ್ನ ವಾದ ಏನೆಂದರೆ ರೈತ ಆ ವರ್ಷ ಮಳೆಯಾಗಿದೆ ಬಿತ್ತದೆ ಇದ್ದರೂ ಕೂಡ insurance ಅವನಿಗೆ ಸಿಗಬೇಕು. ಆ ತರಹ insurance ಬರಬೇಕು Agricultrual Department ಪ್ರಕಾರ. ಒಂದು ಎಕರೆಗೂ ಶೇಂಗಾ ಎಷ್ಟು ಬರುತ್ತದೆ. ಜೋಳ ಎಷ್ಟು ಬರುತ್ತಿದೆ, ಎನ್ನುವ ಬಗ್ಗೆ ನಮ್ಮಲ್ಲಿ ಲೆಕ್ಕ ಇದೆ. ಆ ಮೇಲೆ ಬೆಲೆ ಧಾರಣೆ ಎಲ್ಲಾ ತೆಗೆದು ಅವನ ಲಾಭ ತೆಗೆದು ಇಟ್ಟುಕೊಂಡು ಆ ಒಂದು ಎಕರೆಗೆ 10 ಕ್ವಿಂಟಾಲ್ ಶೇಂಗಾ ಬರುತ್ತಿದ್ದರೆ ಅದರಲ್ಲಿ ಒಂದು ಕ್ವಿಂಟಾಲ್ ಕಡಿಮೆ ಅದರೆ ಒಂದು ಕ್ವಿಂಟಾಲ್‌ಗೆ ರೊಕ್ಕ ಕೊಡಬೇಕು. ಐದು ಕ್ವಿಂಟಾಲ್ ಕಡಿಮೆ ಆದರೆ ಐದು ಕ್ವಿಂಟಾಲ್‌ಗೆ ರೊಕ್ಕ ಕೊಡುವಂಥ ವ್ಯವಸ್ಥೆ ಇರಬೇಕು. ಅದಕ್ಕೆ insurance ಎಂದು ಹೇಳುತ್ತಾರೆ. ಒಂದು ವೇಳೆ ಆ ವರ್ಷ ಮಳೆಯಾಗದೆ ಬಿತ್ತನೆ ಮಾಡದೇ ಇದ್ದರೆ ಆ ಹತ್ತು ಕ್ವಿಂಟಾಲ್‌ನದ್ದು ರೊಕ್ಕ ಕೊಡುವಂಥ ವ್ಯವಸ್ಥೆಯಾಗಬೇಕು. ಅದೇ insurance ಎಂದು ಹೇಳುವುದು. ಅದರ ಬಗ್ಗೆ ಹಣ ತೆಗೆಯಬೇಕು.

ಶ್ರೀ ಎಸ್. ಕುಮಾರ ಬಂಗಾರಪ್ಪ : ಬೀಜ ಬಿತ್ತಿದ ಮೇಲೆಯೇ ನಿಮಗೆ ದಾಖಲಾತಿಗಳು ಸಿಗುವುದು ಈವಾಗ ಬಿತ್ತದೇ ಇರತಕ್ಕಂಥ ಎಲ್ಲಾ ....

ಶ್ರೀ ಎಸ್.ಎಸ್. ಪಾಟೀಲ್ : ತಾವು ಕುಳಿತುಕೊಳ್ಳಿ. ಡೀಟೈಲ್ ಆಗಿ ತಮಗೆ ಹೇಳುತ್ತೇನೆ. ಆಗ ತಿಳಿಯುತ್ತದೆ. ಇಂಥ ಊರಿನಲ್ಲಿ ಈ ವರ್ಷ ಎಷ್ಟು ಎಕರೆಗೆ ಬಿತ್ತಿದ್ದೀರಿ ಎಂದು ನಮ್ಮ Agricultural Department ನವರು ಬರೆದುಕೊಳ್ಳುತ್ತಾರೆ. ನಮ್ಮ ತಹಶೀಲ್ದಾರರು ಬರೆದುಕೊಳ್ಳಲೇಬೇಕು.

ಶ್ರೀ ಎಸ್. ಕುಮಾರ ಬಂಗಾರಪ್ಪ : ಹಾಗಲ್ಲ. ನಾನು ಹೇಳುತ್ತಿರುವುದೇನೆಂದರೆ. ಈವಾಗ ಬೀಳು ಜಮೀನು ಇರುತ್ತವೆ. ಬೀಳು ಜಮೀನನ್ನು ಸೇರಿಸಿಬಿಟ್ಟು ನೀವು ಆ ಮೇಲೆ insurance ಗೆ claim ಮಾಡುತ್ತೀರಾ?

ಶ್ರೀ ಎಸ್.ಎಸ್. ಪಾಟೀಲ್ : ಬೀಳು ಜಮೀನು ಎಂತಲೇ ಆ ರಿಜಿಸ್ಟರ್‌ನೊಳಗೆ ಬರೆದಿರುತ್ತಾರೆ.

ಶ್ರೀ ಎಸ್. ಕುಮಾರ ಬಂಗಾರಪ್ಪ : ಹಾಗಲ್ಲ, ಹೋದ ವರ್ಷ ನಾನಾ ಕಾರಣಕ್ಕೆ ಅವನಿಗೆ ಬಿತ್ತನೆ ಮಾಡಲಿಕ್ಕೆ ಆಗಲಿಲ್ಲ. ಅದನ್ನೂ ಸೇರಿಸಿಬಿಟ್ಟು ಇವಾಗ ನೀವು insurance claim ಮಾಡುವುದಕ್ಕೆ ಆಗುತ್ತದೆಯೇ ? ಆಗುವುದಿಲ್ಲ. ಆದ್ದರಿಂದ ಬಿತ್ತಬೇಕಾಗುತ್ತದೆ. ಬಿತ್ತಿಬಿಟ್ಟು ದಾಖಲಾತಿಗಳನ್ನು ತೆಗೆದುಕೊಂಡು ಹೋಗಿ claim ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ : ಮಾತನಾಡುವ ಮಂದಿ ನೀವಿಬ್ಬರೂ ಕೂಡಿ ಮಾತನಾಡುವುದಕ್ಕೆ ಅಡ್ಡಿ ಇಲ್ಲ. ನಾನು ಹೇಳುತ್ತಿರುವುದೇನೆಂದರೆ, ಯಾವತ್ತು ಬರಬೀಳುತ್ತದೋ ಆಗ ರೈತ ಬಿತ್ತನೆ ಮಾಡುವುದೇ ಇಲ್ಲ. ಆಗ ಅವನು ಎಲ್ಲಿ

ಹೋಗಬೇಕು ? ಬರ ಬೀಳುತ್ತದೆ ಮಳೆನೇ ಆಗುವುದಿಲ್ಲ. ಹಾಗಾದರೆ ಅವನು ಏನು ತಿನ್ನಬೇಕು ? ಇವತ್ತು ಯಾವುದಾದರೂ ಕಾರಿಗೆ ಏನಾದರೂ ಆದರೆ ಅವರಿಗೆ ಬೇಕಾದ್ದನ್ನು ಕೊಡುತ್ತಾರೆ. ಅದೇ ರೀತಿ ಈ ಬೆಳೆವಿಮೆಯನ್ನು ಕೂಡ ಮಾಡಬೇಕಾಗುತ್ತದೆ. ನಾವು ಈಗ ರೈತರ ಪಂಪುಸೆಟ್ಟು ಸಲುವಾಗಿ ಕೆ.ಇ.ಬಿ.ಗೆ ಸಬ್ಸಿಡಿ ಹಣ ಏನು ಕೊಡುತ್ತೇವೆ ಇಂಥವು ಯಾವುದನ್ನು ರೈತರ ಪರವಾಗಿ ಕೊಡಬೇಕಾಗಿಲ್ಲ. ಈ ಹಿಂದೆಯೇ ನಮ್ಮ ವಾದ ಇದೆ. ಯಾವ ಸಬ್ಸಿಡಿಯೂ ಬೇಕಾಗಿಲ್ಲ. ರೈತರ ಪಂಪುಸೆಟ್ಟಿಗೆ ಮೊಟರ್ ಹಾಕಿ. ಆದರೆ ಈ insurance ತರಹ ಕೊಡಿ. ನಿಮ್ಮ ಸಾಲ ಮನ್ನಾ ಬೇಡ, ಬಡ್ಡಿ ಮನ್ನಾ ಬೇಡ, ಯಾವುದೂ ಬೇಕಾಗಿಲ್ಲ. ಈ ತರಹದ insurance ಕೊಟ್ಟರೆ ಮಾಡಲಿಕ್ಕೆ ಸಾಧ್ಯವಿದೆ. ವರ್ಷಾ 4–5 ಸಾವಿರ ಕೋಟಿ ರೂ.ಗಳನ್ನು ರೈತರ ಹೆಸರ ಮೇಲೆ ಬೇರೆ ಬೇರೆ ಮೂಲದಿಂದ ಕೊಡುತ್ತಿದ್ದೇವೆ. ಇಡೀ ರಾಜ್ಯವೇ ಬರದಿಂದ ಕೂಡಿರುವುದಿಲ್ಲ. ಯಾವುದೋ 4–6 ತಾಲ್ಲೂಕುಗಳಿಗೆ ಬರ ಬರುತ್ತದೆ. ಕೇಂದ್ರ ಸರ್ಕಾರ ನಿಮ್ಮ ಜವಾಬ್ದಾರಿ ತೆಗೆದುಕೊಳ್ಳಬೇಕಾಗುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರ ಸೇರಿ ಮಾಡತಕ್ಕಂಥ ಕೆಲಸ ಇದಾಗಿದೆ. ಕೇವಲ ರಾಜ್ಯಸರ್ಕಾರದಿಂದ ಇದು ಆಗತಕ್ಕಂಥ ಮಾತಲ್ಲ. ಆ ಕಾರಣದಿಂದ ಈ insurance ಪದ್ಧತಿಯಲ್ಲಿ ಬದಲಾವಣೆಯಾಗಬೇಕು. ಈ ಬಗ್ಗೆಯೂ ಕೂಡ ಸಿದ್ಧರಾಮಯ್ಯನವರು ಹೋದ ವರ್ಷಕ್ಕಿಂತ ಈ ವರ್ಷ insurance ಗೆ ಹೆಚ್ಚು ಹಣ ಇಟ್ಟಿದ್ದಾರೆ. ಇವತ್ತು ನಮ್ಮ ಶ್ರೀ ಉದಾಸಿಯವರ ಸಲಹೆ ಏನೆಂದರೆ ಇದನ್ನು ವೇಳೆಗೆ ಸರಿಯಾಗಿ ಬಿಡುಗಡೆ ಮಾಡಬೇಕು.

ಶ್ರೀ ಜಗದೀಶ್ ಶೆಟ್ಟರ್ : ಶ್ರೀ ಎಸ್.ಎಸ್. ಪಾಟೀಲರೆ, ನೀವು ಇನ್ನೊಂದನ್ನು ಹೇಳಲಿಲ್ಲ. ಆಯಿತು. ಲೋಪದೋಷಗಳಿದ್ದು ಬದಲಾವಣೆ ಮಾಡಬೇಕೆಂದು ಹೇಳಿದಿರಿ. ಕಳೆದ ಮೂರು ವರ್ಷದಿಂದ ಬೆಳೆವಿಮೆ ಹಣವೇ ಬಿಡುಗಡೆಯಾಗಿಲ್ಲ. ಅದರ ಬಗ್ಗೆಯೂ ಹೇಳಿ.

ಶ್ರೀ ಎಸ್.ಎಸ್. ಪಾಟೀಲ್ : ಆಯಿತು ಹೇಳುತ್ತಿದ್ದೇನೆ. ಇಲ್ಲಿ ಕುಳಿತಿದ್ದೇನೆಂದು ನಾನು ಯಾವುದನ್ನು ಬಿಡುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : 240 ಕೋಟಿ ರೂಪಾಯಿಗಳನ್ನು ನಿಗದಿ ಮಾಡಿದ್ದಾರಲ್ಲಾ ಅದೇನದು ? ಬರೀ ಧಾರವಾಡ ಜಿಲ್ಲೆಗೆ ಕಳೆದ ಮೂರು ವರ್ಷದ ಬೆಳೆವಿಮೆ ಬಾಕಿ ರೂ. 197 ಕೋಟಿ ರೂ ಇದೆ.

ಶ್ರೀ ಎಸ್.ಎಸ್. ಪಾಟೀಲ್ : ನಾನು ಹೇಳುವುದೇನೆಂದರೆ, ಈ ರೊಕ್ಕ ಇದು ಕೇವಲ ರಾಜ್ಯ ಸರ್ಕಾರ ಮಾಡುವುದಲ್ಲ, ಕೇಂದ್ರ ಮತ್ತು ರಾಜ್ಯ ಸರ್ಕಾರ ಕೂಡಿ. 'ರೈತರ ಕಲ್ಯಾಣ ನಿಧಿ' ಎಂದು ಹಣವನ್ನು ತೆಗೆದಿಟ್ಟು ಅಪೇಕ್ಸ್ ಬ್ಯಾಂಕ್‌ನವರು ಬೇರೆ ಜಮಾ ಇಡಬೇಕು. Finance Department ನಲ್ಲಿದ್ದರೆ ಇದನ್ನು ತುಂಬುದಕ್ಕಾಗುವುದಿಲ್ಲ, ಅದು ಎಂದು ಬರ ಬಿತ್ತು. ಅದು ಎಂದು ಡಿಕ್ಲೇರ್ ಆಗುತ್ತದೆ. ಮರುದಿವಸ ಆ ಹಣ ಸಾಲಕ್ಕೆ ಜಮಾ ಆಗಬೇಕು. ಆ ವ್ಯವಸ್ಥೆ ಬರಬೇಕೆಂದು ನಾನು ಹೇಳುತ್ತಿದ್ದೇನೆ. ಅದು ಬರದಿದ್ದರೆ ಇದಕ್ಕೆ ಯಾವ ಅರ್ಥವೂ

ಇರುವುದಿಲ್ಲ. ಆ ಕಾರಣದಿಂದ ಈ insurance ಅನ್ನು ಬದಲಾವಣೆ ಮಾಡಬೇಕು. ಈ insurance ಬದಲಾವಣೆ ಮಾಡುವ ದೃಷ್ಟಿಯಿಂದ ನಾವು ಇವತ್ತು ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ನಾವೆಲ್ಲರೂ ಒಂದು ಸಲ ಕುಳಿತುಕೊಳ್ಳಬೇಕು. ಬರೀ ನಾನು ಹೇಳುವುದೇ ಸರಿ ಎಂದು ಹೇಳುತ್ತಿಲ್ಲ. ತಜ್ಞರೆಲ್ಲರು ಕುಳಿತುಕೊಳ್ಳಬೇಕು. ನಮ್ಮ ಶ್ರೀ ಕುಮಾರ ಬಂಗಾರಪ್ಪ ಮಾತನಾಡಿದ ಹಾಗೆ ತಜ್ಞರು ಕುಳಿತುಕೊಂಡು ಚರ್ಚೆ ಮಾಡಬೇಕು. ಇದು ನನ್ನ ಸಲಹೆ. ರೈತರಿಗೆ ಅನ್ಯಾಯವಾಗದ ಹಾಗೆ ಸರ್ಕಾರದಿಂದ ಎಲ್ಲರೂ ಕುಳಿತುಕೊಂಡು, ರೈತರಿಗೆ ಯಾವುದೇ ರೀತಿಯಿಂದ ಕಷ್ಟಗಳು ಬರದ ಹಾಗೆ ಒಂದು ನಿರ್ಧಾರಕ್ಕೆ ಬರಬೇಕು. ಮಾನ್ಯ ಅಧ್ಯಕ್ಷರೆ. ತಮಗೂ ಗೊತ್ತಿರುವ ಹಾಗೆ ಇವತ್ತು ರೈತರ ಮಕ್ಕಳಿಗೆ ಒಕ್ಕಲುತನ ಮಾಡುತ್ತಾರೆಂದರೆ ಯಾರೂ ಕನ್ಯೆಯನ್ನು ಕೊಡುವುದಿಲ್ಲ. ರೈತರ ಮಕ್ಕಳಿಗೆ ಕನ್ಯೆ ಸಿಗುವುದಿಲ್ಲ. ಉದಾಹರಣೆಗೆ ಹೇಳುವುದಾದರೆ, ನಮ್ಮ ಮನೆಯ ಉದಾಹರಣೆಯನ್ನು ಹೇಳುತ್ತೇನೆ. ನಾನು ಸಣ್ಣವನಿರುವಾಗ ಅಂದರೆ 50 ವರ್ಷಗಳ ಹಿಂದೆ ಆಗಿನ ಕಾಲಕ್ಕೆ ನಮ್ಮಲ್ಲಿ ಮಾಮಲೆದಾರ ಎಂದು ಇದ್ದರು. ಆ ಮಾಮಲೆದಾರರನ್ನು ಕರೆದುಕೊಂಡು ಬಂದಿದ್ದರು. ಈಗ ನೀವು ಅವರಿಗೆ ತಹಶೀಲ್ದಾರ ಎಂದು ಹೇಳುತ್ತೀರಿ. ನಮ್ಮ ಅಕ್ಕನನ್ನು ನೋಡಲಿಕ್ಕೆ ನಮ್ಮ ಅಣ್ಣನವರು ಮಾಮಲೆದಾರರನ್ನು ಕರೆದುಕೊಂಡು ಬಂದಿದ್ದಾರೆ. ಅವರಿಗೆ ಹೊಲ ಎಷ್ಟಿದೆ ಎಂದು ನಮ್ಮ ಅವ್ವ ಕೇಳಿದ್ದಾರೆ. ಮೂರು ಮಂದಿ ಅಣ್ಣತಮ್ಮರಿಗೆ 4 ಎಕರೆ ಇದೆ ಎಂದು ಹೇಳಿದಾಗ ಕನ್ಯೆ ಕೊಡುವುದಿಲ್ಲ ಎಂದು ನಮ್ಮ ಅವ್ವ ಹೇಳಿದ್ದಾರೆ. ಒಂದು ಎಕರೆ ಹೊಲ ಇರುವವರಿಗೆ ಏನು ಕೊಡುತ್ತಾರೆ ? ಈಗ ಸಿಪಾಯಿಗೆ ಕೊಡುತ್ತಾರೆ. ಏಕೆಂದರೆ ಅವನಿಗೆ ತಿಂಗಳಿಗೆ ಪಗಾರ ಬರುತ್ತದೆ. 100 ಎಕರೆ ಹೊಲ ಇರುವವನಿಗೆ ಇವತ್ತು ಕನ್ಯೆ ಸಿಗುವುದಿಲ್ಲ. ಒಕ್ಕಲುತನ ಮಾಡುತ್ತೇನೆಂದರೆ ಯಾರೂ ಕನ್ಯೆ ಕೊಡುವುದಿಲ್ಲ. ಆ ಮಟ್ಟಕ್ಕೆ ಒಕ್ಕಲಿಗರ ಸ್ಥಿತಿಯನ್ನು ನಾವು ತಂದಿದ್ದೇನೆ. ಈ ಕಾರಣದಿಂದ ಇವತ್ತು ಬದಲಾವಣೆ ಆಗಬೇಕೆಂದು ಹೇಳಿ, ನಮ್ಮ ಸನ್ಮಾನ್ಯ ಸಿದ್ಧರಾಮಯ್ಯನವರು ಸಹಕಾರಿ ಇಲಾಖೆ ಕಡೆಗೆ ತಾವು ಸ್ವಲ್ಪ ಮುಖ ತಿರುಗಿಸಬೇಕು. ದಯಮಾಡಿ ಸಹಕಾರಿ ಇಲಾಖೆ ಕಡೆಗೆ ತಮ್ಮ ಪೂರ್ಣ ಲಕ್ಷ್ಯ ಹಾಕಿ. ಆ ಸಹಕಾರಿ ಇಲಾಖೆ ಏನಾದರೂ ಹಾಳಾಗಿ ಹೋದರೆ, ಆ ಸಂಘಗಳೆಲ್ಲಾ ಹಾಳಾಗಿ ಹೋದರೆ ಖಂಡಿತವಾಗಿ ನೀವು ಯಾವ ಕಾಲಕ್ಕೂ ಒಕ್ಕಲಿಗನನ್ನು ಉದ್ಧಾರ ಮಾಡುವುದಕ್ಕಾಗುವುದಿಲ್ಲ. ಈ ಕಾರಣದಿಂದ ದಯವಿಟ್ಟು ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಇವತ್ತು ಅಪೆಕ್ಸ್ ಬ್ಯಾಂಕಿನ ಪರಿಸ್ಥಿತಿ ಚೆನ್ನಾಗಿಲ್ಲ. ನಿಮಗೆಸುಮ್ಮನೆ ಚೆನ್ನಾಗಿ ಕಾಣಿಸುತ್ತದೆ. ಲ್ಯಾಂಡ್ ಬ್ಯಾಂಕ್ ಮುಳುಗಿ ಹೋಗಿದೆ. ಈ ಎರಡು ಸಂಸ್ಥೆಗಳನ್ನು ರೈತರಿಗಾಗಿ ಏನು ಉಪಯೋಗಿಸಿಕೊಳ್ಳುತ್ತಿದ್ದೇವೆ ಅವು ಚೆನ್ನಾಗಿ ಇದ್ದರೆ ಮಾತ್ರ ಬಜೆಟ್‌ನಲ್ಲಿ ಏನು ಹೇಳಿದ್ದೀರಿ ಅದರ ಪ್ರಕಾರ 6 ಪರ್ಸೆಂಟ್ ಬಡ್ಡಿ ಕೊಡಲಿಕ್ಕೆ ಸಾಧ್ಯವಾಗುತ್ತದೆ. ಆ ಕಾರಣದಿಂದಾಗಿ ಕೇಂದ್ರ ಸರ್ಕಾರ ಒಂದು ಯೋಜನೆ ಮಾಡಿದೆ. ಆ ಬ್ಯಾಲೆನ್ಸ್‌ಶೀಟಿನ ಕ್ಲಿಯರೆನ್ಸ್ ಮತ್ತು ಗ್ಯಾಪ್ ಮತ್ತು ಸಾಲ ತುಂಬಿ ಕೊಡತಕ್ಕಂಥ

ಒಂದು ಯೋಜನೆಯನ್ನು ಕೇಂದ್ರ ಸರ್ಕಾರ ಮಾಡಿದೆ. ಆ ಯೋಜನೆಯಲ್ಲಿ ಈ ವರ್ಷದ ಬಜೆಟ್‌ನಲ್ಲಿ ಒಂದು ಹತ್ತು ಕೋಟಿ ರೂ, ಇಡಿ. ನಂತರ ಬಂದ ಹಾಗೆ ತುಂಬುವಂತಿರಿ. ನಾವು 70 ಕೇಳಿದ್ದೆವು ಅವರು 50 ಕೊಡುತ್ತೇವೆಂದು ಹೇಳಿದ್ದಾರೆ. ಸುಮಾರು ಸಾವಿರ ಕೋಟಿ ರೂಪಾಯಿ ನನ್ನ ಲೆಕ್ಕದ ಪ್ರಕಾರ ಗ್ಯಾಪ್ ಇದೆ. ಈಗ ಅದು ಇನ್ನು ಹೆಚ್ಚಾಗಬಹುದು. ಹೆಚ್ಚಾಗುತ್ತದೆ ಅದು ಈಗ 1200, 1300 ಕೋಟಿ ರೂಪಾಯಿ ಆಗುತ್ತದೆ. ಅಂದರೆ ಕೇಂದ್ರ ಸರ್ಕಾರದಿಂದ ಒಂದು 700 ಕೋಟಿ ರೂಪಾಯಿ ಹಣ ನಮಗೆ ಮುಫತ್ ಬರುತ್ತದೆ. ಆ ಎರಡೂ ಸಂಘಗಳು ಉದ್ಧಾರವಾಗುತ್ತವೆ. ನೀವು ಒಂದು ವೇಳೆ ಆ ಅಪೆಕ್ಸ್ ಬ್ಯಾಂಕ್ ಮತ್ತು ಲ್ಯಾಂಡ್ ಬ್ಯಾಂಕ್ ಸುಧಾರಿಸದಿದ್ದರೆ, ಈಗ ನೀವು ಏನು ಬಜೆಟ್‌ನಲ್ಲಿ 6 ಪರ್ಸೆಂಟ್ ಬಡ್ಡಿಗೆ ಕೊಡುತ್ತೇವೆಂದು ಹೇಳಿದಿರಿ ಅದು ಆಗದಂಥ ಮಾತು. ಆ ಕಾರಣದಿಂದಾಗಿ ನೀವು ಆ ಕಡೆ ಕೂಡ ಲಕ್ಷ್ಯ ಹಾಕಬೇಕು. ಇನ್ನು ಸಹಕಾರಿ ಕೈಗಾರಿಕೆಗಳು. ನಮ್ಮ ಟೆಕ್ಸ್‌ಟೈಲ್ಸ್ ಮಿಲ್ಸ್. ನಮ್ಮ ಎಣ್ಣೆ ಮಿಲ್ಸ್, ಇವತ್ತು ಸಹಕಾರಿ ಮಿಲ್‌ಗಳೆಲ್ಲವೂ ಮುಚ್ಚಿ ಹೋಗುತ್ತವೆ. ಬಹುಶಃ ಅವು ಹಾಗೆ ಮುಚ್ಚಿ ಹೋದರೆ ರೈತರಿಗೆ ಹೊಡೆತ ಬೀಳುತ್ತದೆ. ಇವತ್ತು ನಮ್ಮ ಟೆಕ್ಸ್‌ಟೈಲ್ಸ್ ಮಿಲ್‌ನ್ನು ನಮ್ಮ ಕೆ,ಹೆಚ್. ಪಾಟೀಲ್‌ರವರು ಗದಗ್‌ನಲ್ಲಿ ಕಟ್ಟಿರುವ ಉದ್ದೇಶ ಏನು ಇತ್ತು ಎಂದರೆ, ರೈತರು ತಂದಂಥ ಆ ಒಂದು ಹತ್ತಿಯನ್ನು ಖರೀದಿಸಿ ಅವರಿಗೆ ಒಳ್ಳೆಯ ಬೆಲೆ ಕೊಡಬೇಕೆಂದು ಕಟ್ಟಿದರು. ಇವತ್ತು ಉದಾರೀಕರಣ ನೀತಿಯಿಂದ ನಮ್ಮ ರಾಜ್ಯದಲ್ಲಿರತಕ್ಕಂಥ ಎಲ್ಲಾ ಟೆಕ್ಸ್‌ಟೈಲ್ಸ್ ಮಿಲ್‌ಗಳು, ಕೋ-ಅಪರೇಟಿವ್ ಆಯಿಲ್ ಇಂಡ್‌ಸ್ಟ್ರಿ ಎಲ್ಲಾ ಮುಳುಗಿ ಹೋಗುತ್ತಿವೆ. ಅವುಗಳ ಕಾರಣದಿಂದ ಅವುಗಳ ಅಭಿವೃದ್ಧಿಗಾಗಿ ಏನೇನು ಪ್ಯಾಕೇಜ್ ಮಡುತ್ತೀರಿ. ಬೇಕಾದರೆ ನೀವು ಒಮ್ಮೆ ಕರೆದರೆ ನಾವು ನೀವು ಎಲ್ಲಾ ಕುಳಿತು ಚರ್ಚಿಸೋಣ. ಅವುಗಳನ್ನೂ ಕೂಡ ಸುಧಾರಿಸದಿದ್ದರೆ ರೈತರಿಗೆ ಅನುಕೂಲ ಮಾಡಲಿಕ್ಕೆ ಆಗುವುದಿಲ್ಲ. ನಮ್ಮ ಸಕ್ಕರೆ ಗಿರಣಿಗಳು, ಬಹುಶಃ ಸಕ್ಕರೆ ಕಬ್ಬು ಹಚ್ಚಿದ ರೈತ, ಮೊದಲು ನಾಲ್ಕು ಎಕರೆ ಕಬ್ಬು ಹಚ್ಚಿದ ರೈತ ಬೆಳಗಾವಿ ಜಿಲ್ಲೆಯಲ್ಲಿ ಕಾರು ತೆಗೆದುಕೊಂಡು ಓಡಾಡುತ್ತಿದ್ದರು ಈಗ ಆ ರೈತನೂ ತುಂಬಾ ಚಿಂತಾಜನಕ ಸ್ಥಿತಿಯಲ್ಲಿದ್ದು ಕಬ್ಬು ಹಚ್ಚುವುದು ಅಥವಾ ಬಿಡುವುದೇ ಎನ್ನುವ ಸ್ಥಿತಿಗೆ ಬಂದಿದ್ದಾನೆ. ಆ ಕಾರಣದಿಂದಾಗಿ ಆ ಸಕ್ಕರೆ ಕಾರ್ಖಾನೆಗಳನ್ನು ಉದ್ಧಾರ ಮಾಡುವ ದೃಷ್ಟಿಯಿಂದ ಅನಿವಾರ್ಯವಾಗಿ ತಾವು ಅದಕ್ಕೆ ಕೂಡ ಕೆಲವು ಪ್ಯಾಕೇಜ್‌ಗಳನ್ನು ಮಾಡಬೇಕು. ಹೊಸ ಸಕ್ಕರೆ ಕಾರ್ಖಾನೆಗಳ ಬಗ್ಗೆ, ಈಗಾಗಲೇ ತಾವು ಇದ್ದಾಗ 15 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಂಥವು ಈಗ ಅವುಗಳು ನಿಂತಿವೆ. ಅವುಗಳಿಗೆ ಎನ್‌ಸಿಡಿಸಿ ಯಿಂದ ಸಾಲ ಕೊಡಿಸಬೇಕು. ಆ ಕಡೆಗೆ ಸರ್ಕಾರದ ಲಕ್ಷ್ಯವೇ ಇಲ್ಲ. ಇಲಾಖೆಯವರದ್ದು ಲಕ್ಷ್ಯ ಇಲ್ಲ. ನಾವು ಹಿಂದಿನಿಂದ ಹೇಳಿ ಕೊಂಡು ಬರುತ್ತಿದ್ದೇವೆ ಆದರೂ ಆ ಕಡೆ ಲಕ್ಷ್ಯವೇ ಇಲ್ಲ. ಆ ಕಾರಣದಿಂದಾಗಿ ಮಾನ್ಯ ಧರ್ಮಸಿಂಗ್‌ರವರು ಮತ್ತು ತಾವು ಇವತ್ತು ಹಿಂದುಳಿದ ಪ್ರದೇಶದಿಂದ ಒಡವr ಹಾಗೂ ರೈತರ ಪರವಾಗಿ ಬಂದಂಥವರು ಇದ್ದುದ್ದರಿಂದ ಆ ಕಡೆಗೆ ಲಕ್ಷ್ಯ ಕೊಟ್ಟು ದಯವಿಟ್ಟು ಸಕ್ಕರೆ

ಕಾರ್ಖಾನೆಗಳಿಗೆ ಎನ್‌ಸಿಡಿಸಿ ಯಿಂದ ಲೋನ್ ಕೊಡಿಸಿ ಅವೆಲ್ಲಾ ಚಾಲು ಆಗುತಕ್ಕಂಥ ಪ್ರಯತ್ನವನ್ನು ತಾವು ಮಾಡಬೇಕೆಂದು ನಾನು ಕಳಕಳಿಯಿಂದ ಕೇಳುತ್ತೇನೆ. ಇನ್ನು ವಿದ್ಯುತ್ ಬಗ್ಗೆ ಬಹುಶಃ ಇವರು ಎಲ್ಲಾ ರೈತರ ಮೇಲೆ ಹೇಳುತ್ತಾರೆ. ನಾನೊಮ್ಮೆ ಸಾರ್ವಜನಿಕ ಉದ್ದಿಮೆ ಸಮಿತಿಯಲ್ಲಿ ಇದ್ದಾಗ, ನಮ್ಮ ಬಳಿಗಾರ ಸಾಹೇಬರು ಅದರ ಎಂಡಿ ಆಗಿದ್ದರು. ರೈತರ ಕಡೆಯಿಂದ ನೀವು ಮೀಟರ್ ಹಾಕುತ್ತೀರಿ. ಸಿಟಿಗೇನು 24 ತಾಸು ಕರೆಂಟ್ ಕೊಡುತ್ತಿರಲ್ಲಾ ಅದೇ ರೀತಿ 24 ತಾನು ಕರೆಂಟು ಕೊಟ್ಟುಬಿಡಿರಿ, ಅದೇ ರೀತಿ ಬಿಲ್ ಕೊಡಿಸುತ್ತೇವೆಂದು ನಾನು ಕೇಳಿದ್ದೇ ಅದಕ್ಕವರು ಸಾಧ್ಯವಿಲ್ಲವೆಂದರು. ಆಗುವುದಿಲ್ಲ ಎಂದು ಹೇಳಿದರು. ಮತ್ತೆ ಏಕೆ ರೈತರಿಗೆ ಕೊಡುತ್ತೇವೆ ಎಂದು ಸುಮ್ಮನೆ ಹೇಳುತ್ತೀರಿ ? ಅಲ್ಲಿ ಬೆಳೆ ಬಂದಿರುತ್ತದೆ. ಇಲ್ಲಿ ಕರೆಂಟ್ ತೆಗಿದಿರುತ್ತಾರೆ. ಬೆಳೆನೂ ಹಾಳಾಗುತ್ತದೆ. ಆ ಕಾರಣಕ್ಕಾಗಿ ಈ ವಿದ್ಯುತ್ತಿನ ಬಗ್ಗೆ, ನಾನು ಏನು ಹೇಳುತ್ತೇನೆ ಎಂದರೆ, ಈಗೇನು 25 ಸಾವಿರ ರೂ, ಕೊಟ್ಟು ಟ್ರಾನ್ಸ್‌ಫಾರ್ಮರ್ ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ಅದೇ ರೀತಿ ನೀವು ಇಲ್ಲಿ ಕಾಯಿದೆ ಕೂಡ ಮಾಡಿದಿರಿ. ಆದರೆ ದುರ್ದೈವದಿಂದ ಇವತ್ತೂ ಕೂಡ ಅದು ನಡೆಯುತ್ತಿಲ್ಲ. ನಮ್ಮ ಮಾನ್ಯ ರೇವಣ್ಣನವರು ಇವತ್ತು ಇಲ್ಲಿ ಇಲ್ಲ ನಿಜವಾಗಿಯೂ ಒಳ್ಳೆಯ ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಅದನ್ನೂ ಕೂಡ ನಾನು ಹೇಳುತ್ತಿದ್ದೇನೆ. ನಂತರ ಈ ರೈತರ ಕಲ್ಯಾಣನಿಧಿ. ಎಲ್ಲರೂ ಪ್ರಯತ್ನಿಸಿ ಕೇಂದ್ರದಲ್ಲಿ ಹತ್ತು ಸಾವಿರ ಕೋಟಿ ರೂ. ರಾಜ್ಯದಲ್ಲಿ ಪ್ರತಿ ವರ್ಷ ತಾವು ಈಗ ಏನು ನೂರು ಕೋಟಿ ರೂ ಏನು ಆವರ್ತನಿಧಿ ಮಾಡಿದಿರಿ, ಅದು ಯಾವುದಕ್ಕೂ ಸಾಲದು. ನಾವು ಅದನ್ನು ತೆಗೆದಿಡಬೇಕು. ತೆಗಿದಿಟ್ಟು ಅದನ್ನೆಲ್ಲಾ ಕೂಡಿಸಿ. ಬಹುಶಃ ಇನ್ಶೂರೆನ್ಸ್ ಕೋ-ಆಪರೇಟಿವ್ ಸೊಸೈಟಿ ಮಾಡಲಿಕ್ಕೆ ಸಾಧ್ಯವಿದೆ. ನಾನು ಹಿಂದೆ ಮಂತ್ರಿಯಾಗಿದ್ದಾಗ ಆ ದಿಶೆಯಲ್ಲಿ ಪ್ರಯತ್ನಿಸಿದೆ. ಆದರೆ ಅವಾಗ ಅದು ಕಾಯಿದೆ ಇದ್ದಿಲ್ಲ. ಬೇರೆಯವರಿಗೆ ಕೊಡಲಿಕ್ಕೆ ಬರುತ್ತಿರಲಿಲ್ಲ. ಇವತ್ತು ಅದು ತಿದ್ದುಪಡಿಯಾಗಿದೆ, ಬೇರೆ ಬೇರೆ ಖಾಸಗಿಯವರೂ ಸಹ ಅದರಲ್ಲಿ ಬಂದಿದ್ದಾರೆ. ಆ ದಿಶೆಯಲ್ಲಿ ತಾವು ಪ್ರಯತ್ನ ಮಾಡಿ, ಎಲ್ಲ ಇಡೀ ತಾಲ್ಲೂಕುಗಳಿಗೂ ಬರ ಬೀಳುವುದಿಲ್ಲ. ಕೆಲವು ತಾಲ್ಲೂಕುಗಳಲ್ಲಿ ಬರ ಬೀಳುತ್ತದೆ. ಆಗ ಅದನ್ನು ಕೊಡಲಿಕ್ಕೆ ಸುಮ್ಮನೆ 200, 300, ಕೋಟಿ ರೂ. ಸಾಕಾಗುವುದಿಲ್ಲ, ನನ್ನ ಪ್ರಕಾರ ವರ್ಷಕ್ಕೆ ಸಾವಿರಾರು ಕೋಟಿ ರೂಪಾಯಿಬೇಕಾಗುತ್ತದೆ. 2-3 ಸಾವಿರ ಕೋಟಿ ರೂಪಾಯಿಗಳನ್ನು ನಾವು ಮತ್ತು ಕೇಂದ್ರ ಸರ್ಕಾರದವರು ಕೂಡಿ ಇಟ್ಟರೆ, ರೈತನಿಗೆ ತೊಂದರೆ ಹೋಗುತ್ತದೆ. ಸರ್ಕಾರಕ್ಕೆ ಹೊರೆನೂ ಕಡಿಮೆಯಾಗುತ್ತದೆ. ಈಗಾಗಲೇ ನಾವು ಕೊಡುತ್ತಿದ್ದೇವೆ. ಈಗ ನಾವು ಅಷ್ಟು ದುಡ್ಡನ್ನು ಕೆಇಬಿಗೆ ಕೊಡುತ್ತಿದ್ದೇವೆ. ರೈತನ ಹೆಸರಿನಲ್ಲಿ ಸಾವಿರಾರು ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಅದನ್ನು ನೀವು ಕೊಡುವುದೇ ಬೇಡ, ಮೀಟರ್ ಹಾಕಿರಿ, ಬೇರೆಯವರಿಗೇನು ಮೂರು ರೂಪಾಯಿಗೆ ಒಂದು ಯೂನಿಟ್ ಎಂದು ಏನು ಹೇಳುತ್ತೀರಿ. ಮೂರು ರೂಪಾಯಿಗೆ ಒಂದು ಯೂನಿಟ್ ಇವರಿಗೆ ಹಾಕಿರಿ. ಆ ರೇಟ್‌ನಿಂದ ರೈತನಿಗೆ ಒಂದು ಎಕರೆಗೆ ಶೇಂಗಾ ಬೆಳೆಯಬೇಕಾದರೆ ಅದು

ಎಷ್ಟು ಖರ್ಚು ಬರುತ್ತದೆ, ಏನಾಗುತ್ತದೆ, ಆ ಕರೆಂಟ್ ಬಿಲ್ ಎಷ್ಟು ಲೆಕ್ಕ ಹಾಕಿ ಅವನು ರೇಟ್ ಫಿಕ್ಸ್ ಮಾಡಿ. ರೇಟ್ ಕಡಿಮೆ ಆದರೆ ಅವನಿಗೆ ಇನ್ಶೂರೆನ್ಸ್ ಕೊಡಬೇಕು. ಬೆಳೆ ಬರದಿದ್ದರೂ ಅವನಿಗೆ ಇನ್ಶೂರೆನ್ಸ್ ಕೊಡಬೇಕು. ಆ ಕಾರಣದಿಂದ ನೀವು ತೆಗೆದಿಟ್ಟರೆ. ಸರ್ಕಾರದ ಹೊರೆ ಕಡಿಮೆಯಾಗುತ್ತದೆ, ಸರ್ಕಾರಕ್ಕೆ ಉತ್ಪನ್ನ ಜಾಸ್ತಿಯಾಗುತ್ತದೆ, ರೈತನ ಕಷ್ಟ ಕೂಡ ಕಡಿಮೆಯಾಗುತ್ತದೆ, ಇವು ಯಾವ ನಿಮ್ಮ ಅಕ್ಕಿ ಹಗರಣ ಪಗರಣ ಇಂಥವು ಯಾವುದು ಇರುವುದಿಲ್ಲ. ರೈತನೇ ಬೆಳೆ ಬೆಳಸಿಬಿಡುತ್ತಾನೆ. ಈ ಕಾರಣದಿಂದ ಕೂಡ ನಾನು ಹೇಳುತ್ತಿದ್ದೇನೆ. ಸನ್ಮಾನ್ಯ ಸಿದ್ಧರಾಮಯ್ಯನವರೂ ಕೂಡ ಸ್ವಲ್ಪ ತಾವು ಏಕೋ ಹಿಂದಿನಿಂದಲೂ ನಾವು ನೋಡುತ್ತೇವೆ. ಅರಣ್ಯದ ಬಗ್ಗೆ ಲಕ್ಷ್ಯವೇ ಇಲ್ಲ ಈ ಬಜಟ್‌ನಲ್ಲಿ ನಮ್ಮ ಯೋಜನೆಗಳು ಎಲ್ಲಾ ಫೇಲ್ ಆಗುತ್ತವೆ. ಇದು ಸುಮ್ಮನೆ, ಅರಣ್ಯೀಕರಣಕ್ಕೆ ನಾವು ಹೆಚ್ಚು ಒತ್ತು ಕೊಡದೇ ಇದ್ದರೆ, ಮಳೆ ಆಗುವುದಿಲ್ಲ ನಿಮ್ಮ ಡ್ಯಾಂ ಇರುವುದಿಲ್ಲ, ಇನ್ನು ಸ್ವಲ್ಪ ವರ್ಷಗಳಲ್ಲಿ, ಮೊನ್ನೆ ಒಬ್ಬರು ಹೇಳುತ್ತಿದ್ದರು, ಈಗಾಗಲೇ ನಾವು ಬಾಟಲಿ ನೀರು ಕುಡಿಯುತ್ತಿದ್ದೇವೆ. ಈಗ ನಮ್ಮ ಕೋಲಾರದಲ್ಲಿ ಬಹುಶಃ ಮಾನ್ಯ ಅಧ್ಯಕ್ಷರು ಒಳಗಡೆ ಹೋದರು. ಕೋಲಾರದಲ್ಲಿ 700–800 ಅಡಿಗಳಷ್ಟು ನೀರು ಒಳಗಡೆ ಹೋಗಿದೆಯಂತೆ. ಅಂದರೆ ಮುಂದೆ ಆ ಗಿಡಗಳು ಒಣಗುತ್ತವೆ. ಆ ಭೂಮಿಯಲ್ಲಿರುವುದನ್ನು ನಾವು ತೆಗೆದು ಬಿಟ್ಟರೆ, ಗಿಡ ಬದುಕುವುದು ಎಲ್ಲಿಂದ ? ಮೊನ್ನೆ ಒಬ್ಬರು ಪರಿಸರ ತಜ್ಞರು ನನಗೆ ಹೇಳಿದರು. ಬಹುಶಃ ಪಾಟೀಲರೇ, ಇನ್ನು 40–50 ವರ್ಷದ ಮೇಲೆ, ನಾವು ನೀವು ನೋಡಲಿಕ್ಕಿಲ್ಲ ನಮ್ಮ ಮಕ್ಕಳು ಅನುಭವಿಸುತ್ತಾರೆ ಏನೆಂದರೆ, ಇಂಥದೊಂದು ಕಾಲ ಏನು ಬಂದಿದೆ. ಈಗೇನು ಬಾಟಲಿಯಲ್ಲಿ ನೀರು ಕುಡಿಯುತ್ತೇವೆ, ಮುಂದೆ ಅಕ್ಸಿಜನ್ ಮುಖಕ್ಕೆ ಕಟ್ಟಿಕೊಂಡು ಓಡಾಡುವಂಥ ಕಾಲ ಬರುತ್ತದೆ. ಇವತ್ತು ಎಚ್ಚರ ಆಗಬೇಕೆಂದು ಅವರು ಆ ಮಾತು ಹೇಳಿದರು. ಇವತ್ತು ನಮ್ಮ ಪರಿಸರ ತಜ್ಞರು ಕೆಲವರು ಹೇಳುತ್ತಾರೆ. ಇಡೀ ಜಗತ್ತಿನಲ್ಲಿ 3 ಪರ್ಸೆಂಟ್ ಪ್ರತಿ ವರ್ಷ ಅರಣ್ಯ ನಾಶವಾಗುತ್ತಿದೆಯಂತೆ, ಅಂದರೆ 30 ವರ್ಷಗಳಲ್ಲಿ ಅರಣ್ಯವೇ ಇಲ್ಲದ ಹಾಗೆ ಆಗುತ್ತದೆ. ಈ ಕಾರಣದಿಂದ 3 ಪರ್ಸೆಂಟ್ ನಾಶ ಆಗುವುದನ್ನು ನಾವು ಮರಳಿ ತುಂಬದಿದ್ದರೆ ತೊಂದರೆಯಾಗುತ್ತದೆ. ಆ ಕಾರಣದಿಂದ ಇದರಲ್ಲಿ ಅರಣ್ಯದ ಬಗ್ಗೆ ಹಾಗೂ ಪರಿಸರದ ಬಗ್ಗೆ ತಾವು ಏನೂ ಹೇಳಿಲ್ಲ. ದಯವಿಟ್ಟು ಅರಣ್ಯದ ಬಗ್ಗೆ ಹೆಚ್ಚಿನ ಲಕ್ಷ್ಯ ಕೊಡಬೇಕು. ಎನ್ನುವ ಮಾತನ್ನು ಹೇಳಿ. ಇನ್ನು ಈ ಎರಡರ ಬಗ್ಗೆ ಯಾವಾಗಲೂ ವಿರೋಧ ಮಾಡಿ ಮಾತನಾಡುತ್ತಿದ್ದೇನೆ ಬಿಸಿ ಊಟ, ಮತ್ತು ಶ್ರೀಮಂತರ ಮಕ್ಕಳಿಗೆ ಅಂಗಿ ಕೊಡುವುದು. ಅವರು ಹಾಕುವುದಿಲ್ಲ. ಬಡವರ ಮಕ್ಕಳಿಗೆ ಕೊಡೋಣ. ಯಾರು ಹೇಳಿದರು ಎಂದರೆ ಶಾಲೆಗೆ ಬಂದ ಎಲ್ಲಾ ಹುಡುಗರಿಗೆ ಕೊಡುತ್ತಾರೆ. ಆದರೆ ಅವರು ಯಾರೂ ತೊಟ್ಟುಕೊಂಡು ಬರುವುದಿಲ್ಲ. ಬೇಕಾದರೆ ಹೋಗಿ ನೀವು ನೋಡಿ. ಅದನ್ನು ಎಲ್ಲಿಂದ ತರುತ್ತೀರಿ, ಅದನ್ನು ಕಡಿಮೆ ಮಾಡಿರಿ. ಯಾರ ಹಸಿರು ಕಾರ್ಡುನವರು, ಬಡವರು ಯಾರು ಇದ್ದಾರೆ

ಅವರ ಮಕ್ಕಳಿಗೆ ಮಾತ್ರ ಕೊಡಬೇಕು. ಸುಮ್ಮನೆ ನನ್ನ ಮಕ್ಕಳಿಗೂ ಕೊಟ್ಟು ಬಿಟ್ಟರೆ ಅವನು ಹಾಕುವುದೇ ಇಲ್ಲ ಬೇರೆ ಡ್ರೆಸ್ ಹಾಕುತ್ತಾನೆ. ನಾವು ನೋಡಿದ್ದೇವೆ.

ಶ್ರೀ ಎಸ್. ಕುಮಾರ ಬಂಗಾರಪ್ಪ : ಇವರು ಅರಣ್ಯದ ಬಗ್ಗೆ ಪ್ರಸ್ತಾಪಿಸಿದರು. ಅರಣ್ಯದ ಬಗ್ಗೆ ಮುಖ್ಯವಾದುದು ಏನೆಂದರೆ, ಅರಣ್ಯ ಸಮಿತಿಗಳನ್ನು ನಾವು ಮಾಡುತ್ತಿದ್ದೇವೆ, ಅರಣ್ಯ ಸಮಿತಿಗಳೆಂದು ನಮಗೆ ಬೇಕಾಗಿರತಕ್ಕಂಥ ಫಾರಮೆಟ್ ಏನು ಇತ್ತು. ರೈತರಿಗೆ ಬೇಕಾಗಿರತಕ್ಕಂಥ ಫಾರಮೆಟ್ ಏನು ಇತ್ತು, ಅವರೇನು ಸಾಗುವಳಿ ಮಾಡುತ್ತಿರುವುದನ್ನು ಬಗರ್ ಹುಕ್ಕುಂ ಏನು ತುಂಬಿಸುತ್ತಿದ್ದಾರೆ. ಅರಣ್ಯ ಜಾಗದಲ್ಲಿ, ಅದಕ್ಕೆ ಫಾರ್‌ಮೆಟ್ ಮಾಡುತ್ತೇವೆಂದು ಹೋದ ಸರ್ಕಾರ, ಹೋದ ಸಾರಿ ನಾವು ಇದನ್ನು ಮಾಡಿದೆವು. ಆದರೆ ಇಲ್ಲಿಯವರೆವಿಗೂ ಕೂಡ ಆ ಫಾರಮೆಟ್ ನಾನಾ ರೀತಿಯಿಂದ ಪ್ರೊಟೆಸ್ಟ್ ನಾನಾ ರೀತಿಯಿಂದ ನಾಳೆ ದಿನ ಹೋಗಿ ಅವರು ಬೀದಿಗಿಳಿಯುವ ಬದಲು, ಅವರು ಫಾರಮೆಟ್ ಒಂದು ಕೊಟ್ಟು ಬಿಟ್ಟರೆ ಆದಷ್ಟು ಮಟ್ಟಿಗೆ ಇದು ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು. ನಾವು ಹೇಗೆ ಈ ಬಗರ್‌ಹುಕ್ಕುಂ ಗೆ ಫಾರಮೆಟ್ ಮಾಡಿ, ಬಗರ್‌ಹುಕ್ಕುಂ ಸಮಿತಿಯ ಮುಂದೆ ಕೊಡುತ್ತಿದ್ದೇವೆ. ಅರಣ್ಯ ಸಮಿತಿಯನ್ನು ಮಾಡಿದ್ದೇವೆ, ಅರಣ್ಯದಲ್ಲಿ ಯಾರ‍್ಯಾರು ಸಾಗುವಳಿ ಮಾಡಿಕೊಂಡಿದ್ದಾರೆ ಅವರಿಗೊಂದು ಫಾರಮೆಟ್ ಕೊಟ್ಟುಬಿಟ್ಟರೆ, ಅದನ್ನು ಅಪ್ರೂವೆಲ್ ಮಾಡಿ ಬಿಟ್ಟರೆ, ಆ್ಯಕ್ಚುಯಲಿ ಆ ಫಾರ್‌ಮೆಟ್ ಡ್ರಾಫ್ಟ್ ಕೂಡ ಕ್ಯಾಬಿನೆಟ್‌ವರೆಗೆ ಬಂದು ಹೋಗಿದೆ. ಹೀಗಾಗಿ ಇದು ಕಾಬಿನೆಟ್‌ನವರೆಗೆ ಬರುವ ಅವಶ್ಯಕತೆಯೂ ಇಲ್ಲ. ಆಫಿಷಿಯಲಿ ಒಂದು ಡೈರೆಕ್ಷನ್ ಕೊಟ್ಟು ಬಿಟ್ಟರೆ. ಆ ಫಾರ್‌ಮೆಟ್‌ನ್ನು ತಲುಪಿಸಿದರೆ ಸಾಕು. ನಾಳೆ ದಿನ ಅರಣ್ಯ ಸಮಿತಿ ವಿಲ್ ಟೇಕ್ ಕೇರ್. ಅವರು ಆ ಸಮಿತಿಯಲ್ಲಿ ಕುಳಿತುಕೊಂಡು ಯಾರು ಸಾಗುವಳಿ ಮಾಡಿದ್ದಾರೆ ಯಾರು ಬಿಟ್ಟಿದ್ದಾರೆ ಅದರ ಬಗ್ಗೆ ಅವರು ತೀರ್ಮಾನ ಮಾಡಬಹುದು.

ಶ್ರೀ ಎಸ್.ಎಸ್. ಪಾಟೀಲ್ : ಬಿಸಿ ಊಟದ ಬಗ್ಗೆ ಬಹುಶಃ ತಪ್ಪು ವರದಿಗಳೇ ಸರ್ಕಾರಕ್ಕೆ ಇಲ್ಲಿ ಬರುತ್ತವೆ. ನಾವು ಹೋಗಿ ಅಲ್ಲಿ ನೋಡಿದ್ದಕ್ಕೂ ಅಲ್ಲಿನ ವಾಸ್ತವ ಸ್ಥಿತಿಗೂ ವ್ಯತ್ಯಾಸ ಇದೆ. ಸುಮ್ಮನೆ ಹಾಜರಿ ಸಂಖ್ಯೆ ಹೆಚ್ಚಾಯಿತು ಎಂದು ಹೇಳುತ್ತಾರೆ. ಮೊನ್ನೆ ನಾನು ಒಂದು ಕಡೆ ವಿಸಿಟ್ ಮಾಡಿದೆ. ಆ ಹೆಡ್ ಮಾಸ್ಟರ್ ಏನು ಮಾಡುತ್ತಾನೆಂದು ಹೇಳಿದರೆ, ಹಿಂದಿನ ಒಂದು ವಾರದ ಹಾಜರಿ ಹಾಕಿರುವುದಿಲ್ಲ. ಹೋಗಿ ಹಿಡಿದೆ. ಹುಡುಗರು 50 ಇದ್ದರೆ ಅವನ ಹಾಜರಿ ಪ್ರಕಾರ 150 ಇರುತ್ತದೆ. ವಾರದ ಮೇಲೆ ಹಾಕಿ ಅವನು ಮತ್ತು ಛೇರ್ಮನ್ ಕೂಡಿ ಅಕ್ಕಿ ಮಾರಿಕೊಳ್ಳುತ್ತಾರೆ. ಇದರ ಅಕ್ಕಿಯಲ್ಲಿ ಅವೂ ಕೂಡ ಸೇರಿವೆ. ಆಮೇಲೆ ಮಧ್ಯಾಹ್ನದ ಮೇಲೆ ಹುಡುಗರು ಇರುವುದಿಲ್ಲ. ಎಲ್ಲರೂ ಇವತ್ತು ಹೇಳುತ್ತಾರೆ. ನಾವು ಹೋಗಿ ನೋಡಿದೆವು. ಇಲ್ಲಿ ಏನೂ ಬಿಸಿ ಊಟದ್ದು ಬಾರಿ ಆಗಿದೆ. ನಾವು ಇದು ಜನರಿಗೆ ಅನುಕೂಲವಾಗುತ್ತದೆಂದು ಹೇಳುತ್ತಿದ್ದೇವೆ. ಆದರೆ ನಿಜವಾಗಿ ಅಲ್ಲಿರತಕ್ಕಂಥ ಪರಿಸಿತಿ ಹೇಳಬೇಕೆಂದರೆ, ಹುಡುಗರಿಗೆ ಅಭ್ಯಾಸ ಮಾಡಲಿಕ್ಕೆ ಅಲ್ಲಿ ಶಿಕ್ಷಕರೇ ಇಲ್ಲ. ಶಿಕ್ಷರಕರು ಪಾಠವನ್ನೇ ಮಾಡುವುದಿಲ್ಲ, ಬಹಳ ತೊಂದರೆ ಇದೆ.

ಆ ಕಾರಣದಿಂದ ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಿ ಇವತ್ತು ಅದನ್ನು ಕೊಡುವುದಕ್ಕೆ ನನ್ನದೇನೂ ತಕರಾರು ಇಲ್ಲ. ಆದರೆ ಬಡವರ ಮನೆಗೆ 25 ಕೆ.ಜಿ. ಅಕ್ಕಿ ಕೊಟ್ಟರೆ, ಅದು ಒಳ್ಳೆಯದಾಗುತ್ತದೆ. ಇನ್ನೊಂದು ಸರ್ಕಾರಕ್ಕೆ ಹೊರೆ ಬರುತ್ತದೆ ಮಾನ್ಯ ಸಿದ್ಧರಾಮಯ್ಯನವರೇ ಇದರ ಬಗ್ಗೆ ಲಕ್ಷ್ಯ ಕೊಡಿ. ಈಗಾಗಲೇ ಆ ಹೆಣ್ಣು ಮಕ್ಕಳು, ಏನು ಮೂರು ನೂರು ರೂಪಾಯಿ ಕೊಟ್ಟು ಕೆಲಸಕ್ಕೆ ತೆಗೆದುಕೊಂಡಿದ್ದೆವು ಅವರು ಈಗ ನಮ್ಮನ್ನು ಖಾಯಂ ಮಾಡಿ ಎಂದು ಶುರು ಮಾಡಿದ್ದಾರೆ. ಈಗ ಅವರದು ಒಂದು ಸತ್ಯಾಗ್ರಹ ಶುರುವಾಗಿದೆ. ಅವರಿಗೆ ನಾವು ಇನ್ನು ಮುಂದೆ ಪೂರ್ಣ ಪಗಾರ ಕೊಡಬೇಕು. ನೋಡ್ರಿ ಇದು ಎಲ್ಲಿಗೆ ಹೋಯಿತು ? ಆ ಹುಡುಗರು ಓದುವುದಕ್ಕೆ ಪುಸ್ತಕ ಕೊಡುವುದಕ್ಕಿಂತ, ಮಾಸ್ತರನ್ನು ಕೊಡುವುದಕ್ಕಿಂತ, ಇನ್ನು ಇವರದ್ದು ಶುರುವಾಗಿದೆ.

ಶ್ರೀಮತಿ ಟಿ. ಭಾಗೀರಥಿ : ಈಗ ಬಿಸಿ ಊಟದ ಬಗ್ಗೆ ಮಾತನಾಡಿದಾಗ ಇಲ್ಲಿ ನನಗೊಂದು ಸಮಸ್ಯೆ ಅರ್ಥವಾಗುತ್ತಿಲ್ಲ. ಬೆಳಿಗ್ಗೆ ಸ್ಟೂಡೆಂಟ್ಸ್ ಎಷ್ಟು ಜನ ಇರುತ್ತಾರೆ ನೋಡಿ ಇಷ್ಟು ಮಕ್ಕಳು ಇದ್ದಾರೆಂದು ಹಾಜರಾತಿ ಹಾಕಿಕೊಡತಕ್ಕಂಥ ಏನು ಕಾರ್ಯಕ್ರಮ ಇದೆ. ಇದರಲ್ಲಿ ಹಾಸ್ಟೆಲ್‌ನಿಂದ ಬರತಕ್ಕಂಥ ಹುಡುಗರು ಕೂಡ ಶಾಲೆಯಲ್ಲಿ ಇರುತ್ತಾರೆ. ಅಂದರೆ ಅವರು ಕೂಡಿ ಈ ಬಿಸಿ ಊಟ ಮಾಡುವಾಗ ಈ ಹಾಸ್ಟೆಲ್ ವಿದ್ಯಾರ್ಥಿಗಳು ಈ ಹಾಸ್ಟೆಲ್‌ನಲ್ಲಿ ಯಾವ ರೀತಿಯಲ್ಲಿ ಊಟ ಮಾಡುತ್ತಾರೆ? ಆ ಎರಡು ಸಮಸ್ಯೆಯಲ್ಲಿ ಇತ್ಯರ್ಥವಾಗುತ್ತಿಲ್ಲ. ಇದಕ್ಕೆ ಏನಾದರೊಂದು ವ್ಯವಸ್ಥೆಯನ್ನು ನಾವು ಮಾಡಿಕೊಳ್ಳಬೇಕಾಗುತ್ತದೆಂದು ಹೇಳಬಯಸುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಅದರ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ. ಅದರ ಕಡೆ ಹೆಚ್ಚು ಒತ್ತು ಕೊಡ ಬೇಕಾಗಿದೆ. ಇಲ್ಲ ಇಲ್ಲ ಎರಡು ಕಡೆ ಅವರು ತಿನ್ನುವುದಿಲ್ಲ. ನಿಜವಾಗಿಯೂ ಕೂಡ 10ನೇ ತರಗತಿಯವರೆಗೆ ಕೊಡತಕ್ಕಂಥ ವಿಚಾರ ಇದೆ ಎನ್ನುವ ಮಾತನ್ನು ಹೇಳಿ. ಈ ಹಳ್ಳಿಗಾಡಿನಲ್ಲಿರತಕ್ಕಂಥ ಜನರಿಗೆ ಆರೋಗ್ಯದ ವ್ಯವಸ್ಥೆ ಸರಿಯಾಗಿ ಆಗಬೇಕು. ಡಾಕ್ಟರ್ಸ್ ಇಲ್ಲ. ನಮ್ಮ ದಾವಾಖಾನೆಯಲ್ಲಿ ಹಂದಿ ಬಿಟ್ಟರೂ ಕೂಡ ಹೋಗುವುದಿಲ್ಲ. ಆ ರೀತಿಯಲ್ಲಿ ಅದಕ್ಕೆ ಇಷ್ಟು ವರ್ಷವಾದರೂ ಬಣ್ಣ ಹಚ್ಚಿಲ್ಲ. ಸುಣ್ಣ ಹಚ್ಚಿಲ್ಲ. ಆ ಜಿಲ್ಲಾ ಪಂಚಾಯತ್‌ಗೆ ಕೈ ಗೆ ಕೊಟ್ಟಿಬಿಟ್ಟಿದ್ದೀರಿ. ಅವರು ನಮ್ಮ ಹತ್ತಿರ ದುಡ್ಡು ಇಲ್ಲವೆಂದು ಹೇಳುತ್ತಾರೆ. ನಮ್ಮ ಹಳ್ಳಿ ದವಾಖಾನೆಗೆ ಬೇಕಾದರೆ ಹೋಗಿ ನೀವು ನೋಡಿ ಎಷ್ಟು ಅಧ್ವಾನವಾಗಿರುತ್ತದೆ.

ಶ್ರೀ ಆಂಜನೇಯ : ಬರೀ ಸುಣ್ಣ ಬಣ್ಣ ಅಲ್ಲ. ಅಲ್ಲಿಗೆ ಬರತಕ್ಕ ಪೇಷೆಂಟ್ಸ್‌ಗೆ ಔಷಧಿಗಳೂ ಸಿಗುವುದಿಲ್ಲ ಅಲ್ಲಿ

1.50 ಪಿಎಂ

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಛೇರ್ಮನರೆ, ನಮ್ಮ ಹಳ್ಳಿಯ ದವಾಖಾನೆಯ ಪರಿಸ್ಥಿತಿ ಹಾಗೆ ಇದೆ, ಅದೇ ರೀತಿ ದನದ ದವಾಖಾನೆಗಳು, ಕೆಲವು ಔಷಧಿಗಳನ್ನು ಫ್ರೀಯಾಗಿ ಮಾಡಿದ್ದೀರಿ, ಯಾವುದು ರೈತನಿಗೆ ಬೇಕು

ಅದನ್ನೇ ಫ್ರೀಯಾಗಿ ಮಾಡಿರುವುದಿಲ್ಲ, ಏಕೆ ಮಾಡಲಿಲ್ಲ? ಕಾಲು ಬಾಯಿ ಅವಶ್ಯಕ ಇದೆ. ಅದಕ್ಕೆ ಎಷ್ಟು ಹೋಗುತ್ತದೆ. ರೈತರು ಹೋಗಿ ಚುಚ್ಚುಮದ್ದು ಹಾಕಿಸಿಕೊಳ್ಳುವುದಿಲ್ಲ, ದನಗಳು ಬಹಳ ಕಷ್ಟದಲ್ಲಿ ಬೀಳುತ್ತವೆ, ಮೇಜರ್ ಆಗಿ ರೈತರು ತೆಗೆದುಕೊಳ್ಳುವುದು ಕಾಲುಬಾಯಿ ಔಷಧಿ, ದಯವಿಟ್ಟು ಸಾಧ್ಯವಾದರೆ ಅದನ್ನು ಸ್ವಲ್ಪ ನೋಡಿ, ಇದು 8 ತಿಂಗಳ ಬಜೆಟ್, ಈ ವರ್ಷವಾಗದಿದ್ದರೂ ಮುಂದಿನ ವರ್ಷಕ್ಕಾದರೂ ಮಾಡಿ. ನಿಜವಾಗಿ ಇದರಲ್ಲಿ ನಿಮ್ಮ ಬಜೆಟ್ ಬಗ್ಗೆ ಆಶ್ಚರ್ಯವಾಗುತ್ತದೆ. 153 ಕೋಟಿ ರೂ.ಗಳು ಇದ್ದದ್ದು 72 ಕೋಟಿ ರೂ.ಗಳ ಉಳಿತಾಯ ಬಜೆಟ್‌ನ್ನು ಇವರು ಹೇಗೆ ಮಾಡಿದರು ಎಂದು ಹೇಳಿ, ನಾನು ನಿಮ್ಮ ಮೇಲೆ ಸಂಶಯ ಮಾಡಿಕೊಂಡು ನಾನೂ ಕೂಡ ವಿರೋಧ ಪಕ್ಷದವರಂತೆ, ಆರ್ಥಿಕ ತಜ್ಞರನ್ನು ಭೇಟಿಯಾದಾಗ ಅವರು ಕರೆಕ್ಟ್ ಎಂದು ಹೇಳಿದರು. ಆ ಕಾರಣಕ್ಕಾಗಿ ನಾನು ನಿಮ್ಮನ್ನು ಅಪ್ರೀಷಿಯೇಟ್ ಮಾಡುತ್ತಿದ್ದೇನೆ. ಕೃಷ್ಣನ ಲೆಕ್ಕವನ್ನು ಏನಾದರೂ ಬರೆದಿದ್ದಾರೋ ಹೇಗೆ ಎಂದು ನಾನು ನನಗೆ ತಿಳಿದ ಮಟ್ಟಿಗೆ ಎಲ್ಲವನ್ನೂ ಓದಿದೆ, ಆರ್ಥಿಕ ತಜ್ಞರು ಕೂಡ ವಸ್ತು ಸ್ಥಿತಿಗೆ ಸರಿಯಾದ ಒಂದು ಬಜೆಟ್ ಇದೆ ಎಂದು ಅವರೂ ಕೂಡ ಒಪ್ಪಿಕೊಂಡರು. ನಿಮಗೆ ಹಾಗೂ ಮಾನ್ಯ ಮುಖ್ಯಮಂತ್ರಿಗಳು ಇಬ್ಬರಿಗೂ ಕೂಡ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಕೂಡಲಸಂಗಮದ ಮಾದರಿಯಲ್ಲಿ ಬಹುಶಃ ತಾವು ಹಾಗೂ ಮಾನ್ಯ ಮುಖ್ಯಮಂತ್ರಿಗಳು ಕೂಡಿಕೊಂಡು ಬಸವಕಲ್ಯಾಣವನ್ನು ಏನು ಅಭಿವೃದ್ಧಿ ಮಾಡುತ್ತಿದ್ದೀರಿ, ಇದೊಂದು ದೊಡ್ಡ ಕೆಲಸ. ಏಕೆಂದರೆ ಕೂಡಲ ಸಂಗಮಕ್ಕಿಂತಲು ಬಸವಕಲ್ಯಾಣಕ್ಕೆ ಹೆಚ್ಚು ಮಹತ್ವ ಇದೆ. ಅಲ್ಲಿದ್ದುದ್ದು ಅನುಭವ ಮಂಟಪ, ನಿಜವಾಗಿ ಆ ಅನುಭವ ಮಂಟಪದಲ್ಲಿ ಪಡೆದಿರುವಂಥ ವಚನಗಳನ್ನೇ ನಾನು ಇಲ್ಲಿ ಹೇಳಿರುವುದು. ನಿಜವಾಗಿ ಆ ಅನುಭವ ಮಂಟಪ ಮಾದರಿಯಲ್ಲಿ ಈ ನಮ್ಮ ವಿಧಾನಸಭೆ, ವಿಧಾನ ಪರಿಷತ್ತು ಮತ್ತು ಲೋಕಸಭೆಗಳು ನಡೆದುಬಿಟ್ಟರೆ, ಇದೊಂದು ಬಂಗಾರದ ಹೊಗೆಯಾಗಿ ಸುಭಿಕ್ಷೆಯಾದ ನಾಡು, ಧರ್ಮದಬೀಡಾಗಿ ಇವತ್ತು ಬೆಳೆಯುತ್ತದೆ, ಆ ಕಾರಣಕ್ಕಾಗಿ ನಿಜವಾಗಿ ನಾನು ಇಬ್ಬರನ್ನೂ ಅಭಿನಂದಿಸುತ್ತಿದ್ದೇನೆ. ಆ ಬಸವಕಲ್ಯಾಣದ ಅಭಿವೃದ್ಧಿಗಾಗಿ ತಾವು ಏನು ಕ್ರಮವನ್ನು ಕೈಗೊಂಡಿದ್ದೀರಿ ಇದು ನಿಜವಾಗಿಯೂ ಹೊಗಳತಕ್ಕಂಥ ಮಾತು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಛೇರ್ಮನರೆ, ಮಾನ್ಯ ಸದಸ್ಯರು ಬಸವಕಲ್ಯಾಣ ಬಗ್ಗೆ ಹೇಳುತ್ತಿದ್ದಾರೆ. ಬಜೆಟ್‌ನಲ್ಲಿ ಹೇಳಿದ್ದೀರಿ, ಆದರೆ ಅದರಲ್ಲಿ ಏನೂ ಹಣವನ್ನು ಇಟ್ಟಿರುವುದಿಲ್ಲ. 2 ಕೋಟಿ ರೂ.ಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆ 2 ಕೋಟಿ ರೂ.ಗಳಲ್ಲಿ ಏನಾಗುತ್ತದೆ ? 20 ಕೋಟಿ ರೂ.ಗಳನ್ನು ನೀವು ಬಿಡುಗಡೆ ಮಾಡುತ್ತೇವೆಂದು ಹೇಳಿದ್ದೀರಿ. 2 ಕೋಟಿ ರೂ.ಗಳಲ್ಲಿ ಕೂಡ ಈ ಬಜೆಟ್‌ನಲ್ಲಿ ಇಲ್ಲ, ಅದಕ್ಕಾಗಿ ಅದನ್ನಾದರೊಂದು ಕಮಿಟ್ ಮಾಡಿದರೆ ಒಳ್ಳೆಯದು. ಇದೊಂದು ಬಹಳ ಮಹತ್ವವಾದದ್ದು ಇದೆ. ಇನ್ನೊಂದು 6 ಪರ್ಸೆಂಟ್ ಬಡ್ಡಿ ಬಗ್ಗೆ ಹೇಳಿದಿರಿ. ಇದೊಂದು ಬಹಳ ಸಂತೋಷ, ಅದಕ್ಕೆ

ನಿಮಗೆ ಧನ್ಯವಾದಗಳು. ಅದರಲ್ಲಿ ನೀವು 63 ಕೋಟಿ ರೂ.ಗಳನ್ನು ಇಟ್ಟಿದ್ದೀರಿ. ಆದರೆ ನಬಾರ್ಡ್‌ದವರು ಏನು ಹೇಳುತ್ತಾರೆಂದರೆ, ನೀವು ಅಡ್ವಾನ್ಸ್ ಆಗಿ ಅಫೆಕ್ಸ್ ಬ್ಯಾಂಕಿಗೆ ಹಣವನ್ನು ಜಮಾ ಮಾಡಿ, ಇಲ್ಲದಿದ್ದರೆ ನಾವು ನಿಮಗೆ ಸಾಲವನ್ನು ಕೊಡುವುದಿಲ್ಲ ಎಂದು. ಅಪೆಕ್ಸ್ ಬ್ಯಾಂಕ್ ಕೊಡುವುದಿಲ್ಲ, ಜಿಲ್ಲಾ ಬ್ಯಾಂಕ್ ಕೂಡ ಕೊಡುವುದಿಲ್ಲ. ಅದಕ್ಕಾಗಿ ತಾವು ಮುಂಚಿತವಾಗಿ ಕೊಡಲಿಲ್ಲವೆಂದರೆ, 63 ಕೋಟಿ ರೂ.ಗಳಿಂದ ಏನೂ ಆಗುವುದಿಲ್ಲ. ಯಾವ ಸಾಲವು ಮಂಜೂರಾಗುವುದಿಲ್ಲ. ಇದು 6 ಪರ್ಸೆಂಟ್ ಕೂಡ ಇರುವುದಿಲ್ಲ. ತಾವು ಇದರ ಬಗ್ಗೆ ಬಜೆಟ್‌ನ್ನು ಹೆಚ್ಚು ಮಾಡದಿದ್ದರೆ, ಅಡ್ವಾನ್ಸ್ ಕೊಡದಿದ್ದರೆ ಕಷ್ಟವಾಗುತ್ತದೆ. ಇದಕ್ಕೆ ನಬಾರ್ಡ್‌ನವರು ಒಪ್ಪುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ : ಮಾನ್ಯ ಛೇರ್ಮನರೆ, ಮಾನ್ಯ ಉಪಮುಖ್ಯ ಮಂತ್ರಿಗಳು ನಿಜವಾಗಲೂ ಒಂದು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ನಮ್ಮ ಮುಂಡರಗಿ ತಾಲ್ಲೂಕಿನ ಒಬ್ಬ ಹುಡುಗನನ್ನು ಕುರಿಉಣ್ಣೆ ಅಭಿವೃದ್ಧಿ ಮಂಡಳಿಯ ಅಧ್ಯಕ್ಷನನ್ನಾಗಿ ಮಾಡಿದ್ದಾರೆ. ಅವನಿಗೆ ಸುಮ್ಮನೆ ಒಂದು ಕಾರನ್ನು ಹತ್ತಿ ಅಡ್ಡಾಡುವುದಕ್ಕೆ, ಅಲ್ಲಿ ಏನೂ ಇಲ್ಲ, ಮಾನ್ಯ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಗಳಿದ್ದಾಗ, ಅವರಿಗೆ ನಾವೆಲ್ಲಾ ಹೇಳಿದಾಗ, ಒಂದು ಕೋಟಿ ರೂ.ಗಳನ್ನು ಇಟ್ಟಿದ್ದರು. ತಾವು 4 ಕೋಟಿ ರೂ.ಗಳನ್ನು ಇಟ್ಟಿದ್ದೀರಿ, ಅದರಲ್ಲಿ ಒನ್‌ಟೈಮ್ ಎಂದು ಏಕೆ ಹೇಳಿರುತ್ತೀರಿ. ವರ್ಷಕ್ಕೆ 4 ಕೋಟಿ ರೂ.ಗಳನ್ನು ಕೊಟ್ಟರೆ ನಿಮಗೆ ಏನು ತೊಂದರೆಯಾಗುತ್ತಿತ್ತು ? ಏಕೆ ನಾನು ಕುರುಬರವನು ಇರುವುದರಿಂದ ಅದಕ್ಕಾಗಿ ಮಾಡಿದ್ದಾರೆಂದು ನೀವು ಅಂಜಿರುತ್ತೀರಿ ಅದು ರೈತರದ್ದಾಗಿರುತ್ತದೆ. ಅದು ಯಾವುದೇ ಒಂದು ಜಾತಿಗೆ ಸೀಮಿತವಾಗಿರುವಂಥದ್ದು ಅಲ್ಲ, ಕುರಿ ಅಭಿವೃದ್ಧಿ ಮಂಡಳಿ ಅದು ರೈತರಿಗೆ ಸಂಬಂಧಪಟ್ಟಿದ್ದು. ಅದಕ್ಕಾಗಿ ಶಾಶ್ವತವಾಗಿ 4 ಕೋಟಿ ರೂ.ಗಳನ್ನು ಇಡಿ, ಇಲ್ಲದಿದ್ದರೆ ಅದನ್ನು ಇಟ್ಟುಕೊಂಡು ಏನು ಉಪಯೋಗ ? ಇದಕ್ಕೆ ವರ್ಷವರ್ಷ ಬಜೆಟ್‌ನಲ್ಲಿ ಹೆಚ್ಚಿಗೆ ಮಾಡಿಕೊಂಡು ಹೋಗಬೇಕೆಂದು ನಾನು ತಮಗೆ ಈ ಸಂದರ್ಭದಲ್ಲಿ ಸಲಹೆಯನ್ನು ಮಾಡುತ್ತಿದ್ದೇನೆ. ಇಲ್ಲಿ ಡಾ; ನಂಜುಂಡಪ್ಪನವರ ಒಂದು ವರದಿಯ ಬಗ್ಗೆ ದೊಡ್ಡ ಚರ್ಚೆಯಾಯಿತು. ನಮ್ಮ ಕೆಲವೊಂದು ಮಿತ್ರರು ಬರೀ ಉತ್ತರ ಕರ್ನಾಟಕವೆಂದು ಅನ್ನುತ್ತಿದ್ದೀರಿ. ಆ ವರದಿಯನ್ನು ಬಹುಶಃ ನೋಡಿದರೆ ಗೊತ್ತಾಗುತ್ತದೆ. ಇಷ್ಟೊಂದು ಉತ್ತಮವಾದ ವರದಿಯನ್ನು ಅವರು ಕೊಟ್ಟಿದ್ದಾರೆ. ಅದನ್ನು ಜಾರಿಗೆ ಕೊಡುವುದಕ್ಕೆ ತಾವು ಪ್ರಯತ್ನ ಮಾಡಿರಿ, ಆದರೆ ಅವರು ಏನು ಹೇಳಿದ್ದಾರೆ. ಅದನ್ನು ಮುಂದಿನ ವರ್ಷವಾದರೂ ಜಾರಿಗೆ ತರುವುದಕ್ಕೆ ಪ್ರಯತ್ನವನ್ನು ಮಾಡಿ. ಉದಾಹರಣೆಗಾಗಿ ಅವರು ಎಷ್ಟು ವೈಜ್ಞಾನಿಕವಾಗಿ ಮಾಡಿದ್ದಾರೆ. ನಮ್ಮ ಮುಂಡರಗಿ ತಾಲ್ಲೂಕು ನಾನು ತಿಳಿದುಕೊಂಡಿದ್ದೆ ಅತಿ ಹಿಂದುಳಿದರದಲ್ಲಿ ಇದೆ ಎಂದು ಇಲ್ಲ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಾಗಡಿ ಅತೀ ಹಿಂದುಳಿದ ತಾಲ್ಲೂಕು. ರಾಯಚೂರು ಜಿಲ್ಲೆಯ ಸಿಂಧನೂರು ಭಾರಿ ನೀರಾವರಿ ಇದೆ ಎಂದು ತಿಳಿದಿದ್ದೆವು, ಆದರೆ

ಅದೂ ಕೂಡ ಅತಿ ಹಿಂದುಳಿದ ತಾಲ್ಲೂಕಿನಲ್ಲಿದೆ. ಅವರು ವೈಜ್ಞಾನಿಕವಾಗಿ ಮಾಡಿದ್ದಾರೆ, ಸುಮ್ಮನೆ ಮಾಡಿಲ್ಲ ಪರ್ಸೆಂಟೇಜ್ ಮಾಡಿ ಮಾರ್ಕ್ಸ್ ಕೂಡ ಕೊಟ್ಟಿದ್ದಾರೆ. ಮಾನ್ಯ ಸಿಂಧ್ಯಾರವರು ಹೇಳಿ ಮಾಡಿಸಿಕೊಂಡಿದ್ದಾರೋ ಎಂದು ಮಂದಿ ಅನ್ನಬಹುದು. ಹಿಂದುಳಿದ ತಾಲ್ಲೂಕಿನಲ್ಲಿ ಕನಕಪುರ ಕೂಡ ಇದೆ. ಇಡೀ ರಾಜ್ಯದ ಅಭಿವೃದ್ಧಿಯಾಗಬೇಕು. ಎಲ್ಲಿ ಹಿಂದುಳಿದರೆ ಅಲ್ಲಿ ಮಾಡಬೇಕು ಎನ್ನುವ ದೃಷ್ಟಿಯಿಂದ ಮಾಡಿದ್ದಾರೆ. ಉತ್ತರ ಕರ್ನಾಟಕದ ಪ್ರಶ್ನೆ ಇಲ್ಲ ಅಲ್ಲಿ, ಆದರೆ ಹೆಚ್ಚು ಹಿಂದುಳಿದ ತಾಲ್ಲೂಕುಗಳು ಇವತ್ತು ಉತ್ತರ ಕರ್ನಾಟಕದಲ್ಲಿವೆ, ಈ ಕಾರಣದಿಂದ ದಯವಿಟ್ಟು ತಾವು ಮುಂದಿನ ವರ್ಷವಾದರೂ ಕೂಡ ಒತ್ತುಕೊಟ್ಟು ಅದನ್ನು ಜಾರಿಗೆ ತರುವುದಕ್ಕೆ 2000 ಕೋಟಿ ರೂ.ಗಳನ್ನು ಕೊಡುವ ಬಗ್ಗೆ ತಾವು ಅಭ್ಯಾಸವನ್ನು ಮಾಡಬೇಕು. ಆರ್ಥಿಕ ಮಂತ್ರಿಗಳು ಎಂದ ತಕ್ಷಣ ಹೇಳಿದಂತೆ ಎಲ್ಲಿಂದ ಆದರೂ ಹಣವನ್ನು ತರುವುದಕ್ಕೆ ಆಗುವುದಿಲ್ಲ. ಹಣ ಉದಿರಿಸುವುದಲ್ಲ, ಸೋರಿಕೆ ನಿಲ್ಲಿಸಿದರೆ ಆಗುತ್ತದೆ, ಬಹಳ ಕಷ್ಟಪಟ್ಟು ಸೋರಿಕೆ ನಿಲ್ಲಿಸಬೇಕು. ಎಪಿಎಂಸಿ ಯಲ್ಲಿ ಸೋರಿಕೆ ಇದೆ, ಮಾನ್ಯ ಮೊಯ್ಲಿಯವರು ಬರೆದಂತೆ ನಿಮ್ಮ ಇಲಾಖೆಯಲ್ಲಿಯೇ 1000 ಕೋಟಿ ರೂ ಸೋರುತ್ತಿದೆ ಎಂದು. ಮೊಯ್ಲಿಯವರು ಕಂಡು ಹಿಡಿದಿರುವುದು 1000 ಕೋಟಿ ರೂ.ಗಳು ಮಾತ್ರ ಇನ್ನೂ ಹೆಚ್ಚಿಗೆ ಇದೆ. ನೌಕರರನ್ನು ಕಡಿಮೆ ಮಾಡುತ್ತೇವೆಂದು ಹೇಳಿದಿರಿ, ಅದು ಇನ್ನೂವರೆಗೆ ಆಗಲಿಲ್ಲ. ಡಿವಿಸಿ ಆಫೀಸನವರು ಏನೋ ತಕರಾರು ಮಾಡಿದ್ದಾರಂತೆ, ಅವು ಇನ್ನೂ ಹಾಗೆ ಇವೆ. ಜಾಯಿಂಟ್ ರಿಜಿಸ್ಟ್ರಾರ್ ಆಫೀಸ್ ತೆಗೆದಿದ್ದಾರಂತೆ ಅವು ಇನ್ನೂ ಹಾಗೆ ಇವೆ. ಅವುಗಳನ್ನು ಎಲ್ಲಾ ತೆಗೆಯಿರಿ. ಇಮ್ಮೀಡಿಯೇಟ್ ಆಗಿ ನೀವು 70 ಪರ್ಸೆಂಟ್ ಕಡಿಮೆ ಮಾಡದಿದ್ದರೆ, ಇದು ಸುಮ್ಮನೆ ಬಜೆಟ್ ಆಗುತ್ತದೆ. ನಾವು ಯಾರೂ ಏನೂ ಮಾಡುವುದಕ್ಕಾಗುವುದಿಲ್ಲ, ಅವರು ಸತ್ಯಾಗ್ರಹ ಮಾಡುತ್ತಾರೆ ಮತ್ತೆ ಹೆಚ್ಚಿಗೆ ತೆಗೆದುಕೊಳ್ಳುತ್ತಾರೆ. ಇನ್ನು ಶಾಶ್ವತ ಅನುದಾನ ರಹಿತ ಶಾಲಾ ಕಾಲೇಜುಗಳು ಇವೆ. ದಯವಿಟ್ಟು ನಾನು ನಿಮಗೆ ಅವರ ಪರವಾಗಿ ಹೇಳುತ್ತಿದ್ದೇನೆ. ಇದ್ದ ನೌಕರದಾರರಿಗೆ ವೇತನವನ್ನು ಹೆಚ್ಚಿಸುವುದಕ್ಕಿಂತ ಅವರಿಗೆ ಒನ್‌ಟೈಮ್ ಕೊಟ್ಟು ಮುಗಿಸಿಬಿಡಿ. ಹಿಂದೆ ಯಾರೋ ಕೊಟ್ಟು ತಪ್ಪು ಮಾಡಿದ್ದಾರೆ, ಅದು ಏನಾಗಿದೆ ಎಂದರೆ, ಮೊನ್ನೆ ಕೆಲವು ಜನ ಹುಡುಗರು ನನ್ನ ಹತ್ತಿರ ಬಂದಿದ್ದರು. ನಾವು ಡೊನೇಶನ್ ಕೊಟ್ಟು ಅಲ್ಲಿದ್ದೇವೆ. ಏನು ಮಾಡಬೇಕೆಂದು ಅಂದರು. ಡೊನೇಶನ್ ಎಲ್ಲಿಂದ ಕೊಟ್ಟಿದ್ದೆ. ನಿಮ್ಮ ಅಪ್ಪನು ಕೊಟ್ಟನಾ ಎಂದು ಕೇಳಿದಾಗ, ನೀನು ಪ್ರಾಮಾಣಿಕವಾಗಿ ಹೇಳು ಎಂದಾಗ, ವರದಕ್ಷಿಣೆ ತೆಗೆದುಕೊಂಡಿದ್ದನ್ನು ತಂದು ಕೊಟ್ಟಿದ್ದಾರೆ. ರೈತನಿಗೆ ಮದುವೆ ಮಾಡಿ ಕೊಡುವುದಿಲ್ಲ. ಆ ಹೆಣ್ಣು ಮಕ್ಕಳೂ ಕೂಡ ನೌಕರಿ ಇದ್ದವರನ್ನು ಮಾಡಿಕೊಳ್ಳುತ್ತೇವೆಂದು ಹೇಳುತ್ತಾರೆ. ಇನ್ನು ಮುಂದೆ ಕೊಡುವುದನ್ನು ಬಿಟ್ಟುಬಿಡಿ, ಪಾಪ ಅವರು ಕಳೆದ 10–15 ವರ್ಷಗಳಿಂದ ದುಡಿಯುತ್ತಿದ್ದಾರೆ. 200–300 ಕೋಟಿ ರೂ.ಗಳು ಆಗಬಹುದು. ಆ ಶಾಶ್ವತ ಅನುದಾನ ರಹಿತ ಶಾಲೆಗಳಿಗೆ ಕೊಟ್ಟು ಮುಗಿಸಿಬಿಡಿ. ಮೊದಲು ಅನುಮತಿ

ಕೊಟ್ಟಿದ್ದೆ ತಪ್ಪು, ಅವರು ಆಕ್ಷೇಪಟ್ಟು ಹೋಗಿದ್ದಾರೆ. ಆ ಕಾರಣದಿಂದ ಮುಂದಿನ ವರ್ಷದಲ್ಲಾದರೂ ಕೂಡ ತಾವು ಬಜೆಟ್‌ನಲ್ಲಿ ಮಾಡಬೇಕೆಂದು ಹೇಳುತ್ತೇನೆ. 4 ಹೊಸ ಮೆಡಿಕಲ್ ಕಾಲೇಜುಗಳನ್ನು ತೆಗೆಯುತ್ತಾರೆ. ಇದಕ್ಕೆ ನಾವು ಹೇಳುವುದು, ಉತ್ತರ ಕರ್ನಾಟಕಕ್ಕೆ ಅನ್ಯಾಯವಾಗಿದೆ ಎಂದು, ನಮ್ಮ ಕೆಎಂಸಿ ಗೆ ಹೋಗಿ ಅದನ್ನು ನೋಡಿ, ಅದರಲ್ಲಿ ಏನಿದೆ ? ಏನಿಲ್ಲ. ಅಲ್ಲಿ 150 ರಿಂದ 50 ಕ್ಕೆ ಇಳಿಸಿದ್ದಾರೆ. ಇರುವುದು ಒಂದು ಮೆಡಿಕಲ್ ಕಾಲೇಜು ಇದೆ, ಇಳಿಯುತ್ತದೆ ಏರುತ್ತಿದೆ ಅದರ ಬಗ್ಗೆ ನಮಗೆ ಏನೂ ತಿಳಿಯುತ್ತಿಲ್ಲ. ಅಲ್ಲಿ ಹೋದರೆ ಯಾವ ಔಷಧಿ ಇರುವುದಿಲ್ಲ. ಅಲ್ಲಿ ಸರಿಯಾದ ವ್ಯವಸ್ಥೆ ಇಲ್ಲ, ದಯವಿಟ್ಟು ತಾವು ಆ ಕಡೆ ಕೂಡ ಗಮನವನ್ನು ಕೊಡಬೇಕು. ಕರ್ನಾಟಕ ಯುನಿವರ್ಸಿಟಿ ಬಹುಶಃ ಅದರ ಬಗ್ಗೆ ಹೇಳಿದ್ದಾರೆ, ಆ ಯುನಿವರ್ಸಿಟಿಗೆ ಹಣವೇ ಇಲ್ಲ, ಅಲ್ಲಿಗೆ ಹಣ ಇಲ್ಲದೆ ನೀವು ಹೊಸ ಹೊಸ ಯುನಿವರ್ಸಿಟಿಗಳನ್ನು ಮಾಡುವುದಕ್ಕೆ ಹೊರಟಿರುತ್ತಿರಿ. ಇದರಲ್ಲಿ ನಾವು ಪಕ್ಷಬೇಧವನ್ನು ಮರೆತು ಹೇಳುತ್ತೇವೆ. ಕರ್ನಾಟಕ ಯೂವನಿರ್ಸಿಟಿ ಮತ್ತು ಕೆಎಂಸಿ ಉತ್ತರ ಕರ್ನಾಟಕಕ್ಕೆ ಎರಡು ಅವಶ್ಯಕವಾಗಿರುವಂಥ ಎರಡು ಸಂಸ್ಥೆಗಳು ಅವುಗಳನ್ನು ನಾವು ವೀಕ್ ಮಾಡಿ ಇಟ್ಟರೆ ಏನು ಉಪಯೋಗ ? ಇದರ ಬಗ್ಗೆ ಪತ್ರಿಕೆಯಲ್ಲಿ ಬಂದಿದೆ, ಅವರು ಈಗಾಗಲೇ ಹೇಳಿದ್ದಾರೆ. ಇದರ ಬಗ್ಗೆ ನಾನೂ ಕೂಡ ಹೇಳಿದ್ದೇನೆ, ಹಣಕಾಸನ್ನು ನೀವು ಬಿಡುಗಡೆ ಮಾಡದಿದ್ದರೆ, ಕರ್ನಾಟಕ ಯೂನಿವರ್ಸಿಟಿ ಇವತ್ತು ಬಹಳ ಕಷ್ಟದ ಪರಿಸ್ಥಿತಿಯಲ್ಲಿದೆ ಎಂದು. ಈ ಕೆಎಂಸಿಯಲ್ಲಿರುವಂತಹ ಪರಿಸ್ಥಿತಿ ಇಡೀ ಉತ್ತರಕರ್ನಾಟಕಕ್ಕೆ ಇರುವುದು ಒಂದೇ ಒಂದು. ಅಲ್ಲಿಯೂ ಕೂಡ ಸರಿಯಾದಂತಹ ವ್ಯವಸ್ಥೆ ಇಲ್ಲ. ಆದರೆ ತಾವು ಇಲ್ಲಿ ಒಂದು ಮಾಡಿದ್ದೀರಿ, ಎಲ್ಲಾ ತಾಲ್ಲೂಕು ಆಸ್ಪತ್ರೆಗಳನ್ನು ಇವತ್ತು ಏರಿಸುತ್ತೇವೆಂದು ಅದಕ್ಕಾಗಿ ಹಣಕಾಸಿನ ನೆರವನ್ನು ಒದಗಿಸುತ್ತಿದ್ದೀರಿ, ನಿಜವಾಗಿಯೂ ತಮಗೆ ಅದಕ್ಕಾಗಿ ನಾನು ಅಭಿನಂದಿಸುತ್ತಿದ್ದೇನೆ.

ಛೇರ್ಮನ್ : ಮಾನ್ಯ ಪಾಟೀಲ್‌ರವರೆ, ತಾವು ಈಗಾಗಲೇ ಒಂದು ಗಂಟೆಗಳ ಕಾಲ ಮಾತನಾಡಿದ್ದೀರಿ, ಇನ್ನು ಮಾತನಾಡುವವರು ಬಹಳಷ್ಟು ಜನರು ಇದ್ದಾರೆ. ಆದಷ್ಟು ಬೇಗ ತಾವು ಮುಗಿಸಬೇಕು.

ಶ್ರೀ ಎಸ್.ಎಸ್. ಪಾಟೀಲ್ : ಇನ್ನು ನಾನು 5 ನಿಮಿಷದಲ್ಲಿ ಮುಗಿಸುತ್ತೇನೆ. ಅನಂತರ ಹೋಗೋಣ. 2 ಗಂಟೆಗೆ ಹೋಗೋಣ, ನನ್ನ ಭಾಷಣವು ಮುಗಿಯುತ್ತಾ ಬಂದಿದೆ, ಇನ್ನೇನು ನಾನು ಬಹಳ ಮಾತನಾಡುವುದಿಲ್ಲ.

ಛೇರ್ಮನ್ : ನೋ ಅಡ್ಜರ್ನ್‌ಮೆಂಟ್. ಸದನವನ್ನು ಅಡ್ಜರ್ನ್ ಮಾಡುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ನಾನು 5 ನಿಮಿಷದಲ್ಲಿ ಮುಗಿಸುತ್ತೇನೆ, ಉಳಿದವರು ಹಿಂದೆ ಮಾನ್ಯ ಮುಖ್ಯಮಂತ್ರಿಗಳ ಸಡಕ್ ಎಂಬ ಯೋಜನೆಯನ್ನು ಮಾಡಿ ಹಿಂದೆ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ. ಕೃಷ್ಣರವರು ಇದ್ದಾಗ ಎಲ್ಲರಿಗೂ ಒಂದೊಂದು ಕೋಟಿ ರೂಪಾಯಿಗಳನ್ನು ಕೊಡಿ ಎಂದು ಎಲ್ಲಾ ಶಾಸಕರುಗಳು ಕೇಳಿದ್ದೆವು ಜನರಲ್ ಆಗಿ ಮುಖ್ಯಮಂತ್ರಿಗಳ ನಿಧಿ ಎಂದು

ಹೇಳಿಬಿಟ್ಟರು. ದಯವಿಟ್ಟು ಆ ಸಡಕ್ ಎಂಬ ಯೋಜನೆಯನ್ನು ತರಬೇಕು, ಪ್ರಧಾನಮಂತ್ರಿಗಳ ಸಡಕ್ ಎಂಬ ಏನು ಯೋಜನೆ ಇದೆ. ಎಲ್ಲರೂ ಹೇಳಿದ ಹಾಗೆ ಎಲ್ಲಾ ಶಾಸಕರಿಗೂ ಇದೆ ಒಂದೊಂದು ಕೋಟಿ ರೂಪಾಯಿಗಳನ್ನು ಕೊಟ್ಟರೆ ಒಂದೊಂದು ರಸ್ತೆಗಳಾಗುತ್ತದೆ. ದಯುವಿಟ್ಟು ತಾವು ಅದನ್ನು ಮುಂದುವರಿಸಬೇಕೆಂಬ ಮಾತನ್ನೂ ಕೂಡ ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಬಹಳ ಮಹತ್ವವಾದಂತಹ ಕಳಸಾ ಬಂಡೂರಿ ನಾಲೆ ಇದರ ಬಗ್ಗೆ ತಮಗೆಲ್ಲರಿಗೂ ಗೊತ್ತಿದೆ, ಇದರ ಬಗ್ಗೆ ಬಹಳ ಹೋರಾಟವಿದೆ, ದಯವಿಟ್ಟು ಅದರ ಬಗ್ಗೆ ಇಬ್ಬರು ಮುಖ್ಯಮಂತ್ರಿಗಳು ಹಾಗೂ ಉಪಮುಖ್ಯಮಂತ್ರಿಗಳು ಸೇರಿಕೊಂಡು ಆ ಬಗ್ಗೆ ಕೂಡಲೇ ಕ್ರಮವನ್ನು ಕೈಗೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಇನ್ನು ಜನತಾ ಮನೆಗಳ ಬಗ್ಗೆ ಹೇಳುವುದಾದರೆ, ಬಹುಶಃ ಅದಕ್ಕಾಗಿ 20 ಸಾವಿರ ರೂಪಾಯಿಗಳನ್ನು ಇಟ್ಟಿರುವುದು ಸಾಕಾಗುವುದಿಲ್ಲ. ಸುಮ್ಮನೆ ಆ ರೀತಿ ಹಣವನ್ನು ಕೊಟ್ಟರೆ ಮನೆಗಳು ಸರಿಯಾಗುವುದಿಲ್ಲ. ಸುಮ್ಮನೆ ಆ ಮನೆಗಳು ಬಿದ್ದುಹೋಗುತ್ತವೆ, ಆ ಕಾರಣದಿಂದಾಗಿ ನಾನು ಏನು ಹೇಳುತ್ತೇನೆಂದರೆ, ಇನ್ನಷ್ಟು ಅವರಿಗೆ 11 ಲಕ್ಷ ಮನೆಗಳು ಕಟ್ಟಬೇಕೆಂದು ಏನಿಲ್ಲ, ದೊಡ್ಡ ಸಾಧನೆ ಎಂದು ಹೇಳುವುದಕ್ಕೆ ಹೋಗಿ11 ಲಕ್ಷ ಮನೆಗಳನ್ನು ಕಟ್ಟುವ ಬದಲು 5 ಲಕ್ಷ ಮನೆಗಳನ್ನು ಕಟ್ಟಿಹೋಗಿದ್ದಾರೆ. ನನ್ನ ಪ್ರಕಾರ ಕೇಳಿದರೆ ಬಹಳ ಮುಗಿದುಹೋಗಿದೆ. ಅಣ್ಣತಮ್ಮಂದಿರು ವ್ಯಾಜ್ಯ ಮಾಡಿಕೊಂಡು ಕೊಡುತ್ತಿದ್ದಾರೆ. ಅದೇ ಈಗ ನಡೆದಿರುವುದು. ನೀವು ಹೋಗಿ ನೋಡಿ. ವರ್ಷಕ್ಕೆ 5 ಲಕ್ಷ ಮನೆಗಳನ್ನು ಕಟ್ಟಿದರೆ ಸಾಕು, ಅದೇ ಇವತ್ತು 20 ಸಾವಿರ ರೂ ದಿಂದ ಕನಿಷ್ಟ 30 ಸಾವಿರ ರೂಗೆ ಏರಿಸಬೇಕು. 25 ಸಾವಿರ ರೂಗಳಾದರೂ ಸಹ ಮನೆಯಾಗುತ್ತದೆ, 30 ಸಾವಿರ ರೂ. ಕೊಟ್ಟರೆ ಒಳ್ಳೆಯ ಮನೆ ಅಂದರೆ ಸ್ಲಂಬೋರ್ಡಿನವರು ಏನು ಕಟ್ಟಿಕೊಡುತ್ತಾರೆ ಆರ್‌ಸಿಸಿ ಮನೆ, ಆ ತರಹ ಕಟ್ಟಿಕೊಡಿ. ನಮ್ಮ ಮುಂಡರಗಿಯಲ್ಲಿ ಮೊನ್ನೆ ತಗಡನ್ನು ಹಾಕಿ ಮನೆ ಕಟ್ಟಿದ್ದಕ್ಕೆ ಗಾಳಿ ಬಂದು ಅವೆಲ್ಲವೂ ಹಾರಿಹೋಗಿದೆ. ಹೀಗಾದರೆ ಜನರು ಏನು ಮಾಡಬೇಕು ? ಆ ಕಾರಣದಿಂದಾಗಿ ಅದನ್ನೂ ಕೂಡ ಇವತ್ತು ತಾವು ಏರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ರಸ್ತೆಗಳ ರಿಪೇರಿಯು ಬಗ್ಗೆ ಹೇಳುವುದಾದರೆ, ಜಿಲ್ಲಾ ಪಂಚಾಯತ್‌ನವರಿಗೆ ಅದರ ಬಗ್ಗೆ ಲಕ್ಷ್ಯವೇ ಇಲ್ಲ. ಇನ್ನೊಂದು ನಮ್ಮ ಹಣೆಬರಹವೇನೆಂದರೆ, ನಮ್ಮ ಶಾಸಕರದ್ದು ಇದರಲ್ಲಿ ಎಲ್ಲಾ ಶಾಸಕರ ಅನುಭವವಿದೆ, ಅನುದಾನವಿರಲಿ, ಜಿಲ್ಲಾ ಪಂಚಾಯತ್ ಮೆಂಬರ್‌ಗೆ ಟೌನ್‌ನಲ್ಲಿರುವಂತಹ ರಸ್ತೆಗಳು ಬಗ್ಗೆ ಅವರಿಗೆ ಅರಿವೇ ಬರುವುದಿಲ್ಲ. ರೂರಲ್ ರಸ್ತೆಗಳು ಅವರಿಗೇ ಇರುವುದು, ಅವರುಗಳು ತಮ್ಮ ಮತ ಎಲ್ಲಿದೆಯೋ ಅಲ್ಲಿಗೆ ಹಾಕಿಕೊಂಡುಬಿಡುತ್ತಾರೆ. ನಮ್ಮ ಶಾಸಕರನ್ನು ಯಾರೂ ಕೂಡ ಕೇಳುವುದೇ ಇಲ್ಲ. ಅವು ಸಿಟಿ ಪ್ರದೇಶದಲ್ಲಿರುವಂತಹ ರಸ್ತೆಗಳು ನಾನು ರೂರಲ್ ರಸ್ತೆಯ ಬಗ್ಗೆ ಹೇಳುತ್ತಿರುವುದು. ಅವು ಯಾವುದಕ್ಕೂ

ಕೂಡ ಬರದಾಗಿದೆ. ಜಿಲ್ಲಾ ಪಂಚಾಯತ್‌ನಲ್ಲಿ ಅದಕ್ಕೆ ಯಾವುದೇ ಹಣವನ್ನೂ ಇಡುವುದಿಲ್ಲ. ಅವರುಗಳು ಶಾಸಕರನ್ನು ಕೇಳುವುದೇ ಇಲ್ಲ. ಅಂತಹ ಸ್ಥಿತಿ ಇವತ್ತು ನಿರ್ಮಾಣವಾಗಿದೆ. ಆ ರಸ್ತೆಗಳ ರಿಪೇರಿಯ ಬಗ್ಗೆಯೂ ಕೂಡ ತಾವು ಹೇಳಬೇಕು.

ಇನ್ನು ನಾನು ಈ ಮಿತವ್ಯಯದ ಬಗ್ಗೆ ಹೇಳುವುದಾದರೆ ಮಾನ್ಯ ಸಿದ್ಧರಾಮಯ್ಯನವರೆ, ದಯವಿಟ್ಟು ನಾನು ಒಂದೆರಡು ನಮ್ಮ ಬಗ್ಗೆ ಹೇಳಿಕೊಂಡುಬಿಡುತ್ತೇನೆ, ನಮ್ಮ ಶಾಸಕರ ಭವನ ಇದೆಯಲ್ಲಾ ಅಲ್ಲಿ ನಾವು ಹೋಗುವುದಕ್ಕೆ ಮುಂಚೆ ಅಲ್ಲಿ ಬಕೀಟುಗಳು ಇದ್ದವು, ಎಲ್ಲಾ ಇತ್ತು. ಅವುಗಳನ್ನೆಲ್ಲವನ್ನೂ ಮಾರಿಬಿಟ್ಟಿದ್ದಾರೆ. ಅವು ಏನಾಗಿತ್ತು, ಫಸ್ಟ್‌ಕ್ಲಾಸ್ ಬಕೇಟ್ ಇದ್ದುದ್ದನ್ನು ಬಿಟ್ಟು ಸುಡುಗಾಡು ಬಕೀಟನ್ನು ತಂದು ಇಟ್ಟಿದ್ದಾರೆ. ಖರೀದಿ ಮಾಡಿ ತಂದಿದ್ದಾರೆ. ಇದನ್ನು ಯಾರು ಮಾಡಿದ್ದಾರೆ ? ಇದನ್ನು ಯಾರು ನೋಡುವವರು? ಎಲ್ಲಾ ಬಕೀಟುಗಳನ್ನು ಕೊಟ್ಟು ಹೋಗಿದ್ದರು ಕೂಡ ಮತ್ತೆ ಇವರಿಗೆ ಬರುತ್ತದೆ. ಅವುಗಳೆಲ್ಲಾ ಈ ಕರ್ಟನ್‌ಗಳು ಇದೆಯಲ್ಲಾ ಅವನ್ನು ತೆಗೆಯುವುದು ಬೇಕಾಗಿಲ್ಲ. ಅದನ್ನೇ ಇಸ್ತ್ರೀ ಮಾಡಿ ಹಾಕಿದರೆ ಸಾಕು. ಅವನ್ನೂ ಕೂಡ ಹೊಸದಾಗಿ ಖರೀದಿ ಮಾಡಿದ್ದಾರೆ. ಅನಂತರ ಪ್ರತಿಯೊಬ್ಬ ಮಂತ್ರಿಗಳ ಮನೆಗೆ 5–6 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಏತಕ್ಕಾಗಿ ಕೊಡಬೇಕು ಸಿದ್ಧರಾಮಯ್ಯನವರೇ ? ಹಿಂದೆ ಇರುವಂತಹದ್ದು ಎಲ್ಲಾ ಅಲ್ಲಿ ಇದೆ. ಮಂತ್ರಿಗಳ ಮನೆಯಲ್ಲಿರುವುದನ್ನು ಕರ್ಟನ್‌ಗಳನ್ನು ಅದನ್ನೇ ಇಸ್ತ್ರಿ ಮಾಡಿ ಹಾಕಿದರೆ ನಡೆಯುತ್ತದೆ. ಅದಕ್ಕಾಗಿ 5 ಲಕ್ಷ ರೂಪಾಯಿಗಳನ್ನು ಕಂಪಲ್‌ಸರಿಯಾಗಿ ಇಟ್ಟಿದ್ದಾರೆ. ಹೊಸ ಮಂತ್ರಿ ಮಂಡಲ ಬಂದ ಕೂಡಲೇ ಮಾಡಿದ್ದಾರೆ, ಇವತ್ತು ನಾನು ಶಾಸಕರ ಭವನವನ್ನು ನೋಡುತ್ತೇನೆ, ಒಂದೊಂದೇ ಬಕೀಟನ್ನು ಇಟ್ಟಿದ್ದಾರೆ. ಕಬ್ಬಿಣದ ಬಕೀಟು ಮತ್ತು ಇತರ ಬಕೀಟು ಎರಡು ಹೊಸದಾಗಿರುವಂತಹ ಬಕೀಟುಗಳು ದ್ದವು. ನಾನು ಹೋಗುವಾಗ ಚಾರ್ಜ್ ಕೊಟ್ಟು ಹೋಗಿದ್ದೆ. ಇವತ್ತು ಮತ್ತೆ ಯಾವುದೋ ಹೊಸದಾಗಿ ತಂದು ಇಟ್ಟಿದ್ದಾರೆ. ಏಕೇ ಮಾಡಿದ್ದೀರಿ ? ಇದನ್ನು ಯಾರೂ ಕೇಳುವವರು ಇಲ್ಲ. ಈ ಖರೀದಿಯೊಳಗೆ ಭಾರಿ ಅವ್ಯವಹಾರ ನಡೆದಿದೆ. ಈ ರಾಜ್ಯದಲ್ಲಿ ಬೇಕಾದ ಹಾಗೆ ಅದರೊಳಗೆ ನೂರಾರು ಕೋಟಿ ರೂಪಾಯಿಗಳನ್ನು ನಾವು ಉಳಿಸಿಕೊಳ್ಳಬಹುದು. ಇದು ಇಂತಹ ಪರಿಸ್ಥಿತಿ ಎಲ್ಲಾ ಇಲಾಖೆಯಲ್ಲಿಯೂ ಕೂಡ ಈ ಉಳಿತಾಯದ ಬಗ್ಗೆ ತಾವು ಲಕ್ಷ್ಯವನ್ನು ಹಾಕಿರಿ. ನೀವು ಹಿಂದೆ ರಾಣಿಬೆನ್ನೂರಿಗೆ ಬಂದಾಗ ಯಾರೋ ಒಬ್ಬ ತಂದು ಎಸಿಯನ್ನು ಇಟ್ಟಿದ್ದ, ಅದನ್ನು ಹಾಕುವುದಕ್ಕೆ ಸಸ್ಪೆಂಡ್ ಮಾಡುತ್ತೇನೆಂದು ಹೇಳಿ ಬಂದಿದ್ದೀರಿ, ನಾವು ಹಳ್ಳಿಗಳಲ್ಲಿ ಇದರಲ್ಲಿಯೇ ಮಲಗುತ್ತೇವಾ ? ಇದು ಏತಕ್ಕಾಗಿ ಬೇಕು ? ಇದನ್ನು ಏತಕ್ಕಾಗಿ ಖರೀದಿ ಮಾಡಿದ್ದೀರಿ ಎಂದು ಬೈದು ಬಂದಿದ್ದೀರಿ. ಇಂತಹವುಗಳು ನಡೆಯುತ್ತವೆ, ಮಂತ್ರಿಗಳ ಮನೆಗೆ 5 ಲಕ್ಷ ರೂಪಾಯಿಗಳು ಕಂಪಲ್‌ಸರಿಯಾಗಿ ಖರ್ಚು ಹಾಕುವುದು. ಮಂತ್ರಿಯ ಬದಲಾಗಿ ಮಾನ್ಯ ಸಿದ್ಧರಾಮಯ್ಯನವರು ಆ ಮನೆಗೆ ಹೊಸದಾಗಿ ಹೋದರೆ ಅದಕ್ಕೆ 5 ಲಕ್ಷ ರೂಪಾಯಿಗಳು ಖರ್ಚು ಬೀಳುತ್ತದೆ. ಏತಕ್ಕೆ ಬೀಳಬೇಕು ? ಅದೇ ಪರದೆಯನ್ನು

ಇಸ್ತ್ರಿ ಮಾಡಿ ಹಾಕಿ, ಆ ಕರ್ಟನ್‌ಗಳು ಏನಾಗಿದೆ, ಈಗ ನಮ್ಮ ಶಾಸಕರ ಭವನದಲ್ಲಿ ನೋಡಿದ್ದೇನೆ. ಒಂದೇ ಒಂದು ಬಕೀಟನ್ನು ಇಟ್ಟಿದ್ದಾರೆ. ಇನ್ನು ಖರೀದಿಯೇ ಆಗಿರುವುದಿಲ್ಲ ಎಂದು ಹೇಳುತ್ತಾರೆ. ಹಿಂದಿನವುಗಳನ್ನು ಎಲ್ಲಿ ಹೋಯಿತು ಎಂದು ಕೇಳಿದರೆ, ಎಲ್ಲಿ ಹೋಗಿದೆ ಎಂದು ಹೇಳುವುದಿಲ್ಲ. ನನ್ನ ರೂಮಿನಲ್ಲಿ ಕಬ್ಬಿಣದ ಫಸ್ಟ್‌ಕ್ಲಾಸ್ ಬಕೀಟು ಇತ್ತು, ನನ್ನ ಎರಡು ರೂಮಿನಲ್ಲಿ ಒಟ್ಟು 4 ಬಕೀಟುಗಳು ಇದ್ದವು, ಅಷ್ಟನ್ನೂ ಚಾರ್ಜ್ ಕೊಟ್ಟು ಬಂದಿದ್ದೆ. ಸ್ಟೀಲ್‌ನವು ಇದ್ದವು, ಅವುಗಳೆಲ್ಲವೂ ಎಲ್ಲಿಗೆ ಹೋದವು. ಎಲ್ಲವನ್ನೂ ಮಾರಿಬಿಟ್ಟಿದ್ದಾರೆ. ಯಾರು ಮಾರಿದರು ? ಇವೆಲ್ಲಾ ಹಗರಣಗಳ ಬಗ್ಗೆ ವಿಚಾರಣೆಯಾಗಬೇಕು ಮಾನ್ಯ ಸಿದ್ಧರಾಮಯ್ಯನವರೆ, ಎಲ್ಲಾ ಹಂತದಲ್ಲಿರುವವರು ಇದ್ದಾರೆ. ಈ ಎಲ್ಲಾದರ ಬಗ್ಗೆಯೂ ವಿಚಾರಣೆಯಾಗಬೇಕು. ಸುಮ್ಮನೆ ನಾವು ಏನಾದರೂ ಮಾತನಾಡುವುದು. ಸರ್ಕಾರದ ಲೆವೆಲ್ ಮೇಲೆ ಇಂತಹ ಸೋರಿಕೆಯನ್ನು ನಿಲ್ಲಿಸಿದರೆ ಸಾಕು ಸಿದ್ಧರಾಮಯ್ಯನವರೆ, ದಯವಿಟ್ಟು ನಿಮಗೆ ಸಾವಿರ ಕೋಟಿ ರೂಪಾಯಿಗಳು ಸಿಗುತ್ತದೆ. ಈಗ ಏನು ಕೆಲವರು ಸಂಶಯವನ್ನು ಮಾಡಿಕೊಂಡಿದ್ದಾರಲ್ಲಾ ನಮ್ಮ ವಿರೋಧಪಕ್ಷದ ನಾಯಕರ ಆ ಸಂಶಯಗಳೆಲ್ಲವೂ ನಿವಾರಣೆಯಾಗಿ ನಾವು ಇನ್ನೂ ಹೆಚ್ಚು ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆನ್ನುವಂತಹ ಮಾತನ್ನು ಹೇಳುತ್ತೇನೆ.

ಇನ್ನು ನನ್ನದೊಂದು ಸ್ವಾರ್ಥದ ಬಗ್ಗೆ ಹೇಳುವುದಾದರೆ, ನಮ್ಮ ಪ್ರಕಾಶ್‌ರವರು ಮಂತ್ರಿಗಳಾಗಿದ್ದಾರೆ. ನಮ್ಮ ಹುಲಿಗುಡ್ಡಕ್ಕೆ ಏನು ಏನೇನು ಇಟ್ಟಿದ್ದಾರೋ ಏನೂ ರೊಕ್ಕವೋ ಏನು ಕೇಳಿದೆ. ಮಾನ್ಯ ಸಿದ್ಧರಾಮಯ್ಯನವರೆ, ದಯವಿಟ್ಟು ಈ ವರ್ಷ ನಮಗೆ 50 ಕೋಟಿ ರೂಪಾಯಿಗಳನ್ನು ನಮಗೆ ಕೊಡಬೇಕು. ನಿನ್ನೆ ಮಾತನಾಡಿ ಬಂದಿದ್ದೇನೆ. ನಾವು ಎರಡು ಕಡೆ ಮೋಟಾರನ್ನು ಕೂರಿಸಿಕೊಂಡು ಬಿಟ್ಟರೆ 50 ರಿಂದ 60 ಕೋಟಿ ರೂಪಾಯಿಗಳಲ್ಲಿ ನಾಳೇ ನೀರನ್ನು ಚಾಲೋ ಮಾಡಬಹುದು. ನಾನು ಕೇಳಿಕೊಂಡು ಬಂದಿದ್ದೇನೆ. ದಯವಿಟ್ಟು ಮಾನ್ಯ ಪ್ರಕಾಶ್‌ರವರೇ, ತಾವು ಕ್ಯಾಬಿನೆಟ್‌ನಲ್ಲಿದ್ದೀರಿ, ಸಿದ್ಧರಾಮಯ್ಯನವರು ಇದ್ದಾರೆ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇದ್ದಾರೆ. ಅದು ಬರದಲ್ಲಿ ಪ್ರದೇಶವಾಗಿದೆ, ನಿಮಗೆ ತೊಂದರೆಯಾಗದಂತೆ ನಾವು ನೀರನ್ನು ತೆಗೆದುಕೊಳ್ಳುತ್ತೇವೆ. ನಿನಗೆ ತೊಂದರೆಯಾಗದಂತೆ (ಬಾದರ್ಲಿಹಂಪನಗೌಡ) ನೀರು ತೆಗೆದುಕೊಳ್ಳುತ್ತೇವೆ ನೀನು ಸುಮ್ಮನಿರಪ್ಪ. ನಿಮಗೆ ಏನು ಅನ್ಯಾಯವಾಗದ ಹಾಗೆ ಏನು ನೋವು ಆಗದ ಹಾಗೆ ನಾವು ಒಂದು ಹೊತ್ತು ಅನ್ನವನ್ನು ಉಣ್ಣುತ್ತೇವೆ.

ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು) : ಮಾನ್ಯ ಛೇರ್ಮನ್‌ರವರೆ, ದಯವಿಟ್ಟು ಮಾನ್ಯ ಪಾಟೀಲರೆ, ತಾವು ಯೀಲ್ಡ್ ಆದರೆ ನನಗೆ ಒಂದಿಷ್ಟು ಹೇಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ : ಬೇಡ ನಾನು ಈಲ್ಡ್ ಆಗುವುದಿಲ್ಲ. ತಾವು ಕೂರಿ. ನಾನು ಯೀಲ್ಡ್ ಆಗುವುದಿಲ್ಲ.

ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು) : ಮಾನ್ಯ ಛೇರ್ಮನ್‌ರವರೆ, ಮಾನ್ಯ ಎಸ್.ಎಸ್. ಪಾಟೀಲರು ಸಿಂಗಟಾಲೂರು ಯೋಜನೆಯ ಬಗ್ಗೆ ಮಾತನಾಡುತ್ತಾರೆ. ಇದು ನಮ್ಮ ಎಡದಂಡೆ ನಾಲೆಗೂ ಕೂಡ ಬಳ್ಳಾರಿ, ರಾಯಚೂರು, ಕೊಪ್ಪಳ ಜಿಲ್ಲೆಗೆ ಸಂಬಂಧಪಟ್ಟಿರತಕ್ಕಂತಹ ವಿಚಾರವಾಗಿದೆ. ಆ ಯೋಜನೆಯನ್ನು ಪ್ರಾರಂಭ ಮಾಡಬೇಕಾದರೆ ಕೆಲವೊಂದು ಷರತ್ತುಗಳನ್ನು ಹಿಂದಿನ ನೀರಾವರಿ ಮಂತ್ರಿಗಳು ಇಂದಿನ ಮುಖ್ಯ ಮಂತ್ರಿಗಳು ಸುಮಾರು ಹತ್ತಾರು ಸಭೆಗಳನ್ನು ಕರೆದು ಕೆಲವೊಂದು ವಿಚಾರಗಳನ್ನು ಚರ್ಚೆ ಮಾಡಿ ನಾವು ಕೊಟ್ಟಂತಹ ಕೆಲವು ಸಲಹೆಗಳನ್ನು ಕೊಟ್ಟಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್ : ಎಲ್ಲವನ್ನೂ ಮಾಡೋಣ.

ಶ್ರೀ ಬಾದರ್ಲಿ ಹಂಪನಗೌಡ : ದಯವಿಟ್ಟು ಸ್ವಲ್ಪ ಈಗಲೂ ತಾವು ಅವಕಾಶವನ್ನು ಕೊಡಲಿಲ್ಲವೆಂದರೆ ಹೇಗೆ ? ತಾವು ಸ್ವಲ್ಪ ಯೀಲ್ಡ್ ಆಗಬೇಕು.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಛೇರ್ಮನ್‌ರವರು ನನಗೆ ಮಾತನಾಡುವ ಬಗ್ಗೆ ಟೈಮ್‌ನ್ನು ಕೊಟ್ಟಿದ್ದಾರೆ. ನಾನು ಯೀಲ್ಡ್ ಆಗುವುದಕ್ಕೆ ತಯಾರಿದ್ದೇನೆ.

ಶ್ರೀ ಬಾದರ್ಲಿ ಹಂಪನಗೌಡ : ಇಂದಿನ ಮುಖ್ಯಮಂತ್ರಿಗಳು ಮತ್ತು ಹಿಂದಿನ ಭಾರಿ ನೀರಾವರಿ ಸಚಿವರು ಕೆಲವೊಂದು ನಾವು ಹೋರಾಟ ಸಮಿತಿಯ ಮೂಲಕ ಸಲಹೆಗಳನ್ನು ಏನು ಕೊಟ್ಟಿದ್ದೆವು, ಆ ಸಲಹೆಗಳನ್ನು ಈ ವರ್ಷದ ಆಯವ್ಯಯದಲ್ಲಿ ಸೇರಿಸಿ ಆ ಕೆಲಸವನ್ನು ಪ್ರಾರಂಭ ಮಾಡಬೇಕು. ಮತ್ತು ಬಚಾವತ್ ಅವಾರ್ಡ್ ಏನಿದೆ, ಆ ಅವಾರ್ಡ್‌ನಲ್ಲಿ ಕೊಟ್ಟಿರತಕ್ಕಂತಹ 7 ಟಿಎಂಸಿ ನೀರನ್ನು ಮಾತ್ರ ಉಪಯೋಗ ಮಾಡಿಕೊಳ್ಳಬೇಕೆಂಬ ಆ ವಿಚಾರವನ್ನು ನಾವು ವ್ಯಕ್ತಪಡಿಸಿದಾಗ ಅದಕ್ಕೆ ಒಪ್ಪಿಗೆಯನ್ನು ಸೂಚಿಸಿದೆವು. ಇವತ್ತು ಪರಿಸ್ಥಿತಿ ಏನಾಗಿದೆ ಎಂದರೆ, 18 ಟಿಎಂಸಿಗೆ ಮತ್ತೇ ಅದೇ ರೀತಿಯಾಗಿ ಪುನಃ ಸರ್ಕಾರದಿಂದ ಆದೇಶವಾಗಿದೆ. ಅದನ್ನು ರದ್ದುಪಡಿಸಬೇಕು. ಅದನ್ನು 7 ಟಿಎಂಸಿ ಮಾಡಬೇಕು. ನಾವು ಕೊಟ್ಟಿರತಕ್ಕಂತಹ ಸಲಹೆಗಳನ್ನು ಸರ್ಕಾರ ಈ ವರ್ಷದ ಆಯವ್ಯಯದಲ್ಲಿ ಸೈಮಲ್‌ಟೆನೀಯಸ್ ಆಗಿ ಸೇರಿಸಿದರೆ ಕೆಲಸವನ್ನು ಚಾಲೋ ಮಾಡಿದರೆ ನಮದೇನೂ ತಕರಾರು ಇಲ್ಲ. ಅದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ, ಉಪ ಮುಖ್ಯಮಂತ್ರಿಗಳಲ್ಲಿ ಮತ್ತು ಬಳ್ಳಾರಿ ಜಿಲ್ಲೆಯ ಕಂದಾಯ ಸಚಿವರಲ್ಲಿ ನಾನು ವಿನಂತಿಸಿಕೊಳ್ಳುತ್ತೇನೆ. ನಮ್ಮ ಭಾಗದ ರೈತರಿಗೆ ಅನ್ಯಾಯವಾಗಲಾರದ ಹಾಗೆ ಆ ಯೋಜನೆಯನ್ನು ಮಾಡಿದರೆ ನಮ್ಮದೇನೂ ತಕರಾರು ಇಲ್ಲ. ಆದರೆ ನಮ್ಮ ಭಾಗದ ರೈತರಿಗೆ ತಾವು ಏನಾದರೂ ಇದರಲ್ಲಿ ಹೆಚ್ಚು ಕಡಿಮೆ ಮಾಡಿ ಅನ್ಯಾಯವನ್ನು ಮಾಡಿದರೆ ಹಿಂದೆ ಯಾವ ರೀತಿ ಅಲ್ಲಿ ದೊಡ್ಡ ಹೋರಾಟಗಳೇ ಆಗಿವೆ, ಮತ್ತೆ ಪುನಃ ಅದೇ ರೀತಿಯಾಗಿ ಹೋರಾಟವಾಗುತ್ತದೆ.

ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಛೇರ್ಮನ್‌ರವರೆ, ಸಿಂಗಟಾಲೂರು ಏತ ನೀರಾವರಿಯೊಳಗಡೆ ರಾಯಚೂರು ಮತ್ತು ಬಳ್ಳಾರಿ

ಜಿಲ್ಲೆಯವರು ವಿರೋಧ ಮಾಡಿದರು ಎಂದು ಹೇಳಿ ಕೆ.ಸಿ. ರೆಡ್ಡಿ ಕಮಿಟಿಯನ್ನು ಮಾಡಿದರು. ಅವರು ಏನು ವರದಿಯನ್ನು ಕೊಟ್ಟಿದ್ದಾರೆ ಆ ವರದಿಯ ಮೇಲೆ ಸರ್ಕಾರದ ಆದೇಶವಾಗಿದೆ, ತಮ್ಮೆಲ್ಲರ ಜೊತೆಗೆ ಇದರ ಬಗ್ಗೆ ಚರ್ಚೆ ಮಾಡಿ ತಮ್ಮ ತಮ್ಮ ಸಲಹೆ ಮತ್ತು ಸೂಚನೆಗಳನ್ನು ಅಳವಡಿಸಿಕೊಂಡೇ ಸರ್ಕಾರದಿಂದ ಆದೇಶವಾಗಿದೆ. 18 ಟಿಎಂಸಿ ನೀರನ್ನು ತೆಗೆದುಕೊಳ್ಳುತ್ತೇವೆಂದು ಅದರಲ್ಲಿ ಎಲ್ಲಿಯೂ ಇಲ್ಲ. ದಯವಿಟ್ಟು ತಾವು ತಪ್ಪು ಕಲ್ಪನೆಯನ್ನು ಜನರಿಗೆ ಕೊಡುವುದು ಬೇಡ. ನಿಮಗೆ ತೊಂದರೆಯಾಗದ ಹಾಗೆ ಹೇಳಬೇಕು. ನಿಮಗೊಂದು ಎರಡು ಬ್ಯಾಲೆನ್ಸಿಂಗ್ ರಿಸರ್‌ವಾಯರ್ ಬೇಕು, ಅದರ ಬಗ್ಗೆ ಹೇಳಿ. ನೂರಾರು ಟಿಎಂಸಿ ನೀರು ಓವರ್ ಫ್ಲೋ ಆಗಿ ಹೋಗುತ್ತಿದೆ.

ಶ್ರೀ ಬಾದರ್ಲಿಹಂಪನಗೌಡ : ತಾವೂ ಕೂಡ ಆ ಸಭೆಯಲ್ಲಿದ್ದೀರಿ, ಇವರೂ ಇದ್ದರು, ಅವರು ಹೇಳಿರತಕ್ಕಂತಹದ್ದು ರೈಟಿಂಗ್‌ನಲ್ಲಿ ನಾವು ಬರೆದುಕೊಟ್ಟಿದ್ದೇವೆ.

(ಗೊಂದಲ)

ಶ್ರೀ ಡಿ.ಆರ್. ಪಾಟೀಲ್ : ಪ್ರಕಾಶ್ ಸಾಹೇಬರು.....

ಛೇರ್ಮನ್ : ಮಾನ್ಯ ಪಾಟೀಲರವರೆ, ತಾವು ಮುಂದುವರೆಸಿ.

ಶ್ರೀ ಎಸ್.ಎಸ್. ಪಾಟೀಲ್ : ಇನ್ನು ಮಹಿಳೆಯರ ಶೌಚಾಲಯದ ಬಗ್ಗೆ ಹೇಳುವುದಾದರೆ ಮಾನ್ಯ ಪ್ರಕಾಶ್‌ರವರು ಇಲ್ಲಿಯೇ ಇದ್ದಾರೆ. ಈ ಮಹಿಳೆಯರ ಶೌಚಾಲಯದ ಬಗ್ಗೆ ನಾವು ಹೀಗೆಯೇ ಹೇಳಿದರೆ ಆಗುವುದಿಲ್ಲ. ಪಂಚಾಯಿತಿಯವರಿಗೆ ಹೇಳಿದರೂ ಕೂಡ ಅವರು ಮಾಡುತ್ತಿಲ್ಲ. ದಯವಿಟ್ಟು ತಾವು 5 ಲಕ್ಷ ರೂಪಾಯಿಗಳನ್ನು ಕೊಡುತ್ತೀರಲ್ಲಾ, ಹಾಗೆಯೇ ಕೊಟ್ಟಂತಹ ಹಣಕ್ಕೆ ಒಂದೆರಡು ಕಂಡೀಷನ್‌ಗಳನ್ನು ಹಾಕಿಬಿಟ್ಟರೆ ಆಗ ಎಲ್ಲಾ ಊರಿನಲ್ಲಿಯೂ ಶೌಚಾಲಯಗಳು ಆಗಿಬಿಡುತ್ತದೆ. ಶೌಚಾಲಯಗಳನ್ನು ಮಾಡಬೇಕೆಂದು ಹೇಳಿ 5 ಲಕ್ಷ ರೂಪಾಯಿಗಳನ್ನು ಕೊಡುತ್ತೀರಲ್ಲಾ, ಅದರ ಬಗ್ಗೆ ಆದೇಶವನ್ನು ಮಾಡಿಬಿಡಿ ಎಲ್ಲವೂ ಸರಿಯಾಗಿಬಿಡುತ್ತದೆ. ಇದರ ಬಗ್ಗೆ 25–30 ವರ್ಷಗಳಿಂದ ಹೇಳುತ್ತಾ ಬಂದಿದ್ದೇವೆ. ಮತ್ತೆ ಅದು ಹಾಗೆಯೇ ಆಗುತ್ತದೆ. ಆ ಕೆಲಸವನ್ನೂ ತಾವು ಕೂಡ ಮಾಡಬೇಕಾಗುತ್ತದೆ. ಇನ್ನು ಮಾನ್ಯ ಸಿದ್ಧರಾಮಯ್ಯನವರಿಗೆ ನಾನೂ ಕೂಡ ವಿನಂತಿಯನ್ನು ಮಾಡಿಕೊಳ್ಳುತ್ತೇನೆ, ಮಾನ್ಯ ಮುಖ್ಯಮಂತ್ರಿಗಳೂ ಕೂಡ ಇದ್ದಾರೆ, ಹಿಂದಿನ ಮುಖ್ಯಮಂತ್ರಿಗಳೂ ಕೂಡ ಹೇಳಿದ್ದರು. ಈ ಶಾಸಕರ ಅನುದಾನದ ಬಗ್ಗೆ ಎಲ್ಲಾ ಶಾಸಕರಿಗೂ ಒಮ್ಮತದ ಅಭಿಪ್ರಾಯವಿದೆ. ಏಕೆಂದರೆ ಲೋಕಸಭಾ ಸದಸ್ಯರು ಅಲ್ಲೆಲ್ಲಾ ಅಡ್ಡಾಡಿಕೊಂಡು ಅವರಿಗೆ ಕೊಟ್ಟುಕೊಳ್ಳುತ್ತಾ ಹೋಗುತ್ತಾರೆ. ನಮಗೆ ಏನೂ ಇಲ್ಲ. ಎಲ್ಲಾ ನಾವು ಬೈಸಿಕೊಳ್ಳುವವರಾಗಿದ್ದೇವೆ. ಆ ದೃಷ್ಟಿಯಿಂದ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಇದರ ಬಗ್ಗೆ ಬಜೆಟ್‌ನಲ್ಲಿ ಹೊಂದಿಸಿ ದಯವಿಟ್ಟು 50 ಲಕ್ಷ ರೂಪಾಯಿಗಳನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಛೇರ್ಮನ್ : ಎಷ್ಟು ಹಣ ಬೇಕೆಂದು ತಾವು ಸ್ಪಷ್ಟವಾಗಿ ಹೇಳಿ, ಎಲ್ಲರ ಪರವಾಗಿ ನಮಗೆ ಐವತ್ತು ಲಕ್ಷ ರೂಪಾಯಿಗಳನ್ನು ಕೊಡಿ ಎಂದು ಹೇಳುತ್ತೇನೆ. ಇನ್ನು ಕೊನೆಯದಾಗಿ ನಮ್ಮ ಹೈಕೋರ್ಟ್ ಪೀಠ. ಸನ್ಮಾನ್ಯ ಅಧ್ಯಕ್ಷರೇ, ಬಹುಶಃ ಅದರಲ್ಲಿ ಸರ್ಕಾರದ್ದು ಏನೋ ದೊಡ್ಡ ತಪ್ಪು ಇದೆಯೆನ್ನುವ ರೀತಿಯಲ್ಲಿ ಮಾತನಾಡುತ್ತಾರೆ. ಆದರೆ ಇದರಲ್ಲಿ ಸರ್ಕಾರದ್ದು ಅಥವಾ ಯಾರದ್ದೂ ಕೂಡ ತಪ್ಪಿಲ್ಲ. ಆದರೆ ಈ ಸಲ ಸಿದ್ಧರಾಮಯ್ಯನವರು 20 ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಇಟ್ಟುಬೇಕಾದರೆ ಇನ್ನೂ ಹೆಚ್ಚು ಕೊಡುತ್ತೇವೆ ಎಂದು ಹೇಳಿದ್ದಾರೆ. ಆದರೆ ಕೆಲವು ವಕೀಲರುಗಳು ತಲೆಯಲ್ಲಿ ಏನೊಂದು ಅಭಿಪ್ರಾಯ ಇದೆಯೆಂದರೆ ನೂರು ಕೋಟಿ ರೂ. ಇಟ್ಟಿದ್ದರೆ ಅವರು 'ಹೂಂ' ಅಂದುಬಿಡುತ್ತಿದ್ದರು ಎಂದು ಸುಮ್ಮನೆ ಅದನ್ನು ಹೇಳುತ್ತಾರೆ. ಆದರೆ ಅದನ್ನು ಒಮ್ಮೆಗೆ ಏನೂ ಖರ್ಚು ಮಾಡುವುದು ಬೇಕಾಗಿಲ್ಲ. ದಯಮಾಡಿ ಏನಾದರೂ ಮಾಡಿ ಅದನ್ನು ಹೊಂದಿಸಿ ತೋರಿಸಿಬಿಡಿ. ಅದೇನೂ ಅಲ್ಲಿಗೆ ಖರ್ಚಾಗುವುದಿಲ್ಲ. ಏನೂ ಇಲ್ಲ. ಸ್ವಲ್ಪ ನಾಳೆ ಬಜೆಟನ್ನು ಒಪ್ಪಿಕೊಳ್ಳುವುದಕ್ಕೆ ಮುಂಚೆ ಏನಾದರೂ ಮಾಡಿ ಸ್ವಲ್ಪ ಒಂದು ನೂರು ಕೋಟಿ ರೂಪಾಯಿ ಹೊಂದಿಸಿ ತೋರಿಸಿಬಿಡಿ. ಅದೇನೂ ಈಗಲೇ ಖರ್ಚಾಗುವುದಿಲ್ಲ. ಮತ್ತೆ ತೆಗೆದುಕೊಂಡು ಮಾಡುವುದಕ್ಕೆ ಬಂದೇಬರುತ್ತದೆ, ದಯಮಾಡಿ ಅದನ್ನು ಕೂಡ ತಾವು ಮಾಡಿ ಮುಖ್ಯ ನ್ಯಾಯಾಧೀಶರಿಗೆ ಇಷ್ಟು ಸರ್ಕಾರದವರು ಇಟ್ಟಿದ್ದಾರೆ ಅಂತ ಅನ್ನಿಸಿ, ದಯವಿಟ್ಟು ನಮ್ಮ ಉತ್ತರ ಕರ್ನಾಟಕಕ್ಕೆ ಹೈಕೋರ್ಟ್ ಪೀಠ ಬರುವಂತೆ ವ್ಯವಸ್ಥೆಯನ್ನು ತಾವಿಬ್ಬರೂ ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪಮುಖ್ಯಮಂತ್ರಿಗಳು ಮಾಡಬೇಕೆಂದು ಕೇಳಿಕೊಂಡು....

ಮಾನ್ಯ ಸದಸ್ಯರು : ಪಾಟೀಲರೇ, ಆ ಪೀಠ ಬರುವುದು ಗುಲ್ಬರ್ಗಾಕ್ಕೋ ಅಥವಾ ಧಾರವಾಡಕ್ಕೋ ?

ಶ್ರೀ ಎಸ್.ಎಸ್ ಪಾಟೀಲ್ : ಅದು ಬರುವುದು ಉತ್ತರ ಕರ್ನಾಟಕಕ್ಕೆ ಎಲ್ಲಿಯಾದರೂ ಮಾಡಲಿ. ಸುಮ್ಮನೆ ನೀವು ಗುಲ್ಬರ್ಗಾ, ಬೆಳಗಾವಿ ಅಂದರೆ ಎಲ್ಲಿಯೂ ಆಗದ ಹಾಗೆ ಮಾಡಿಕೊಳ್ಳುತ್ತೀರಿ, ಇದರ ಬಗ್ಗೆ ಹಿಂದೊಮ್ಮೆ ನಿರ್ಣಯ ಆಗಿದೆ. ಕೊಪ್ಪಳದಲ್ಲಿ ಎಲ್ಲಾ ವಕೀಲರೂ ಕೂಡಿ ಎಲ್ಲಿ ಮಾಡಿದರೂ ನಾವು "ಹೂಂ" ಎನ್ನುತ್ತೇವೆ. ಗುಲ್ಬರ್ಗಾದಲ್ಲಿ ಬೇಕಾದರೂ ಮಾಡಲಿ, ಕಡೆಗೆ ಸಿಂಧನೂರಿನಲ್ಲಿ ಬೇಕಾದರೆ ಮಾಡಲಿ ಎಂದು ನಿರ್ಣಯ ಆಗಿದೆ...

ಮಾನ್ಯ ಸದಸ್ಯರು : ಗುಲ್ಬರ್ಗಾ ಸೆಂಟರ್ ಆಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ : ಅದನ್ನು ಎಲ್ಲಿ ಮಾಡುತ್ತಾರೋ ಮಾಡಲಿ, ಸುಮ್ಮನೆ ನಾವು ಗುದ್ದಾಟ ಮಾಡಿ ಅದು ಆಗದ ಹಾಗೆ ಮಾಡಿಕೊಳ್ಳುತ್ತೇವೆ. ಆ ಕಾರಣದಿಂದ ನಾನು ಹೇಳುವುದೇನೆಂದರೆ ಹಿಂದೊಮ್ಮೆ ಈ ಬಗ್ಗೆ ತೀರ್ಮಾನ ಆಗಿದೆ, ಮುಖ್ಯ ನ್ಯಾಯಾಧೀಶರು ಎಲ್ಲಿ ಹೈಕೋರ್ಟ್ ಪೀಠ ಮಾಡಬೇಕು ಅನ್ನುತ್ತಾರೋ, ಅಲ್ಲೇ ಪೀಠ ಆಗಲಿ, ನಾವೂ ಕೂಡ ಅದನ್ನು ಒಪ್ಪಿಕೊಳ್ಳುತ್ತೇವೆ. ಒಟ್ಟಿನ ಮೇಲೆ ಉತ್ತರ ಕರ್ನಾಟಕಕ್ಕೆ ಹೈಕೋರ್ಟ್ ಪೀಠ ಆಗಬೇಕು. ಇದು

ನಮ್ಮ ಬೇಡಿಕೆ ಆ ಕಾರಣದಿಂದ ತಾವು ದಯವಿಟ್ಟು ಆ ರೀತಿ ಮಾಡಬೇಕೆಂದು ಹೇಳಿ ಮತ್ತೊಮ್ಮೆ ತಮ್ಮ ಬಜೆಟ್‌ನ್ನು ಸ್ವಾಗತಿಸಿ ಬಹುಶಃ ಇಬ್ಬರೂ ಹಿಂದುಳಿದ ವರ್ಗದ ನಾಯಕರಾಗಿ ಇವತ್ತು ಈ ರಾಜ್ಯದ ರೈತರ ಮಕ್ಕಳಾಗಿ, ರೈತರ ಸಮುದಾಯದಿಂದ ಬಂದಂಥ ನಾಯಕರಾಗಿ ನಿಜವಾಗಿಯೂ ಇವತ್ತು ಗ್ರಾಮೀಣ ಅಭಿವೃದ್ಧಿಗೆ ಮತ್ತು ಕೃಷಿ ಕ್ಷೇತ್ರಕ್ಕೆ ಹೆಚ್ಚು ಒತ್ತುಕೊಟ್ಟಿದ್ದಾರೆ. ಬಹುಶಃ ಮತ್ತೊಮ್ಮೆ ಪುನಃಪುನಃ ನಾನು ಹೇಳುತ್ತೇನೆ. ಇದು ಕರ್ನಾಟಕ ಏಕೀಕರಣ ಆದನಂತರ ಮೊಟ್ಟಮೊದಲನೆಯದಾದಂಥ ಗ್ರಾಮೀಣಾಭಿವೃದ್ಧಿ ಮತ್ತು ಕೃಷಿಗೆ ಅತೀ ಹೆಚ್ಚು ಒತ್ತು ಕೊಟ್ಟ ಬಜೆಟ್ ಇದು ಆಗಿದೆ ಎಂಬ ಮಾತನ್ನು ಹೇಳಿ ಇದನ್ನು ಸ್ವಾಗತಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†**ಶ್ರೀ ಹೆಚ್.ಎಂ. ವಿಶ್ವನಾಥ್ (ಸಕಲೇಶಪುರ)** : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಹಣಕಾಸು ಮಂತ್ರಿಗಳು ಮಂಡಿಸಿದಂಥ ಈ ಆಯವ್ಯಯ ಏನಿದೆ ಇದು ಕರ್ನಾಟಕದ ಇತಿಹಾಸದಲ್ಲಿ ಒಂದು ಐತಿಹಾಸಿಕವಾದಂಥ ಒಂದು ಬಜೆಟ್ ಮಂಡನೆ ಎಂದು ನಾವೆಲ್ಲರೂ ಕೂಡ ಹೇಳುತ್ತಿದ್ದೇವೆ. ಸಾರ್ವತ್ರಿಕವಾಗಿ ಇದಕ್ಕೆ ಬೆಂಬಲ ಸಿಕ್ಕಿದೆ. ಇಡೀ ರಾಜ್ಯದ ಎಲ್ಲಾ ಭಾಗಗಳನ್ನೂ ಕೂಡ ಪರಿಗಣಿಸಿ ಆಯವ್ಯಯದಲ್ಲಿ ಸಾಕಷ್ಟು ಎಲ್ಲಾ ವರ್ಗದ ಜನರಿಗೆ ಅವಕಾಶ ಮಾಡಿಕೊಟ್ಟಿದ್ದಾರೆ ಎನ್ನತಕ್ಕಂಥ ಮಾತು ಸತ್ಯ. ಆದರೆ ನನ್ನ ಚಿಂತನೆ ಏನೆಂದರೆ, ನಾನು ಮೂಲತಃ ಪಶ್ಚಿಮಘಟ್ಟದಿಂದ ಬಂದವನು. ನಾವು ಪಶ್ಚಿಮ ಘಟ್ಟದವರು, ಮಲೆನಾಡಿನವರು. ಹೆಚ್ಚು ದೊಡ್ಡ ಧ್ವನಿಯಲ್ಲಿ ನಾವು ಮಾತನಾಡುವುದಿಲ್ಲ. ಸ್ವಲ್ಪ ಸೌಮ್ಯ ಸ್ವಭಾವದ ಜನ ನಮ್ಮ ಭಾಗದವರು. ನಮ್ಮ ಭಾಗದಲ್ಲಿ ನಾವು ಬೇರೆ ಏನೂ ಬೆಳೆಯುವುದಕ್ಕೆ ಸಾಧ್ಯವಿಲ್ಲ. ಸುಮಾರು 50 ರಿಂದ 300 ಇಂಚು ಮಳೆ ಬೀಳತಕ್ಕಂಥ ಪ್ರದೇಶದಲ್ಲಿ ನಾವು ಕೃಷಿ ಮಾಡತಕ್ಕಂಥವರು,. ನಮ್ಮ ಕೃಷಿ ವಿಶೇಷವಾದದ್ದು ಮತ್ತು ವಿಶಿಷ್ಟವಾದದ್ದು. ನಮ್ಮ ಪಶ್ಚಿಮ ಘಟ್ಟದಲ್ಲಿ ಬೆಳೆಯತಕ್ಕಂಥ ಕಾಫಿ, ಏಲಕ್ಕಿ, ಅಡಿಕೆ ಮತ್ತು ಅದರ ಒಳಗಡೆ ಇರತಕ್ಕಂಥ ಉಪ ಬೆಳೆಗಳು ಏನಿವೆ, ಕಾಳುಮೆಣಸು, ಇರಬಹುದು ಅಥವಾ ಇತ್ತೀಚಿನ ವೆನಿಲಾ ಇರಬಹುದು. ಶುಂಠಿ ಇರಬಹುದು. ಈ ತರಹ ಬೆಳೆಗಳನ್ನು ಬಿಟ್ಟರೆ ನಾವು ಇನ್ನೇನೂ ಬೇರೆ ಬೆಳೆಗಳನ್ನು ಬೆಳೆಯುವುದಕ್ಕೆ ಸಾಧ್ಯವಿಲ್ಲ. ಈ ಪ್ರದೇಶದಲ್ಲಿ ಬದುಕುತಕ್ಕಂಥ ಜನರು ಇದರ ಮೇಲೆಯೇ ಪೂರ್ಣವಾಗಿ ಅವಲಂಬಿತರಾಗಿದ್ದಾರೆ. ಈ ಭಾಗದಲ್ಲಿ ಸುಮಾರು ಮೂರು ಲಕ್ಷ ಜನ ಬೇಸಾಯಗಾರರು ಏನಿದ್ದಾರೆ. ಅದರೊಳಗೆ ಸುಮಾರು ಎರಡು ಲಕ್ಷ ಸಣ್ಣ ಬೆಳೆಗಾರರು ನಾವು ಇದ್ದೇವೆ. ಸುಮಾರು ಹತ್ತರಿಂದ ಹದಿನೈದು ಲಕ್ಷ ಕಾರ್ಮಿಕರಿಗೆ ವರ್ಷ ಪೂರ್ಣ ನಾವು ಕೆಲಸ ಕೊಡತಕ್ಕಂಥ ಉದ್ಯಮ ಇದ್ದರೆ ಅದು ಕಾಫಿ ಉದ್ಯಮ ಮಾತ್ರ. ಇಡೀ ಕೃಷಿ ಕ್ಷೇತ್ರದೊಳಗೆ ಏನಾದರೂ ಇಷ್ಟು ದೊಡ್ಡ ಪ್ರಮಾಣದಲ್ಲಿ ಕೂಲಿ ಕಾರ್ಮಿಕರಿಗೆ ತೊಂದರೆ ಬಂದರೆ, ವಿಶೇಷವಾಗಿ ಬಯಲು ಸೀಮೆಯಲ್ಲಿ ಬರ ಬರಲಿ ಅಥವಾ ಬಯಲು ಸೀಮೆ ಭಾಗದಲ್ಲಿ ಯಾವುದೇ ತರಹದ ಅತಿವೃಷ್ಟಿ ಅಥವಾ ಅನಾವೃಷ್ಟಿಯಾಗಲಿ, ಅಂತಹ ಸಂದರ್ಭದಲ್ಲಿ ಆ ಜನರಿಗೆ ಒಂದು

ಕೆಲಸ ಕೊಡತಕ್ಕಂಥ ಒಂದು ಉದ್ಯಮ ಇದ್ದರೆ ಅದು ಆ ಕಾಫಿ ಉದ್ಯಮ. ಇದು ಏಲಕ್ಕಿ, ಕಾಫಿ, ಅಡಿಕೆ, ಮೆಣಸು ಬೆಳೆಯತಕ್ಕಂಥ ಪ್ರದೇಶ. ಆದರೆ ಇಂತಹ ಪ್ರದೇಶದಲ್ಲಿ ನಾವು ಇದವರೆಗೂ ಪ್ರತಿವರ್ಷ ರಫ್ತು ಮಾಡತಕ್ಕಂಥ ಕಾಫಿ ಏನಿದೆ. ಇದರಿಂದ ಪ್ರತಿವರ್ಷ ದೊರೆಯುವ ವಿದೇಶಿ ವಿನಿಮಯ ಸುಮಾರು 1600 ರಿಂದ 2000 ಕೋಟಿ ರೂಪಾಯಿಗಳು. ರಾಜ್ಯಸರ್ಕಾರಕ್ಕೆ ನಮ್ಮ ತೆರಿಗೆಯಿಂದ ಹಣ ಬರುತ್ತದೆ. ಇಷ್ಟು ದೊಡ್ಡ ಪ್ರಮಾಣದ ತೆರಿಗೆಯನ್ನು ನಾವು ಕೊಡುತ್ತಾ ಇದ್ದರೆ ಕಳೆದ 1998ರಿಂದ ಏನು ಇಲ್ಲಿ ಈ ಭಾಗದಲ್ಲಿ ಬರ ಕಾಣಿಸಿಕೊಂಡಿದೆ, ಅಲ್ಲಿ ಕೂಡ ನಮ್ಮ ಭಾಗದಲ್ಲಿ ಬರ ಕಾಣಿಸಿಕೊಂಡಿದೆ. ನನ್ನ ಭಾಗದ ಸಕಲೇಶಪುರದಲ್ಲಿ, ಮಧ್ಯಮ ಮಲೆನಾಡಿನಲ್ಲಿ ಇರುವವರು ನಾವು ಸುಮಾರು 80 ರಿಂದ 120 ಇಂಚು ಮಳೆ ಬೀಳತಕ್ಕಂಥ ನನ್ನ ಊರಿನಲ್ಲಿ ಇವತ್ತು ಕಳೆದ ಬಾರಿ 57, ಅದರ ಹಿಂದೆ 65 ಇಂಚು ಮಾತ್ರ ಮಳೆಯಾಗಿದೆ. ಇದರ ಪರಿಣಾಮ ಕಾಫಿ, ಏಲಕ್ಕಿ ಮತ್ತು ಮೆಣಸಿನ ಮೇಲಾಗಿದೆ. ಅಲ್ಲಿ ಬೆಳೆಯತಕ್ಕಂತ ಎಲ್ಲಾ ಉಪಬೆಳೆಗಳೂ ಕೂಡ ನಾಶವಾಗಿದೆ. ಇದರ ಜತೆಗೆ ಬೆಲೆ ಕುಸಿತ ಕೂಡ ಆಗಿದೆ. ಒಂದು ಕಾಲದಲ್ಲಿ ಕಾಫಿ ಎಂದರೆ ಅದು ಅತ್ಯುನ್ನತವಾದಂಥ ಒಂದು ದುಡಿಮೆ ಮಾಡುವಂತಹ ಕ್ಷೇತ್ರ ಅಂತ ಏನಿತ್ತು. ಅಂತಹ ಕಾಫಿಕ್ಷೇತ್ರ ಇವತ್ತು ಸಂಪೂರ್ಣವಾಗಿ ನಾಶವಾಗಿದೆ. ಸುಮಾರು 40 ಪರ್ಸೆಂಟ್ ಅರೆಬಿಕಾ ಕಾಫಿಗೆ ಬೋರರ್ ಹುಳ ಬಂದು ಬೆಳೆಯೆಲ್ಲಾ ಹೊರಟುಹೋಗಿದೆ. ಇದರ ಜೊತೆಗೆ ನಮ್ಮ ಭಾಗದಲ್ಲಿ ಇರತಕ್ಕಂಥ ಕೃಷಿಯನ್ನು ಉಳಿಸಿಕೊಳ್ಳುವುದಕ್ಕೋಸ್ಕರ ನಮ್ಮ ಕೃಷಿಕರು ಅಲ್ಲಿರತಕ್ಕಂಥ ಮರಮಟ್ಟುಗಳನ್ನು ಮಾರಾಟ ಮಾಡಿಕೊಂಡು ಬದುಕಿದ್ದಾರೆ. ಆದರೆ ಇವತ್ತು ಅಲ್ಲಿ ಮರಗಳನ್ನೂ ಕೂಡ ಕಡಿಯುತ್ತಾ ಹೋಗಿ ಆ ಭಾಗದಲ್ಲಿ ಏನು ಜಲ ಬರತಕ್ಕಂಥಾದ್ದು ಇತ್ತು. ಏನು ಹಳ್ಳಕೊಳ್ಳಗಳು ಇದ್ದವು ಇವತ್ತು ಅವೆಲ್ಲವೂ ಕೂಡ ಬತ್ತಿಹೋಗುವಂಥ ಸ್ಥಿತಿ ಇದೆ. ನಾನು ಏಕೆ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ ಇಷ್ಟೊಂದು ದೊಡ್ಡ ಸಮಸ್ಯೆಗೆ ಸಿಕ್ಕಿರತಕ್ಕಂಥ ನಾವು ಕೋಟ್ಯಾಂತರ ರೂಪಾಯಿ ಸಾಲ ಮಾಡಿದ್ದೇವೆ. ಇದು ನಾವು ಕೇಳಿದಂಥ ಸಾಲ ಅಲ್ಲ. ಬೇರೆ ಎಲ್ಲಾ ಬೆಳೆಗಳಿಗೂ ಕೊಡತಕ್ಕಂಥ ಸಾಲಕ್ಕಿಂತ ಬಹಳ ವಿಶಿಷ್ಟವಾದ ಸಾಲವನ್ನು ಕಾಫಿಗೆ ಕೊಟ್ಟರು. ಇದು ರಫ್ತು ಆಗತಕ್ಕಂಥ ಕಾಫಿಯಾದ್ದರಿಂದ, ವಿದೇಶಿ ವಿನಿಮಯ ಬರುತ್ತಿರುವುದರಿಂದ ನೀವು ಉತ್ತಮ ಗುಣಮಟ್ಟದ ಕಾಫಿಯನ್ನು ಬೆಳೆಯಬೇಕು ಅಂತ ಹೇಳಿ ನಮಗೆ ಕಾಫಿಬೆಳೆಗೆ ಸಾಲಗಳನ್ನು ಕೊಟ್ಟರಿ. ಏನೇನು ಸಾಲಗಳನ್ನು ಕೊಟ್ಟರಿ ? ಬೆಳೆ ಬೆಳೆಯುವುದಕ್ಕೆ ಸಾಲ, ಅಭಿವೃದ್ಧಿ ಸಾಲ, ಕಣ ಮಾಡಿಕೊಳ್ಳುವುದಕ್ಕೆ ಒಣಗಿಸುವುದಕ್ಕೆ ಡ್ರೈಯಿಂಗ್ ಯಾರ್ಡ್‌ಗೆ ಸಾಲ, ಪಲ್ಪರ್ ಮಾಡುವುದಕ್ಕೆ ಸಾಲ, ತಂತಿ ಬೇಲಿಗೆ ಸಾಲ, ನಿಮ್ಮ ಕೂಲಿಗಳಿಗೆ ಸರಿಯಾಗಿ ನೋಡಿಕೊಳ್ಳಬೇಕೆಂದು ಹೇಳಿ ಅವರಿಗೆ ಕಕ್ಕಸ್ಸು ಇತ್ಯಾದಿಗಳನ್ನು ಕಟ್ಟಿಸಿಕೊಡುವುದಕ್ಕೆ ಸಾಲ, ಲೈನ್ ಮಾಡುವುದಕ್ಕೆ ಸಾಲ, ರೈಟರ್‌ಗಳನ್ನು ಇಟ್ಟುಕೊಳ್ಳುತ್ತೀರಿ. ಅವರಿಗೆ ವಾಸಕ್ಕೆ ಕ್ವಾಟರ್ಸ್‌ಗಳನ್ನು ಕಟ್ಟಿಕೊಡುವುದಕ್ಕೆ ಸಾಲ, ನಿಮಗೆ ವಾಹನಗಳು ಬೇಕಾಗುತ್ತದೆ

ಎಂದು ಟ್ರಾಕ್ಟರ್ ಸಾಲ, ಸ್ಪ್ರಿಂಕ್ಲರ್ ಸಾಲ, ಜತೆಗೆ ನಮಗೆ ಓಡಾಡುವುದಕ್ಕೆ ವಾಹನಗಳು ಬೇಕಾಗುತ್ತದೆ ಅಂತ ಹೇಳಿ ಜೀಪ್ ಸಾಲ, ಈ ತರಹ ಸಾಲಗಳ ಒಟ್ಟು ಮೊತ್ತ ಒಂದು ಎಕರೆಗೆ ಇವತ್ತು ಒಂದು ಲಕ್ಷ ರೂಪಾಯಿ ಇದೆ. ಹೀಗೆ ಒಂದು ಲಕ್ಷ ರೂಪಾಯಿಗೂ ಹೆಚ್ಚು ಒಂದು ಎಕರೆ ಮೇಲೆ ನೀವು ಸಾಲ ಕೊಟ್ಟು ನಮ್ಮ ಹತ್ತಿರ ಅಭಿವೃದ್ಧಿ ಮಾಡಿಸಿ, ಬೆಳೆ ಬೆಳೆದು ಇವತ್ತು ನಾವು ಲಕ್ಷಾಂತರ ರೂಪಾಯಿಗಳಿಗೆ ಸಾಲಗಾರರಾಗಿದ್ದೇವೆ. ಇವತ್ತು ಒಂದು ಎಕರೆಗೆ ಅರೆಬಿಕಾ ಮತ್ತು ರೊಬೆಸ್ಟ್ ಅಂತ ಎರಡು ವೆರೈಟಿಗಳು ಬರುತ್ತವೆ. ಅಲ್ಲಿ ಅರೆಬಿಕಾಗೆ ಸುಮಾರು ಒಂದು ಎಕರೆ ಇಪ್ಪತ್ತು ಸಾವಿರ ರೂಪಾಯಿ ಖರ್ಚಾಗುತ್ತದೆ. ರೊಬೆಸ್ಟ್‌ಗೆ ಹದಿನೈದರಿಂದ ಇಪ್ಪತ್ತು ಸಾವಿರ ರೂಪಾಯಿ ಖರ್ಚಾಗುತ್ತದೆ. ಇಷ್ಟು ದೊಡ್ಡ ಮೊತ್ತ ಖರ್ಚಾದರೆ ಪ್ರತಿವರ್ಷ ನಾವು ಎಕರೆ ಮೇಲೆ ಹತ್ತರಿಂದ ಹದಿನೈದು ಸಾವಿರವರೆಗೂ ನಷ್ಟ ಅನುಭವಿಸುತ್ತಿದ್ದೇವೆ. ಇಂತಹ ನಷ್ಟದಲ್ಲಿ ಇರತಕ್ಕಂಥ ಇಷ್ಟು ದೊಡ್ಡ ಉದ್ಯಮದಲ್ಲಿ ಸುಮಾರು ಹದಿನೈದು ಲಕ್ಷ ಕಾರ್ಮಿಕರಿಗೆ ನಾವೇನು ಉದ್ಯೋಗವನ್ನು ಸೃಷ್ಟಿ ಮಾಡಿದ್ದೇವೆ. ಅಂತಹ ಒಂದು ದೊಡ್ಡ ಉದ್ಯಮ ಇವತ್ತು ಕಷ್ಟದಲ್ಲಿದೆ. ಇಂತಹ ಉದ್ಯಮ ಕಷ್ಟದಲ್ಲಿ ಇರುವುದರಿಂದ ಸುಮಾರು 1500 ಕೋಟಿ ರೂಪಾಯಿಗಳ ಸಾಲದ ಹೊರೆಯನ್ನು ನಾವು ಇಡೀ ಪಶ್ಚಿಮಘಟ್ಟದವರು ವಹಿಸಿಕೊಂಡಿದ್ದೇವೆ. 1300 ಕೋಟಿ ರೂಪಾಯಿಗಳ ಹಣ ನಾವು ತೀರುವಳಿ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಕಳೆದ ಬಾರಿ ಚಿಕ್ಕಮಗಳೂರಿನಲ್ಲಿ ನಡೆದಂಥ ಒಂದು ಸಮಾವೇಶದಲ್ಲಿ ಒಂದು ಲಕ್ಷ ಜನರು ಸೇರಿದ್ದರು. ಆ ಸಮಾವೇಶದಲ್ಲಿ ಕೇಂದ್ರ ಸರ್ಕಾರದ ಮಂತ್ರಿಗಳು ಬಂದರು ಮತ್ತು ರಾಜ್ಯ ಸರ್ಕಾರದ ಮಂತ್ರಿಗಳೂ ಬಂದರು. 1130 ಕೋಟಿ ರೂಪಾಯಿಗಳ ಬಡ್ಡಿಯನ್ನು ಮನ್ನಾ ಮಾಡುತ್ತೇವೆ ಹೇಳಿ ಹೋದವರು ಮತ್ತೆ ವಾಪಾಸ್ಸು ಈಚೆಗೆ ಬರಲಿಲ್ಲ. ಇಂತಹ ಒಂದು ಕಷ್ಟ ಸ್ಥಿತಿಯಲ್ಲಿ ಇರತಕ್ಕಂಥ ನಮಗೆ ಇವತ್ತು ಸರ್ಕಾರ ನಮ್ಮ ಭಾಗಕ್ಕೆ ಸಹಾಯಕ್ಕೆ ಬರಬೇಕು. ಈ ಸಂದರ್ಭದಲ್ಲಿ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ಮಾನ್ಯ ಹಣಕಾಸು ಮಂತ್ರಿಗಳಲ್ಲಿ ಕೇಳಿಕೊಳ್ಳುವುದು ಏನೆಂದರೆ. ನಮ್ಮ ಭಾಗವನ್ನು ನೀವು ಸ್ವಲ್ಪ ನೋಡಬೇಕು ಮತ್ತು ನಮ್ಮನ್ನು ಉಳಿಸಬೇಕು. ಈ ಉದ್ಯಮ ಹೊರಟುಹೋದರೆ ಈ ಭಾಗದಲ್ಲಿ ಇರತಕ್ಕಂಥ ಜನರು ನಿರುದ್ಯೋಗಿಗಳಾಗುತ್ತಾರೆ. ಪಶ್ಚಿಮ ಘಟ್ಟದಲ್ಲಿ ಶೃಂಗೇರಿ ಮತ್ತು ಮೂಡಿಗೆರೆ ಭಾಗದಲ್ಲಿ ಈಗ ನಕ್ಸಲೈಟ್ ಹಾವಳಿ ಪ್ರಾರಂಭವಾಗಿದೆ.

2.20 ಪಿಎಂ

ಇದು ಹಾವಳಿಯಲ್ಲ, ಅಲ್ಲಿಯ ಜನರಿಗೆ ಉದ್ಯೋಗ ಸಿಕ್ಕದೆ, ಅಲ್ಲಿಯ ಯುವಕರಿಗೆ ಉದ್ಯೋಗ ಸಿಕ್ಕದೇ, ಅಲ್ಲಿರತಕ್ಕ ಸಣ್ಣ ಬೆಳೆಗಾರರು, ಅತಿ ಸಣ್ಣ ಬೆಳೆಗಾರರು, ಕೂಲಿ ಕಾರ್ಮಿಕರ ಮಕ್ಕಳು, ಅವರು ಪಡೆಯುತ್ತಿದ್ದಂಥ ಏನು ಉತ್ಪತ್ತಿ ಇತ್ತು, ಅದು ಇಲ್ಲದೇ ಈಗ ಅವರು ನಿರುದ್ಯೋಗಿಗಳಾಗಿ ಹೊರಗಡೆ ಇರುವುದರಿಂದ ಇಂತಹ ಒಂದು ನಕ್ಸಲೈಟ್ ಚಟುವಟಿಕೆಯೊಳಗಡೆ ಸೇರುವಂಥ ಸ್ಥಿತಿ ನಿರ್ಮಾಣ ಆಗಿದೆ. ನಾನು ಈ ಸಂದರ್ಭದಲ್ಲಿ ಕೇಳುವುದು ಇಷ್ಟೆ. ನಮ್ಮ ಈ

ಕಷ್ಟದ ಸಂದರ್ಭದಲ್ಲಿ ಕನಿಷ್ಟ ನೆರವಾಗಬೇಕು. ಕೋಟ್ಯಾಂತರ ರೂಪಾಯಿ ವರಮಾನ ನಿಮಗೆ ಕೊಟ್ಟವರು ನಾವು. ಈ ಸನ್ನಿವೇಶದಲ್ಲಿ ನೀವು ನೆರವಿಗೆ ಬರಬೇಕು. ನಮಗೆ ಸಂಪೂರ್ಣ ಬಡ್ಡಿ, ಸುಸ್ತಿ ಬಡ್ಡಿ ಏನಿದೆ ಅದನ್ನು ಮನ್ನಾ ಮಾಡಬೇಕು. ಈಗ ಕೋ ಅಪರೇಟಿವ್ ಸೊಸೈಟೀಸ್‌ಗೆ ಏನು ಮಾಡಿದ್ದೀರಿ. ಈ ಕೋ ಅಪರೇಟಿವ್ ಸೊಸೈಟಿಯೊಳಗಡೆ ಸಹಕಾರ ಸಂಘಗಳಿಗೆ ಕೊಟ್ಟಿರುವುದು ಮತ್ತು ನಾವು ಸಾಲ ಮಾಡಿರುವುದು ಅತ್ಯಲ್ಪ. 5 ರಿಂದ 10 ಪರ್ಸೆಂಟ್ ಅಷ್ಟೆ. ಮಿಕ್ಕಿದ ಎಲ್ಲವನ್ನೂ ಕೂಡ ನಾವು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಮತ್ತ ಬೇರೆ ಬೇರೆ ಬ್ಯಾಂಕ್‌ಗಳಲ್ಲಿ ಸಾಲ ಮಾಡಿದ್ದೇವೆ. ಆದರೆ, ಆ ಸಾಲದ ಬಗ್ಗೆ ಎಲ್ಲೂ ಪ್ರಸ್ತಾಪ ಇಲ್ಲ. ಹಾಗಾದರೆ. ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಸಾಲ ಮಾಡಿದವರು ಏನಾಗಬೇಕು ? ನಮ್ಮ ಪರಿಸ್ಥಿತಿಯನ್ನು ಯಾರು ಕೇಳುವರು ? ಇವತ್ತು ಹರಾಜಿಗೆ ಇಟ್ಟಿದ್ದಾರೆ. ಭೂಮಿಯಲ್ಲಿ ಇವತ್ತು ನಮಗೆ ಪ್ರತಿ ವಾರ ಬಟವಾಡೆ ಮಾಡುವುದಕ್ಕೆ ದುಡ್ಡಿಲ್ಲ. ಇಂತಹ ಸ್ಥಿತಿಯೊಳಗಡೆ ನಾನು ಸರ್ಕಾರವನ್ನು ಕೇಳುವುದು ಇಷ್ಟೆ, ನಮ್ಮ ಸಂಪೂರ್ಣ ಸಾಲದ ಮೇಲಿರತಕ್ಕ ಬಡ್ಡಿಯನ್ನು ಮನ್ನಾ ಮಾಡಬೇಕು. ಜೊತೆಗೆ ನಮಗಿರತಕ್ಕ ಕೆಲವು ವಿಶೇಷವಾದ ಸಮಸ್ಯೆಗಳು ಇವೆ. ಅದು ರಸ್ತೆಗಳ ವಿಷಯ. ನಮ್ಮ ಮಲೆನಾಡು ಭಾಗದಲ್ಲಿ, ಮಲೆನಾಡು ಅಭಿವೃದ್ಧಿ ಮಂಡಳಿ ಎಂದು ಈಗಾಗಲೇ ಮಾಡಿದ್ದೇವೆ. ಸುಮಾರು 45 ಕೋಟಿ ರೂಪಾಯಿಗಳ ಹಳೆಯ ಬಿಲ್ಲುಗಳ ಬಾಕಿಯೇ ಇದೆಯೆಂದು ನಾವು ಕೇಳಿದ್ದೇವೆ. ಈ ಆಯವ್ಯಯದಲ್ಲಿ 10 ಕೋಟಿ ರೂಪಾಯಿಗಳನ್ನು ಮಲೆನಾಡು ಅಭಿವೃದ್ಧಿ ಮಂಡಳಿಗೆ ಇಟ್ಟಿದ್ದಾರೆ. ಬಯಲು ಸೀಮೆಯಲ್ಲಿ ವಿಶೇಷವಾಗಿ ಉತ್ತರ ಕರ್ನಾಟಕದ ಜನರು ಒತ್ತಾಯ ಶುರು ಮಾಡಿದ್ದಾರೆ. ಪ್ರತ್ಯೇಕ ರಾಜ್ಯವನ್ನು ಕೂಡ ಕೇಳುತ್ತಾ ಇದ್ದಾರೆ. ಆದರೆ, ಪ್ರತ್ಯೇಕ ರಾಜ್ಯವನ್ನು ಕೇಳಬೇಕಾದವರು ನಾವು. ಕಾರಣ, ನಮಗೆ ಯಾವುದೇ ಸವಲತ್ತುಗಳು ಸಿಕ್ಕಿಲ್ಲ. ನಮ್ಮಲ್ಲಿ ಡ್ಯಾಮ್‌ಗಳು ಇಲ್ಲ. ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಡ್ಯಾಮ್ ಕಟ್ಟಿ, ನಮ್ಮ ಜನರಿಗೆ ಅನುಕೂಲ ಮಾಡಿಕೊಂಡುವುದಕ್ಕೂ ನೀವು ಸಿದ್ಧರಿಲ್ಲ. ಅಥವಾ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಬೇರೆ ತರಹದ ಕಾರ್ಖಾನೆಗಳನ್ನು ತೆಗೆಯುವುದಕ್ಕಾಗಲ್ಲ. ಆದರೆ, ನಮ್ಮಲ್ಲಿ ಕೇಳುವಂಥಾದ್ದು ಏನು, ಕನಿಷ್ಟವಾದಂತ ರಸ್ತೆ. ಇವತ್ತು ಮಲೆನಾಡು ಭಾಗದಲ್ಲಿ 200–250–300 ಇಂಚು ಮಳೆ ಬೀಳುವಂಥ ಈ ಪ್ರದೇಶದೊಳಗಡೆ ರಸ್ತೆಗಳು ಸರಿ ಇಲ್ಲ. ನಮ್ಮ ಒಂದೊಂದು ಭಾಗಕ್ಕೆ 3 ಕಿಲೋಮೀಟರ್, 4 ಕಿಲೋಮೀಟರ್, 5 ಕಿಲೋಮೀಟರ್ ಗುಡ್ಡಗಾಡು ರಸ್ತೆಗಳಾಗುತ್ತದೆ. ಇದಕ್ಕೆ ಲಕ್ಷಾಂತರ ರೂಪಾಯಿಗಳ ಹಣ ಬೇಕು, ಮಲೆನಾಡು ಅಭಿವೃದ್ಧಿ ಮಂಡಳಿಯನ್ನು ನೀವು ಮಾಡಿ ಸುಮಾರು 72–73 ತಾಲ್ಲೂಕುಗಳನ್ನು ಈ ಮಂಡಳಿಗೆ ಸೇರಿಸಿದ್ದೀರಿ. ಆದರೆ, ಮಲೆನಾಡು ಇರತಕ್ಕಂಥಾದ್ದು ಕೇವಲ ಪಶ್ಚಿಮ ಘಟ್ಟಗಳಲ್ಲಿ ಬರತಕ್ಕ ಮಲೆನಾಡು ಪ್ರದೇಶದಲ್ಲಿ ಮಾತ್ರ ತೀವ್ರವಾದ ರಸೆಗಳ ಸಮಸ್ಯೆ ಇದೆ. ಆದರೆ, ನೀವು ಕೊಟ್ಟಿರತಕ್ಕ 10 ಕೋಟಿ ರೂಪಾಯಿಗಳು ಯಾವ ಮೂಲೆಗೂ ಸಾಕಾಗುವುದಿಲ್ಲ. ಕನಿಷ್ಟನೂರು ಕೋಟಿ ರೂಪಾಯಿಗಳನ್ನು ಮಲೆನಾಡು ಅಭಿವೃದ್ಧಿ

ಮಂಡಳಿಗೆ ನೀವು ಬಿಡುಗಡೆ ಮಾಡಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಜೊತೆಗೆ ನನಗೆ ಇನ್ನೊಂದು ಸಮಸ್ಯೆ. ಕೋ ಅಪರೇಟಿವ್ ಬ್ಯಾಂಕ್‌ಗಳಲ್ಲಿ ಸಾಲ ತೆಗೆದುಕೊಂಡರೆ ಮತ್ತು ಸಾಲ ತೆಗೆದುಕೊಳ್ಳುವ ಸಂದರ್ಭದಲ್ಲಿ ನಮ್ಮ ಭೂಮಿಯನ್ನು ನೋಂದಾವಣೆ ಮಾಡಬೇಕಾದರೆ, ಆ ನೋಂದಾವಣೆ ಶುಲ್ಕವನ್ನು ಹಿಂದೆ ಸರ್ಕಾರವೇ ಭರಿಸಿಕೊಳ್ಳುತ್ತಿತ್ತು. ಆದರೆ, ಇವತ್ತು ಏನಾಗಿಬಿಟ್ಟಿದೆ. ಆ ನೊಂದಾವಣೆ ಶುಲ್ಕವನ್ನು ನಮ್ಮ ಮೇಲೆ ಹಾಕಿದ್ದೀರಿ. ಇದನ್ನು ದಯಮಾಡಿ ವಾಪಸ್ ತೆಗೆದುಕೊಳ್ಳಬೇಕು. 32 ರೂಪಾಯಿ ಕಟ್ಟಿದರೆ ಇ.ಸಿ. ಸಿಗುತ್ತಾ ಇತ್ತು. ಇವತ್ತು 150 ರೂಪಾಯಿ ಕಟ್ಟಬೇಕು. ಒಂದು ಸರ್ವೆ ನಂಬರಿಗೆ ನಾವು ಏನಾದರೂ ಇ.ಸಿ. ತೆಗೆದುಕೊಳ್ಳಬೇಕಾದರೆ 13–20 ರೂಪಾಯಿ ಕಟ್ಟಬೇಕಾಗಿದ್ದುದ್ದು ಇವತ್ತು 150 ರೂಪಾಯಿ ಕಟ್ಟಬೇಕು. ಇದು ನಮಗೆ ಹೊರೆಯಾಗಿದೆ. ನಾವು ಸಾಲ ತೆಗೆದುಕೊಂಡಿದ್ದಕ್ಕೂ ಕೂಡ ಒಂದು ಲಕ್ಷ ರೂಪಾಯಿಗೆ 5 ರೂಪಾಯಿ ನೋಂದಾವಣೆ ಮಾಡಬೇಕಾದ ಸಂದರ್ಭದಲ್ಲಿ ಕಟ್ಟಬೇಕಾದ ಸ್ಥಿತಿ ಇದೆ. ದಯಮಾಡಿ, ಇದನ್ನು ಪರಿಶೀಲನೆ ಮಾಡಿ, ತೆಗೆದುಹಾಕಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಹಾಗೆಯೇ ಪಹಣಿ ಪಡೆಯಬೇಕಾದರೆ 15 ರೂಪಾಯಿ ಫಿಕ್ಸ್ ಮಾಡಿದ್ದೀರಿ. ಇದು ರೈತರಿಗೆ ದುಬಾರಿಯಾಗುತ್ತದೆ. ಉದಾಹರಣೆಗೆ ಇನ್ನೊಂದು ಸಮಸ್ಯೆ ಏನಾಗಿದೆ. ಕಂಪ್ಯೂಟರಿನಲ್ಲಿ ಬರತಕ್ಕ ಪಹಣಿದೊಂದು ಸಮಸ್ಯೆಯಾಗಿದೆ. ಕಂಪ್ಯೂಟರ್ ಒಳಗಡೆ ಜಂಪ್ ಆಗುತ್ತದೆ. 10ನೇ ಸರ್ವೆ ನಂಬರೊಂದು ಜಂಪ್ ಆದರೆ, ಆ ಸರ್ವೆ ನಂಬರ್ 11 ಆದರೆ, ಈ ಹನ್ನೊಂದನ್ನು ಮತ್ತೆ ಹತ್ತು ಮಾಡಬೇಕಾದರೆ, ಮತ್ತೆ ಮ್ಯುಟೇಷನ್‌ನಲ್ಲಿ ತಿದ್ದುಪಡಿ ಮಾಡಿ, ಮತ್ತೆ ಅದೊಂದು ದೊಡ್ಡ ಸರ್ಕಸ್, ಒಂದು ರೌಂಡ್ ತಾಲ್ಲೂಕು ಆಫೀಸಿನಿಂದ ಹೊರಗೆ ಬರಬೇಕಾಗುತ್ತದೆ. ಈ ಒಟ್ಟು ವ್ಯವಸ್ಥೆ ಮಾಡುವುದರೊಳಗಡೆ ರೈತರಿಗೆ ಸಾವಿರಾರು ರೂಪಾಯಿಗಳು ಖರ್ಚಾಗುತ್ತದೆ. ಅಲ್ಲಿರತಕ್ಕ ಲಂಚ ರುಷುವತ್ತುಗಳು ತಮಗೆ ಗೊತ್ತಿದೆ. ಇಂತಹ ಸ್ಥಿತಿಯೊಳಗಡೆ ಆ ಕಂಪ್ಯೂಟರ್ ಸರಿ ಇಲ್ಲ. ಅದನ್ನು ಕೂಡಲೇ ಸರಿ ಮಾಡಬೇಕು. ನಮಗೆ ಅದು ಭಾರಿ ದೊಡ್ಡ ಸಮಸ್ಯೆ ಆಗುತ್ತಾ ಇದೆ. ಇದರ ಬಗ್ಗೆ ಸರ್ಕಾರ ಯೋಚನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಹಾಗೆಯೇ ಇನ್ನೊಂದು ಸಮಸ್ಯೆ ಬೆಳೆ ವಿಮೆ. ವಿಶೇಷವಾಗಿ ನನ್ನ ಕ್ಷೇತ್ರ ಅರ್ಧ ಮಲೆನಾಡು ಕೂಡ ಸೇರುತ್ತದೆ. ಆಲೂರು ತಾಲ್ಲೂಕು. ಆದರೆ, ನನಗೊಂದು ಭಾರಿ ಅನ್ಯಾಯವಾಗಿದೆ. ಅಲೂರು ತಾಲ್ಲೂಕಿನಲ್ಲಿರತಕ್ಕ ರೈತರು ಮತ್ತು ಹಾಸನದಲ್ಲಿರತಕ್ಕ ರೈತರು ಎರಡೂ ಕೂಡ ಒಂದೇ ಭಾಗದಲ್ಲಿರತಕ್ಕಂಥಾದ್ದು. ನಾವು ಬೆಳೆಯತಕ್ಕ ಅಲೂಗೆಡ್ಡೆಗೆ ಬೆಳೆ ಪರಿಹಾರ ಮತ್ತು ಹಾಸನ ತಾಲ್ಲೂಕಿಗೆ ಕೊಡತಕ್ಕ ಬೆಳೆ ಪರಿಹಾರ ಈ ಎರಡಕ್ಕೂ ವ್ಯತ್ಯಾಸ ಇದೆ. ಹಾಸನದಲ್ಲಿ ಬೆಳೆ ವಿಮೆಗೆ ಕಟ್ಟಿರುವಂಥ ಹಣವನ್ನು ನಾವೂ ಕಟ್ಟಿರುತ್ತೇವೆ. ಆದರೆ, ಹಾಸನದವರು ಎಕರೆಗೆ ಒಂಭತ್ತು ಸಾವಿರ ರೂಪಾಯಿ ಬೆಳೆ ವಿಮೆ ಪಡೆದಿದ್ದಾರೆ. ಅಲೂರು ತಾಲ್ಲೂಕಿನಲ್ಲಿ ಐದು ಸಾವಿರ ರೂಪಾಯಿ ಕೊಟ್ಟಿದ್ದಾರೆ. ಬ್ಯಾಂಕಿನಲ್ಲಿ ಸಾಲ ಇಲ್ಲದೇ ಇದ್ದವರಿಗೆ ಎರಡೂವರೆ ಸಾವಿರ ರೂಪಾಯಿ ಕೊಟ್ಟಿದ್ದಾರೆ.

ಈ ತಾರತಮ್ಯ ಏಕೆ ? ನಾವೆಲ್ಲರೂ ಕರ್ನಾಟಕದವರು ನಾವೆಲ್ಲರೂ ರೈತರು ಅಲ್ಲಿ ಅಲೂಗೆಡ್ಡೆ ಬೆಳೆದವನೂ ರೈತ, ಇಲ್ಲಿ ಬೆಳೆದವನೂ ರೈತ, ಆದರೆ, ಒಂದು ಕಡೆಗೆ ಒಂಭತ್ತು ಸಾವಿರ ರೂಪಾಯಿ, ಅದೇ ಪಕ್ಕದಲ್ಲಿ ಬೆಳೆದಂಥ ಅಲೂರು ತಾಲ್ಲೂಕಿನ ರೈತನಿಗೆ ಕೇವಲ ಐದು ಸಾವಿರ ರೂಪಾಯಿ. ಅದು ಯಾರಿಗೆ ಸಾಲ ತೆಗೆದುಕೊಂಡವರಿಗೆ, ಯಾವ ಕೋ ಅಪರೇಟಿವ್ ಬ್ಯಾಂಕಿನಲ್ಲಿ ಸಾಲ ತಗೆದುಕೊಂಡಿದ್ದಾನೆ ಸಾಲಗಾರ, ಅವನಿಗೆ ಐದು ಸಾವಿರ ರೂಪಾಯಿಗಳಾದರೆ, ಸಾಲ ತೆಗೆದುಕೊಳ್ಳದೇ ಇರತಕ್ಕವನಿಗೆ ಎರಡೂವರೆ ಸಾವಿರ ರೂಪಾಯಿ. ಈ ತಾರತಮ್ಯ ಏಕೆ ? ಇದು ನನಗೆ ಅರ್ಥವಾಗುವುದಿಲ್ಲ. ಇದು ಅಧಿಕಾರಿಗಳು ಮಾಡತಕ್ಕ ತಪ್ಪೇ ಅಥವಾ ನಮ್ಮ ಯೋಜನೆಯೊಳಗೆ ಏನಾದರೂ ತಪ್ಪಿದೆಯೇ ಎನ್ನುವುದನ್ನು ಕೂಡಲೇ ನನಗೆ ತಿಳಿಸಬೇಕು ಮತ್ತು ಅದನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲದೆ, ನಮಗೆ ಇನ್ನೊಂದು ಸಮಸ್ಯೆಯಾಗಿದೆ. ವಿಶೇಷವಾಗಿ ನನ್ನ ಕ್ಷೇತ್ರ ಅಲೂರಿನಲ್ಲಿ ಸುಮಾರು ಎರಡು ಸಾವಿರ ಎಕರೆಯಷ್ಟು ಅಲೂಗೆಡ್ಡೆ ಹಾಕಿದ್ದೆವು. ಸುಮಾರು ಹತ್ತು ಸಾವಿರ ಎಕರೆಯಷ್ಟು ಜೋಳ ಹಾಕಿದ್ದೆವು. ಅದಕ್ಕೆ ಈಗ ಬೆಳೆ ವಿಮೆ ಕಟ್ಟಬೇಕಾಗಿದೆ. ಈ ವಿಮೆಯನ್ನು ಕಟ್ಟಿಸಿಕೊಳ್ಳುತ್ತಾ ಇಲ್ಲ. ಅಧಿಕಾರಿಗಳ ನಿರ್ಲಕ್ಷ್ಯ, ಅಕ್ಕಿ ಹಗರಣದಲ್ಲಿ ಇನ್ನೊಂದು ಭಾರಿ ಜನರು ಆಚೆ, ಈಚೆ ಹೋಗಿ, ಒಂದು ಇಲಾಖೆಗೆ ಇನ್ನೊಂದು ಇಲಾಖೆಯವರನ್ನು ಇನ್‌ಚಾರ್ಜ್ ಹಾಕಿದ್ದಾರೆ. ಇದರಿಂದ ಸಮಸ್ಯೆ ಏನಾಗಿದೆ ? ಇವತ್ತು ಅಧಿಕಾರಿಗಳ ಏನೊಂದು ನಿರ್ಲಕ್ಷ್ಯ ಇದೆ, ಅದರಿಂದ ಒಂದು ತಿಂಗಳ ಕಾಲಮಿತಿಯೊಳಗೆ ಏನು ಬೆಳೆ ವಿಮೆಯನ್ನು ಮಾಡಬೇಕಾಗಿತ್ತು. ಅದನ್ನು ಮಾಡಲಿಕ್ಕೆ ಸಾಧ್ಯವಾಗಲಿಲ್ಲ. ಈಗ ಅಧಿಕಾರಿಗಳು ಹೇಳುತ್ತಾರೆ, ನೀವು ಒಂದು ತಿಂಗಳು ಆಚೆ ಆದುದಕ್ಕೆ ನಾವು ಬೆಳೆ ವಿಮೆಗೆ ಸೇರಿಸುವುದಕ್ಕೆ ಸಾಧ್ಯವಿಲ್ಲ ಎಂದು. ಇದೊಂದು ದೊಡ್ಡ ಸಮಸ್ಯೆ. ನಾನು ಕೃಷಿ ಸಚಿವರಿಗೆ ಕೇಳುತ್ತೇನೆ. ಕನಿಷ್ಟ 15 ದಿವಸ ಇದನ್ನು ಮುಂದುವರಿಸಿಕೊಡಬೇಕು ಮತ್ತೆ ಆ ಭಾಗದ ರೈತರ ಬೆಳೆಯ ವಿಮೆಯನ್ನು ಕಟ್ಟಿಸಿ ಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇದರೊಳಗೆ ಇನ್ನೊಂದು ಸಮಸ್ಯೆ ಎಂದರೆ, ಯಾವುದೇ ಬ್ಯಾಂಕ್‌ಗಳಲ್ಲಿ ಅಥವಾ ಸಹಕಾರಿ ಸಂಘಗಳಲ್ಲಿ ಒಂದು ಸರ್ವೆ ನಂಬರು 10 ಎಕರೆ ಇದ್ದು, ಅದನ್ನು ಅಡ್ಡ ಹಾಕಿ ಆಧಾರ ಮಾಡಿ ನಾವು ಸಾಲ ತೆಗೆದುಕೊಂಡರೆ. ಅಲ್ಲಿ ಐದು ಎಕರೆಗೆ ಮಾತ್ರ ಸಾಲ ಕೊಟ್ಟಿರುತ್ತಾರೆ. ಇನ್ನುಳಿದ ಐದು ಎಕರೆಗೆ ಕೊಟ್ಟಿರುವುದಿಲ್ಲ. ಆದರೆ, ಆ ಸರ್ವೆ ನಂಬರಿಗೆ ಐದು ಎಕರೆಗೆ ಬೆಳೆ ವಿಮೆಯನ್ನು ಕಟ್ಟಿಸಿಕೊಳ್ಳುತ್ತಾರೆ. ಆದರೆ, ಇನ್ನುಳಿದ ಐದು ಎಕರೆಗೆ ಕಟ್ಟುವುದಿಲ್ಲ. ಆ ಕಟ್ಟದೇ ಇರತಕ್ಕ ಐದು ಎಕರೆಗೆ ಇನ್ನೆಲ್ಲೂ ಕಟ್ಟುವುದಕ್ಕಾಗುವುದಿಲ್ಲ. ಇದಕ್ಕೆ ಕಾರಣ, ಆ ಸರ್ವೆ ನಂಬರಿಗೆ ಯಾವುದಾದರೂ ಒಂದು ಕಡೆ ಕಟ್ಟಿದರೆ, ಕಾಯಿದೆಯೊಳಗೆ ಇನ್ನೊಂದು ಕಡೆ ಬೆಳೆ ವಿಮೆ ಕಟ್ಟುವುದಕ್ಕೆ ಬರುವುದಿಲ್ಲ. ಈಗ ಬ್ಯಾಂಕಿನವರು ಐದು ಎಕರೆಗೆ ಮಾತ್ರ ಬೆಳೆ ವಿಮೆ ಮಾಡುತ್ತಾರೆ. ಇನ್ನು ಐದು ಎಕರೆ ಉಳಿಯುತ್ತದೆ. ಈ ಐದು ಎಕರೆ ಬೆಳೆ ವಿಮೆ ಯಾರು ಮಾಡವವರು ? ಈ ರೈತ ಸಮಸ್ಯೆಯನ್ನು

ಬಗೆಹರಿಸುವವರು ಯಾರು ? ಈ ಸಮಸ್ಯೆಯನ್ನು ಕೂಡಲೇ ಸರ್ಕಾರ ಗಮನಿಸಿ ಬಗೆಹರಿಸಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಅಧ್ಯಕ್ಷರೇ, ಒಟ್ಟಾರೆ ಒಂದು ಅತ್ಯುತ್ತಮವಾದಂಥ ಬಜೆಟ್‌ನೊಳಗಡೆ ಮಲೆನಾಡು ಜನರು ಇಡೀ ರಾಜ್ಯದ ಜನರನ್ನು ಸಂತೋಷಪಡಿಸತಕ್ಕ ಸಂದರ್ಭದೊಳಗಡೆ,,,,,,,,,

ಶ್ರೀ ಸಿ.ಟಿ. ರವಿ : ಸಾಕಷ್ಟು ವಿವರವನ್ನು ಮಲೆನಾಡಿನ, ಜನರ ತೊಂದರೆಯನ್ನು ಸಕಲೇಶಪುರ ಶಾಸಕರು ಸದನದ ಮುಂದೆ ಇಟ್ಟಿದ್ದಾರೆ. ಅದರಲ್ಲಿ ಒಂದು ವಿಷಯವನ್ನು ಮರೆತುಬಿಟ್ಟರು. ನಾವೇ ಬೆಳೆದಂಥ ಸಿಲ್ವರ್ ಮರ ಕಡಿಯಲಿಕ್ಕೆ ಮುಖ್ಯಮಂತ್ರಿ ನಿಧಿಗೆ ಒಂದು ಮೀಟರ್‌ಗೆ ಇನ್ನೂರು ರೂಪಾಯಿ ದಂಡ ಕಟ್ಟಬೇಕು. ಮೊದಲೇ ಕಷ್ಟದಲ್ಲಿದ್ದೇವೆ. ಕಷ್ಟದಲ್ಲಿದ್ದವರು ಕಷ್ಟ ಹೇಳಿಕೊಳ್ಳಲಿಕ್ಕೆ ಬಂದರೆ, ಮತ್ತೆ ಬರೆ ಹಾಕತಕ್ಕ ವ್ಯವಸ್ಥೆಯಾಗಿದೆ. ಕೂಡಲೇ ಇದನ್ನು ರದ್ದು ಮಾಡಬೇಕು. ರದ್ದು ಮಾಡದೇ ಹೋದರೆ ಬದುಕುವುದಕ್ಕೆ ಸಾಧ್ಯವಿಲ್ಲದಂಥವರು ಮತ್ತೆ ನೇಣಿಗೆ ಶರಣಾದಂಥ ಸ್ಥಿತಿ ಬರುತ್ತೆ.

ಶ್ರೀ ಹೆಚ್.ಎಂ. ವಿಶ್ವನಾಥ್ : ಅಧ್ಯಕ್ಷರೇ, ಕಳೆದ ಉಸ್ತುವಾರಿ ಸರ್ಕಾರವಿದ್ದಾಗ ಫಾರೆಸ್ಟ್ ಆಕ್ಟ್ 1965 ಇತ್ತೀಚೆಗೆ ಘೋಷಿತ ರೂಲ್ 145 ಇದರೊಳಗಡೆ ಒಂದು ಕ್ಯೂಬಿಕ್ ಮೀಟರಿಗೆ (ಸೌದೆಗೆ) 200 ರೂಪಾಯಿ, ಮತ್ತೆ ಟಿಂಬರಿಗೆ 25 ರೂಪಾಯಿ ಎಂದು ಹಾಕಿದ್ದಾರೆ. ಇದು ಭಾರೀ ಅನ್ಯಾಯ. ನಾವು ಬೆಲೆದಂಥ ಮರ, ನಮ್ಮ ಜಮೀನಿನಲಿ ನಾವು ಕಷ್ಟಪಟ್ಟು ಬೆಳೆದಂಥ ಮರವನ್ನು, ನಾವೇ ಸಾಗಾಣಿಕೆ ಮಾಡಲಿಕ್ಕೆ ಹೊರಟರೆ, ಆ ಸಾಕಾಣಿಕೆ ಮಾಡುವಂಥಾದ್ದು ಅಕೇಷಿಯಾ ಇರಬಹುದು, ಸಲ್ವರ್ ಇರಬಹುದು, ಹಾಲ್ವಾಡಿ ಇರಬಹುದು. ಅಥವಾ ಈ ಮೆದು ಮರಗಳು ಯಾವುದೇ ಇರಬಹುದು. ಆ ಮರಗಳ ಮೇಲೆ ಮುಖ್ಯಮಂತ್ರಿಗಳ ರಸ್ತೆ ನಿಧಿಗೆ ಇಷ್ಟು ದೊಡ್ಡ ಪ್ರಮಾಣದ, ಒಂದು ಲೋಡ್ ಮೇಲೆ 2 ಸಾವಿರದಿಂದ 4 ಸಾವಿರ ರೂಪಾಯಿ ಹಾಕಿದ್ದಾರೆ. ಅದೂ ಸಿಲ್ವರ್ ಬಿಲೇಟ್ಸ್ ಎಂದು ನಾಲ್ಕು ಅಡಿ ಪೀಸನ್ನು ಮಾಡುತ್ತಾರೆ. ಆ ನಾಲ್ಕು ಅಡಿ ಪೀಸಿಗೆ 6 ಸಾವಿರ ರೂಪಾಯಿ ತೆರಿಗೆ ಹಾಕುತ್ತಾರೆ. ಯಾವ ರೈತ ಆರು ಸಾವಿರ ರೂಪಾಯಿ ಕೊಟ್ಟು ಬದುಕುವುದಕ್ಕೆ ಸಾಧ್ಯವಾಗುತ್ತದೆ? ನನ್ನ ಸ್ನೇಹಿತರು ಹೇಳುತ್ತಾರೆ 10 ಸಾವಿರ ಎಂದು. ಇದು ಒಂದು ತರಹ ಲೂಟಿಯಾಗುತ್ತದೆ. ನಾವು ಒಂದು ಲೋಡ್ ಸೌದೆ ಮಾಡಿದರೆ, ಅದನ್ನು ಎರಡು ಸಾವಿರ ರೂಪಾಯಿಗೆ ಮಾರುತ್ತೇವೆ. ಇವರು ಎರಡು ಸಾವಿರ ರೂಪಾಯಿಗಳ ತೆರಿಗೆಯನ್ನೇ ಹಾಕಿದರೆ, ನಮಗೆ ಇನ್ನೆಲ್ಲಿಂದ ಹಣ ಸಿಗುತ್ತದೆ ? ಒಂದು ಲೋಡ್ ಸಿಲ್ವರ್ ವೋಕ್ ಮಾರಿದರೆ 10 ಸಾಫಿರ ರೂಪಾಯಿ ಅಲ್ಲ ನಮಗೆ ಐದು ಸಾವಿರ ರೂಪಾಯಿ ಸಿಕ್ಕುವುದು. 10 ಸಾವಿರ ರೂಪಾಯಿ ತೆರಿಗೆ ಹಾಕಿದರೆ ಯಾರು ಕೊಳ್ಳುವುದಕ್ಕೆ ಬರುತ್ತಾರೆ ? ಕಳೆದ ತಿಂಗಳು ಭಾರಿ ಬಿರುಗಾಳಿ ಬಂತು. ಬಿರುಗಾಳಿ ಬಂದರೆ, ಮಳೆ ಬಂದರೆ ಕಷ್ಟ ಬಂದರೆ ನಮಗೆ, ಬಯಲುಸೀಮೆಯ ನನ್ನ ಸ್ನೇಹಿತರಿಗೆ ಒಂದು ಮಾತು ಹೇಳುತ್ತೇನೆ ಇದನ್ನು ಕೇಳಬೇಕು. ನಿಮ್ಮ ಗೊರೂರು ಡ್ಯಾಮ್ ಇರಬಹುದು, ಹೇಮಾವತಿಯಲ್ಲಿ ಕಟ್ಟಿರುವುದು, ಅಥವಾ ಕಾವೇರಿಗೆ

ಕಟ್ಟಿರತಕ್ಕಂಥ ಕನ್ನಂಬಾಡಿ ಕಟ್ಟೆ ಇರಬಹುದು, ಅಥವಾ ಹೊಸಪೇಟೆಯಲ್ಲಿ ಕಟ್ಟಿರತಕ್ಕಂಥ ಡ್ಯಾಮ್ ಇರಬಹುದು, ಇದಕ್ಕೆಲ್ಲಾ ನೀರು ಬರುವುದು ನಮ್ಮ ಮಲೆನಾಡಿನಿಂದ. ಪಶ್ಚಿಮಘಟ್ಟದಿಂದ ಬರುವುದು. ಇದು ನದಿ ಮೂಲ. ಇದು ಋಷಿ ಮೂಲ. ಇದು ಅತ್ಯಂತ ಶಾಂತಿಯುತವಾಗಿ ಇದು ಅತ್ಯಂತ ತಾಳ್ಮೆಯಿಂದ ಇರಬೇಕಾದ ಜಾಗ ಇದು. ಆದರೆ ಈ ಜಾಗದ ಜನರನ್ನು ನೀವು ಕೆಣಕುತ್ತಿದ್ದೀರಿ. ಈ ಜಾಗದ ಜನರ ಸಮಸ್ಯೆಗಳನ್ನು ನೀವು ನೋಡುತ್ತಿಲ್ಲ. ಈ ಭಾಗದ ಜನರನ್ನು ಸರ್ಕಾರಗಳು ಉದ್ದೇಶಪೂರ್ವಕವಾಗಿ ಮೂಲೆಗುಂಪು ಮಾಡಿದೆ. ಅದಕ್ಕೆ ಉದಾಹರಣೆ ಈ-ಫಾರೆಸ್ಟ್ ಆ್ಯಕ್ಟ್. ಯಾವ ಆಧಾರದ ಮೇಲೆ ಈ ಫಾರೆಸ್ಟ್ ಆ್ಯಕ್ಟ್‌ನ್ನು ಮಾಡಿದಿರಿ ಎನ್ನುವುದು ಗೊತ್ತಿಲ್ಲ ನನಗೆ. ನಮ್ಮ ರಸ್ತೆಗಳನ್ನು ನೋಡಿದರೆ ಗುಂಡಿ ಬಿದ್ದಿವೆ, ನಮ್ಮ ರಸ್ತೆಗಳಲ್ಲಿ ತಿರುಗಾಡುವಂತೆ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ನಮಗೆ ರಸ್ತೆ ಅಭಿವೃದ್ಧಿಗೆ ದುಡ್ಡು ಕೊಡುವುದಿಲ್ಲ. ನಮ್ಮಿಂದ ಹಣ ತೆಗೆದುಕೊಳ್ಳುತ್ತೀರಿ. ಈ ಎಲ್ಲಾ ನದಿಗಳ ಮೂಲಗಳು ಬತ್ತಿ ಹೋಗುತ್ತಿವೆ ಎಂಬುದನ್ನು ನೆನಪು ಇಟ್ಟುಕೊಳ್ಳಿ. ಈ ನದಿಯ ಮೂಲಗಳೂ ಬತ್ತಿದ ಕಾರಣ ಸರ್ಕಾರ ಆ ಭಾಗದ ಜನರನ್ನು ಸಂಪೂರ್ಣ ತಾತ್ಸಾರದಿಂದ ನೋಡುತ್ತಿದ್ದೀರಿ. ಅದರ ಅಭಿವೃದ್ಧಿಯನ್ನು ಕಡೆಗಣಿಸಿದ್ದೀರಿ. ಒಂದು ಕಾಲಕ್ಕೆ ಉತ್ತರ ಕರ್ನಾಟಕದವರು ಕೇಳುತ್ತಿದ್ದಾರೆ. ಮಾನ್ಯ ವೈಜ್ಯನಾಥಪಾಟೀಲರು ಇಲ್ಲಿ ಇಲ್ಲ. ಅವರು ಉತ್ತರ ಕರ್ನಾಟಕದಲ್ಲಿ ನಮಗೆ ಪ್ರತ್ಯೇಕ ರಾಜ್ಯ ಕೊಡಿ ಎಂದು ಕೇಳುತ್ತಾರೆ. ನಿಜವಾದ ರಾಜ್ಯ ಕೇಳಬೇಕಾದವರು ನಾವು ಪಶ್ಚಿಮಘಟ್ಟದವರು ನಮ್ಮ ಎಲ್ಲಾ ಅನುಕೂಲಗಳು, ಐಶ್ವರ್ಯಗಳು ಎಲ್ಲವನ್ನೂ ಕೂಡ ನಾವು ಧಾರೆ ಎರೆಯುತ್ತಿದ್ದೇವೆ. ಸರ್ಕಾರಕ್ಕೆ ಸಾರ್ವಜನಿಕರಿಗೆ ಆದರೂ ನಮ್ಮನ್ನು ಕಡೆಗಣಿಸುತ್ತಿದ್ದೀರಿ. ಒಂದು ಕಾಲಕ್ಕೆ ನಾವು ಕೇಳುತ್ತೇವೆ. ಇಡೀ ಪಶ್ಚಿಮಘಟಕ್ಕೆ ಪ್ರತ್ಯೇಕ ರಾಜ್ಯ ಕೊಡಿ ಎಂದು ಕೇಳುವಂತಹ ಕೂಗು ಜಾಸ್ತಿ ದಿವಸ ಇಲ್ಲ. ಕೊಡಗಿನವರು ಪ್ರತ್ಯೇಕ ರಾಜ್ಯ ಕೇಳುತ್ತಿದ್ದಾರೆ. ಏಕೆ ಕೇಳುತ್ತಾರೆ ಪ್ರತ್ಯೇಕ ರಾಜ್ಯ ? ಪ್ರತ್ಯೇಕ ರಾಜ್ಯ ಕೇಳುವುದು ನೀವು ಅಭಿವೃದ್ಧಿಯನ್ನು ಕಡೆಗಣಿಸಿದ್ದೀರಿ. ನಮ್ಮ ಕೃಷಿಯನ್ನು ಕಡೆಗಣಿಸಿದ್ದೀರಿ. ನಮಗೆ ಬರಬೇಕಾದ ಸವಲತ್ತುಗಳು ಸಾರ್ವಜನಿಕ ಪಾಲುಗಳನ್ನು ಕೊಡುವುದರಲ್ಲಿ ಕಡೆಗಣಿಸುತ್ತಿದ್ದೀರಿ. ಇದರಿಂದ ಮಾತ್ರ ಪ್ರತ್ಯೇಕ ರಾಜ್ಯದ ಕೂಗು ಬರುತ್ತಿದೆ. ನಾವೂ ಕೂಡ ಪ್ರತ್ಯೇಕ ರಾಜ್ಯದ ಕೂಗನ್ನು ಒಂದು ಕಾಲಕ್ಕೆ ಕೇಳಬೇಕಾಗುತ್ತದೆ. ಅದಕ್ಕೆ ಅವಕಾಶ ಮಾಡಿಕೊಡುವುದಿಲ್ಲವೆಂದು ನಾನು ಅಂದುಕೊಂಡಿದ್ದೇನೆ. ಪಶ್ಚಿಮಘಟ್ಟದಲ್ಲಿರತಕ್ಕಂಥ ಜನರು ಸಭ್ಯರು, ನಾಗರೀಕರು ಈ ಸರ್ಕಾರಕ್ಕೆ ಮತ್ತು ಸಾರ್ವಜನಿಕರಿಗೆ ನಮ್ಮ ಶಕ್ತಿಯನ್ನು ಕೊಟ್ಟವರು. ಮಾನ್ಯ ಅಧ್ಯಕ್ಷರೇ, ನನ್ನ ಕೊನೆಯ ಕೋರಿಕೆ. ದಯಮಾಡಿ ಪಶ್ಚಿಮಘಟ್ಟವನ್ನು ಕಡೆಗಣಿಸಬೇಡಿ. ಕರ್ನಾಟಕದ ಅಭಿವೃದ್ಧಿಗೆ ಪೂರಕವಾದಂತಹ ಈ ಪಶ್ಚಿಮಘಟ್ಟದ ಶ್ರೇಣಿಯನ್ನು ನೀವು ಉಳಿಸಿಕೊಳ್ಳಬೇಕಾಗುತ್ತದೆ. ಈ ಭಾಗದ ಜನರ ಸಮಸ್ಯೆಗಳಿಗೆ ಸ್ಪಂದಿಸಬೇಕಾಗುತ್ತದೆ. ಇದಕ್ಕೆ ಬಜೆಟ್‌ನಲ್ಲಿ ಹೆಚ್ಚು ಹಣವನ್ನು ಇಡಬೇಕಾಗುತ್ತದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ ನಮ್ಮ ಕಾಫಿ, ಎಲಕ್ಕಿ, ಮೆಣಸು

ಮತ್ತು ಅಡಿಕೆ ಈ ಭಾಗದ ರೈತರ ಸಮಸ್ಯೆಯನ್ನು ಬಗೆಹರಿಸಿ ಎಂದು ಈ ಸಂದರ್ಭದಲ್ಲಿ ಹೇಳಿ ನನಗೆ ಈ ಬಜೆಟ್ ಮೇಲೆ ಮಾತನಾಡಲು ಅವಕಾಶ ಮಾಡಿಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†**ಶ್ರೀ ಜಿ. ಬಸವಣ್ಣಪ್ಪ (ಹೊಳೆಹೊನ್ನೂರು)** : ಮಾನ್ಯ ಅಧ್ಯಕ್ಷರೇ, ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು ಮಂಡಿಸಿರುವ 2004-05ನೇ ಸಾಲಿನ ಬಜೆಟ್ ನ ಪ್ರತಿಯೊಂದು ಅಂಶವನ್ನೂ ನಾನು ಗಮನಿಸಿದ್ದೇನೆ. ಹಿಂದೆ ಮಾನ್ಯ ಸಿದ್ಧರಾಮಯ್ಯನವರು 5 ಬಾರಿ ಬಜೆಟ್‌ನ್ನು ಈ ಶಾಸನ ಸಭೆಯಲ್ಲಿ ಮಂಡಿಸಿದ್ದಾರೆ. ಆಗ ಜನತಾದಳ ಅವಿಭಾಜ್ಯ ಅಂಗವಾಗಿತ್ತು ಒಳ್ಳೆಯ ಪರಿಸರ ಇತ್ತು. ಆದರೆ ಈಗ ಮಾನ್ಯ ಸಿದ್ಧರಾಮಯ್ಯನವರಿಗೆ ಅಂತಹ ವಾತಾವರಣ ಇಲ್ಲ. ಅಂತಹ ಪರಿಸರ ಇಲ್ಲ. ಯಾವ ಪಕ್ಷವನ್ನು ಉಗ್ರವಾಗಿ ಟೀಕಿಸುತ್ತಿದ್ದರೋ ಆ ಪಕ್ಷದ ಜೊತೆಗೆ ಸೇರಿ ಈ ಬಜೆಟನ್ನು ಮಂಡಿಸಬೇಕಾದರೆ ಅವರಿಗೆ ಆಗಿರತಕ್ಕಂಥ ಕಷ್ಟ ಏನು ಏನ್ನುವುದು ನನಗೆ ಗೊತ್ತಿದೆ. ಕನಿಷ್ಟ ಸಾಮಾನ್ಯ ಕಾರ್ಯಕ್ರಮವನ್ನು ರೂಪಿಸಬೇಕಾದರೆ ಸುಮಾರು ಒಂದೂವರೆ ತಿಂಗಳು ತೆಗೆದುಕೊಂಡರು. ಆದರೂ ಅದು ಇನ್ನೂ ಸಂಪೂರ್ಣವಾಗಿ ಆಗಿಲ್ಲ. ಬಹುಮತ ಸಿಕ್ಕಿಲ್ಲ. ಆದುದ್ದರಿಂದ ಈ ಬಜೆಟನ್ನು ರೂಪಿಸಬೇಕಾದರೆ ಅವರು ತುಂಬಾ ತೊಂದರೆಯನ್ನು ಅನುಭವಿಸಿದ್ದಾರೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಆದರೆ ಅವರು ಬಹಳ ನಿಷ್ಠೂರವಾಗಿ ಹಿಂದಿನ ಸರ್ಕಾರದಲ್ಲಿ ಇದ್ದ ಆರ್ಥಿಕ ಪರಿಸ್ಥಿತಿಯ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ. ಆರ್ಥಿಕ ಪರಿಸ್ಥಿತಿಯನ್ನು ಸರಿಪಡಿಸುವಲ್ಲಿ ಹಿಂದಿನ ಸರ್ಕಾರ ಸಂಪೂರ್ಣವಾಗಿ ವಿಫಲವಾಯಿತು ಎನ್ನುವ ಮಾತನ್ನು ತಮ್ಮ ಹೇಳಿಕೆಯಲ್ಲಿ ಹೇಳಿದ್ದಾರೆ. 40 ಸಾವಿರ ಕೋಟಿ ಸಾಲದ ಮೊತ್ತವನ್ನು ಈ ರಾಜ್ಯದ ಜನತೆ ಮೇಲೆ ಹೇರಿದ್ದಾರೆ. ಅನುತ್ಪಾದಕ ವೆಚ್ಚ ದ್ವಿಗುಣಗೊಂಡಿರುವುದಾಗಿ ಹೇಳಿದ್ದಾರೆ. ಒಟ್ಟಾರೆ ವೆಚ್ಚದಲ್ಲಿ ಅಭಿವೃದ್ಧಿ ವೆಚ್ಚದ ಪ್ರಮಾಣ ಶೇಕಡ 65ರಿಂದ ಶೇಕಡ 60ಕ್ಕೆ ಇಳಿದಿದೆ ಎಂದು ಅಂದಿನ ಹಣಕಾಸಿನ ದುಸ್ಥಿತಿಯನ್ನು ಅವರು ಸತ್ಯಾಂಶವನ್ನು ಹೊರಗೆಡವಿದ್ದಾರೆ. ಅದಕ್ಕಾಗಿ ನಾನು ಅವರನ್ನು ಅಭಿನಂದಿಸಬೇಕಾಗಿದೆ. ಹಣಕಾಸಿನ ವಿಫಲತೆಯ ಬಗ್ಗೆ. ಸಿ ಎ ಜಿ ಯವರು ತಮ್ಮ ವರದಿಯಲ್ಲಿ ಸವಿಸ್ತಾರವಾಗಿ ತಿಳಿಸಿದ್ದಾರೆ. ಮಾನ್ಯ ಸಿದ್ಧರಾಮಯ್ಯನವರು ಕಳೆದ 3 ತಿಂಗಳಿನಿಂದ ಏನು ಬಜೆಟನ್ನು ತಯಾರು ಮಾಡಿದ್ದಾರೆ ಅದು ಕೆಲವು ನ್ಯೂನತೆಗಳಿಂದ ಕೂಡಿದೆ. ಅವುಗಳನ್ನು ನಾನು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ. ಅನೇಕ ತೆರಿಗೆ ಬಾಬ್ತುಗಳಲ್ಲಿ ರಿಯಾಯಿತಿ ತೋರಿಸಿದ್ದಾರೆ. ಇವುಗಳಲ್ಲಿ ಪ್ರಮುಖವಾದವು ಬಡವರು, ಸಾಮಾನ್ಯ ವರ್ಗದವರು ಬಳಸುವುದಿಲ್ಲ ಅವು ಯಾವುವೆಂದರೆ ರಬ್ಬರ್ ಕೋಯಿರ್ ಪ್ರಾಡಕ್ಟ್ಸ್. ಎಲೆಕ್ಟಿಕಲ್ ಗೂಡ್ಸ್, ಅರ್ತನ್‌ವೇರ್ ಮುಂತಾದವು. ಮತ್ತು ತೆರಿಗೆಯೇತರ ಬಾಬ್ತುಗಳು ಹೆಚ್ಚಾಗಿ ಹಣಕಾಸು ಸಚಿವರು ಗಮನಿಸಬಹುದು, ಅವು ಯಾವುವೆಂದರೆ ಮೈನ್ಸ್ ಅಂಡ್ ಜಿಯಾಲಜಿ ಸೇಲ್ಸ್ ಆಫ್ ಪ್ರಾಪರಿಟಿ ರೈಟ್ಸ್. ರಿಜಿಸ್ಟ್ರೇಶನ್ ಫೀಜು, ಮುಂತಾದವು ಆದರೆ ಎಕ್ಸೈಜ್ ಬಾಬ್ತುಗೆ ಯಾವ ರೀತಿಯ ಹೆಚ್ಚಳ ತೆರಿಗೆಯನ್ನೂ

ನಿಗಧಿಪಡಿಸಿಲ್ಲ. ಇದನ್ನು ಮಾಡಿದ್ದರೆ ಸರ್ಕಾರಕ್ಕೆ ಆದಾಯ ಹೆಚ್ಚಾಗಿ ಬರುತ್ತಿತ್ತು. ಮತ್ತು ಬಡವರ ಕಲ್ಯಾಣಕ್ಕೆ ಹಿಂದುಳಿದವರು, ಅಲ್ಪ ಸಂಖ್ಯಾತರು ಪರಿಶಿಷ್ಟ ಜಾತಿ ಮತ್ತು ಜನಾಂಗ ಇವರ ಬಗ್ಗೆ ಯಾವ ಪ್ರಮಾಣದಲ್ಲಿ ಹಣ ನಿಗಧಿ ಮಾಡಬೇಕಾಗಿತ್ತೋ ಅಷ್ಟು ಮಾಡಿಲ್ಲ. ಶೇಕಡ 3.6 ರಷ್ಟು ಮಾತ್ರ ಹಣವನ್ನು ಈ ಯೋಜನೆಯಲ್ಲಿ ನಿಗಧಿಪಡಿಸಿದ್ದಾರೆ. ಇದು ಬಹಳ ದುರಾದೃಷ್ಟಕರ, ನೀರಾವರಿ ಮತ್ತು ಪ್ರವಾಹ ನಿಯಂತ್ರಣಕ್ಕೆ ಕೇವಲ 3 ಸಾವಿರ ಕೋಟಿ ರೂ. ನಿಗಧಿಪಡಿಸಿದ್ದಾರೆ. ಇದು ಅಪೂರ್ಣವಾಗಿರುವ ಯೋಜನೆಗಳಿಗೆ ಮಾತ್ರ ಈ ಹಣ ಸಾಕಾಗುತ್ತದೆ. ಇನ್ನು ಹೊಸ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳುವುದಕ್ಕೆ ಹೇಗೆ ಸಾಧ್ಯ ? ಇದು ಸಾಧ್ಯವಿಲ್ಲದ ಮಾತು. ಸ್ಟ್ಯಾಂಪ್ ನೋಂದಾಣಿ ಶುಲ್ಕ ಸ್ವಲ್ಪವಾದರು ಹೆಚ್ಚಿಸಬೇಕಾದಿತ್ತು. ಅದನ್ನು ಹಾಗೆಯೇ ಉಳಿಸಿರುವುದು ಸರಿಯಲ್ಲ ಎಂಬುದು ನನ್ನ ಅಭಿಮತ. ಅದೇ ರೀತಿ ಮನರಂಜನಾ ಶುಲ್ಕ ಕಡಿಮೆ ಮಾಡಿರುವುದು ಸರಿಯಲ್ಲ. ಮನರಂಜನೆ ಪಡೆಯುವವರು ತೆರಿಗೆ ಕೊಡಬೇಕಾಗುವುದು. ಅದಕ್ಕೆ ರಿಯಾಯಿತಿ ತೋರಿಸಿರುವುದು ಸರಿಯಲ್ಲ ಅಂತ ನಾನು ಹೇಳುತ್ತೇನೆ. ತಮಗೆ ತಿಳಿದಿದೆ ರೈತರು ಎಂತಹ ಸಂಕಷ್ಟದಲ್ಲಿದ್ದಾರೆಂದು. ಸತತ ಮೂರು ವರ್ಷಗಳ ಕಾಲ ಬರಗಾಲವನ್ನು ಎದುರಿಸಿದ್ದಾರೆ. ಆದುದರಿಂದ ಸರ್ಕಾರದಿಂದ ಆಗಬೇಕಾಗಿರುವ ಬೆಳೆ ವಿಮೆ ಏನು ಇದೆ 2002–03, 2003–04, ಈ ಹಣವನ್ನು ಚೆಕ್ ಮುಖಾಂತರ ಕೂಡಲೇ ಕೊಡಬೇಕೆಂದು ನಾನು ಈ ಮೂಲಕ ಒತ್ತಾಯಿಸುತ್ತೇನೆ. ಇನ್ನು ಅತಿ ಮುಖ್ಯವಾಗಿ ಸರ್ಕಾರ ಶಾಲಾ ಮಕ್ಕಳಿಗೆ ಬಿಸಿಯೂಟವನ್ನ ಆರಂಭಿಸಿದೆ. ಇದರಿಂದ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಧಕ್ಕೆಯಾಗುತ್ತದೆ. ಏಕೆಂದರೆ ಶಿಕ್ಷಕರು ಅವರು ಅಡುಗೆ ಮನೆಯಲ್ಲಿಯೇ ಕಾಲ ಕಳೆಯುತ್ತಾರೆಯೇ ಹೊರತು ಮಕ್ಕಳಿಗೆ ಪಾಠ ಹೇಳಿಕೊಡುವುದರಲ್ಲಿ ಆಸಕ್ತಿ ಇರುವುದಿಲ್ಲ. ಪಾಠ ಮಾಡುವುದನ್ನು ಬಿಟ್ಟು ಸಂಪೂರ್ಣ ಅಡುಗೆ ಕಡೆ ಗಮನ, ಇದರಿಂದ ಮುಂದಿನ ಪೀಳಿಗೆಯ ಶೈಕ್ಷಣಿಕ ಗುಣಮಟ್ಟ ಎಷ್ಟರ ಮಟ್ಟಿಗೆ ಆಗುತ್ತದೆ ಎನ್ನುವ ಬಗ್ಗೆ ನಾವು ಗಮನಹರಿಸಬೇಕಾಗುತ್ತದೆ. ಇತ್ತೀಚೆಗೆ ಕುಂಬಕೋಣಂನಲ್ಲಿ ಆದ ಘಟನೆಯನ್ನು ನಾವು ಗಮನಿಸಬೇಕು. ಇದು ಸಾಮಾನ್ಯ ದುರಂತವಲ್ಲ. ಏಕೆಂದರೆ ಎಲ್ಲಾ ಶಾಲೆಗಳಲ್ಲಿ ಬೆಂಕಿ ದುರಂತವನ್ನು ತಪ್ಪಿಸಲು ಯಾವ ವ್ಯವಸ್ಥೆಯೂ ಇಲ್ಲ. ನಾವು ಕಟ್ಟತಕ್ಕಂಥ ಅಡುಗೆ ಮನೆ ಕಟ್ಟಡಗಳು ಶಾಲೆಗಳು, ಆ ಪರಿಸರವನ್ನು ನೋಡಿದರೆ ಇಂತಹ ದುರಂತ ನಿರೀಕ್ಷೆಣೆಯನ್ನು ನಾವು ಮಾಡಬಹುದು. ಅಡುಗೆ ಮಾಡುವ ವಿಧಾನ ಬೆಂಕಿ ಹಚ್ಚುವ ವಿಧಾನ ಇವುಗಳು ನಿಜವಾಗಿಯೂ ಬಹಳ ಭಯಾನಕವಾಗಿದೆ. ಬಡ ವಿದ್ಯಾರ್ಥಿಗಳಿಗೆ ಬಿಸಿಯೂಟಕ್ಕೆ ಖರ್ಚಾಗತಕ್ಕ ಹಣ ಏನಿದೆ ಅದನ್ನು ಅವರ ಪೋಷಕರಿಗೆ ಆಹಾರ ಧಾನ್ಯ, ಸಕ್ಕರೆ ಸೀಮೆಎಣ್ಣೆ ಉಚಿತವಾಗಿ ನೀಡುವುದರ ಮೂಲಕ ಮಾಡಿದರೆ ಇದರಿಂದ ಮಕ್ಕಳು ಮನೆಯಲ್ಲಿ ಅವರ ತಾಯಂದಿರು ಮಕ್ಕಳಿಗೆ ಒಳ್ಳೆಯ ಆಹಾರವನ್ನು ಮಾಡಿ ಕೊಡುತ್ತಾರೆ. ಆ ಮಕ್ಕಳಿಗೆ ಒಳ್ಳೆಯ ಪೋಷ್ಟಿಕವಾದ ಆಹಾರವನ್ನು ಕೊಡುವುದಕ್ಕೆ ದಾರಿಯಾಗುತ್ತದೆ. ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ

ಇಚ್ಛೆಪಡುತ್ತೇನೆ, ಇನ್ನು ದೊಡ್ಡ ದೊಡ್ಡ ನೀರಾವರಿಗೆ ಹಣ ಖರ್ಚು ಮಾಡುವುದರಲ್ಲಿ ಅರ್ಥವಿಲ್ಲ. ಸಣ್ಣ ನೀರಾವರಿಗೆ ಏತ ನೀರಾವರಿಗೆ ಆಧ್ಯತೆಯನ್ನು ಕೊಡಬೇಕು. ತಮಗೆ ತಿಳಿದ ಹಾಗೆ ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದ ಉಗ್ರಾಣಿ, ಚನ್ನಗಿರಿ ತಾಲ್ಲೂಕು ಹಿಂದೆ ಮಾನ್ಯ ದಿವಂಗತ ಜೆ ಎಚ್ ಪಟೇಲರು ಇದ್ದಾಗ ಏತ ನೀರಾವರಿಯನ್ನು ಮಾಡಿದರು. ಅದು ತುಂಬಾ ಬರಪೀಡಿತ ಪ್ರದೇಶ. ಕಳೆದ 10 ವರ್ಷಗಳಿಂದ ಮಳೆ ಇಲ್ಲದೆ ಸುಮಾರು 5 ಸಾವಿರ ಬೋರ್‌ವೆಲ್‌ಗಳು ಬತ್ತಿಹೋಗಿವೆ. ಅಲ್ಲಿ ಸಂವೃದ್ಧಿಯಾಗಿ ಅಡಿಕೆ, ತೆಂಗು ಇವುಗಳನ್ನು ಬೆಳೆಯುತ್ತಿದ್ದರು. ಸಕಾಲಕ್ಕೆ ಮಳೆ ಇಲ್ಲದೆ ಬೋರ್‌ವೆಲ್‌ಗಳಲ್ಲಿ ನೀರು ಹಿಂಗಿದ್ದರಿಂದ ಜಲಸಂಪತ್ತು ಕಡಿಮೆಯಾದ್ದರಿಂದ ಆ ತೋಟಗಳೆಲ್ಲಾ ಒಣಗಿ ರೈತರು ಬೀದಿಪಾಲಾಗಿದ್ದಾರೆ. ಬಹಳ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಇದನ್ನು ಅರ್ಥಮಾಡಿಕೊಂಡ ಮಾನ್ಯ ದಿವಂಗತ ಜೆ ಎಚ್ ಪಟೇಲರು 75 ಕೋಟಿ ರೂಪಾಯಿಗಳ ಏತ ನೀರಾವರಿ ಯೋಜನೆಯನ್ನು ಮಂಜೂರು ಮಾಡಿ ಆಡಳಿತಾತ್ಮಕ ಅನುಮೋದನೆ ನೀಡಿದರು. 20 ಕೋಟಿ ರೂ ನೀರಾವರಿ ನಿಗಮದಿಂದ ರಿಲೀಜ್ ಮಾಡುವುದಕ್ಕೆ ಆಜ್ಞೆ ಮಾಡಿದರು. ಅಷ್ಟರಲ್ಲಿ ಸರ್ಕಾರ 4 ತಿಂಗಳ ಮುಂಚಿತವಾಗಿಯೇ ಬಿದ್ದು ಹೋಯಿತು. ಮುಂದೆ ಬಂದಂತಹ ಸರ್ಕಾರ ಅದರ ಬಗ್ಗೆ ಗಮನ ಕೊಡದೆ ಇತ್ತೀಚೆಗೆ ಅದು ಚಾಲನೆಗೆ ಬಂದಿದೆ. ತರೀಕೆರೆ ತಾಲ್ಲೂಕಿನ ಅಮೃತಪುರ ಹಾಗೂ ಉಗ್ರಾಣಿ ಹೋಬಳಿಗಳು, ಇವು ಮೂರು ಶಾಸಕರುಗಳಿಗೆ ಸಂಬಂಧಪಟ್ಟಿರುತ್ತದೆ. ಚೆನ್ನಗಿರಿ ತಾಲ್ಲೂಕಿನ ಶಾಸಕರಾದ ಮಹಿಮಾಪಟೇಲರು, ತರಿಕೆರೆಯು ಶಾಸಕರು, ಹೊಳೆಹೊನ್ನೂರು ಶಾಸಕನಾದ ನಾನು ಆಗಿರುತ್ತೇವೆ, ಇದರಿಂದ ಸುಮಾರು 20000 ಎಕರೆ ನೀರಾವರಿಯಾಗುತ್ತದೆ. 115 ಟ್ಯಾಂಕ್‌ಗಳಿಗೆ ಇದರಿಂದ ನೀರು ತುಂಬುತ್ತದೆ, ಅಂತರ್‌ಜಲ ಹೆಚ್ಚಾಗುತ್ತದೆ. ಇಂತಹ ವಿವಿಧೋದ್ದೇಶದಿಂದ ಕೂಡಿದ ಯೋಜನೆ ಏನಿದೆ ಅತ್ಯುತ್ತಮವಾದ ಯೋಜನೆ. ಈ ಸರ್ಕಾರವು ಕೂಡ ಅದಕ್ಕೆ ಆಡಳಿತಾತ್ಮಕ ಅನುಮೋದನೆಯನ್ನು ಕೊಡಬೇಕು. ಕಳೆದ ಸಾಲಿನಲ್ಲಿ ಶಂಕುಸ್ಥಾಪನೆ ಮಾಡಿ ಹಾಗೆ ಬಿಟ್ಟಿದ್ದಾರೆ. ಈ ಕೂಡಲೇ ಆ ಕೆಲಸ ತೆಗೆದುಕೊಳ್ಳುವುದರಿಂದ ಅನುಕೂಲವಾಗುತ್ತದೆ. ಈಗ 115 ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬೃಹಧಾಕಾರವಾಗಿದೆ. ಅನೇಕ ಹಳ್ಳಿಗಳಲ್ಲಿ ನಾವು ಟ್ರಕ್‌ಗಳ ಮುಖಾಂತರ ನಾವು ನೀರನ್ನು ತರುತ್ತಿದ್ದೇವೆ, ಇದರಿಂದ ಕುಡಿಯುವ ನೀರಿನ ಸಮಸ್ಯೆ ಬಗೆಹರಿಯುತ್ತದೆ, ನೀರಾವರಿ ಯೋಜನೆಯಾಗುತ್ತದೆ. ಇಂತಹ ವಿವಿಧೊದ್ದೇಶದಿಂದ ಕೂಡಿರುವ ಈ ಯೋಜನೆಯನ್ನು ತೆಗೆದುಕೊಳ್ಳಬೇಕು. ಅದಕ್ಕೆ ಆಡಳಿತಾತ್ಮಕ ಅನುಮೋದನೆಯಾಗಿದೆ, ಮುಖ್ಯಮಂತ್ರಿಗಳು ನೀರಾವರಿ ನಿಗಮದಿಂದ ಹಣ ಬಿಡುಗಡೆ ಮಾಡುವುದಕ್ಕೆ ಆಜ್ಞೆ ಮಾಡಿದ್ದಾರೆ. ಕೂಡಲೇ ಮೂರು ಒಂದು ಭಾಗ ಅಂದರೆ 30 ಕೋಟಿ ರೂಪಾಯಿಗಳ ಹಣ ಬಿಡುಗಡೆ ಮಾಡಿ ಕೆಲಸವನ್ನು ಚಾಲನೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಇನ್ನು ಸಾರ್ವಜನಿಕ ವಿತರಣಾ ಪದ್ಧತಿಯ ಬಗ್ಗೆ ಹೇಳುವುದಾದರೆ, ರಾಜ್ಯದಲ್ಲಿ ಬಡಕುಟುಂಬಗಳು ಸುಮಾರು 60 ಲಕ್ಷ ಹಿಂದೆ ಜನತಾದಳ ಸರ್ಕಾರ

ಇದ್ದಾಗ, ಬಹಳ ಪರಿಪಕ್ವವಾದ ವಿತರಣಾಪದ್ಧತಿಯನ್ನು ಹಸಿರು ಕಾರ್ಡ್ ಕೊಟ್ಟು ಸುಲಭದರದಲ್ಲಿ ಆಹಾರ ಧಾನ್ಯ ಸೀಮೆಎಣ್ಣೆ ಎಲ್ಲವನ್ನೂ ಕೊಡಲಾಗುತ್ತಿತ್ತು. ಮುಂದೆ ಬಂದ ಸರ್ಕಾರ ಹಸಿರುಕಾರ್ಡಿಗೆ ಬದಲಾಗಿ ಹಳದಿ ಕಾರ್ಡ್ ಬದಲಾವಣೆ ಮಾಡುವುದಕ್ಕೆ ಹೋಗಿ ಅರ್ಹಕುಟುಂಬಗಳಿಗೆ ಹಸಿರುಕಾರ್ಡ್ ಇದ್ದವರಿಗೆ ಕಾರ್ಡ್ ಕೊಡದೆ ಬೀದಿಪಾಲಾಗಿದ್ದಾರೆ, ಸುಮಾರು 75 ಲಕ್ಷ ಹಳದಿ ಕಾರ್ಡ್‌ನ್ನು ಕೊಟ್ಟಿದ್ದಾರೆ. ಇನ್ನೂ 20 ಲಕ್ಷ ಅರ್ಹ ಕುಟುಂಬಳು ಅಂದರೆ ಬಡಕುಟುಂಬಗಳಿಗೆ ಹಳದಿ ಕಾರ್ಡು ಸಿಕ್ಕಿಲ್ಲ, ಇದೇನಿದು, ವಾಸ್ತವಿಕವಾಗಿ ಇದನ್ನು ಸಮೀಕ್ಷೆ ಮಾಡೇ ಇಲ್ಲ, ಬಡಕುಟುಂಬಗಳನ್ನು ಗುರುತಿಸಿಲ್ಲ. ಇದರ ಬಗ್ಗೆ ಸಮಗ್ರವಾಗಿ ವಾಸ್ತವಿಕವಾಗಿ, as per the Criteria ಬಡಕುಟುಂಬಗಳನ್ನು ಗುರುತಿಸಿ, 5 ಕೋಟಿ ರೂ ಹಣವಿಟ್ಟು ಸಮೀಕ್ಷೆ ಮಾಡಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಬೃಹತ್ ಕೈಗಾರಿಕಾ ಸಚಿವರು) : 5 ಕೋಟಿ ರೂ ಅಲ್ಲ 50 ಕೋಟಿ ರೂ. ಹಣ ಇಡಬಹುದು ಬಹಳ ಕಷ್ಟ. ತಾವು 1967 ರಿಂದ ಮಂತ್ರಿಗಳಾಗಿದ್ದವರು, ಇಲ್ಲಿ ನಾವೆಲ್ಲಾ ಗೆದ್ದು ಬಂದಿರುವ ಪ್ರತಿನಿಧಿಗಳು, ನಾವು ಪ್ರಾಮಾಣಿಕವಾಗಿ ಹೇಳೋಣ, ಈ ಗ್ರೀನ್, ಎಲ್ಲೋ, ರೆಡ್ ಕಾರ್ಡ್‌ಗಳಿವೆಯಲ್ಲಾ, ಇವಕ್ಕೆ ನಮ್ಮ ಅಭಿಮಾನಿಗಳೇ ಕಾರ್ಯಕರ್ತರುಗಳೇ ಬಂದು, ಇರುವವರಿಗೆ ಇಲ್ಲದವರಿಗೆಲ್ಲ ಕೊಡಿ ಎಂದು ಕೇಳುತ್ತಾರೆ. ಇದು ವಾಸ್ತವಿಕವಾಗಿ ಫುಡ್ ಇನ್‌ಸ್ಪೆಕ್ಟರ್‌ಗಳು. ರೆವಿನ್ಯೂ ಇನ್‌ಸ್ಪೆಕ್ಟರ್‌ಗಳು, ವಿಲೇಜ್ ಅಕೌಂಟೆಂಟ್‌ಗಳೆಲ್ಲಾ ಮಾಡಿರುವುದೆಲ್ಲಾ ಹಣಕ್ಕಾಗಿಯೇ ಇನ್ನೂರು, ಮುನ್ನೂರು, ನಾನೂರು ರೂಪಾಯಿಗಳು ಡಿಪೆಂಡಿಂಗ್ ಆನ್ ದಿ ರೇಟ್ ಮಾಡಿಕೊಂಡು ಕುಳಿತಿದ್ದಾರೆ. ಅದನ್ನು ಮಾಡುವುದು ಬಹಳ ಕಷ್ಟ beneficiaries ಲಿಸ್ಟ್ ಅನ್ನು ಎಲ್ಲಾ ಪಕ್ಷದವರು ಸೇರಿಕೊಂಡು ಪ್ರತಿಯೊಂದು ಊರಿನಲ್ಲಿ ಗುಡಿಸಿಲಿನಲ್ಲಿರುವವರು. ಅಥವ ಎರಡು ಎಕರೆ ಜಮೀನು ಇರತಕ್ಕವರು ಇದೇನೋ ಕ್ರೈಟಿರಿಯ ಇದೆಯಲ್ಲಾ ಆ ಪ್ರಕಾರ ಮಾಡಿಕೊಂಡು ಬಿಟ್ಟರೆ ತೊಂದರೆಯೇ ಇರುವುದಿಲ್ಲ. The government need not have to show so much of money. But the problem is identification.

ಶ್ರೀ ಅರಗಜ್ಞಾನೇಂದ್ರ : ಏನಾಗಿದೆ ಎಂದರೆ, ಮಾನ್ಯ ಸಿಂಧ್ಯಾರವರು ಈ ಕಡೆಯು ಕುಳಿತುಕೊಂಡಿದ್ದರು, ಅವಾಗ ತಾವು ಚರ್ಚೆಯಲ್ಲಿ ಭಾಗವಹಿಸಿದ್ದೀರಿ, ಗ್ರೀನ್ ಕಾರ್ಡ್ ಬಗ್ಗೆ ಕೂಡ ಎರಡು ಮೂರು ವರ್ಷಗಳು ಒತ್ತಾಯ ಮಾಡಿದೆವು. ಒಬ್ಬ ವಿಲೇಜ್ ಅಕೌಂಟೆಂಟ್. ಪಂಚಾಯಿತಿ ಕಾರ್ಯದರ್ಶಿ ಇಬ್ಬರು ಮನೆ ಮನೆಗೆ ಹೋಗಿ, ಫಾರ್ಮೆಟ್ ಇಟ್ಟುಕೊಂಡು ಸರಿಯಾದ ರೀತಿಯಲ್ಲಿ ಸರ್ವೆ ಮಾಡಿ ಸರಿಯಾದ ರೀತಿಯಲ್ಲಿ ಫೀಡ್ ಮಾಡಿದ್ದರೆ ಸರಿಯಾಗಿ ಆಗುತ್ತಿತ್ತು. ಅವರು ಹೋಗಲೇ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಮ್ಮ ಹತ್ತಿರ ಯಾವು ಐಎಎಸ್, ಐಪಿಎಸ್ ಅಧಿಕಾರಿಗಳು ವರ್ಗಾವಣೆಗೆ ಬರುವುದಿಲ್ಲ, ಏನೋ ನೋಡಿ ಸರ್ ಎಂದು ಹೇಳುತ್ತಾರೆ ಅಷ್ಟೆ, ಬಹಳ ಅಪರೂಪ ಬರುವುದು, ಆದರೆ ನಮ್ಮ ಹತ್ತಿರ

ವರ್ಗಾವಣೆಗೆಲ್ಲಾ ಬರುವವರೆಲ್ಲಾ ವಿಲೇಜ್ ಅಕೌಂಟೆಂಟ್‌ಗಳೇ They are very powerful. let us be very frank.

ಶ್ರೀ ಅರಗಜ್ಞಾನೇಂದ್ರ : ಅವರಿಬ್ಬರನ್ನು ಕಳುಹಿಸಿ, ಸರ್ವೆ ಮಾಡಿಸಿ, ಸರ್ವೆ ಸ್ಕ್ರೂಟಿನಿ ಮಾಡಿಸಿ ತಂದಿದ್ದರೆ ಆಗುತ್ತಿತ್ತು. ಹಿಂದಿನ ಒಂದು ಸ್ಟ್ರೈಕ್, ಅವರಿಗೆ ಪ್ರೊಮೋಷನ್ ಕೊಡುತ್ತಿರಲಿಲ್ಲ ಏನೇನು ಕಾರಣಗಳಿಂದ ಹೋಗುವುದಕ್ಕೆ ಆಗಲಿಲ್ಲ, ಸರ್ಕಾರ ಅವರನ್ನು ಸರ್ವೆಗೆ ಕಳುಹಿಸುವುದಕ್ಕೆ ಆಗಲಿಲ್ಲ ಆಮೇಲೆ ಕಾರಣಗಳಿಂದ ಹೋಗುವುದಕ್ಕೆ ಆಗಲಿಲ್ಲ, ಸರ್ಕಾರ ಅವರನ್ನು ಸರ್ವೆಗೆ ಕಳುಹಿಸುವುದಕ್ಕೆ ಆಗಲಿಲ್ಲ. ಆಮೇಲೆ ಆತುರವಾಗಿ ಮಾಡಿದರು, ಅದರ ಪರಿಣಾಮ ಏನಾಯಿತು ಎಂದರೆ, ನ್ಯಾಯಬೆಲೆ ಅಂಗಡಿಯವರು ಇಂತಿಂತಹ ಫಲಾನುಭವಿಗಳೆಂದು ಪಟ್ಟಿಯನ್ನು ಕೊಟ್ಟರು. ಅಲ್ಲಿದ್ದ ಯಾರೋ ಪಂಚಾಯಿತಿ ಮೆಂಬರ್ ಕೊಟ್ಟ ಅದಾಯಿತು. ಈಗ ಹಸಿರು ಕಾರ್ಡು ಕೇವಲ ಅಕ್ಕಿಗೆ, ಸೀಮೆ ಎಣ್ಣೆಗೆ ಅಷ್ಟೇ ಸಿಮೀತವಾಗಿಲ್ಲ, ನೀವು ಆಸ್ಪತ್ರೆಗೆ ಹೋದರೆ ಇದನ್ನು ತೋರಿಸಿದರೆ ಯೂಸರ್ಸ್ ಚಾರ್ಜ್ ಕಟ್ಟುವ ಬದಲು ಪುಕ್ಕಟೆ ಸೇವೆ ಸಿಗುತ್ತದೆ. ಅವನ ಮಗನಿಗೆ ಕಾಲೇಜಿಗೆ ಸೇರುವುದಕ್ಕೆ ಹಸಿರುಕಾರ್ಡ್ ಬೇಕಾಗುತ್ತದೆ, ದಯವಿಟ್ಟು ನಿಮ್ಮ ಸರ್ಕಾರದಲ್ಲಿ ಏನಾದರೂ ಮಾಡಿ ಸಾರ್. ಈಗ ಬರ ಕಾಮಗಾರಿಯ ಅಕ್ಕಿಯೂ ಕೂಡ ಅದರ ಆಧಾರದ ಮೇಲೆ ನಮಗೆ ಬರುತ್ತಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾನೇನು ಹೇಳುವುದೆಂದರೆ, ಮಾನ್ಯ ಬಸವಣಪ್ಪನವರು ಬಹಳ ಹಿರಿಯರು, ಅನುಭವಸ್ಥರು, ಫುಡ್ ಡಿಪಾರ್ಟ್‌ಮೆಂಟ್‌ನಲ್ಲಿ ಮಂತ್ರಿಗಳು ಅವರೇ ಆಗಿದ್ದವರು. ನಾನು ಅವರಿಂದ ಸರ್ಕಾರಕ್ಕೆ ಸಲಹೆ ಕೊಡಿ ಎಂದು ಕೇಳುತ್ತಿದ್ದೇನೆ. ಒಂದು party consensus ತೆಗೆದುಕೊಂಡು ಬರೋಣ. ಇದರಲ್ಲಿ ಬಿಜೆಪಿ. ಕಾಂಗ್ರೆಸ್, ಜನತಾದಳ (ಯು), ಜನತಾದಳ (ಎಸ್) ಎನ್ನುವುದರ ಬದಲಾಗಿ ಒಂದು ಪಾರ್ಟಿಗಳಲ್ಲಿ ಒಂದು ಒಮ್ಮತಕ್ಕೆ ಬರೋಣ. ನನ್ನದೇ ಅನುಭವ ಹೇಳುತ್ತೇನೆ ಕೇಳಿ, ಇಷ್ಟೊಂದು ಒತ್ತಡವಿದೆ ಎಂದರೆ, I just cannot bear it.

ಶ್ರೀ ಸಿ.ಎಂ. ಉದಾಸಿ : ನಾನು ಸಲಹೆ ಮಾಡುವುದೇನೆಂದರೆ, ಇವತ್ತು ಇಡೀ ರಾಜ್ಯಾದ್ಯಂತ ಹಸಿರು ಮತ್ತು ಹಳದಿ ಕಾರ್ಡ್‌ಗಳನ್ನು ಅನರ್ಹರು ಹೆಚ್ಚಿಗೆ ತೆಗೆದುಕೊಳ್ಳುವವರು ಯಾವ ಪಕ್ಷದವರು ಎನ್ನುವ ಪ್ರಶ್ನೆಯಲ್ಲ ಎಲ್ಲಾ ಪಕ್ಷದಲ್ಲಿಯೂ ಇದ್ದಾರೆ. ಇದಕ್ಕೆ ಕಡಿವಾಣ ಹಾಕುವಂತಹ ಕಾರ್ಯಕ್ರಮ ಮಾಡಲು ಸಾಧ್ಯತೆ ಇದೆ. ಯಾವಾಗ ಸಾಧ್ಯವಾಗುತ್ತದೆಂದರೆ, ಇದನ್ನು ಯುನಿಟ್ ಕಾಸ್ಟ್ ಎಂದು ನೀವು ಮಾಡಬೇಕು. ನಾಲ್ಕು ಜನಕ್ಕೆ 28 ಕೆ.ಜಿ. ಅಕ್ಕಿ ಕೊಡುತ್ತೇವೆ. 3 ಜನ ಇದ್ದಾರೆ 21 ಕೆ.ಜಿ. 2 ಜನ ಇದ್ದರೆ 14 ಹೀಗೆ ಒಬ್ಬರಿಗೆ 7 ಕೆ.ಜಿ. ಅಕ್ಕಿ ಕೊಡುತ್ತೇವೆನ್ನುವುದನ್ನು ಮಾಡಿದ್ದೇ ಆದರೆ, ಅಲ್ಲಿರುವ ಹೆಸರುಗಳು ಮತ್ತೊಂದು ಕಾರ್ಡ್‌ನಲ್ಲಿ ನಮೂದಾದರೆ ಶಿಕ್ಷಾರ್ಹ ಅಪರಾಧವೆನ್ನುವುದನ್ನು ಮಾಡುವುದಾದರೆ, ಎಲಿಮಿನೇಷನ್ ಪ್ರೋಸಸ್ ಸಾಧ್ಯವಾಗುತ್ತದೆ ಕಾನೂನಿನಲ್ಲಿ ಏನಾಗಿದೆ ಎಂದರೆ, ಒಂದು ಮನೆಯಲ್ಲಿ ನಾಲ್ಕು ಜನ ಅಣ್ಣತಮ್ಮಂದಿರು ಇದ್ದ ಕೂಡಲೇ ನಾವು ಭಾಗ ಮಾಡಿಕೊಂಡಿದ್ದೇವೆ, ಒಬ್ಬ

ಹಿತ್ತಲಕಡೆ ಇದ್ದೇವೆ, ಮುಂದೆಗಡೆ ಒಬ್ಬರಿದ್ದೇವೆ, ಮೇಲ್ಗಡೆ, ಕೆಳಗಡೆ ಒಬ್ಬರಿದ್ದೇವೆಂದು ಕಾರ್ಡ್‌ಗಳನ್ನು ತೆಗೆದುಕೊಳ್ಳಲು ಏನು ಪ್ರಯತ್ನ ನಡೆಯುತ್ತಿದೆ, ಅದನ್ನು ಕರ್ಬ್ ಮಾಡಬೇಕಾದಾಗ, ಹೆಸರುಗಳನ್ನು ಸೂಚಿಸಬೇಕು. ಒಂದು ಕಾರ್ಡ್‌ನಲ್ಲಿರುವ ಸಂಖ್ಯಾ ಬಲದ ಮೇಲೆ 4 ಜನರಿಗೆ 28 ಕೆ.ಜಿ. ಅದಕ್ಕಿಂತ ಜಾಸ್ತಿ ಇದ್ದಾಗ 28 ಕೆ,ಜಿ.ಗಿಂತ ಹೆಚ್ಚಿಗೆ ಕೊಡುವುದಿಲ್ಲ. ಒಬ್ಬ ವ್ಯಕ್ತಿಗೆ 7 ಕೆ.ಜಿ. ಎಂದು ಮಾಡುವುದಾದರೆ ಎಲಿಮಿನೇಷನ್ ಪ್ರೋಸಸ್ ತರಬಹುದು. ಇಲ್ಲದಿದ್ದರೆ ಯಾರೇ ವಿಚಾರಣೆ ಮಾಡಿದರೂ, ಕೂಡ, ಎಲ್ಲಾ ಪಕ್ಷದ ಅಭಿಮಾನಿಗಳು ಬಂದವರು ಏನು ಮಾಡುತ್ತಾರೆಂದರೆ, ಅವರ ಮೇಲೆ ಒತ್ತಡ ತರುತ್ತಾರೆ, ಕಾರ್ಡ್‌ಗಳನ್ನು ಹೆಚ್ಚಿಗೆ ಪಡೆಯುತ್ತಾರೆ. ಇದಕ್ಕೆ ಈ ಬದಲಾವಣೆ ತಂದರೆ ಸಾಧ್ಯವಾಗುತ್ತದೆ.

ಶ್ರೀ ಜಿ. ಬಸವಣಪ್ಪ : ನಾನು ಹೇಳುವುದೇನೆಂದರೆ, ಸರ್ವೆ ಮಾಡಬೇಕು, ಅದನ್ನು ಹೌಸ್ ಟು ಹೌಸ್ ಸರ್ವೆಯನ್ನು ವಿಲೇಜ್ ಅಕೌಂಟೆಂಟ್. ರೆವಿನ್ಯೂ ಇನ್‌ಸ್ಪೆಕ್ಟರ್, ಫುಡ್ ಇನ್‌ಸ್ಪೆಕ್ಟರ್ ಸರ್ವೆ ಮಾಡಬೇಕು. ಹೀಗೆ ಮಾಡಿ ಬಡಕುಟುಂಬಗಳನ್ನು ಗುರುತಿಸಬೇಕು. ಓವರ್ ಅಲ್ ರೆಸ್ಪಾನ್ಸಿಬಿಲಿಟಿಯನ್ನು ಜಿಲ್ಲಾಧಿಕಾರಿಗಳಿಗೆ ಕೊಡಬೇಕು. ಬಡ ಕುಟುಂಬಗಳಲ್ಲಿ ಹೆಚ್ಚು ಕಡಿಮೆ ಇಲ್ಲದಂತೆ ನೋಡಿಕೊಳ್ಳುವ ಜವಾಬ್ದಾರಿ ಅಸಿಸ್ಟೆಂಟ್ ಕಮಿಷನರ್, ಡೆಪ್ಯೂಟಿ ಕಮಿಷನರ್‌ದು, ಈ ರೀತಿ ಮಾಡಿದರೆ ಅದು ಸಾಧ್ಯವಿದೆ, ಆ ರೀತಿ ಮಾಡಿ ಬಡ ಕುಟುಂಬಗಳನ್ನು ಗುರುತಿಸಬೇಕು. ಹಿಂದೆ 1986 ರಲ್ಲಿ ನಾವು ಅದೇ ರೀತಿಯಾಗಿ ಮಾಡಿದ್ದೇವು. ಆ ರೀತಿ ಮಾಡಿ ಬಡಕುಟುಂಬಗಳನ್ನು ಗುರುತಿಸಿ ಹಳದಿ ಕಾರ್ಡ್ ಕೊಡುವ ಕೆಲಸ ಮಾಡಿದೆವು.

ಶ್ರೀ ಮಹಿಮಾ ಜೆ ಪಟೇಲ್ : ನನ್ನ ಸಲಹೆ ಏನೆಂದರೆ, ಹಸಿರು, ಹಳದಿ, ಕೆಂಪು ಕಾರ್ಡ್ ಇವುಗಳನ್ನು ಕೊಡಲು ಫಲಾನುಭವಿಗಳನ್ನು ಗುರುತು ಮಾಡುವಲ್ಲಿ ಅಧಿಕಾರಿಗಳಿಗೆ ಅದನ್ನು ಕೊಟ್ಟರೆ ಅವರು ತಪ್ಪು ಮಾಡುವುದು ಖಾಯಂ. ಫಲಾನುಭವಿಗಳನ್ನು, ಮನೆಯದಾಗಿರಬಹುದು, ಹಸಿರು, ಹಳದಿ ಕಾರ್ಡ್‌ದ್ದು ಇರಬಹುದು. ಯಾವುದೇ ಆಗಲಿ ಗ್ರಾಮಸಭೆಗಳ ಮೂಲಕ ಆದರೆ ಮಾತ್ರ ನಾವು ಸ್ವಲ್ಪ ಮಟ್ಟಿಗೆ ಸರಿಯಾದ ಫಲಾನುಭವಿಗಳನ್ನು ಗುರುತಿಸಲು ನನಗನಿಸುತ್ತದೆ. ಆ ಕಾರಣದಿಂದ ನಾವು ಎಲ್ಲಾ ತಾಲ್ಲೂಕುಗಳಲ್ಲಿ, ಪಂಚಾಯಿತಿ ಮಟ್ಟದಲ್ಲಿ ಗ್ರಾಮಸಭೆಗಳಾಗುವುದಕ್ಕೆ ಏನು ಮಾಡಬೇಕು ಅದನ್ನು ಮಾಡಿದರೆ, ಯಾರು ಅರ್ಹ ಫಲಾನುಭವಿಗಳು ಅವರನ್ನು ಬಹಳಷ್ಟು ಮಟ್ಟಿಗೆ ಗುರುತಿಸಲು ಸಾಧ್ಯವೆಂದು ನನಗನ್ನಿಸುತ್ತದೆ ಆ ದಿಕ್ಕಿನಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕು.

ಶ್ರೀ ಜಿ. ಬಸವಣಪ್ಪ : ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ ಜಿಲ್ಲೆ ಮಲೆನಾಡಿನ ಜಿಲ್ಲೆ, ಅಲ್ಲಿ ಭದ್ರಾ, ತುಂಗಾ ಗೋಂಧಿ ನಾಲಾ ಪ್ರಾಜೆಕ್ಟ್‌ಗಳಿವೆ. ಬಹಳ ಹಳೆಯದಾದ ಪ್ರಾಜೆಕ್ಟ್‌ಗಳು, ಅವುಗಳಲ್ಲಿ ಊಳು ತುಂಬಿ ಚಾನಲ್‌ಗಳು ಒಡೆದು ಸಿಲ್ಟ್ ತುಂಬಿ, ನೀರು ಸಮುದ್ರಕ್ಕೆ ಹರಿದು ಹೋಗುತ್ತಿದೆ. ಅವುಗಳನ್ನು ಆಧುನೀಕರಣ ಮಾಡಬೇಕೆಂದು ಜೆ.ಹೆಚ್. ಪಟೇಲ್ ಸರ್ಕಾರ ಕೆಲಸವನ್ನು ಚಾಲನೆ ಮಾಡಿತ್ತು. ಆದರೆ ಮುಂದೆ

ಬಂದಂತಹ ಸರ್ಕಾರ ಅದನ್ನು ಅಲ್ಲಿಗೆ ನಿಲ್ಲಿಸಿತ್ತು. ಆ ತುಂಗಾ ಪ್ರಾಜೆಕ್ಟ್‌ನಿಂದಿ ನಾಲೆ. ಭದ್ರಾ ಪಾಜೆಕ್ಟ್‌ಗಳನ್ನು ಆಧುನೀಕರಣ ಮಾಡದಿದ್ದರೆ ಅಚ್ಚುಕಟ್ಟುದಾರರಿಗೆ ನೀರು ಸಿಗದೆ ಬಹಳ ತೊಂದರೆಯಲ್ಲಿದ್ದಾರೆ, ನೀರು ಹರಿದು ಅಲ್ಲಿ ಸಮುದ್ರಕ್ಕೆ ಸೇರುತ್ತಿದೆ. ಆದುದರಿಂದ ಈ ಆಧುನೀಕರಣಕ್ಕೆ ಸುಮಾರು 540 ಕೋಟಿ ರೂಪಾಯಿಗಳ ಯೋಜನೆ ಸಿದ್ಧವಾಗಿದೆ. ಮಾನ್ಯ ಹಣಕಾಸಿನ ಮಂತ್ರಿಗಳಾದ ಸಿದ್ಧರಾಮಯ್ಯನವರು, ತುಂಗಾ ಭದ್ರಾ ಮತ್ತು ಗೊಂದಿನಾಲೆಗಳ ಆಧುನೀಕರಣಕ್ಕೆ ಆದಷ್ಟು ಬೇಗ ಅನುಮತಿ ನೀಡಬೇಕೆಂದು ಸರ್ಕಾರವನ್ನು ಒತ್ತಾಯಿಸಿ ಮಾನ್ಯ ಅಧ್ಯಕ್ಷರಿಗೆ ಮುದ್ರಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಸನ್ಮಾನ್ಯ ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನಲಂಕರಿಸಿದರು)

2.50 ಪಿಎಂ

†ಶ್ರೀ ಕೆ ಜಿ ಬೋಪಯ್ಯ (ಮಡಿಕೇರಿ) : ಮಾನ್ಯ ಅಧ್ಯಕ್ಷರೇ, ನಾನು ಈ ಬಜೆಟ್‌ನಲ್ಲಿ ಇಡೀ ರಾಜ್ಯವನ್ನು ಹೇಗೆ ಕಡೆಗಣಿಸಲಾಗಿದೆ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ನಮ್ಮ ಜಿಲ್ಲೆಯನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ. ಕೊಡಗು ಜಿಲ್ಲೆಯ ಬಗ್ಗೆ ಒಂದು ತರಹ ಮಲತಾಯಿ ಧೋರಣೆ ನೋಡಲಾಗಿದೆ. ಮಾನ್ಯ ರಾಜ್ಯಪಾಲರು ಭಾಷಾ ಮಾಡಿದ್ದರಲ್ಲಿ ಕೊಡಗಿಗೆ ಈ ಹಿಂದೆ ಏನು ಪ್ಯಾಕೇಜ್ ಕೊಟ್ಟಿತ್ತು ಆ ಕೊಡಗು ಪ್ಯಾಕೇಜನ್ನು ಖಂಡಿತ ನನ್ನ ಸರ್ಕಾರವು ಕೊಡಗು ಪ್ಯಾಕೇಜನ್ನು ಪೂರ್ಣಗೊಳಿಸುತ್ತದೆ. ಎಂಬ ಮಾತು ಬಂದಿದೆ, ಆದರೆ ಬಜೆಟ್‌ನಲ್ಲಿ ನೋಡಿದರೆ ಈ ಕೊಡಗು ಪ್ಯಾಕೇಜಿಗೆ ಯಾವುದೇ ಅಲಾಟ್‌ಮೆಂಟಿಲ್ಲ. ಇದರ ಬಗ್ಗೆ ಸಂಪೂರ್ಣ ನಿರ್ಲಕ್ಷ್ಯತನ ತಾಳಿದ್ದನ್ನು ನಾವು ನೋಡುತ್ತಿದ್ದೇವೆ. ಆಗಲೇ ಪ್ರಸ್ತಾಪವಾದ ಹಾಗೆ ಡಾ; ನಂಜುಂಡಪ್ಪ ವರದಿಯಲ್ಲಿ ಕೊಡಗಿನ ಬಗ್ಗೆಯೂ ಪ್ರಸ್ತಾಪವಾಗಿದೆ, ಕೊಡಗಿನಲ್ಲಿ ಈಗ ಅಸಮತೋಲನ ಏನಿದೆ ಅದನ್ನು ಸರಿ ಮಾಡಬೇಕಾದರೆ ವಿಶೇಷವಾಗಿ 5 ಸಾವಿರ ಕೋಟಿ ರೂ.ಗಳನ್ನು ಮೀಸಲಿಡಬೇಕೆಂಬ ಮಾತು ಕೂಡ ಇದೆ. ಆದರೆ ಇವತ್ತು ಅದ್ಯಾವುದೂ ಕಾಣುತ್ತಾ ಇಲ್ಲ. ಇನ್ನೊಂದು ಇವತ್ತು ವಿಶೇಷವಾಗಿ ಕೊಡಗಿನಲ್ಲಿರುವಂತಹ ಸಮಸ್ಯೆ. ಕಾಫಿ ಬೆಳೆಗಾರರ ಹಾಗೆ ಕಾಫಿ ತೋಟದಲ್ಲಿ ದುಡಿಯುವ ಕಾರ್ಮಿಕರ ಸಮಸ್ಯೆ. ಹಿಂದಿನ ಸರ್ಕಾರ ಈ ಒಂದು ಸಮಸ್ಯೆ ಬಗ್ಗೆ ಬಹಳ ತೀವ್ರವಾಗಿ ಗಣನೆಗೆ ತೆಗೆದುಕೊಂಡಿತ್ತು ಸಮಸ್ಯೆ ಎಷ್ಟರಮಟ್ಟಿಗೆ ಎಂಬುದನ್ನು ಪರಿಗಣಿಸಿ ಅಂದಿನ ಮುಖ್ಯ ಮಂತ್ರಿಗಳು ಬಜೆಟ್‌ನಲ್ಲಿ ಕೂಡ ಅದನ್ನು ಪ್ರಸ್ತಾಪನೆ ಮಾಡಿದ್ದಾರೆ. ವಿಶೇಷವಾಗಿ ಅದರ ಬಗ್ಗೆ ಬಜೆಟ್‌ನಲ್ಲಿ ಹೇಳಿದ್ದಾರೆ. ಮಾನ್ಯ ಎಸ್ ಎಂ ಕೃಷ್ಣ ಅವರು ಈ ಒಂದು ಸಮಸ್ಯೆಯನ್ನು ಅರ್ಥ ಮಾಡಿಕೊಂಡು ತಮ್ಮ ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ. " Coffee prices in the past four years have remained depressed. Added to that. adverse weather conditions have negatively impacted upon small coffee growers, To alterviate the distress, I have already waived the agricultural income tax on coffee for three years in a row. This has cost us as almost Rs. 60

crores My Government, I has now decided to ease the credit burden of small and marginal coffee growers by providing interest waiver on crop loans, linked to recovery. This will provide a relief of Rs. 36 crores to coffee growers." ಆದರೆ ಇವತ್ತಿನ ಈ ಬಜೆಟ್‌ನಲ್ಲಿ ಇದರ ಬಗ್ಗೆ ಯಾವುದೇ ಪ್ರಸ್ತಾಪನೆ ಇಲ್ಲ. ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ಕಾಫಿ ಬೆಳೆಗಾರರನ್ನು ಹಾಗೂ ಕಾಫಿ ಬೆಳೆಯುವ ಪ್ರದೇಶದ ಶಾಸಕರನ್ನು ಕರೆಸಿ ಹಿಂದಿನ ಸರ್ಕಾರ ಏನು ಘೋಷಣೆ ಮಾಡಿತ್ತು ಅದನ್ನು ಮತ್ತೆ ಕೊಡುತ್ತೇವೆ ಅಂತ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಆದಕೆ ಹಿಂದಿನದರಲ್ಲಿ ಕೇವಲ ಕ್ರಾಪ್‌ಲೋನ್‌ಗೆ ಅಂತ ಮಾತ್ರ ಇದೆ. ಇವತ್ತು ಕಾಫಿ ಬೆಳೆಗಾರರು ಈ ಕ್ರಾಪ್‌ಲೋನ್ ಮಾತ್ರ ಮಾಡಿದ್ದಲ್ಲ, ಏನು ನಾಲ್ಕು ವರ್ಷದ ಹಿಂದೆ ಕಾಫಿಗೆ ಸಾಕಷ್ಟು ರೇಟ್ ಬಂದಾಗ ಕಾಫಿಯನ್ನು ಡೆವಲಪ್‌ಮೆಂಟ್ ಲೋನ್ ಮಾಡಿದ್ದಾರೆ. ವಿವಿಧ ಹಂತಗಳಲ್ಲಿ ಡ್ರೈಯಿಂಗ್ ಯಾರ್ಡಿರಬಹುದು. ಕಾರ್ಮಿಕರಿಗೆ ವಾಸಕ್ಕೆ ಮನೆಗಳನ್ನು ಕಟ್ಟುವುದು ವಿವಿಧ ಹಂತಗಳಲ್ಲಿ ಸಾಲಗಳನ್ನು ಮಾಡಿದ್ದಾರೆ. ಈಗ ಮತ್ತೆ ಲೆಕ್ಕ ಹಾಕಿ 39 ಕೋಟಿ ರೂ.ಗಳಿಗೆ ಅಧಿಕಾರಿಗಳು ಮಾಹಿತಿ ಕೊಟ್ಟಿದ್ದಾರೆ. ಅದು ಕೇವಲ ಸಹಕಾರ ಸಂಘಗಳ ಸಾಲಕ್ಕೆ ಮಾತ್ರ ಎಂಬುದು ಈವತ್ತು ಚಾಲ್ತಿಯಲ್ಲಿದೆ. ಈ ಬೆನಿಫಿಟ್ ಪೋಷಣೆಯಿಂದ ಯಾವುದೇ ಕಾಫಿ ಬೆಳೆಗಾರರಿಗೆ ಇವತ್ತು ಪ್ರಯೋಜನವಾಗುವುದಿಲ್ಲ. ಅದರ ಬದಲಿಗೆ ಕಾಫಿ ಬೆಳೆಗಾರರಿಗೆ ಅವರು ಮಾಡಿರುವಂತಹ ಸಾಲಗಳು ಯಾವುದೇ ಇರಬಹುದು ಸಣ್ಣ ಮತ್ತು ಅತಿಸಣ್ಣ ಬೆಳೆಗಾರರು ಮಾಡಿರುವ ಎಲ್ಲಾ ಸಾಲಗಳ ಮೇಲಿನ ಬಡ್ಡಿಯನ್ನು ಮನ್ನಾ ಮಾಡಬೇಕೆಂದು ಮಾನ್ಯ ಅರ್ಥ ಸಚಿವರನ್ನು ನಾನು ಒತ್ತಾಯ ಮಾಡುತ್ತೇನೆ. ಇದರ ಜೊತೆಗೆ ಇವತ್ತು ಕಾಫಿ ಉದ್ಯಮ ಯಾವ ಪರಿಸ್ಥಿತಿಗೆ ತಲುಪಿದೆ ಎಂದರೆ ಇವತ್ತು ಕಾಫಿ ಬೆಳೆಯುವುದೇ ಬೇಡ ಎಂಬ ಪರಿಸ್ಥಿತಿಗೆ ತಲುಪಿದೆ. ಇವತ್ತೇನು ಅರಬಿಕಾ ಕಾಫಿ ಬೆಳೆ ಇದೆ ಅದಕ್ಕೆ White stem borer ಎಂಬ ರೋಗ ಬಂದು ರೋಗ ಬಂದು ಕೊಡಗು ಜಿಲ್ಲೆಯಲ್ಲಿ ಸುಮಾರು 60 ಪರ್ಸೆಂಟನಷ್ಟು ತೋಟ ನಾಶವಾಗಿದೆ. ರೋಬೆಸ್ಟ್ ಕಾಫಿಗೆ ಕನಿಷ್ಟ ಎರಡು ಬಾರಿ ವರ್ಷಕ್ಕೆ ಗೊಬ್ಬರ ಹಾಕಲೇಬೇಕು. ಆದರೆ ಇವತ್ತು ಈ ರೇಟಿಲ್ಲದ ಪರಿಸ್ಥಿತಿಯಲ್ಲಿ ಅನೇಕ ಬೆಳೆಗಾರರು ಕಾಫಿ ಬೆಳೆಗೆ ಎರಡು ಮೂರು ವರ್ಷದಿಂದ ಗೊಬ್ಬರವನ್ನೇ ಹಾಕುತ್ತಾ ಇಲ್ಲ. ಈ ಪರಿಸ್ಥಿತಿಯಲ್ಲಿ ಇವತ್ತು ಕಾಫಿ ಇಂಡಸ್ಟ್ರೀ ಇದೆ. ಕಾಫಿ ವಿದೇಶಿ ವಿನಿಮಯ ತರುವುದರ ಜೊತೆಗೆ ಸರ್ಕಾರಕ್ಕೆ ಕೂಡ ಸಾಕಷ್ಟು ತೆರಿಗೆಯನ್ನು ನಾವು ಕೊಟ್ಟಿದ್ದೇವೆ. ಹಿಂದಿನ ಸರ್ಕಾರ ಏನು Agricultural Income Tax ಬಗ್ಗೆ ಹೇಳಿತ್ತು, ಆದರೆ ಒಂದು ವರ್ಷಕ್ಕೆ ಮಾತ್ರ ಎಂದು notification ಆಗಿದೆ ಮುಂದಿನ ಪರಿಸ್ಥಿತಿಯೇನು ಎಂಬ ಬಗ್ಗೆ ಕೂಡ ಈ ಬಜೆಟ್‌ನಲ್ಲಿ ಪ್ರಸ್ತಾಪನೆ ಇಲ್ಲ. ಕಾಫಿ ಬೆಳೆಗಾರರನ್ನು ನಿಜವಾಗಿ ಇವತ್ತು ಮೇಲಕ್ಕೆ ಎತ್ತಬೇಕು. ಅಂತ ಇದ್ದರೆ ನಾನು ವಿಶೇಷ ಮನವಿ ಮಾಡುತ್ತೇನೆ. minimum support price scheme ನಲ್ಲಿ ತಂದು ಕಾಫಿಗೆ ಕನಿಷ್ಟ ಬೆಂಬಲ ಬೆಲೆ ಘೋಷಣೆ ಮಾಡುವಂತಹ ಒಂದು

ವ್ಯವಸ್ಥೆಯನ್ನು ಮಾಡಬೇಕು. ರೋಬೆಸ್ಟಾ ಕಾಫಿ ಏನಿದೆ 50 ಕೆ ಜಿ ಇರುವುದಕ್ಕೆ 1500 ರೂ ಕೊಡಬೇಕು. ಹಾಗೇನೇ ಅರೆಬಿಕಾಗೆ 1500 ರೂ ಕನಿಷ್ಟ ಬೆಂಬಲ ಬೆಲೆಯನ್ನು ಘೋಷಣೆ ಮಾಡಬೇಕು ಅಂತ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಇದರ ಜೊತೆಗೆ ನಾವು ಮನವಿಗಳನ್ನು ಕೂಡ ಮಾಡಿದ್ದೇವೆ, ಮರದ ಮೇಲಿನ ಹಕ್ಕು. ಹಿಂದಿನ ಅರಣ್ಯ ಸಚಿವರು ಕೊಡಗು ಜಿಲ್ಲೆಗೆ ಬಂದಾಗ ಈ ಬಗ್ಗೆ ಎಲ್ಲಾ ಬೆಳೆಗಾರರೂ ಸೇರಿ ಸಚಿವರಲ್ಲಿ ಮನವಿ ಮಾಡಿದ್ದರು. ನಮಗೆ ಮರದ ಹಕ್ಕನ್ನು ಕೊಡಿ ಅಂತ. ಆ ಬಗ್ಗೆ ಪ್ರಸ್ತಾಪನೆ ಮಾಡಿ ಮರದ ಹಕ್ಕನ್ನು ಕೊಡುತ್ತೇವೆ ಅಂತ ಬಂದಿತ್ತು. ಆದರೆ ಇವತ್ತು ಪರಿಸ್ಥಿತಿ ಏನಾಗಿದೆ ಅಂದರೆ ಅಲ್ಲಿರುವ ಅರಣ್ಯಾಧಿಕಾರಿಗಳು ಅಲ್ಲಿರುವ ಮರಗಳು ಇರಲಿ, ನಾವು ಕಟ್ಟಿ ಬೆಳೆಸಿದ ಸಿಲ್ವರ್ ಮರಗಳ ಮೇಲೆ ನಮಗೆ ಹಕ್ಕಿಲ್ಲ, ಅನ್ನುವ ಮಾತು ಆಡುತ್ತಿದ್ದಾರೆ. ಇದರ ಪರಿಣಾಮವೇನಾಗಬಹುದು ಅಂದರೆ ಈ ರೀತಿ ಮರದ ಮೇಲೆ ಹಕ್ಕೇ ಇಲ್ಲ ಎಂಬ ಮಾತು ಆಡಿದ್ದರಿಂದ ಕೊಡಗಿನಲ್ಲಿ ಎಲ್ಲಾ ರೈತರು ಕಾಫಿ ಬೆಳೆಗಾರರು ಇರಬಹುದು ಇತರೆ ಬೆಳೆಗಾರರು ಇರಬಹುದು ಪ್ರತಿವರ್ಷ ಕನಿಷ್ಟ ಮರಗಳನ್ನು ನೆಡುವ ಹವ್ಯಾಸ ಇಟ್ಟುಕೊಂಡಿದ್ದರು. ಆದರೆ ಸರ್ಕಾರ ಈ ರೀತಿ ಕಾನೂನು ಮಾಡುತ್ತಾ ಇದೆ ಇದರಿಂದ ಇವತ್ತು ಮರ ನೆಡುವುದೇ ಬೇಡ, ಎಂಬ ತೀರ್ಮಾನಕ್ಕೆ ಬಂದದ್ದನ್ನು ಕೂಡ ನೋಡಿದ್ದೇನೆ, ಪ್ರತಿ ವರ್ಷ ಕೊಡಗು ಜಿಲ್ಲೆಯಲ್ಲಿ ಸಸಿಗಳನ್ನು ಫ್ರೀಯಾಗಿ ಕೊಡುತ್ತಿದ್ದರು. ಈ ವರ್ಷ ಅದೂ ಇಲ್ಲ, ಒಂದು ಗಿಡಕ್ಕೆ ಒಂದೂವರೆ ರೂ ಚಾರ್ಜ್ ಮಾಡುತ್ತಿದ್ದಾರೆ. ಒಂದು ಕಡೆ ಮರಗಳನ್ನು ನೆಡಲೂ ಅವಕಾಶ ಇಲ್ಲ, ನೆಟ್ಟರೆ ಅದರ ಮೇಲೆ ನಮಗೆ ಅಧಿಕಾರ ಇಲ್ಲ. ಈ ಪರಿಸ್ಥಿತಿ ಇವತ್ತು ಉಂಟಾಗಿದೆ. ಇದರಿಂದ ಪರಿಸ್ಥಿತಿ ಏನಾಗಬಹುದು ಅಂದರೆ ತಾವು ಅರಣ್ಯಗಳನ್ನು ಉಳಿಸಿಕೊಳ್ಳಬೇಕು ಎಂಬ ಮಾತು ಹೇಳುತ್ತಿರುತ್ತೀರಿ, ಈ ಅರಣ್ಯಗಳು ಉಳಿಯಬೇಕಾದರೆ ಕೊಡಗಿನ ರೈತರಿಗೆ ಈ ಒಂದು ವಿಶೇಷವಾದ ಹಕ್ಕನ್ನು ಕೊಡಿ, ನಾನು ಮಾರಾಟ ಮಾಡಲಿಕ್ಕೆ ಅಧಿಕಾರ ಕೊಡಿ ಅಂತ ಕೇಳುವುದಿಲ್ಲ, ಆದರೆ ನಾವು ಬೆಳೆದ ಮರ ನಮ್ಮದು ಎಂಬುದನ್ನು ಹೇಳಬೇಕು. ತಪ್ಪಾಗಿ ಹಿಂದೆ Coorg Land Revenue Act-1899 ಇತ್ತು ಅದರಲ್ಲಿ ನಮಗೆ ಪಹಣಿಗಳ ಮೇಲೆ ಲಿಮಿಟೆಡ್ ಹಕ್ಕಿತ್ತು, ನಾನು ಒಪ್ಪುತ್ತೇನೆ. ಆದರೆ 1964 ರಲ್ಲಿ ನಮ್ಮ ರಾಜ್ಯದ ಹೈಕೋರ್ಟ್ the Coorg. Land Revenue Act is no more applicable. Now, Karnataka Land Revenue Act is applicable ಎಂಬುವ ಸ್ಪಷ್ಟ ತೀರ್ಮಾನ ಕೊಟ್ಟರೂ ಕೂಡ ಇವತ್ತು ಮರದ ಹಕ್ಕಿಲ್ಲ. ಈ ಒಂದು ಅಂಬಿಗ್ಯುಟಿಯನ್ನು ಸರಿಮಾಡಬೇಕೆಂಬುದು ನನ್ನ ಒತ್ತಾಯ ಇದೆ.

ಶ್ರೀ ಹೆಚ್ ಡಿ ಬಸವರಾಜು : ಅಧ್ಯಕ್ಷರೇ, ತಮ್ಮ ಮೂಲಕ ಈ ವಿಚಾರದಲ್ಲಿ ಮಂತ್ರಿಗಳ ಗಮನ ಸೆಳೆಯುತ್ತಿರುವುದೇನೆಂದರೆ ಕಾಫಿ ಬೆಳೆಗಾರರು ತುಂಬಾ ಸಂಕಷ್ಟಕ್ಕೆ ಸಿಲುಕಿದ್ದಾರೆ. ಅವರಿಗೆ ಜೀವನ ನಡೆಸಲೂ ಪರ್ಯಾಯ ಮಾರ್ಗವೇ ಇಲ್ಲದಂತಹ ಪರಿಸ್ಥಿತಿ ಕಳೆದ ಮೂರು ವರ್ಷಗಳಿಂದ ಆಗಿದೆ. ಅದನ್ನು, ತಾವು

ಒಪ್ಪಿಕೊಂಡಿದ್ದೀರಿ. ಆ ಒಂದು ಕಾಫಿ ಬೆಳೆಗೆ ಏನು ಇವತ್ತು ದರ ಸಿಗುತ್ತಿಲ್ಲ. ಆ ಒಂದು ದರದ ಕುಸಿತದಿಂದ ಅವರ ಜೀವನ ಏರುಪೇರು ಆಗಿರುವುದನ್ನು ಹಿಂದಿನ ಸರ್ಕಾರ ತನ್ನದೇ ಆದಂಥ ಆಯವ್ಯಯವನ್ನು ಮಂಡನೆ ಮಾಡುವಂಥ ಸಂದರ್ಭದಲ್ಲಿ ಒಪ್ಪಿಕೊಂಡಿದೆ. ಅವರ ಸಂಕಷ್ಟಕ್ಕೆ ನಾವು ಬರುತ್ತೇವೆ ಎಂದು ಹೇಳುತ್ತಿದ್ದಾರೆ. ಆ ಸಂದರ್ಭದಲ್ಲಿ ಮಾನ್ಯ ಕೆ.ಜಿ. ಬೋಪಯ್ಯನವರು ಏನು ಹೇಳುತ್ತಿದ್ದಾರೆ. ಮರದ ಹಕ್ಕಿನ ಏನು ಒಂದು ಕಾಯ್ದೆ ಬೇಕಾಗಿದೆ. ಅದನ್ನಾದರೂ ಈ ಸಂದರ್ಭದಲ್ಲಿ ತಂದುಕೊಡಿ. ಈ ಸಂದರ್ಭದಲ್ಲಿ ಆ ಮರದ ಹಕ್ಕನ್ನು ಮಾರಾಟ ಮಾಡುವ ಮೂಲಕವಾದರೂ ಅವರ ಜೀವನಕ್ಕೆ ಒಂದು ಪರ್ಯಾಯ ದಾರಿಯನ್ನು ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಲ್ಲಿ ನಾನು ಮನವಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಜಿ. ಬೋಪಯ್ಯ : ಮಾನ್ಯ ಅಧ್ಯಕ್ಷರೇ, ಅದರ ಜೊತೆಗೆ ಇವತ್ತು ಕಾಫಿ ತೋಟದಲ್ಲಿ ದುಡಿಯುವ ಕಾರ್ಮಿಕ ಬಂಧುಗಳು, ನಮ್ಮ ಜಿಲ್ಲೆಯಲ್ಲೇ ಸುಮಾರು ಒಂದೂವರೆ ಎರಡು ಲಕ್ಷ ಕಾರ್ಮಿಕ ಬಂಧುಗಳು ಈ ತೋಟದಲ್ಲಿ ದುಡಿಯುತ್ತಿದ್ದಾರೆ, ಬಹುಶಃ ಸರ್ಕಾರದ ಮಿನಿಮಮ್ ವೇಜಸ್ ಆ್ಯಕ್ಟ್ ಏನಿತ್ತು. 46 ರೂ. ಚಿಲ್ಲರೆ ಬರುತ್ತದೆ. ಆದರೆ ಕಾಫಿಗೆ ರೇಟ್ ಇದ್ದ ಸಮಯದಲ್ಲಿ ಎಲ್ಲಾ ಕಾಫಿ ತೋಟದ ಮಾಲೀಕರುಗಳು ಯಾವ ಕಾನೂನನ್ನೂ ಪರಿಗಣಿಸದೆ ನೂರು ರೂಪಾಯಿ ಸಂಬಳವನ್ನು ಕೊಡುತ್ತಿದ್ದರು. ಆದರೆ ಇವತ್ತು ಪರಿಸ್ಥಿತಿ ಏನಾಗಿದೆ ಎಂದರೆ ಕಾಫಿ ತೋಟದ ಮಾಲೀಕ ಅವರಿಗೆ ಕೆಲಸ ಕೊಡುವ ಪರಿಸ್ಥಿತಿಯಲ್ಲಿಲ್ಲ, ವಾರದಲ್ಲಿ ಮೂರು ದಿನವೂ ಕೆಲಸ ಕೊಡುವುದಕ್ಕಾಗುತ್ತಿಲ್ಲ. ಈ ಒಂದು ಪರಿಸ್ಥಿತಿಗೆ ಇವತ್ತು ಕಾರ್ಮಿಕರೂ ಕೂಡ ತಲುಪಿದ್ದಾರೆ. ಅದಕ್ಕೋಸ್ಕರ ನನ್ನ ವಿಶೇಷ ವಿನಂತಿ ಒಂದು ಇದೆ. ಇವತ್ತೇನು ತಾವು ಈ ಒಂದು ಪಡಿತರ ವ್ಯವಸ್ಥೆಯಲ್ಲಿ ಮೂರು ರೂ. ರೀತ್ಯಾ 20 ಕೆ.ಜಿ. ಅಕ್ಕಿಯನ್ನು ಕೊಡುವ ವ್ಯವಸ್ಥೆಯನ್ನು ಮಾಡಿದ್ದೀರಿ, ನಾನು ಗೋಧಿಯನ್ನು ಕೇಳುವುದಿಲ್ಲ, ನಮ್ಮಲ್ಲಿ ಗೋಧಿ ತಿನ್ನುವವರು ಸ್ವಲ್ಪ ಕಡಿಮೆ ಇದ್ದಾರೆ, 20 ಕೆಜಿ ಯನ್ನು ಮೂರು ರೂ. ರೀತ್ಯಾ ಏನು ಕೊಡುತ್ತೀರಿ, ಆ ಒಂದು ಸೌಲಭ್ಯವನ್ನು ಕಾಫಿ ತೋಟದಲ್ಲಿ ದುಡಿಯುವಂಥ ಕಾರ್ಮಿಕರಿಗೆ ಕೂಡ ಸಿಗುವಂಥ ಒಂದು ವ್ಯವಸ್ಥೆಯನ್ನು ಮಾಡಬೇಕು ಎಂಬುದು ನನ್ನ ಒಂದು ವಿಶೇಷ ವಿನಂತಿ. ಈ ಒಂದು ವ್ಯವಸ್ಥೆ ಸರಿಯಾಗುವಲ್ಲಿವರೆಗಾದರೂ ಈ ಒಂದು ಸೌಲಭ್ಯವನ್ನು ಒದಗಿಸಿ, ಮುಂದೆ ಖಂಡಿತವಾಗಿಯೂ ಕಾಫಿಗೆ ರೇಟ್ ಬಂದರೆ ಯಾವ ಸೌಲಭ್ಯವನ್ನೂ ಸರ್ಕಾರದಿಂದ ಜನರು ಕೇಳುವುದಿಲ್ಲ. ಇವತ್ತು ಆ ಒಂದು ಪರಿಸ್ಥಿತಿಗೆ ಅವರು ತಲುಪಿರುವುದರಿಂದ ಈ ಒಂದು ವಿಶೇಷ ವಿನಂತಿಯನ್ನು ನಾನು ಮಾಡುತ್ತಿದ್ದೇನೆ. ಇದರ ಜೊತೆಗೆ ಇವತ್ತೇನು ಹಾರಂಗಿ ಡ್ಯಾಮ್ ಇರಬಹುದು. ಅಥವಾ ಕೆಆರ್‌ಎಸ್ ಈ ಒಂದು ಡ್ಯಾಮ್‌ಗಳಿಗೆ ಬರುವಂಥ ನೀರಿನ ಅಟ್ಯಾಚ್‌ಮೆಂಟ್ ಏರಿಯಾ ಏನು ಇದೆ. ನೀವೇನು ಕಾವೇರಿ ಬೇಸಿನ್ ಎಂದು ಕರೆಯುತ್ತೀರಿ, ಆ ಭಾಗದಲ್ಲಿ ಹೆಚ್ಚಿನ ಭಾಗದಲ್ಲಿ ಏಲಕ್ಕಿ ಬೆಳೆಯುವಂಥ ವ್ಯವಸ್ಥೆ ಇದೆ. ಇವತ್ತು

ಏಲಕ್ಕಿ ಕೂಡ ಕಾಫಿಯ ದುಸ್ತೀತಿ ಏನಿದೆ, ಅದಕ್ಕಿಂತ ಕೆಳಮಟ್ಟಕ್ಕೆ ಇವತ್ತು ಏಲಕ್ಕಿ ಬೆಳೆಗಾರರ ಪರಿಸ್ಥಿತಿ ಕೂಡ ಆಗಿದೆ. ಒಂದು ಕಾಲದಲ್ಲಿ ಏಲಕ್ಕಿ ಒಂದು ಕೆಜಿಗೆ 900 ರೂ. ಇತ್ತು. ಇವತ್ತು ಏಲಕ್ಕಿ ಅದಕ್ಕೆ 150–200 ರೂ.ಗೆ ಬಂದಿದೆ. ಎಲ್ಲಾ ಅತೀ ಸಣ್ಣ ಬೆಳೆಗಾರರು, ಯಾರು ಏಲಕ್ಕಿ ಪ್ಲಾಂಟರ್ಸ್ ಎಂದೇನು ಕೊಡಗಿನಲ್ಲಿ ಕರೆಯುತ್ತೇವೆ, ಏಲಕ್ಕಿ ಪ್ಲಾಂಟರ್ಸ್ ಯಾರು ಇಲ್ಲ. ಎಲ್ಲಾ ಸಣ್ಣದಾಗಿ ಬೆಳೆಯುವಂಥ ಏಲಕ್ಕಿ ಬೆಳೆಗಾರರು. ಆ ಏಲಕ್ಕಿ ಬೆಳೆಗಾರರು ಏಲಕ್ಕಿ ಬೆಳೆಯುವುದನ್ನೇ ಬಿಟ್ಟಿದ್ದಾರೆ. ಪರಿಸ್ಥಿತಿ ಏನಾಗಬಹುದು. ಎಂದರೆ ಇನ್ನು ಕೆಲವೇ ವರ್ಷಗಳಲ್ಲಿ ಕೊಡಗಿನ ಏಲಕ್ಕಿ ಇಂಟರ್‌ನ್ಯಾಷನಲ್ ಮಾರ್ಕೆಟ್‌ನಲ್ಲಿ ಇವತ್ತು ಏನು ಹೆಸರು ಇದೆ, ಆ ಏಲಕ್ಕಿಯೇ ಇಲ್ಲ ಎಂದಾಗುವ ಪರಿಸ್ಥಿತಿ ಇದೆ, ಹಾಗಾಗಿ ಈ ಏಲಕ್ಕಿ ಬೆಳೆಗಾರರ ಕಡೆಗೆ ಕೊಡ ವಿಶೇಷ ಗಮನವನ್ನು ಕೊಡಬೇಕು. ಇವತ್ತು ಏಲಕ್ಕಿ ಬೆಳೆಗಾರರೇನಾದರೂ ಆ ಏಲಕ್ಕಿ ಬೆಳೆಯನ್ನು ನಿಲ್ಲಿಸಿ ಅವರು ಬೇರೆ ಬೆಳೆಗೆ ಹೋದರೆ ಪರಿಸ್ಥಿತಿ ಏನಾಗಬಹುದು ಎಂಬುದನ್ನು ಹೇಳುತ್ತೇನೆ. ಏಕೆಂದರೆ ಏಲಕ್ಕಿ ಬೆಳೆಯುವಂಥ ಜಾಗದಲ್ಲಿ ಸಾಕಷ್ಟು ಮರಗಳಿರಬೇಕು, ನೆರಳು ಇಡಬೇಕು. ಆ ಮರಗಳು ಇದ್ದಾಗ ಮಾತ್ರ ಇವತ್ತು ಏನು ಹಾರಂಗಿ, ಕಾವೇರಿ ಇರಬಹುದು, ಮಳೆ ಬರುತ್ತದೆ. ಅವರು ಏಲಕ್ಕಿ ಬೆಳೆಯನ್ನು ನಿಲ್ಲಿಸಿ ಎಲ್ಲಾ ಮರಗಳನ್ನು ತೆಗೆದು ಮತ್ತೆ ಬೇರೆ ಬೆಳೆಗೆ ಹೋದರೆ ಇವತ್ತು ಕೆ.ಆರ್.ಎಸ್. ಕೂಡ ತುಂಬುವುದಿಲ್ಲ ಹಾರಂಗಿಯೂ ತುಂಬುವುದಿಲ್ಲ. ನಂತರ ಅದರ ಪರಿಸ್ಥಿತಿ ಏನಾಗಬಹುದು ಎನ್ನತಕ್ಕಂಥ ಬಗ್ಗೆ ಕೂಡ ಇವತ್ತು ಚಿಂತನೆಯನ್ನು ಮಾಡಬೇಕಾಗಿದೆ. ಈ ಒಂದು ಪರಿಸ್ಥಿತಿ ಇದೆ. ಇವುಗಳೆಲ್ಲವನ್ನೂ ತಾವು ಗಮನದಲ್ಲಿಡಬೇಕೆಂದು ನಾನು ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಅದರ ಜೊತೆಗೆ ಇವತ್ತು ತಾವೇನು ಕೊಡಗಿಗೆ ಒಂದು ವಿಶೇಷವಾದ ಸೈನಿಕ ಶಾಲೆಯನ್ನು ಸ್ಥಾಪನೆ ಮಾಡುವುದಕ್ಕೆ ಒಂದು ಕೋಟಿ ರೂಪಾಯಿಗಳನ್ನು ಕೊಡುತ್ತೇನೆ ಎನ್ನತಕ್ಕಂಥದ್ದನ್ನು ತಾವೇನು ಬಜೆಟ್‌ನಲ್ಲಿ ಪ್ರಸ್ತಾವನೆಯನ್ನು ಮಾಡಿದ್ದೀರಿ. ಆದರೆ ತಾವೇನು ಇವತ್ತು ಒಂದು ಕೋಟಿ ರೂಪಾಯಿಗಳನ್ನು ಈ ಬಜೆಟ್‌ನಲ್ಲಿ ಮೀಸಲಿಟ್ಟಿದ್ದೀರಿ. ಅದು ಏನೂ ಸಾಲದು. ಇದರಿಂದ ಏನೂ ಮಾಡಲಿಕ್ಕೆ ಸಾಧ್ಯ ಇಲ್ಲ. ಈ ಒಂದು ಕೋಟಿ ರೂ, ವನ್ನು ತಾವು ಹತ್ತು ಕೋಟಿ ರೂಪಾಯಿಗೆ ದಯವಿಟ್ಟು ತಾವು ಹೆಚ್ಚು ಮಾಡಬೇಕು. ಕನಿಷ್ಟ ಹತ್ತು ಕೋಟಿ ರೂಪಾಯಿಗಳನ್ನಾದರೂ ಈ ಸಲ ಒದಗಿಸಿಕೊಟ್ಟರೆ ಆ ಒಂದು ಸೈನಿಕ ಶಾಲೆಯನ್ನು ಪ್ರಾರಂಭ ಮಾಡಬಹುದು ಎನ್ನುವ ಮಾತನ್ನು ಹೇಳುತ್ತೇನೆ. ಅದರ ಜೊತೆಗೆ ಇವತ್ತು ಕೊಡಗಿನಲ್ಲಿ ಒಂದು ಕ್ರೀಡಾ ಶಾಲೆ ಇದೆ. ಅದು ರಾಜ್ಯಸರ್ಕಾರದಿಂದ ನಡೆಯುವಂಥದ್ದು ಸೋಮವಾರಪೇಟೆ ಕ್ಷೇತ್ರದ ಶಾಸಕರಾದ ಸನ್ಮಾನ್ಯ ಜೀವಿಜಯ ಅವರ ವ್ಯಾಪ್ತಿಗೆ ಬರುತ್ತದೆ. ಅಲ್ಲಿ ಒಂದು ಕ್ರೀಡಾ ಶಾಲೆ ಇದೆ. ಪ್ರತಿ ವರ್ಷ 60 ಮಕ್ಕಳುಗಳನ್ನು ಇಡೀ ರಾಜ್ಯದಿಂದ ಆಯ್ಕೆ ಮಾಡುವ ಒಂದು ಪದ್ಧತಿ. ಅದಕ್ಕೆ ತಾಲ್ಲೂಕು ಮಟ್ಟದಲ್ಲಿ ಆಯ್ಕೆ ಮಾಡಿ, ಜಿಲ್ಲಾ ಮಟ್ಟದಲ್ಲಿ ಆಯ್ಕೆಮಾಡಿ, ಆಮೇಲೆ ವಿಭಾಗ ಮಟ್ಟದಲ್ಲಿ ಆಯ್ಕೆಮಾಡಿ ಅನಂತರ

ಅವರಿಗೆ ಬೆಂಗಳೂರಿನಲ್ಲಿ ಅವರಿಗೆ ಹತ್ತು ದಿನದ ಕ್ಯಾಂಪನ್ನು ಮಾಡಿ ಆ ಅರವತ್ತು ಮಕ್ಕಳುಗಳನ್ನು ಆಯ್ಕೆ ಮಾಡುವಂಥ ಒಂದು ಪದ್ಧತಿ. ಈ ವರ್ಷ ಅವರು ಆಯ್ಕೆಯಾಗಿದ್ದಾರೆ. ಆದರೆ ದುರಾದೃಷ್ಟ ಏನೆಂದರೆ ಆ 60 ಮಕ್ಕಳನ್ನು ಆಯ್ಕೆ ಮಾಡಿ ಅವರು ಬೆಂಗಳೂರು, ಮೈಸೂರು ಎಲ್ಲಾ ಸೇರಿ 20 ಮಕ್ಕಳನ್ನು ಆಯ್ಕೆ ಮಾಡಿದ್ದೀರಿ,40 ಮಕ್ಕಳನ್ನು ಬಜೆಟ್ ಅಲೊಕೇಷನ್ ಇಲ್ಲವೆಂದು ಹೇಳಿ ಬಿಟ್ಟಿದ್ದಾರೆ. ಒಂದು ಕಡೆಯಿಂದ ಕೊಡಗಿನ ಬಗ್ಗೆ ಹೇಳುತ್ತೀರಿ, ಸೈನ್ಯಕ್ಕೆ ಮುಂದೆ ಬರುತ್ತಾರೆ. ದೇಶಸೇವೆಯನ್ನು ಮಾಡುತ್ತಾರೆ. ಕೊಡಗಿನವರು ಕ್ರೀಡೆಯಲ್ಲಿ ಬಹಳಷ್ಟು ಮುಂದಿದ್ದಾರೆ. ಈ ರಾಜ್ಯಕ್ಕೆ ಹೆಸರನ್ನು ತರುತ್ತಾರೆ. ಕ್ರೀಡಾ ಶಾಲೆಗೆ ಕೊಡುವಂಥ ಪ್ರೋತ್ಸಾಹ ಈ ರೀತಿಯದ್ದು ಆಗಿದೆ. ವಿಶೇಷವಾಗಿ ಈ ಕ್ರೀಡಾ ಶಾಲೆಗೆ ಅನುದಾನವನ್ನು ಒದಗಿಸಿಕೊಡಬೇಕೆಂದು ಹೇಳಿ ವಿನಂತಿಯನ್ನು ಮಾಡುತ್ತಾ ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಂಥ ತಮಗೂ ಕೂಡ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಸಿ.ಎಂ. ಉದಾಸಿ (ಹಾನಗಲ್) : ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಸನ್ಮಾನ್ಯ ಉಪಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯನವರು ಮಂಡಿಸಿರುವಂಥ ಆಯವ್ಯಯ ಅವರೇ ಹೇಳಿಕೊಂಡಿರುವಂತೆ ತಮ್ಮ ಅತೃಪ್ತಿಯನ್ನು ಹಿಂದಿನ ಐದು ವರ್ಷಗಳಲ್ಲಿ ತಾವು ನಿರೀಕ್ಷೆ, ಮಾಡಿದಂಥ ಸಾಧನೆಯಾಗಿಲ್ಲ ಎನ್ನುವ ಮಾತುಗಳನ್ನು ಉದಾಹರಣೆಗಳನ್ನು ಕೊಡಬೇಕಾದಾಗ 94 ರಿಂದ 99 ರವರೆಗೆ ಆಗಿರುವಂಥ ಸಾಧನೆ. 99 ರಿಂದ 2004 ರವರೆಗೆ ಆಗಿರುವ ಸಾಧನೆಗಳನ್ನು ನೋಡಿದಾಗ ನಾವು ನಿರೀಕ್ಷೆ ಮಾಡಿದ ಸಾಧನೆಯಾಗಿಲ್ಲ ಎನ್ನುವಂಥ ಮಾತಿನ ಅತೃಪ್ತಿಯನ್ನು ಅವರು ಚುನಾವಣೆ ಪೂರ್ವದಲ್ಲಿ ಹೇಳಿದ ಮಾತುಗಳು ಆರ್ಥಿಕವಾಗಿ ಸರ್ಕಾರ ದಿವಾಳಿಯಾಗಿದೆ ಎನ್ನುವಂಥ ಮಾತುಗಳನ್ನು ಹೇಳಿದ್ದರೂ ಸಹಿತ ಇದರಲ್ಲಿ ಹೇಳಬೇಕಾದ ಸಂದರ್ಭದಲ್ಲಿ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದರಲ್ಲಿ ತಾವು ಎಡವಿದ್ದರೂ ಹಿಂದಿನವರು ಎಂದು ಹೇಳಿ ತಮ್ಮ ಈ ಆಯವ್ಯಯವನ್ನು ಮಂಡನೆ ಮಾಡಬೇಕಾದಂಥ ಕೆಲಸದಲ್ಲಿ ಒಂದು ಉತ್ತಮವಾದ ನಿದರ್ಶನವನ್ನು ಮಾಡಬೇಕು ಎಂದು ಪ್ರಯತ್ನಪಟ್ಟಿದ್ದಾರೆಂದು ನಾನು ಭಾವಿಸುತ್ತೇನೆ. ಆ ನಿರೀಕ್ಷೆ ಸಾಧಿಸಬೇಕಾಗಿದೆ ಎನ್ನತಕ್ಕ ಗುರಿ ನಮದೆಲ್ಲಾ ಇದೆ ಎಂದು ನಾನು ಭಾವಿಸಿಕೊಳ್ಳುತ್ತೇನೆ. ಹೇಳಬೇಕಾದ ವಿಷಯಗಳು ಬಂದಾಗ ಯೋಜನಾ ಎಂದು ಒಂದು ಹಿಂದಿ ಪತ್ರಿಕೆಯನ್ನು ನಾನು ಇಪ್ಪತ್ತು ವರ್ಷಗಳ ಹಿಂದೆ ಓದಿದ್ದೆ ಯೋಜನಾ ಎಂಬ ಹಿಂದಿ ಪತ್ರಿಕೆಯಲ್ಲಿ ಬಂದಿರುವ ವರದಿಯನ್ನು ಓದಿದಾಗ ಅದರಲ್ಲಿ ಈ ಚುಟುಕವನ್ನು ಬರೆದರು "ಆದರ್ಶ್ ಹಂನೇ ದೂಂಢತೇ ಹೈಂ ಡಾಲಿಯೋ ಮೇ ಆದರ್ಶ್ ಹಂನೇ ದೂಂಢತೇ ಹೈಂ ಡಾಲಿಯೋ ಮೇ ಸಭ್ಯತಾ' ಬೈಠಾ ರಖಾ ಹೈ ಡಾಲಿಯೋ ಮೇ ಕೈಂದ್ ಕರಕೇ ರಖೇ ಹೈಂ ಯೋಜನಾವೋಂಕೋ ಕಾಗಜೋಂ ಮೇ ಔರ್ ಕಾಮ್‌ಯಾಭೀ ದೂಂಢತೇ ಹೈಂ ಥಾಲಿಯೋ ಮೇ" ಎಂದು ಹೇಳುತ್ತಾರೆ. ಇದರ ಅರ್ಥ ನಾನು ಸನ್ಮಾನ್ಯ ಉಪಮುಖ್ಯಮಂತ್ರಿಗಳಿಗೆ ವಿವರವಾಗಿ

ಹೇಳುವುದಕ್ಕೆ ನಾನು ಇಚ್ಛೆಪಡುತ್ತಿದ್ದೇನೆ. ಹಿಂದಿಯಲ್ಲಿ ಹೇಳಿರುವ ಮಾತುಗಳನ್ನು ಹೇಳುತ್ತೇನೆ. ಆದರ್ಶ ಎನ್ನುವುದು ನಮ್ಮ ಊಟದ ತಟ್ಟೆಯಲ್ಲಿ ಇದೆ. ಸಭ್ಯತೆ ಎನ್ನುವುದು ಏನು ಇದೆ. ನಾವು ಬೇರೆಯವರಿಗೆ ಮಾಡುವಂಥ ಟೀಕೆಯಲ್ಲಿದೆ ಎನ್ನುವಂಥ ಮಾತುಗಳೂ ಇದೆ. ಯೋಜನೆಗಳೇನು ಇದ್ದಾವೆ ಎನ್ನುವುದನ್ನು ಎಲ್ಲಾ ನಾವು ಕಾಗದದಲ್ಲಿ ಮಾಡಿ ಇಟ್ಟಿದ್ದೇವೆ. ಯೋಜನೆಗಳ ಪ್ರಗತಿಯಾಗಿದೆ ಎಂದು ನಾವು ಯಾವಾಗ ತಿಳಿದುಕೊಳ್ಳುತ್ತೇವೆ ಎಂದರೆ ಬಹಳಷ್ಟು ಜನರು ಚಪ್ಪಾಳೆಯನ್ನು ಹೊಡೆದರೆ ಯೋಜನೆಯಲ್ಲಿ ಪ್ರಗತಿಯಾಗಿದೆ ಎಂದು ತಿಳಿದುಕೊಳ್ಳುತ್ತೇವೆ ಎನ್ನತಕ್ಕ ಅರ್ಥ. ಇದನ್ನು ನಾನು ಇಪ್ಪತ್ತು ವರ್ಷಗಳ ಹಿಂದೆ ಯೋಜನಾ ಎಂಬ ಹಿಂದಿ ಪತ್ರಿಕೆಯಲ್ಲಿ ಓದಿರುವ ಮಾತುಗಳನ್ನು ನೋಡಿದಾಗ ನನಗೆ ಬಹಳಷ್ಟು ಇಪ್ಪತ್ತು ವರ್ಷಗಳಿಂದ ಇಲ್ಲಿಯವರೆಗೂ ಸಹಿತ ಯೋಜನೆಗಳನ್ನು ನಾವು ಮಾಡಿಕೊಂಡು ಬಂದಿದ್ದೇವೆಯೇ ಹೊರತು ನಾವೇನು ನಿರೀಕ್ಷೆ ಮಾಡಿದ ಸಾಧನೆಯಾಗಬೇಕಾಗಿತ್ತೋ ಅದು ಆಗಲಿಲ್ಲ ಎನ್ನುವುದು. ಇವತ್ತು ಸಹ ಅವರು ಹೇಳಬೇಕಾದ ವಿಚಾರದಲ್ಲಿ ತಮ್ಮ ಸಪ್ತ ವಿಚಾರಗಳನ್ನು ಏಳು ವಿಚಾರಗಳ ಬಗ್ಗೆ ಪ್ರಾಮುಖ್ಯತೆಯನ್ನು ನಾನು ಕೊಡಬೇಕಾಗಿದೆ ಎನ್ನುವ ಮಾತುಗಳನ್ನು ಹೇಳಿದ್ದಾರೆ. ತೆರಿಗೆ ಮತ್ತು ತೆರಿಗೇಯತರ ಸಂಪನ್ಮೂಲಗಳನ್ನು ಹೆಚ್ಚಿಗೆ ಮಾಡಬೇಕು ಎನ್ನುವ ವಿಚಾರವಾಗಲಿ, ಅಭಿವೃದ್ಧಿಯೇತರ ವೆಚ್ಚಗಳಲ್ಲಿ ಕಡಿತ ಮಾಡಬೇಕು ಎನ್ನುವುದಾಗಲಿ, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಕುಡಿಯುವ ನೀರಿನ ಬಗ್ಗೆ ಹೆಚ್ಚು ಮಹತ್ವವನ್ನು ಕೊಡಬೇಕು. ಉದ್ದೇಶಿತ ಫಲಾನುಭವಿಗಳಿಗೆ ನ್ಯಾಯಸಮ್ಮತವಾಗಿ ಸಿಗಬೇಕಾದ ಸಹಾಯಧನ ಸಿಗಬೇಕು. ಇಂಥ ಎಲ್ಲಾ ಮಾತುಗಳನ್ನು ಹೇಳಿದ್ದರೂ ಸಹಿತ ನಮಗೆ ಏನು ಆಗಬೇಕಾಗಿದೆ. ಆ ಕೆಲಸ ಆಗಿಲ್ಲ ಎನ್ನುವ ಮಾತು. ನಾವೆಲ್ಲಾ ಪ್ರಮುಖವಾಗಿ ಗಮನದಲ್ಲಿಟ್ಟುಕೊಳ್ಳಬೇಕಾಗಿರುವ ಕೆಲಸ ಯಾವುದೆನ್ನುವುದನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ರೈತರ ಅನೇಕ ಸಮಸ್ಯೆಗಳಿಗೆ ಸ್ಪಂದನೆಯನ್ನು ಮಾಡಿ ನಾವು ಪರಿಹಾರವನ್ನು ಕೊಡುತ್ತೇವೆಂದು ಹೇಳಿದ್ದರೂ ಸಹಿತ ನಿರೀಕ್ಷೆ ಮಾಡಿದ ಪರಿಹಾರ ಸಿಕ್ಕಿಲ್ಲ, ರೈತರಿಗೆ ಯಾವಾಗ ಪರಿಹಾರ ಸಿಗಲಿಕ್ಕೆ ಸಾಧ್ಯ ಎನ್ನುವ ಬಗ್ಗೆ ನಾವು ಅಲೋಚನೆಯನ್ನು ಮಾಡಬೇಕಾಗಿದೆ. ಶೇಕಡ 70 ರಷ್ಟು ರೈತರುಗಳು ಬೆಳೆದ ಬೆಳೆಗೆ ಯೋಗ್ಯವಾದ ಬೆಲೆ ಸಿಗಬೇಕು. ರೈತರು ಕೊಳ್ಳಬೇಕಾದ ವಸ್ತುಗಳೂ ಸಹ ಯೋಗ್ಯವಾದ ಬೆಲೆಗೆ ಸಿಗಬೇಕು ಎನ್ನುವ ವಿಚಾರಕ್ಕೆ ಸಂವಿಧಾನದತ್ತವಾದ ಹಕ್ಕು ನಮಗೆ ಏನು ಇದೆ. ಆ ಹಕ್ಕಿನ ಬಗ್ಗೆ ಇದುವರೆಗೆ ಯಾವುದೇ ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರಗಳು ವಿಚಾರ ಮಾಡದೇ ಇರುವುದರಿಂದ ರೈತರು ಶೋಷಿತರಾಗಿ ನಿರಂತರವಾಗಿ ಸಾಲಗಾರರು ಆಗಿದ್ದಾರೆ. ಭಾರತ ದೇಶವನ್ನು ಹೊರತು ಪಡಿಸಿದರೆ ಬೇರೆ ಯಾವುದೇ ದೇಶದಲ್ಲಿ ಸಹಿತ ಪ್ರತಿ ವರ್ಷ ರೈತ ಬೆಳೆ ಸಾಲವನ್ನು ಪಡೆಯಲೇ ಬೇಕು ಎನ್ನುವಂತಹ ವಿಚಾರ ಇರಲಿಕ್ಕಿಲ್ಲ ಎನ್ನುವುದು ನನ್ನ ಭಾವನೆ ಇದೆ. ರೈತ ಸಾಲಗಾರನಾಗಿಯೇ ಇರಬೇಕು ಎನ್ನುವುದು ಏಕೆ ? ಅದರ ಬಗ್ಗೆ ನಾವು ಚಿಂತನೆ

ಮಾಡಬೇಕಾಗಿದೆ. ಪ್ರತಿ ವರ್ಷನೂ ಸಹಿತ ಕಳೆ ಮಾಡಬೇಕಾದಾಗ, ಬಿತ್ತ ಬೇಕಾದಾಗ ರೈತ ಬೆಳೆ ಸಾಲ ತೆಗೆದುಕೊಳ್ಳಬೇಕು ಎನ್ನವಂತಹ ಪರಿಸ್ಥಿತಿ ಇದ್ದರೆ ಅವನ ಆರ್ಥಿಕ ಪರಿಸ್ಥಿತಿ ಸುಧಾರಣೆ ಆಗಲಿಕ್ಕೆ ಸಾಧ್ಯ ಹೇಗೆ ? ರೈತನ ಆಯವ್ಯಯ ಏನು ಅಂದರೆ ಯಾವ್ಯಾವ ಬ್ಯಾಂಕಿನಿಂದ ನಾನು ಎಷ್ಟು ಸಾಲ ಪಡೆಯಬೇಕು ಎನ್ನುವುದರಲ್ಲಿ ಸಹಿತ ಅದನ್ನು ನಾವು ಆಯವ್ಯಯದಲ್ಲಿ ಸೇರಿಸಿಕೊಳ್ಳಬೇಕಾದಂತಹ ಪರಿಸ್ಥಿತಿ ಆಗಿದೆ. ಸಾಲ ಪಡೆದೇ ಅವನು ಜೀವನ ಮಾಡಬೇಕು ಎನ್ನುವಂತಹ ಪರಿಸ್ಥಿತಿ ಏಕೆ ಇರಬೇಕು ಎನ್ನುವುದನ್ನು ಚಿಂತನೆ ಮಾಡದೇ ಇದ್ದರೆ ನಿರಂತರವಾಗಿ ಅವನು ಶೋಷಣೆಗೆ ಒಳಗಾಗುತ್ತಾನೆಯೇ ಹೊರತು ಅವನನ್ನು ಉದ್ಧಾರ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ರೈತರಿಗೆ ಅವರು ಬೆಳೆದಂತಹ ಬೆಳೆಗೆ ನ್ಯಾಯ ಸಮ್ಮತವಾದ ಬೆಲೆ ಸಿಗಬೇಕು. ರೈತರು ಕೊಳ್ಳಬೇಕಾದಂತಹ ವಸ್ತುವಿಗೆ ಸಹಿತ ನ್ಯಾಯ ಸಮ್ಮತವಾದ ಬೆಲೆಯಲ್ಲಿರಬೇಕು. ತಮ್ಮ ಮುಖೇನ ಮಾನ್ಯ ಸಚಿವರಿಗೆ ನಾನು ಹೇಳಲು ಇಚ್ಛೆಪಡುತ್ತಿದ್ದೇನೆ. 50 ವರ್ಷಗಳ ಹಿಂದೆ ನಾನು ಗುಮಾಸ್ತನಾಗಿ ಕೆಲಸ ಮಾಡಿದಂಥ ಒಬ್ಬ ವ್ಯಾಪಾರಿಯ ಸ್ಥಿತಿ ಹೇಗಿತ್ತು ಅಂದರೆ ಅವಾಗ 100 ರೂಪಾಯಿಗೆ ಎರಡು ಚೀಲ ಭತ್ತ ಬಡ್ಡಿ ಕೊಡುವಂತಹ ಕಾಲ ಇತ್ತು. 100 ರೂಪಾಯಿಗೆ ಎರಡು ಚೀಲ ಭತ್ತ ಬಡ್ಡಿ ಕೊಡುವಂತಹ ಕಾಲ ಒಂದಿತ್ತು. 100 ರೂಪಾಯಿಗೆ ಒಂದು ಚೀಲ ಭತ್ತ ಬಡ್ಡಿ ಕೊಡುವಂತಹ ಕಾಲ ಬಂತು. 100ಕ್ಕೆ 50 ರೂಪಾಯಿ ಬಡ್ಡಿ ಕಾಲ ಬಂತು. 100ಕ್ಕೆ 25 ಆಯಿತು. 18 ಆಯಿತು. 7 ಆಯಿತು. ಬಡ್ಡಿ ಮನ್ನಾ ಆದರೂ ಸಹಿತ ರೈತ ಸಾಲಗಾರನಾಗಿ ಏಕೆ ಇರಬೇಕು ? ರೈತರು ಬೆಳೆದಂತಹ ಬೆಳೆಗೆ ನ್ಯಾಯ ಸಮ್ಮತವಾದಂತಹ ಬೆಲೆ ಇದ್ದಿದ್ದರೆ ರೈತರು ಕೊಳ್ಳುವಂತಹ ವಸ್ತುವಿಗೆ ಸಹಿತ, ಅದು ಕೊಳ್ಳುವಂತಹ ಶಕ್ತಿ ಬರಬೇಕಾಗಿದೆ. ಅದಕ್ಕೆ ಉದಾಹರಣೆ ಏನು ಎನ್ನುವುದಾದರೆ 1961 ನೇ ಇಸವಿಯ್ಲಲಿ ಒಂದು ಕ್ವಿಂಟಾಲ್ ಭತ್ತದ ಬೆಲೆ ಏನು ಇತ್ತು ಮಾನ್ಯ ಹಣಕಾಸು ಸಚಿವರಾದಂತಹ ಸಿದ್ಧರಾಮಯ್ಯನವರ ಗಮನಕ್ಕೆ ತರಲು ಇಚ್ಛೆಪಡುತ್ತಿದ್ದೇವೆ. 1961ನೇ ಇಸವಿಯಲ್ಲಿ ಒಂದು ಕ್ವಿಂಟಾಲ್ ಭತ್ತದ ಬೆಲೆ 29 ರೂಪಾಯಿ ಇತ್ತು. ಅವಾಗ ಮೂರೂವರೆ ಕ್ವಿಂಟಾಲ್ ಭತ್ತ ಮಾರಿದರೆ ಒಂದು ತೊಲೆ ಬಂಗಾರ ಬರುತ್ತಿತ್ತು. ಇವತ್ತು ಎಷ್ಟು ಕ್ವಿಂಟಾಲ್ ಭತ್ತ ಮಾರಿದರೆ ಒಂದು ತೊಲೆ ಬಂಗಾರ ಬರುತ್ತದೆ ? 1974ನೇ ಇಸವಿಯಲ್ಲಿ ನಾನು ಮುನಿಸಿಪಲ್ ಪ್ರೆಸಿಡೆಂಟ್ ಇರಬೇಕಾದಾಗ ಒಂದು ಟ್ರಾಕ್ಟರ್ ಮತ್ತು ಟ್ರೇಲರ್ ಕೊಳ್ಳಬೇಕಾದಾಗ 36 ಸಾವಿರ ರೂಪಾಯಿ ಇತ್ತು. 36 ಸಾವಿರ ರೂಪಾಯಿಗೆ ಒಂದು ಟ್ರೇಲರ್ ಮತ್ತು ಟ್ರಾಕ್ಟರ್ ಸೇರಿಯೇ ಬರುತ್ತಿತ್ತು. ಇವತ್ತು ಏನು ? ಅವಾಗ ನಾವು ಒಂದು ಟ್ರೇಲರ್ ಮತ್ತು ಟ್ರಾಕ್ಟರ್ ಕೊಳ್ಳಬೇಕಾದಾಗ ಎಷ್ಟು ಹಣ ಕೊಡಬೇಕಾಗಿತ್ತು. ಅದಕ್ಕೆ ಬೇಕಾಗಿರುವಂತಹ ಎಷ್ಟು ಭತ್ತವನ್ನೋ, ಜೋಳವನ್ನೋ ಗೋಧಿಯನ್ನೋ ನಾವು ಬೆಳೆದಿದ್ದನ್ನು ಮಾರುತ್ತಿದ್ದೆವು, ಆ ಪ್ರಮಾಣಕ್ಕೂ ಮತ್ತು ಇವತ್ತಿನ ಪ್ರಮಾಣಕ್ಕೂ ಏನು ವ್ಯತ್ಯಾಸವಿದೆ ? ಬೆಲೆ ಹೆಚ್ಚಾಗಿರಬಹುದು. ಆದರೆ ಬೆಲೆ ಯಾವುದೂ ಹೆಚ್ಚಾದಾಗ ನಾವು ಕೊಳ್ಳಬೇಕಾದಂತಹ ವಸ್ತುಗಳ ಬೆಲೆ ಸಹಿತ ಅದರ ಹತ್ತು

ಪಟ್ಟು ಹೆಚ್ಚಾದಾಗ ನಮಗೆ ಆದಾಯ ಬರಲಿಕ್ಕೆ ಸಾಧ್ಯತೆ ಇಲ್ಲ ನೀವು ಬಡ್ಡಿ ಮನ್ನಾ ಮಾಡುವುದರಿಂದ, ಸಾಲ ಮನ್ನಾ ಮಾಡುವುದರಿಂದ ಎಲ್ಲಾ ಸಮಸ್ಯೆಯೂ ಬಗೆಹರಿಯುವುದಿಲ್ಲ. ಇದು ತಾತ್ಕಾಲಿಕ ಸಮಸ್ಯೆ. ಈ ಸಾಲಗಾರರು ಆಗಲಿಕ್ಕೆ ಸರ್ಕಾರದ ಆರ್ಥಿಕ ನೀತಿಯೇ ಕಾರಣವಾಗಿರುವುದರಿಂದ ರೈತರು ಬೆಳೆದಂತಹ ಬೆಳೆಗೆ ಯೋಗ್ಯವಾದ ಬೆಲೆ ಸಿಗದಿರುವಂತಹ ಸಂದರ್ಭದಲ್ಲಿ ರೈತರು ಕೊಳ್ಳುವಂತಹ ವಸ್ತುಗಳು ಸಹಿತ ವಿಪರೀತ ಬೆಲೆ ಆದ್ದರಿಂದ ಆರ್ಥಿಕವಾಗಿ ಅವನು ಸಧೃಡವಾಗದೆ ಉಳಿದು ಸಾಲಗಾರನಾಗಿ, ಸರ್ಕಾರದ ಕಡೆಗೆ ಕೈ ಚಾಚುವಂತಹ ಪರಿಸ್ಥಿತಿ ಬಂದಿದೆ. ಆತ್ಮಹತ್ಯೆ ಮಾಡಿಕೊಳ್ಳುವಂತಹ ಪರಿಸ್ಥಿತಿ ಬಂದಿದೆ. ಆತ್ಮಹತ್ಯೆ ಮಾಡಿಕೊಂಡು ಸರ್ಕಾರದ ಕಡೆಗೆ ನೋಡುವಂತಹ ಪರಿಸ್ಥಿತಿ ಇವತ್ತು ಬಂದಿದೆ. ನನಗೆ ಇಲ್ಲಿ ಸಂವಿಧಾನದ ಹಕ್ಕಿನ ಬಗ್ಗೆಯೂ ಒಂದೆರಡು ಮಾತು ಅವರೇನು ಹೇಳಿದ್ದಾರೆ ಎನ್ನುವುದನ್ನು ಓದುತ್ತೇನೆ. Living wage ETC for workers - The state shall endeavour to secure by suitable Legislation or economic organisation or in any other way, to all workers, agricultural, industrial or otherwise, work a living wage, conditions of work ensuring a decent standard of life and full employment of liesure and social and cultural opportunities and, in particular the state shall endeavour to promote the cottage industries on an individual and co-operative basis in rural areas." ಅಂದರೆ ಕೃಷಿ ಕಾರ್ಮಿಕರಿಗೇ ಆಗಲಿ ಕೃಷಿಕರಿಗೇ ಆಗಲಿ ಈ ಕ್ವಾಲಿಟಿ ಬಗ್ಗೆ ಸರಿಯಾದ ರೀತಿಯಲ್ಲಿ ಇರದೇ ಹೋದರೆ ಏನಾಗುತ್ತದೆ ಎಂದು ಅದರಲ್ಲಿ ಒಂದು ಮಾತನ್ನು ಹೇಳುತ್ತಾರೆ. The principal aim of social justice state is eliminating inequality of income and status and the standard of life. ಎಲ್ಲರಿಗೂ ಸಮಾನವಾಗಿ ಹಕ್ಕು ಸಿಗಬೇಕಾದಾಗ, ಆರ್ಥಿಕವಾಗಿ ಸಿಗಬೇಕಾದಾಗ ರೈತರು ಬೆಳೆದಂತಹ ಬೆಳೆಗೆ ಇವತ್ತು ಬೆಲೆ ಕೊಡಬೇಕು ಎನ್ನುವಂತಹ ವಿಚಾರಧಾರೆಯನ್ನು ನಿರಂತರವಾಗಿ ಮಾಡದೇ ಇರುವುದರಿಂದ ಇವತ್ತು ರೈತ ಸಾಲಗಾರನಾಗಿದ್ದಾನೆ. ಆ ಕಾರಣದಿಂದ ಇವತ್ತು ನಾವು ಕೊಡದೇ ಇದ್ದರೂ ಸರ್ಕಾರದ ತಪ್ಪು ಆರ್ಥಿಕ ನೀತಿಯಿಂದ ರೈತ ಸಾಲಗಾರನಾಗಿದ್ದಾನೆಯೇ ಹೊರತು ಇದಕ್ಕೆ ಬೇರೆ ಕಾರಣ ಏನು ಎಂದು ಹುಡುಕಬೇಕಾದಾಗ ನಾವು ಅಲೋಚನೆ ಮಾಡಬೇಕಾಗಿದೆ. ತಮ್ಮ ಗಮನಕ್ಕೆ ಒಂದು ವಿಚಾರ ತರಲು ಇಚ್ಛೆಪಡುತ್ತಿದ್ದೇನೆ. ಇವತ್ತೂ ಸಹಿತ ಕಬ್ಬಿನ ಬೆಲೆ ಗೊತ್ತು ಪಡಿಸಬೇಕಾದಾಗ ಏನಾಗುತ್ತದೆ ಎನ್ನುವುದನ್ನು ಮಾನ್ಯ ಅರ್ಥ ಸಚಿವರ ಗಮನಕ್ಕೆ ತರಲು ಇಚ್ಛೆಪಡುತ್ತೇನೆ. ಕಬ್ಬಿನ ಬೆಲೆ 1988-89 ರಲ್ಲಿ ಒಂದು ಟನ್‌ಗೆ 285 ರೂಪಾಯಿ ಇತ್ತು. ಇವತ್ತು ಅದು 750, 800, 900 ರೂಪಾಯಿ ಆಗಿದೆ. ಕಬ್ಬಿನ ಬೆಳೆಯನ್ನು ಗೊತ್ತು ಪಡಿಸಬೇಕಾದಾಗ ಯಾವ ರೀತಿ ಗೊತ್ತು ಪಡಿಸುತ್ತಾರೆ ಎಂದರೆ ಸನ್ಮಾನ್ಯ ಅರ್ಥ ಮಂತ್ರಿಗಳ ಗಮನಕ್ಕೆ ತರಲು ಇಚ್ಛೆ ಪಡುತ್ತೇನೆ. ಕಬ್ಬಿನ ಬೆಲೆ ಸ್ಟ್ಯಾಟುಟರಿ ಮಿನಿಯಮ್ ಪ್ರೈಸನ್ನು ಗೊತ್ತು ಮಾಡಬೇಕಾದಾಗ ನಾವು

ಲಿವಿ ದರದಲ್ಲಿ ಏನು ಸಕ್ಕರೆಯನ್ನು ಸರ್ಕಾರ ಖರೀದಿ ಮಾಡಿ ಮಾರಾಟ ಮಾಡುತ್ತಿದೆಯೋ ಅದನ್ನು ಗಮನದಲ್ಲಿಟ್ಟುಕೊಂಡು ಅದರಲ್ಲಿ ಲೆವಿ ದರದ ಮೇಲೆ ಕಬ್ಬಿನ ದರವನ್ನು ಗೊತ್ತು ಪಡಿಸುತ್ತಾರೆ. ಆದರೆ ಏನಾಗಿದೆ ? ಮಾರುಕಟ್ಟೆಯಲ್ಲಿ ಬೆಲೆ ಲೆವಿ ಬೆಲೆಗಿಂತ ಎರಡು ನೂರು ಕಡಿಮೆ ಆದರೂ ಸಹಿತ ಸರ್ಕಾರ ಸಕ್ಕರೆಯನ್ನು ತೆಗೆದುಕೊಳ್ಳುವಂತಹ ಪರಿಸ್ಥಿತಿಗೆ ಬರುತ್ತಿಲ್ಲ. ಆ ಕಾರಣದಿಂದಾಗಿ ಇವತ್ತು ಸಕ್ಕರೆ ಕಾರ್ಖಾನೆಗಳು ದಿವಾಳಿ ಆಗುತ್ತಾ ಇವೆ. ರೈತರಿಗೆ ಸಮಯಕ್ಕೆ ಸರಿಯಾಗಿ ಹಣ ಪಾವತಿ ಆಗುತ್ತಿಲ್ಲ. ಹಣ ಪಾವತಿ ಆಗುತ್ತಿಲ್ಲ ಎಂದು ಕೂಡಲೇ ಎಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆಗಳು ಇವತ್ತು ಮುಳುಗಿ ಹೋಗುವಂಥ ಪರಿಸ್ಥಿತಿಗೆ ಬಂದಿದ್ದು ಆರ್ಥಿಕವಾಗಿ ಅವುಗಳನ್ನು ಸಬಲ ಮಾಡದಂತಹ ಪರಿಸ್ಥಿತಿ ಸಹ ನಿರ್ಮಾಣವಾಗಿ ರೈತರನ್ನು ಹಾನಿಗೊಳಗಾಗುವಂತಹ ಪರಿಸ್ಥಿತಿ ತಂದಾಗಿದೆ ಎನ್ನುವ ಮಾತನ್ನು ಇಲ್ಲಿ ಹೇಳಲು ಇಚ್ಛೆಪಡುತ್ತೇನೆ. ತಾವೆಲ್ಲಾ ಇದನ್ನು ಮರು ಪರಿಶೀಲನೆ ಮಾಡಬೇಕಾಗಿದೆ. ರೈತರು ಬೆಳೆದಂತಹ ಬೆಳೆಗೆ ಯೋಗ್ಯವಾದ ಬೆಲೆ ಸಿಗುವುದನ್ನು ಪ್ರಮುಖವಾಗಿ ಇಟ್ಟುಕೊಂಡು ಕೆಲಸ ಮಾಡಿದರೆ ಮಾತ್ರ ಸಾಧ್ಯವಾಗುತ್ತದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಈಗ ತಾವು ಶೇಕಡಾ 6ರಷ್ಟು ಬಡ್ಡಿ ದರದಲ್ಲಿ ಸಾಲ ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದಿರಿ. ಇಡೀ ರಾಜ್ಯದಾದ್ಯಂತ ರೈತರ ಬೆಳೆ ಸಾಲ ಸಾಮಾನ್ಯವಾಗಿ 6 ಸಾವಿರ ಕೋಟಿ ರೂ. ಹೆಚ್ಚಾಗಿದೆ. ಆದರೆ ಸಹಕಾರಿ ಸಂಘದಿಂದ ಸಿಗುವುದು ಕೇವಲ 1500 ಕೋಟಿ ರೂಪಾಯಿ. ಅದರಲ್ಲಿ ಶೇಕಡಾ 6 ರೂಪಾಯಿ ಬಡ್ಡಿಯಂತೆ ಸಾಲ ಸಿಗುವುದಾದರೆ ಉಳಿದ ರಾಷ್ಟ್ರೀಕೃತ ಬ್ಯಾಂಕಿನಿಂದ ಆಗಲಿ, ಗ್ರಾಮೀಣ ಬ್ಯಾಂಕ್‌ಗಳಿಂದಾಗಲೀ ಸಾಲ ಪಡೆಯುವಂತ ರೈತರ ಪರಿಸ್ಥಿತಿ ಏನು ? ಈಗೇನಾಗಿದೆ? ಸಹಕಾರಿ ಬ್ಯಾಂಕಿನಿಂದ ಸಾಲ ಕೊಡಬೇಕು ಎನ್ನುವಂತ ತಮ್ಮ ವ್ಯವಸ್ಥೆ ಏನು ಇದೆ, ಕಳೆದ 10 ವರ್ಷಗಳಿಂದ ಇಲ್ಲಿಯತನಕ ನೋಡಿಕೊಂಡು ಬಂದರೆ ಪ್ರತಿ ವರ್ಷ ಕಡಿಮೆ ಆಗುತ್ತಾ ಬಂದಿದೆ. ಸಹಕಾರಿ ಬ್ಯಾಂಕ್‌ನಲ್ಲಿ ಅಪೆಕ್ಸ್ ಬ್ಯಾಂಕ್ ಆಗಲಿ ಜಿಲ್ಲಾ ಕೇಂದ್ರ ಬ್ಯಾಂಕ್‌ಗಳಿಂದ ಆಗಲಿ ಇವತ್ತು ಸಾಲ ಸಿಗದಂತಹ ಪರಿಸ್ಥಿತಿ ಆಗಿದೆ. ಇವತ್ತು ನಮ್ಮದೇ ಒಂದು ಕೆಸಿಸಿ ಬ್ಯಾಂಕಿನ ಉದಾಹರಣೆ ತೆಗೆದುಕೊಂಡರೆ ಗದಗ್, ಹಾವೇರಿ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಹಿಂದಿನ ವರ್ಷಕ್ಕೂ ಈ ವರ್ಷಕ್ಕೂ ಶೇಕಡಾ 50 ರಷ್ಟು ರೈತರಿಗೆ ಸಾಲ ಸಿಗದಂತಹ ಪರಿಸ್ಥಿತಿ ಬಂದಿದೆ. ಹೀಗಿರಬೇಕಾದಾಗ ಇದರ ಪ್ರಯೋಜನ ಏನಾದೀತು ? ಸಹಕಾರಿ ಬ್ಯಾಂಕ್‌ಗಳಿಗೆ ಮಾತ್ರ ಸೀಮಿತವಾಗಿ ಮಾಡಿದ್ದಾದರೆ ನೀವು ಸಬ್ಸಿಡಿ ಕೊಡಬೇಕಾದಂತಹ ಪ್ರಸಂಗ ಬಂದಾಗ ಆರು ರೂಪಾಯಿಯ ಈ ಡಿಫರೆನ್ಸಿಯಲ್ ಇಂಟರೆಸ್ಟ್ ಏನಾಗುತ್ತದೆ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಪಡೆದಂಥವರಿಗೂ ಸಹಿತ ರಾಜ್ಯ ಸರ್ಕಾರದಿಂದ ತುಂಬುವಂತಹ ವ್ಯವಸ್ಥೆ ಮಾಡಬೇಕು ಎನ್ನುವಂತಹ ಮಾತುಗಳನ್ನು ತಮ್ಮ ಗಮನಕ್ಕೆ ತರಲು ಇಚ್ಛೆಪಡುತ್ತೇನೆ. ತಾವು ಒಂದು ವಿಚಾರವನ್ನು ಮಾಡಿದ್ದೀರಿ. ರಾಜ್ಯದಲ್ಲಿ 65 ಲಕ್ಷ ಜನ ರೈತರು ಇದ್ದಾರೆ ಎಂದು ಹೇಳಿರಬೇಕಾದರೆ

20 ಸಾವಿರ ಜನ ರೈತರಿಗೆ ಮಾತ್ರ ಸುಮಾರು 47 ಕೋಟಿ ರೂಪಾಯಿಗಳಷ್ಟು ಪರಿಹಾರ ಸಿಗುವಂತಹ ವ್ಯವಸ್ಥೆ ಮಾಡಿದ್ದೇವೆ ಎನ್ನುವಂತಹ ಮಾತು ಇದು ಶೇಕಡಾವಾರು ಲೆಕ್ಕ ಹಾಕಿದರೆ ಯಾವ ಲೆಕ್ಕಕ್ಕೆ ಮುಟ್ಟುತ್ತದೆ ? 65 ಲಕ್ಷ ಜನ ರೈತರು ಇರಬೇಕಾದಾಗ, 65 ಲಕ್ಷ ಜನ ರೈತರೂ ಸಾಲ ಮಾಡುತ್ತಾರೆಂದು ಹೇಳುವುದಿಲ್ಲ. ಆದರೆ 65 ಲಕ್ಷ ಜನ ರೈತರಲ್ಲಿ 20 ಸಾವಿರ ರೈತರಿಗೆ 47 ಕೋಟಿ ರೂಪಾಯಿ ಪರಿಹಾರ ಸಿಗುತ್ತದೆ. 65 ಲಕ್ಷ ರೈತರ ಕುಟುಂಬ ಇದೆ. 65 ಲಕ್ಷಕ್ಕೆ 20 ಸಾವಿರ ಜನಕ್ಕೇನೆ 47 ಕೋಟಿ ರೂಪಾಯಿಗಳಷ್ಟು ಪರಿಹಾರ ಸಿಗುವುದಾದರೆ ಅಸಲು ಮತ್ತು ಅಸಲಿಗಿಂತ ಬಡ್ಡಿ ದುಡ್ಡು ಜಾಸ್ತಿ ಇರಬೇಕು. ಹಾಗಾದರೆ ಅದಕ್ಕೇನಾದರೂ ಒಂದು ಟೈಮ್ ಬಾಂಡ್ ಫಿಕ್ಸ್ ಮಾಡಿ. ನಾನೇನು ಹೇಳುತ್ತೇನೆ ಅಂದರೆ......

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯ ಮಂತ್ರಿಗಳು) : ಮಾನ್ಯ ಉದಾಸೀಯವರೇ ಈ ಅಸಲು ಮತ್ತು ಬಡ್ಡಿ ಈಗಾಗಲೇ ಕಟ್ಟಿ ಬಿಟ್ಟಿದ್ದಾರೆ. ಆದರೂ ಅವರ ಅಸಲು ಹಾಗೆಯೇ ಉಳಿದುಕೊಂಡಿವೆ. ಈ ತರಹದವರು ಇಲ್ಲಿಯವರೆಗೆ ಎಷ್ಟು ಇದ್ದಾರೆಂದು ಲೆಕ್ಕ ಹಾಕಿದ್ದೇವೆ, ಅವರು 20 ಸಾವಿರ ಕುಟುಂಬದವರು ಆ ತರಹ ಇದ್ದಾರೆ. ಅವರಿಗೆ ಮನ್ನಾ ಮಾಡತಕ್ಕಂಥದ್ದ, ಯಾವುದು ಅಸಲು ಉಳಿದುಕೊಂಡಿದೆಯಲ್ಲಾ ಅದನ್ನು ಸಂಪೂರ್ಣ ಮನ್ನಾ ಮಾಡತಕ್ಕಂಥದ್ದು, ಇನ್ನು ಮುಂದೆ ಬರೇ ಸರಳ ಬಡ್ಡಿ ಇರುತ್ತದೆ. ಕಾಂಪಾಂಡ್ ಇಂಟರೆಸ್ಟ್ ಇರುವುದಿಲ್ಲ ಮತ್ತು ಫೀನಲ್ ಇಂಟರೆಸ್ಟ್ ಇರುವುದಿಲ್ಲ. ಅದರಿಂದ ಮತ್ತೆ ಈ ಸಮಸ್ಯೆ ಉದ್ಭವ ಆಗುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಕೋ ಅಪರೇಟಿವ್‌ನಲ್ಲಿ ಫೀನಲ್ ಇಂಟರೆಸ್ಟ್ ಇದೆ. ಕಾಂಪಾಂಡ್ ಇಂಟರೆಸ್ಟ್ ಇಲ್ಲ.

ಶ್ರೀ ಸಿ,ಎಂ, ಉದಾಸಿ : 20 ಸಾವಿರ ಜನರಿಗೆ ಅನುಕೂಲ ಮಾಡಿ ಅವಕಾಶ ಕಲ್ಪಿಸಿ ಕೊಟ್ಟಿದ್ದೇವೆ ಎನ್ನುವ ಮಾತನ್ನು ಹೇಳಿದಿರಿ. ಈಗೇನಾಗಿದೆ ? ಹತ್ತು ಸಾವಿರ ರೂಪಾಯಿ ಸಾಲ ತೆಗೆದುಕೊಂಡಿದ್ದಾನೆ. ಆತ 7 ಸಾವಿರವೋ 8 ಸಾವಿರವೋ ಬಡ್ಡಿ ಕಟ್ಟಿದ್ದಾನೆ. ಇನ್ನೂ ಎರಡು ಸಾವಿರ ರೂಪಾಯಿ ಆತ ಕಟ್ಟುವುದಕ್ಕೆ ಅವಕಾಶ ಮಾಡಿಕೊಡುತ್ತೀರೋ ಎನ್ನುವ ಪ್ರಶ್ನೆ ನಮ್ಮ ಎದುರುಗಡೆ ಇದೆ.

ಶ್ರೀ ಸಿದ್ಧರಾಮಯ್ಯ : ಹತ್ತು ಸಾವಿರ ರೂಪಾಯಿ ಸಾಲ ತೆಗೆದುಕೊಂಡಿದ್ದಾನೆ. 10 ಸಾವಿರ ರೂಪಾಯಿಗೆ ಸರಳ ಬಡ್ಡಿ ಮತ್ತೆಲ್ಲಾ ಸೇರಿಸಿ ಅದಕ್ಕಿಂತ ಈಗಾಗಲೇ ಜಾಸ್ತಿ ಕಟ್ಟಿ ಬಿಟ್ಟಿದ್ದಾನೆ. ಆದರೂ 10 ಸಾವಿರ ರೂಪಾಯಿ ಅಸಲು ಹಾಗೆಯೇ ಉಳಿದುಕೊಂಡಿದೆ. ಕೆಲವು ಕಡೆ 8 ಸಾವಿರ ಉಳಿದುಕೊಂಡಿದೆ. ಕೆಲವರದ್ದು 10 ಸಾವಿರ ರೂಪಾಯಿ ಉಳಿದುಕೊಂಡಿರಬಹುದು. ಈ ತರಹದ ಅಸಲುಗಳು ಉಳಿದುಕೊಂಡಿದೆಯಲ್ಲಾ. ಅದನ್ನೆಲ್ಲಾ ಪೂರಾ ಮನ್ನಾ ಮಾಡುವುದು.

ಶ್ರೀ ಸಿ.ಎಂ. ಉದಾಸಿ : ಅಸಲಿಗಿಂತ ಹೆಚ್ಚಿಗೆ ಬಡ್ಡಿ ಕೊಟ್ಟವರಿಗೆ ಮನ್ನಾ ಮಾಡುವುದಾ?

ಶ್ರೀ ಸಿದ್ಧರಾಮಯ್ಯ : ಹೌದು.

ಶ್ರೀ ಸಿ.ಎಂ. ಉದಾಸಿ : ಅಸಲಿಗಿಂತ ಹೆಚ್ಚಿಗೆ ಬಡ್ಡಿ ಕೊಟ್ಟವರ ಸಾಲ ಮನ್ನಾ ಮಾಡುತ್ತೇವೆ ಎಂದು ಹೇಳುವಂತಹ ಮಾತು ಇದ್ದರೆ ಅಕಸ್ಮಾತ್ ಒಂದು ಸಾವಿರ ಎರಡು ಸಾವಿರ, ಮೂರು ಸಾವಿರ ತುಂಬುವುದು ಬಾಕಿ ಇದ್ದರೆ ಹೇಗೆ ? ನಾನೇನು ಹೇಳುತ್ತೇನೆ. ಈ ಪರಿಮಿತಿಗೆ ಬರಬೇಕಾದಂತಹ ವ್ಯಕ್ತಿ ಈಗ 20 ಸಾವಿರಕ್ಕೇನೇ ಮಿತಿಗೊಳಿಸುವುದಕ್ಕಿಂತ ನೀವು ಒಂದು ಕಟಾಫ್ ಡೇಟ್ ಮಾಡಿ, ಕಟಾಫ್ ಡೇಟ್ ಮಾಡಿ ಅಕಸ್ಮಾತ್ ಆ ಡೇಟಿಗೆ ಸಮಾನಾಂತರವಾಗಿ ಇನ್ನೊಬ್ಬರು ಹಣ ತುಂಬಿದರೆ ಅವರಿಗೂ ಆ ವಿನಾಯಿತಿ ಕೊಡುತ್ತೇವೆ ಎನ್ನುವಂತಹ ಮಾತು ಹೇಳಿದರೆ ಒಂದು ಸರಿಯಾದ ನೀತಿ ಆದೀತು. ಏಕೆಂದರೆ 65 ಲಕ್ಷ ಜನರಲ್ಲಿ 20 ಸಾವಿರ ಜನಕ್ಕೆ ಎಂದು ಹೇಳುವುದು ಸಮಂಜಸವಲ್ಲ.

3.20 ಪಿಎಂ

ಶ್ರೀ ಕಾರಜೋಳ ಗೋವಿಂದ ಮಕಟಪ್ಪ (ಮುಧೋಳ) : ಸನ್ಮಾನ್ಯ ಅಧ್ಯಕ್ಷರೆ. ಮಾನ್ಯ ಅರ್ಥ ಸಚಿವರು 49 ಕೋಟಿ ರೂಪಾಯಿಗಳನ್ನು ಈ ಉದ್ದೇಶಕ್ಕಾಗಿ ಬಜೆಟ್‌ನಲ್ಲಿ ಕಾಯ್ದಿರಿಸಿದ್ದು, ಇದರಿಂದ 20 ಸಾವಿರ ಜನರಿಗೆ ಲಾಭವಾಗುತ್ತದೆನ್ನುವ ಮಾತನ್ನು ಹೇಳಿದ್ದಾರೆ. ಅದಕ್ಕೆ ಯಾವ ದಿನಾಂಕ ನಿಗದಿಪಡಿಸಿದ್ದಾರೆಂದರೆ, 31ನೇ ಮಾರ್ಚಿ 2004ಕ್ಕೂ ಮುಂಚಿತವಾಗಿ ಯಾರು ಹಣ ತುಂಬಿದ್ದಾರೋ ಅಂತಹವರಿಗಷ್ಟೇ ಅನುಕೂಲವಾಗುವ ರೀತಿಯಲ್ಲಿ ಬಜೆಟ್‌ನಲ್ಲಿ ಪ್ರಸ್ತಾಪಿಸಿದ್ದಾರೆ. ಯಾರಿಗೆ ಗೊತ್ತಿತ್ತು ? 'ಮುಂದೆ ಈ ಸರ್ಕಾರ ಬರುತ್ತದೆ ಸಿದ್ಧರಾಮಯ್ಯನವರು ಉಪಮುಖ್ಯಮಂತ್ರಿಗಳಾಗಿದ್ದಾರೆ. ಹಣಕಾಸು ಖಾತೆ ಅವರಿಗೆ ಬರುತ್ತದೆ. ನಾವು ಈಗಾಗಲೇ ತುಂಬಿ ಅದಕ್ಕೆ ಅರ್ಹರಾಗಬೇಕು' ಎಂದು ರೈತರಿಗೇನಾದರೂ ಕನಸು ಬಿದ್ದಿತ್ತೇ ? ಇಲ್ಲ. ಅದಕ್ಕೋಸ್ಕರ ತಮ್ಮ ಮೂಲಕ ನಾನು ಸರ್ಕಾರದಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ನಿಗದಿಪಡಿಸಿರುವ ಈ ಅವಧಿಯನ್ನು 30ನೇ ಸೆಪ್ಟೆಂಬರ್ 2004ರವರೆಗೂ ವಿಸ್ತರಿಸುವ ಮೂಲಕ ರೈತರಿಗೆ ಹಣ ತುಂಬಲು ಅವಕಾಶ ಕಲ್ಪಿಸಿಕೊಡಬೇಕು. ಹಾಗಾದಾಗ ಮಾತ್ರ ಅದರಿಂದ ಲಾಭವಾಗುತ್ತದೆಯೇ ವಿನಾ ಇಲ್ಲದಿದ್ದರೆ ಯಾರಿಗೂ ಅದರಿಂದ ಲಾಭವಾಗುವುದಿಲ್ಲ. ಯಾವ ಹಣಕಾಸು ಸಂಸ್ಥೆಯವರು. ಕೋ-ಅಪರೇಟಿವ್ ಸೊಸೈಟಿಯವರಾಗಿರಬಹುದು, ಪಿಎಲ್‌ಡಿ ಬ್ಯಾಂಕ್‌ನವರಾಗಿರಬಹುದು. ಡಿಸಿಸಿ ಬ್ಯಾಂಕ್‌ನವರಾಗಿರಬಹುದು. ಅವರೆಲ್ಲರೂ ಈಗಾಗಲೇ ವಸೂಲು ಮಾಡಿದ್ದಾರೆ. ಯಾರು ಅಸಲಿಗಿಂತಲೂ ಹೆಚ್ಚು ಬಡ್ಡಿ ತುಂಬುವ ತಾಕತ್ತಿದ್ದಾರೆ. ಅವರ್‍ಯಾರೂ ಉಳಿಸಿಕೊಂಡಿಲ್ಲ. ಹಾಗಾಗಿ, ಇದರಿಂದ ಲಾಭವಾಗುವುದಿಲ್ಲ. ದಯಮಾಡಿ ಸೆಪ್ಟೆಂಬರ್ 30ರವರೆಗೂ ದಿನಾಂಕವನ್ನು ವಿಸ್ತರಿಸಬೇಕೆಂದು ನಾನು ಉಪ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿ.ಎಂ. ಉದಾಸಿ : ಕಳೆದ ವರ್ಷ ಮಾಡಿದ ಬಡ್ಡಿ ಮನ್ನಾ ಹಣವಾದ 83 ಕೋಟಿ ರೂಪಾಯಿಗಳನ್ನು ಈಗ ನಾವು ಕೊಡುತ್ತಿದ್ದೇವೆ. ಒಂದು ವರ್ಷ ವಿಳಂಬವಾದರೆ ಸಹಕಾರಿ ಸಂಘಗಳಿಗೆ ಏನಾಗುತ್ತದೆಂದರೆ, 83 ಕೋಟಿ

ರೂಪಾಯಿಗಳ ಬಡ್ಡಿ ಹೋಗುತ್ತದೆ. ಬಡ್ಡಿ ಮನ್ನಾ ಎಂದು ಅದರ ಖರ್ಚನ್ನು ಈಗಾಗಲೇ ತೋರಿಸಲಾಗಿದೆ. ಅವರಿಗೆ ಹತ್ತು ಕೋಟಿ ರೂಪಾಯಿಗಳಷ್ಟು ಬಡ್ಡಿಯ ಹೊರೆಯಾಗುತ್ತದೆ. ಎಲ್ಲಾ ಪ್ರಾಥಮಿಕ ಪತ್ತಿನ ಸಹಕಾರ ಸಂಘಗಳೇನಿವೆ ಪ್ರತಿಯೊಂದು ಸಹಕಾರ ಸಂಘಗಳವರು ಇವೊತ್ತು ಬಡ್ಡಿಯ ಹೊರೆಯಿಂದ ಹಾನಿಗೊಳಗಾಗಿದ್ದಾರೆ. ಈಗಾಗಲೇ ತಮಗೆ ಗೊತ್ತಿರುವಂತೆ ಇಡೀ ರಾಜ್ಯಾದ್ಯಂತ ಪ್ರಾಥಮಿಕ ಪತ್ತಿನ ಸಹಕಾರ ಸಂಘಗಳು, ಪಿಎಸ್‌ಎಸ್ ಬ್ಯಾಂಕ್‌ಗಳು ಮತ್ತು ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳೇನಿವೆ, ನೂರಕ್ಕೆ ನೂರರಷ್ಟು ಹಣ ವಸೂಲಿ ಮಾಡಿ ಹಣ ತುಂಬಿದರೂ ಸಹ ಇವರಲ್ಲಿ ಗ್ಯಾಪ್ ಇದೆ. ಸಹಕಾರ ಸಂಘಗಳಲ್ಲಿರುವ ಗ್ಯಾಪ್ ಏನಿದೆ, ಕೆಸಿಸಿ ಬ್ಯಾಂಕ್‌ವೊಂದರಲ್ಲಿಯೇ 50 ಕೋಟಿ ರೂಪಾಯಿಗಳು ಇರಬೇಕಾದಾಗ ಇಡೀ ರಾಜ್ಯದ್ಯಂತ ಎಲ್ಲಾ 27 ಜಿಲ್ಲೆಗಳಲ್ಲಿರುವ ಸಹಕಾರಿ ಬ್ಯಾಂಕ್‌ಗಳಲ್ಲಿ ನನಗನಿಸುತ್ತದೆ, 500 ರಿಂದ 600 ಕೋಟಿ ರೂಪಾಯಿಗಳಷ್ಟು ಗ್ಯಾಪ್ ಇದೆ. ಅದರಲ್ಲೂ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ಗಳನ್ನೂ ಸೇರಿಸಿದರೆ ಒಂದು ಸಾವಿರ ಕೋಟಿ ರೂಪಾಯಿಗಳವರೆಗೆ ಹೋಗಬಹುದೆಂಬುದು ಸನ್ಮಾನ್ಯ ಸದಸ್ಯರಾದ ಡಿ.ಆರ್. ಪಾಟೀಲ್ ಮತ್ತು ಎಸ್.ಎಸ್. ಪಾಟೀಲ್ ಅಂತಹವರಿಗೆ ಸಂಪೂರ್ಣ ಅರಿವು ಬಂದಿರಬಹುದೆಂದು ನಾನು ಭಾವಿಸಿಕೊಂಡಿದ್ದೇನೆ. ಈ ಗ್ಯಾಪ್ ಒಂದು ಸಾವಿರ ಕೋಟಿ ರೂಪಾಯಿಗಳ ತನಕ ಬಂದಿರಬೇಕಾದರೆ ಅದಕ್ಕೆ ಏನು ವ್ಯವಸ್ಥೆ ಮಾಡಬೇಕು ? ಒಂದು ಸಾವಿರ ಕೋಟಿ ರೂ.ನೊಂದಿಗೆ ಮತ್ತೊಂದು ಹತ್ತು ಕೋಟಿ ರೂಪಾಯಿಗಳನ್ನು ಸೇರಿಸಿದರೆ ಒಂದು ಸಾವಿರದ ಹತ್ತು ಕೋಟಿ ರೂಪಾಯಿಗಳವರೆಗೆ ಹೋಗುತ್ತದೆ. ಒಂದು ವರ್ಷ ತಡವಾಗಿ ನೀವು ಕೊಟ್ಟಿದ್ದರಿಂದ ಹೀಗಾಗುತ್ತದೆ. ಈ ರೀತಿ ಗ್ಯಾಪ್ ಹೆಚ್ಚಾದಂತೆಲ್ಲಾ ಈ ಸಹಕಾರಿ ಸಂಸ್ಥೆಗಳು ಸಂಪೂರ್ಣ ನಾಶವಾಗುವ ಪರಿಸ್ಥಿತಿಗೆ ಬಂದಿರುವ ಹಿನ್ನೆಲೆಯಲ್ಲಿ ನೀವು ಇದರ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಬೇಕು. ಬಡ್ಡಿ ಮನ್ನಾದಂಥ ವಿಚಾರಗಳನ್ನು ನೀವು ಕೊಟ್ಟರೆ immediately ಅದು ಪಾವತಿಯಾಗುವಂತಹ ಕೆಲಸ ಮಾಡಬೇಕು. ಇದನ್ನು ವಿಳಂಬವಾಗಿ ಪಾವತಿಸುವುದೇನಿದೆ, ಬಡ್ಡಿಯನ್ನೂ ಸಹ ತುಂಬಿಸಿಕೊಡಬೇಕೆನ್ನುವ ವಿಚಾರಕ್ಕೆ ಸರ್ಕಾರ ಬರಬೇಕಾಗುತ್ತದೆ, ಈ ವಿಚಾರಕ್ಕೆ ಸರ್ಕಾರ ಬರದೇ ಇದ್ದರೆ ಅದನ್ನು ಕೊಟ್ಟೂ ಸಹ ಏನೂ ಪ್ರಯೋಜನವಾಗುವುದಿಲ್ಲವೆನ್ನವಂತಹ ಮಾತುಗಳನ್ನು ತಮ್ಮ ಗಮನಕ್ಕೆ ತರಬಯಸುತ್ತಿದ್ದೇನೆ. ಇದೆಲ್ಲದರ ಜೊತೆಗೆ ಈಗಾಗಲೇ ಮಾತನಾಡಿದಂಥ ಸನ್ಮಾನ್ಯ ಹಿರಿಯ ಸದಸ್ಯರಾದ ಎಸ್.ಎಸ್. ಪಾಟೀಲರು ಬೆಳೆ ವಿಮೆ ಬಗ್ಗೆ ಸರಿಯಾದ ರೀತಿಯಲ್ಲಿ ಇಲಾಖೆಯವರು ವಾಸ್ತವ ಪರಿಸ್ಥಿತಿ ಬಗ್ಗೆ ರೈತರಲ್ಲಿ ಅರಿವು ಮೂಡಿಸುವ ಕೆಲಸದಲ್ಲಿ ವಿಫಲರಾಗಿದ್ದರೆಂದು ನಾನು ಭಾವಿಸಿದ್ದೇನೆ. ಇವೊತ್ತು ಹೊಸ ಬೆಳೆ ವಿಮೆ ಯೋಜನೆ ಬರುತ್ತಿದ್ದು, ಆ ಬೆಳೆ ವಿಮೆ ಯೋಜನೆಯನ್ನು ಜಾರಿಗೊಳಿಸವಲ್ಲಿ ಸರ್ಕಾರ ಸರಿಯಾದ ರೀತಿಯಲ್ಲಿ ಮಾಹಿತಿ ನೀಡುವಲ್ಲಿ ವಿಫಲರಾಗಿರುವುದಕ್ಕೆ ಒಂದು ಉದಾಹರಣೆ ಹೇಳುತ್ತಿದ್ದೇನೆ, ಮಳೆ ಮೇಲೆ

ಅವಲಂಬಿಸಿರುವ Rainfall Insurance ಒಂದು ಬಂದಿತ್ತು ಈ rainfall insurance ಅನ್ನು ರಾಜ್ಯದ ಆರು ಜಿಲ್ಲೆಗಳಲ್ಲಿ ಜಾರಿಗೊಳಿಸಬೇಕೆಂದು ಹೊರಟಾಗ, ಜಾರಿಗೊಳಿಸುವ ಭರದಲ್ಲಿ ಜೂನ್ 30ರೊಳಗಾಗಿ, ಅಂದರೆ, ಬಿತ್ತುವುದಕ್ಕಿಂತ ಮೊದಲೇ ಬೆಳೆ ವಿಮೆ ಮಾಡಿಸಬಹುದೆನ್ನುವ, ಪ್ರಾಯೋಗಿಕವಾಗಿ ಇಡೀ ದೇಶಾದ್ಯಂತ 20–25 ಜಿಲ್ಲೆಗಳಲ್ಲಿ ಯೋಜನೆ ಅನುಷ್ಠಾನ ಮಾಡುತ್ತಿದ್ದರೆ, ಆ ಪೈಕಿ ಕರ್ನಾಟಕದಲ್ಲಿ ಆರು ಜಿಲ್ಲೆಗಳಲ್ಲಿ ಮಾಡಲು ಹೊರಟಿದ್ದರು, ಅದರಲ್ಲಿ ಕಾರವಾರ, ಬೆಳಗಾಂ, ಗುಲ್ಬರ್ಗಾ ಮತ್ತು ಇನ್ನೂ ಮೂರು ಯಾವ ಜಿಲ್ಲೆಗಳೆಂಬುದು ನೆನಪಿಲ್ಲ, ಕಾರವಾರ ಜಿಲ್ಲೆಯಲ್ಲಿ ಜೋಯಿಡಾ ತಾಲ್ಲೂಕು ಸೇರಿತ್ತು. ಜೋಯಿಡಾ ಮತ್ತು ಮುಂಡಗೋಡು ತಾಲ್ಲೂಕುಗಳೆರಡನ್ನು ಮಾತ್ರ ಸೇರಿಸಿದ್ದರು. ಆದರೆ, ಕರ್ಮಧರ್ಮಕ್ಕೆ ಏನಾಗಿದೆಯೆಂದರೆ, ಇಡೀ ರಾಜ್ಯಾದ್ಯಂತ ಇಬ್ಬರೇ ಇಬ್ಬರು ಆ ಪಾಲಿಸಿ ತೆಗೆದುಕೊಂಡರು ! ಈ ಕಾರಣದಿಂದಾಗಿ ಆ ಯೋಜನೆಯನ್ನೇ ಸಂಪೂರ್ಣ ಕೈಬಿಡಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು, ನಾವು ಈ ಯೋಜನೆಯನ್ನು ಕಾರ್ಯಗತಗೊಳಿಸುವಾಗ ಬೆಳೆಗೆ raingauge ಆಧಾರವಾಗಿಟ್ಟುಕೊಂಡು, ಮತ್ತು ಕಳೆದ ಹತ್ತು ವರ್ಷಗಳ ಸರಾಸರಿ ಮಳೆಯ ಪ್ರಮಾಣವನ್ನು ಗಮನದಲ್ಲಿಟುಕೊಂಡು, ಆಯಾ ಬೆಳೆಗಳಿಗೆ "before sow" ಎಂದಿದೆ, ಅದನ್ನು specific ಆಗಿ ತಿಳಿಸಿದ್ದಾರೆ, ಅದರಲ್ಲಿ ಯಾವ ಬೆಳೆಯನ್ನು ಬಿತ್ತುತ್ತಾರೆ ? ಬಿತ್ತಬಹುದೆಂದು ಇದೆಯೋ, ಅದನ್ನು ನೋಡಿ ಮಾಡಬಹುದಿತ್ತು ಸದರಿ ಯೋಜನೆಯನ್ನು ಯಾರು ಜಾರಿಗೊಳಿಸಬೇಕೆಂಬ ವಿಚಾರದಲ್ಲಿ ನಾನು insurance company ಹೇಳಿದೆ ಕನಿಷ್ಠ ಏಳು ಆಗದಿದ್ದರೂ ಆರು ಜಿಲ್ಲೆಗಳಲ್ಲಿರುವ ವಿಧಾನಸಭಾ ಸದಸ್ಯರು ಮತ್ತು ಲೋಕಸಭಾ ಸದಸ್ಯರುಗಳನ್ನು ಕರೆದು, ಚರ್ಚೆ ಮಾಡುವ ಮೂಲಕ ಇದಕ್ಕೊಂದು ವ್ಯಾಪಕವಾದಂಥ ಪ್ರಚಾರ ಕೊಡಬೇಕಾಗಿತ್ತು. ಸರಿಯಾದ ರೀತಿಯಲ್ಲಿ ತಿಳುವಳಿಕೆ ಕೊಡಬೇಕಾಗಿತ್ತು. ನಾಲ್ಕು options ಇದ್ದವು. ಈ ನಾಲ್ಕು ಯಾವ options' ಅನ್ನು ರೈತ ಪರಿಗಣಿಸಬಹುದೆಂಬುದನ್ನು ಸರಿಯಾದ ರೀತಿಯಲ್ಲಿ ತಿಳುವಳಿಕೆ ಕೊಡುವಂಥ ವಿಚಾರದಲ್ಲಿ ಸಹ ರಾಜ್ಯ ಸರ್ಕಾರ ಚಿಂತನೆ ಮಾಡಲಿಲ್ಲ. ಇದರ ಬಗ್ಗೆ ನಾವು ಕೇಳಿದರೆ ಬಹಳಷ್ಟು ಮಂದಿ ಅಧಿಕಾರಿಗಳಿಗೆ ಈ ಕುರಿತು ಮಾಹಿತಿ ಇಲ್ಲ. ಇದು ಬಹಳ ವ್ಯಥೆ ಪಡಬೇಕಾದ ವಿಚಾರವಾಗಿದೆ. ಈಗ ಬಂದಿರುವ ಮತ್ತು ಮೊದಲು ಬಂದಿರುವ ಬೆಳೆ ವಿಮೆ ಏನಿದೆ, ಇದಕ್ಕೆ ಐದು ವರ್ಷದ ಹಿಂದಿನ ಸರಾಸರಿ ಶೇಕಡ 90ಕ್ಕಿಂತ ಕಡಿಮೆ ಬೆಳೆ ಬಂದಾಗ, ಈ ವರ್ಷ ಎಷ್ಟು ಬರುತ್ತದೋ ಅದಕ್ಕೆ, ಪರಿಹಾರ, ಮತ್ತು ಎಷ್ಟು ಕಡಿಮೆ ಬರುತ್ತದೋ ಅದಕ್ಕೆ ಪರಿಹಾರ ಸಿಗಬೇಕಾಗಿತ್ತು. ಮೊದಲು ಶೇಕಡ 90 ಆಯಿತು, ನಂತರ, ಶೇಕಡ 80, ಶೇಕಡ 70, ಕೊನೆಗೆ ಶೇಕಡ 60 ಮಾಡಿದಿರಿ. ಈಗ ಏನಾಗಿದೆಯೆಂದರೆ, ಶೇಕಡವಾರು ಕಡಿಮೆ ಮಾಡುತ್ತಾ ಬಂದಂತೆಲ್ಲಾ ಪ್ರೀಮಿಯಂ ದರದಲ್ಲಿ ಶೇಕಡವಾರು ಮಾಡುತ್ತಾ ಹೋಗಿದ್ದಾರೆ. ನಿಮಗೆಲ್ಲಾ ಆಶ್ಚರ್ಯವಾಗಬಹುದು. ಮೆಣಸಿಕಾಯಿಗೆ ಬೆಳೆ ವಿಮೆ ಎಂದು ಒಂದು ನೂರು ರೂಪಾಯಿಗೆ ರೂ. 20.20 ಪೈಸೆ ಮಾಡಿದ್ದಾರೆ. ಒಂದು

ವೇಳೆ ಮೆಣಸಿನಕಾಯಿ ಬೆಳೆಗೆ ರೈತ ಸಾಲ ತೆಗೆದುಕೊಂಡಿದ್ದರೆ. ಅದರ ಬಡ್ಡಿ ದರ ಶೇಕಡ 9 ಇದ್ದರೆ, ವಿಮಾ ಕಂತಿನ ದರ ರೂ. 20.20 ಪೈಸೆಯಾಯಿತು, ಅದೇ ರೀತಿ ಆಲೂಗೆಡ್ಡೆಗೆ ನೂರು ರೂಪಾಯಿಗೆ ರೂ. 12.18 ಪೈಸೆ ವಿಮೆ ಕಂತು ಕಟ್ಟಬೇಕು. ನೀವು ಬಡ್ಡಿ ದರ 6 ರೂ. ಮಾಡುತ್ತೀರಿ, ಈ ವ್ಯವಸ್ಥೆ ಏನಿದೆ. ಇದರ ಬಗ್ಗೆ ನೀವು ಆಲೋಚನೆ ಮಾಡಿದರೆ, ಎಸ್.ಎಸ್. ಪಾಟೀಲರು ತಮ್ಮವರೇ ಆಗಿ ಹೇಳಿದಂತಹ ಮಾತುಗಳಲ್ಲಿ ನಾನು ಹೇಳುವುದಿಷ್ಟೇ ಐದು ವರ್ಷಗಳ ಸರಾಸರಿ ಬೆಳೆ ಎನ್ನುವುದನ್ನು ಬಿಟ್ಟು. ಏಕೆಂದರೆ, ನಮ್ಮ ಪಕ್ಷದವರ ಮಾತನ್ನು ಕೇಳುವುದಕ್ಕಿಂತ ನಿಮ್ಮ ಪಕ್ಷದವರೆಂದು ಹೇಳಬೇಕಾಗಿದೆ. ಈಗ ಕೆಲವು ಸಂದರ್ಭದಲ್ಲಿ ಹೇಳುತ್ತಾರೆ. 'ಡಿಲ್ ಸೆ ದೂರ್ ಔರ್ ನಜರ್ ಸೆ ದೂರ್' ಅನ್ನುವುದು. ನಿಮ್ಮ (ಉಪ ಮುಖ್ಯಮಂತ್ರಿ) ಮನಸ್ಸಿನಲ್ಲಿ, ನಾನು ಇದ್ದೇನಲ್ಲಾ ಅದೇ ಸಂತೋಷದ ವಿಚಾರ.

ಶ್ರೀ ಎಸ್.ಎಸ್. ಪಾಟೀಲ್ : ಅವರಿಗೆ (ಉದಾಸಿ) 'ಕಮಲದ ದಳ' ವೆಂದು ಹೆಸರಿಟ್ಟಿದ್ದೇವೆ.

ಶ್ರೀ ಸಿ.ಎಂ. ಉದಾಸಿ : ನೀವು 'ದಳದಲ್ಲಿ ಕೈ' ಎಂದು ಹೇಳಬೇಕಾಗುತ್ತದೆ. ಅಂತಹ ಮಾತಗಳನ್ನು ಹೇಳುವುದು ಬೇಡ.

ಶ್ರೀ ಸಿದ್ಧರಾಮಯ್ಯ : ಇದರ ಬಗ್ಗೆ ಮಾತನಾಡದಿರುವುದೇ ಒಳ್ಳೆಯದು.

ಶ್ರೀ ಸಿ.ಎಂ. ಉದಾಸಿ : ಒಂದು ಮಾತನ್ನು ನಾವು ಅಲೋಚನೆ ಮಾಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಸರಿ ಹೋಗುವ ಕಾಲ ಬಹಳ ಹತ್ತಿರ ಬರುತ್ತಿದೆ

ಶ್ರೀ ಸಿ.ಎಂ. ಉದಾಸಿ : ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಬೆಳೆ ವಿಮೆ ಈ ವರ್ಷವೂ ಸಹ ಗೊಂದಲ ನಿರ್ಮಾಣವಾಗಿದೆ. ಬೆಳೆ ಸಾಲದ ವಿಮೆಗೆ ಕಂತುಗಳನ್ನು ಕಟ್ಟಿಸಲು ಜುಲೈ 31 ಕೊನೆಯ ದಿನಾಂಕವೆಂದು ಹೇಳುತ್ತಿದ್ದಾರೆ. ಬೆಳೆ ವಿಮೆ ಬಗ್ಗೆ ಇಲ್ಲಿಯವರೆಗೂ ದೃಢೀಕರಣ ಪತ್ರ ಇತ್ತು. ಇವೊತ್ತು record of rights ಬೇಕೆನ್ನುವ ಕಾರಣದಿಂದ ಎಲ್ಲಾ ಕಡೆಗಳಲ್ಲೂ ಬೆಳೆ ವಿಮೆ ಮಾಡಿಸುವಂತಹ, ತಾಲ್ಲೂಕು ಆಫೀಸುಗಳಿಗೆ record of rights ಕೇಳಲು ಹೋದರೆ ಬೆಳಿಗ್ಗೆಯಿಂದ ರಾತ್ರಿ 12 ಗಂಟೆವರೆಗೆ ಅಲ್ಲಿ ಕಾಯಬೇಕಾದ ಪರಿಸ್ಥಿತಿ ಇದೆ. ಇನ್ನೂ ಅನೇಕರು ಬೆಳೆ ವಿಮೆ ಮಾಡಿಸಬೇಕಾಗಿದೆ. ಆ ಕಾರಣದಿಂದ record of rights ಅನ್ನು ದೊರಕಿಸಿಕೊಳ್ಳಲು ತಾಲ್ಲೂಕು ಕಚೇರಿಗಳಲ್ಲಿ ವಿಳಂಬವಾಗುತ್ತಿರುವುದರಿಂದ, ಬೆಳೆ ವಿಮೆ ಅವಧಿಯನ್ನು ಹಿಂದಿನ ವರ್ಷದಂತೆ ಆಗಸ್ಟ್ 30ರವರೆಗೆ ವಿಸ್ತರಿಸುವುದನ್ನು ತಾವು ಪರಿಶೀಲಿಸುತ್ತೀರಾ ಎಂಬುದನ್ನು ನಾನು ಕೇಳಬಯಸುತ್ತಿದ್ದೇನೆ. 2002-03ನೇ ಸಾಲಿನಲ್ಲಿ ಬೆಳೆ ವಿಮೆ ಪರಿಹಾರ ವಿಚಾರದಲ್ಲಿ 275 ಕೋಟಿ ರೂಪಾಯಿ ಹಣ ಕೊಡಬೇಕಾಗಿತ್ತು. ಅದನ್ನು ಒಂದು ವರ್ಷ ವಿಳಂಬವಾಗಿ ಕೊಟ್ಟಿದ್ದಾರೆ. ಒಂದು ವರ್ಷಕ್ಕೆ275 ಕೋಟಿ ರೂಪಾಯಿಗಳಿಗೆ ಬಡ್ಡಿ ಎಷ್ಟಾಗುತ್ತದೆಂದರೆ ಮೂವತ್ತೇಳೂವರೆ ಕೋಟಿ ರೂಪಾಯಿಗಳು. ರೈತರಿಗೆ ಬೆಳೆ ವಿಮೆ ಮಾಡಿಸಬೇಕಾದಾಗ ದಿನಾಂಕವನ್ನು ಗೊತ್ತು ಮಾಡುತ್ತಾರೆ. Crop Insurance cut off date ಇದೆ. Crop Loan Insurance

cut of date ಇದೆ. ಅನಂತರ, Crop Loan Recoveryಗೆ ಲಾಸ್ಟ್ ಡೇಟ್, ನಿಗದಿಪಡಿಸುತ್ತಾರೆ. ಆದರೆ, crop insurance payment ಮಾಡುವುದಕ್ಕೆ ದಿನಾಂಕ ನಿಗದಿಪಡಿಸಿಲ್ಲ Crop Insurance ಯಾವ ದಿನಾಂಕದಂದು ಕೊಡಬೇಕೆಂಬುದನ್ನು ಎಲ್ಲಿಯೂ ವ್ಯವಸ್ಥಿತವಾಗಿ ಹೇಳಿಲ್ಲ, ಇದು ಏನು ತೋರಿಸುತ್ತದೆಂದರೆ, ರೈತರ ಬಗ್ಗೆ ನಿಕೃಷ್ಟತೆ ಇರುವುದನ್ನು ಎತ್ತಿ ತೋರಿಸುತ್ತದೆ. ರೈತರು ಬೆಳೆ ವಿಮೆ ಮಾಡಿಸಬೇಕಾದಾಗ ನಿರ್ದಿಷ್ಟ ದಿನ ಅವರು ಮಾಡಿಸಬೇಕೆಂಬುದು ಇದೆ. ಇಷ್ಟೆಲ್ಲಾ ಆದನಂತರವೂ ಸಹ ವಿಮೆ ಪರಿಹಾರ ಮಂಜೂರಾಗಿ ಇವೊತ್ತಿನವರೆಗೂ ಕರ್ನಾಟಕ ರಾಜ್ಯಾದ್ಯಂತ ಕೃಷಿ ಇಲಾಖೆಯವರಾಗಲಿ, ಕಂದಾಯ ಇಲಾಖೆಯವರಾಗಲಿ, ವಿಮೆ ಇಲಾಖೆಯವರಾಗಲಿ ಶೇಕಡವಾರು ಎಷ್ಟು ಮಂಜೂರಾಯಿತೆಂಬ ಬಗ್ಗೆ ಒಂದು ದಿವಸವೂ ಪತ್ರಿಕೆಯಲ್ಲಿ ಪ್ರಕಟಿಸಿಲ್ಲ. ಮಾನ್ಯ ಸಚಿವರ ಗಮನಕ್ಕೆ ಇವತ್ತಿನವರೆಗೆ ಕಂದಾಯ ಇಲಾಖೆಯುವರಾಗಲಿ, ಕೃಷಿ ಇಲಾಖೆಯುವರಾಗಲಿ, ವಿಮಾ ಇಲಾಖೆಯವರಾಗಲಿ ಬೆಳೆ ವಿಮೆ ಪರಿಹಾರ ಯಾವ ಹೋಬಳಿಗೆ ಯಾವ ಬೆಳೆಗೆ ಶೇಕಡ ಎಷ್ಟು ಮಂಜೂರಾಯಿತು ಎಂದು ಎಲ್ಲೂ ಪ್ರಕಟಣೆ ಮಾಡುವುದಿಲ್ಲ. ಇದನ್ನು ನಾನು ಪ್ರಕಟಣೆ ಮಾಡಿದ್ದೇನೆ, ಹಾವೇರಿ ಜಿಲ್ಲೆಯ ಮಟ್ಟಿಗೆ ಯಾವ ತಾಲ್ಲೂಕಿನಲ್ಲಿ ಯಾವ್ಯಾವ ಹೋಬಳಿಗೆ ಯಾವ್ಯಾವ ಬೆಳೆಗೆ ಎಷ್ಟು ಶೇಕಡವಾರು ಮಂಜೂರಾಯಿತು ಎಂದು ಕ್ಯಾಲಿಕುಲೇಟ್ ಮಾಡಿ ನಾನು ಹೇಳಬಹುದು. ಆದರೆ ಸಾಮಾನ್ಯ ರೈತರಿಗೆ ಇದು ಗೊತ್ತಾಗದಿದ್ದರೆ ಏನಾಗುತ್ತದೆಂದರೆ, ಎರಡು ಹೋಬಳಿಗಳಲ್ಲಿ ಅವನು ಜಮೀನು ಮಾಡಿರುತ್ತಾನೆ. ಒಂದು ಹೋಬಳಿಯಲ್ಲಿ ಒಂದು ಶೇಕಡವಾರು ಮಂಜೂರಾದರೆ ಇನ್ನೊಂದು ಹೋಬಳಿಯಲ್ಲಿ ಮತ್ತೊಂದು ಶೇಕಡವಾರು ಮಂಜೂರಾಗಿರುತ್ತದೆ. ಇದ್ಯಾವುದನ್ನೂ ಇಲಾಖಾಧಿಕಾರಿಗಳು ಇವತ್ತು ಮುಂದಕ್ಕೆ ತರುವುದಿಲ್ಲ. 2002–2003ನೇ ಸಾಲಿನಲ್ಲಿ ಇಡೀ ರಾಜ್ಯಾದ್ಯಂತ ಐದು ಹೋಬಳಿಗಳು, ಹಾವೇರಿ ಜಿಲ್ಲೆಯ ಎರಡು ಹೋಬಳಿ, ಹಾಸನ, ಬೆಳಗಾಂ, ಶಿವಮೊಗ್ಗ ಈ ಐದು ಹೋಬಳಿಗಳಲ್ಲಿ ಬೆಳೆ ವಿಮೆಯಲ್ಲಿ ಪ್ರಾತ್ಯಕ್ಷತೆಯಡಿ 65 ಕೋಟಿ ರೂಪಾಯಿಗಳನ್ನು investigation ಮಾಡಿ ಬಿಡುಗಡೆ ಮಾಡಬೇಕಾಂಥ ವಿಚಾರದಲ್ಲಿ ಇನ್ನೂ ಮೂರು ಸಾವಿರ ಜನ ರೈತರಿಗೆ ಬೆಳೆ ವಿಮಾ ಪರಿಹಾರ ದೊರೆಯಬೇಕಾಗಿತ್ತು. ಅದು ಪೆಂಡಿಂಗ್ ಉಳಿದಿದೆ. ಅದರ ಜೊತೆಗೆ 2002–03ನೇ ಸಾಲಿಗೆ ಹಿಂಗಾರು ಬೆಳೆಗೆ 27 ಕೋಟಿ ರೂಪಾಯಿಗಳಷ್ಟು ಹಣ ಮಂಜೂರಾಗಿತ್ತು ಅದರಲ್ಲಿ ಇವತ್ತಿನವರೆಗೆ ಬಿಡುಗಡೆಯಾಗಿದ್ದು ಕೇವಲ ಐದು ಕೋಟಿ 92 ಲಕ್ಷ ರೂ ಮಾತ್ರ. ಇನ್ನು 22 ಕೋಟಿ ರೂಪಾಯಿಗಳಷ್ಟು ಹಣ ಗದಗ್ ಜಿಲ್ಲೆ ಹಾಸನ, ಹಾಗೂ ಹಾವೇರಿ, ಈ ಮೂರು ಜಿಲ್ಲೆಗಳಲ್ಲಿ ಬೆಳೆ ವಿಮೆ ಪರಿಹಾರಕ್ಕೆ ಬಿಡುಗಡೆಯಾಗಿಲ್ಲ ಎಂಬುದನ್ನು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. 2003ನೇ ಇಸವಿಯದ್ದು ಮುಂಗಾರಿ ಬೆಳೆಗೆ ಮತ್ತು ಹಿಂಗಾರಿ ಬೆಳೆಯ ಬಗ್ಗೆ ಇವತ್ತಿನವರೆಗೆ ಯಾವುದೇ ರೀತಿಯಿಂದ ಬಿಡುಗಡೆ ಆಗಿಲ್ಲ. ತಾವೇನೊ 241 ಕೋಟಿ ರೂ. ಹಣವನ್ನು ಇಲ್ಲಿ ಬಿಡುಗಡೆ ಮಾಡುತ್ತೇವೆ ಎಂಬ ಮಾತನ್ನು

ಹೇಳಿದ್ದೀರಿ. ಆದರೆ 241 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣವನ್ನು ಬಿಡುಗಡೆ ಮಾಡಬೇಕಾದಂಥ ಪರಿಸ್ಥಿತಿ ಇದೆ ಎಂಬುದನ್ನು ತಮ್ಮ ಗಮನಕ್ಕೆ ತರಲು ಇಚ್ಛೆ ಪಡುತ್ತಿದ್ದೇನೆ. ಇಡೀ ರಾಜ್ಯಾದ್ಯಂತ 7 ಲಕ್ಷದ 22 ಸಾವಿರ ಜನ 941 ಕೋಟಿ ರೂಪಾಯಿಗೆ ಮುಂಗಾರು ಬೆಳೆಗೆ ವಿಮೆ ಮಾಡಿಸಿದ್ದಾರೆ. ಹಿಂಗಾರಿ ಬೆಳೆಗೆ 19 ಲಕ್ಷದ 96 ಸಾವಿರ ಜನ 591 ಕೋಟಿ ರೂಪಾಯಿಗೆ ಬೆಳೆ ವಿಮೆ ಮಾಡಿಸಿದ್ದಾರೆ. ಈ 591 ಕೋಟಿ ರೂ ಮತ್ತು 941 ಕೋಟಿ ರೂ ಎಂದರೆ ಸುಮಾರು 1500 ರಿಂದ 1600 ಕೋಟಿ ರೂಪಾಯಿಗಳಷ್ಟು ಬೆಳೆ ವಿಮೆ ಮಾಡಿಸಿದ್ದಾರೆ. ಇದರಲ್ಲಿ ಶೇಕಡ 50 ರಷ್ಟು ಒಂದು ವೇಳೆ ಕ್ರೈಮ್ ಆದರೂ 700 ರಿಂದ 800 ಕೋಟಿ ರೂಪಾಯಿ ಬರಬೇಕಾಗಿತ್ತು. ಆದರೆ ನಿಮ್ಮವರು ಈಗ ಅಂದಾಜು ಎಂದು 275 ಕೋಟಿ ರೂಪಾಯಿಗಳನ್ನು ಕೇವಲ 9 ಮುಂಗಾರು ಬೆಳೆಗಳಿಗೆ ಮಾತ್ರ ಮಾಡಿದ್ದಾರೆ. 275 ಕೋಟಿ ಮಾಡಿದ್ದರೆ ಇನ್ನುಳಿದ ಎಲ್ಲಾ ಬೆಳೆಗಳಿಗೂ ಸಹ ಸುಮಾರು 800 ಕೋಟಿ ರೂ. ಬಿಡುಗಡೆ ಮಾಡಬೇಕಾದಂಥ ಪ್ರಸಂಗ ಬಂದಾಗ ರಾಜ್ಯ ಸರ್ಕಾರ 400 ಕೋಟಿ ರೂ ಬಿಡುಗಡೆ ಮಾಡಬೇಕಾಗುತ್ತದೆ. ಕೇಂದ್ರ ಸರ್ಕಾರ ತನ್ನ ಪಾಲು ಅಲ್ಲದೆ, ರಾಜ್ಯ ಸರ್ಕಾರ ಬಿಡುಗಡೆ ಮಾಡಬೇಕಾಗುತ್ತದೆ. ಇದರ ಬಗ್ಗೆ ತಾವು ಗಂಭೀರವಾಗಿ ಅಲೋಚನೆ ಮಾಡಬೇಕಾಗಿದೆ. ಇವತ್ತು ಏನಾಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನೀವೇನು ಶಿಕಾರಿಪುರದ ಉದಾಹರಣೆಯನ್ನು ಹೇಳಿದಿರಲ್ಲಾ ಹಾಗೆ ನನ್ನ ಹಾನಗಲ್ ತಾಲ್ಲೂಕಿನ ಉದಾಹರಣೆಯೂ ಇದೆ. ನಮ್ಮ ನಾಯಕರಾದಂಥ ಮಾನ್ಯ ಯಡಿಯೂರಪ್ಪನವರು ಹೇಳಿದಂತೆ ಬೆಳೆ ವಿಮೆಯನ್ನು ಕ್ರಾಪ್ ಕಟ್ಟಿಂಗ್ ಎಕ್ಸ್‌ಪರಿಮೆಂಟ್ ಮಾಡಬೇಕಾದಂಥ ಸಂದರ್ಭದಲ್ಲಿ ಏನು ರ್ಯಾಂಡಂ ನಂಬರ್ ಬೀಳುತ್ತದೆ. ಆ ರೀತಿ ಬಿದ್ದಂಥ ನಂಬರ್‌ಗಳ ರೈತರಿಗೆ ನೋಟೀಸನ್ನು ಕೊಡಬೇಕು. ಆ ರೀತಿ ನೊಟೀಸನ್ನು ಕೊಟ್ಟು ಅಲ್ಲಿ ಹೋಗಿ ಐದು ಮೀಟರ್ ಉದ್ದ ಮತ್ತು ಐದು ಮೀಟರ್ ಅಗಲ ಬೆಳೆದಿರುವ ಬೆಳೆಯನ್ನು ಕಟ್ ಮಾಡಿ ಅದರ ಪ್ರಯೋಗವನ್ನು ಮಾಡಬೇಕು. ಆ ರೀತಿ ಮಾಡಬೇಕಾಂಥ ಸಂದರ್ಭದಲ್ಲಿ ಇಲಾಖಾಧಿಕಾರಿಯವರ ವೈಫಲ್ಯದಿಂದಾಗಿ ಈವತ್ತು ಏನಾಗಿದೆ ಇವತ್ತು ಹಾನಗಲ್ ತಾಲ್ಲೂಕಿನಲ್ಲಿ ಹಾನಗಲ್ಲು ಮತ್ತು ಅಕ್ಕಿಯಾದರೂ ಹೋಬಳಿ ರೈತರಿಗೆ ಅನ್ಯಾಯವಾಗಿದೆ ಒಂದೂ ಕೆರೆಯಲ್ಲಿ ನೀರೇ ಇಲ್ಲ, ನೀರಾವರಿ ಜಲಾಶಯಗಳಲ್ಲಿ ನೀರು ಇಲ್ಲದಂಥ ಸಂದರ್ಭದಲ್ಲಿ ನೀರಾವರಿ ಬೆಳೆ ಉತ್ತಮವಾಗಿ ಬಂದಿದೆ ಎಂದುಕೊಂಡು ಹಿಂದಿನ ಐದು ವರ್ಷದ ಸರಾಸರಿಗಿಂತ ಹೆಚ್ಚಿನ ಬೆಳೆ ಬಂದಿದೆ. ಎಂದು ದಾಖಲೆ ಮಾಡುತ್ತಾರೆಂದು ಹೇಳಿದರೆ ಇದು ಯಾವ ರೀತಿ ನಡೆಯುತ್ತಿದೆ ? ಸರ್ಕಾರದಲ್ಲಿ ರೈತರ ಬಗ್ಗೆ ಏನಾದರೂ ಚಿಂತನೆ ಇದೆಯೇ ಎಂಬ ಬಗ್ಗೆ ಗಂಭೀರವಾಗಿ ತಾವು ಆಲೋಚನೆ ಮಾಡಬೇಕು. ಈ ಎರಡು ಹೋಬಳಿಯಲ್ಲಿ ಈ ರೀತಿ ಆಗಿದ್ದರಿಂದಲೇ ಹಾನಗಲ್ ತಾಲ್ಲೂಕು. ಒಂದರಲ್ಲೇ 15 ರಿಂದ 20 ಕೋಟಿ ರೂಪಾಯಿಗಳಷ್ಟು ಹಣ ನಮ್ಮ ರೈತರಿಗೆ ಬರುವ ಹಣವನ್ನು ನಾವು ಕಳೆದುಕೊಳ್ಳಬೇಕಾಗಿದೆ. ಇದರ ಬಗ್ಗೆ ನೀವೆಲ್ಲಾ ಆಲೋಚನೆ ಮಾಡಬೇಕಾಗಿದೆ,

ಬೆಳೆಹಾನಿಯಾದಾಗ ವಿಮೆ ಪರಿಹಾರ ಸಿಕ್ಕಿದರಷ್ಟೇ ಸಾಕು ಎನ್ನುವ ಮಾತಲ್ಲ ಎನ್ನುವ ಕಾರಣಕ್ಕೇ ಬೆಲೆ ನಿರ್ಧಾರ ಇರಬೇಕು ಎನ್ನುವ ಮಾತನ್ನು ಹೇಳಿದ್ದು ಈರುಳ್ಳಿಯ ಬೆಲೆಯನ್ನು ನಾವು ನೋಡಿದ್ದೇವೆ. ಒಂದು ಕಾಲಕ್ಕೆ ಹತ್ತು ರೂಪಾಯಿ ಒಂದು ಕೆ.ಜಿ.ಗೆ ಇದ್ದದ್ದು ಒಂದು ವೇಳೆ ಹತ್ತು ಪೈಸೆಗೆ ತೆಗೆದುಕೊಳ್ಳದ ಪರಿಸ್ಥಿತಿಯಾದರೆ ಹೇಗೆ ? ಅವನಿಗೆ ಬೆಳೆ ಬಂದಿರುತ್ತದೆ. ವಿಮೆ ಸಿಗುವುದಿಲ್ಲ. ಬೆಳೆ ಬಂದಿದ್ದರೆ ಅದನ್ನು ಹತ್ತು ಪೈಸೆಗೆ ಮಾರಿದರೆ ಅವನಿಗೆ ಆಗುವ ಹಾನಿಯ ಬಗ್ಗೆ ಸರ್ಕಾರ ಗಂಭೀರವಾಗಿ ಚಿಂತನೆ ಮಾಡದಿದ್ದರೆ ಹೇಗೆ? ಬೇಳೆ ಹಾನಿಯಾದಾಗ ಏನು ಕೊಡಬೇಕು ಹಾಗೆ ಬೆಲೆ ಬಾರದಿದ್ದಾಗ ಸಹ ಇದನ್ನು ಮಾಡಲು ಸಾಧ್ಯವಾಗುತ್ತದೆ. ಇದರ ಬಗ್ಗೆ ಮತ್ತೊಮ್ಮೆ ಮರುಪರಿಶೀಲನೆ ಮಾಡಿ ಬೆಳೆಗೆ ಮತ್ತು ಬೆಲೆಗೆ ಕನೆಕ್ಟೆಡ್ ಮಾಡಿ ಒಂದು ಕ್ರಾಪ್ ಇನ್‌ಶ್ಯೂರೆನ್ಸ್ ಮಾಡುವಂಥ ಯೋಜನೆಯ ಬಗ್ಗೆ ಈ ಮೊದಲು ಒಂದು ಸಲ ಆಂಧ್ರಪ್ರದೇಶದಲ್ಲಿ ಚಿಂತನೆ ನಡೆದಿದೆ, ಆದ್ದರಿಂದ ತಾವು ದಯವಿಟ್ಟು ಅದರ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಿದರೆ ಅದೊಂದು ಪ್ರಯೋಗ ತಮ್ಮ ಕಾಲದಲ್ಲಿ ಯಶಸ್ವಿಯಾದೀತು ಎಂದು ಹೇಳಿ ತಮ್ಮ ಗಮನಕ್ಕೆ ತರಲು ಇಚ್ಛೆ ಪಡೆಯುತ್ತಿದ್ದೇನೆ. ಈಗ ಏನಾಗಿದೆಯೆಂದರೆ, ಗೋವಿನ ಜೋಳಕ್ಕೆ ನೂರು ಪಟ್ಟು ಮತ್ತು ನೂರೈವತ್ತು ಪಟ್ಟು ಎರಡು ಇದೆ. ಮೊದಲನೆಯ ನೂರನೆ ಪಟ್ಟುಕ್ಕೆ ಎರಡೂವರೆ ರೂಪಾಯಿ ಇದ್ದದ್ದು ಎರಡನೇ ನೂರೈವತ್ತು ಪಟ್ಟುಕ್ಕೆ ನಾಲ್ಕು ರೂಪಾಯಿ ಇತ್ತು. ಈಗ ಇದನ್ನು ಐದು ರೂಪಾಯಿ ತೊಂಬತ್ತು ಪೈಸೆ ಮಾಡಿದ್ದಾರೆ. ಭತ್ತಕ್ಕೆ 9 ರೂ. 90 ಪೈಸೆ ಮಾಡಿದ್ದಾರೆ. ಮೊದಲನೆಯ ನೂರು ರೂಪಾಯಿಕ್ಕೆ ಎರಡೂವರೆ ರೂಪಾಯಿ, 150 ಪಟ್ಟನ್ನು ಮಾಡ ಬೇಕಾದಾಗ ಅದನ್ನು ಇವತ್ತು 9 ರೂ. 90 ಪೈಸೆ ಮಾಡಿದರೆ ಅವನು ಒಂದು ಎಕರೆಗೆ 540 ರೂ. ಹಣವನ್ನು ಕಟ್ಟುಬೇಕಾಗುತ್ತದೆ. ಇಷ್ಟೊಂದು ದೊಡ್ಡ ಮೊತ್ತದ ಹಣವನ್ನು ಕಟ್ಟುವುದಾದರೂ ಹೇಗೆ ? ತಮಗೆ ಗೊತ್ತಿರುವ ಹಾಗೆ ಆಲೂಗೆಡ್ಡೆ ಒಂದಕ್ಕೆ 1 ಲಕ್ಷದ 57 ಸಾವಿರ ರೂಪಾಯಿಗೆ 150 ಪಟ್ಟು ಮಾಡಲು ಅವಕಾಶ ಇದೆ ಒಂದು ಹೆಕ್ಟರ್‌ಗೆ, ಅವರು ಒಂದು ಹೆಕ್ಟರ್‌ಗೆ ಇನ್‌ಶ್ಯೂರೆನ್ಸ್ ಪ್ರೀಮಿಯಂ ಎಷ್ಟು ಕಟ್ಟಬೇಕಾಗುತ್ತದೆಂದರೆ 18 ಸಾವಿರ ರೂಪಾಯಿಗಳು. ಇದು ಯಾವ ಲೆಕ್ಕ ? ಇದನ್ನೆಲ್ಲಾ ತಾವು ಗಂಭೀರವಾಗಿ ಚಿಂತನೆ ಮಾಡದಿದ್ದರೆ ರೈತರದ್ಧಾರ ಮಾಡುತ್ತೇವೆಂಬ ಮಾತು ಕೇವಲ ಭಾಷಣಕ್ಕಾಗಿ ಉಪಯೋಗ ಮಾಡುತ್ತೇವೆ ಎಂದು ಜನರಲ್ಲಿ ಭಾವನೆ ಮೂಡುತ್ತದೆ ಎಂದು ಹೇಳಿ, ಈ ವರ್ಷ ಭೀಕರವಾದಂಥ ಬರಗಾಲ ನಮ್ಮ ಕಡೆ ಕಾಣುತ್ತಿದೆ. ಹಿಂದಿನ ವರ್ಷ ಕೂಡ ತಾವೆಲ್ಲಾ ಮೋಡ ಬಿತ್ತನೆ ಕಾರ್ಯಕ್ರಮವನ್ನು ಮೋಡಗಳೇ ವಿರಳವಾದಂಥ ಸಂದರ್ಭದಲ್ಲಿ ಮೋಡ ಬಿತ್ತನೆ ಕಾರ್ಯಕ್ರಮವನ್ನು ಹಿಂದಿನ ವರ್ಷ ಮಾಡಿದ್ದರು. ಇವತ್ತು ಸಾಕಷ್ಟು ಮೋಡಗಳು ಇರತಕ್ಕ ಸಂದರ್ಭದಲ್ಲಿ ಮೋಡ ಬಿತ್ತನೆ ಕಾರ್ಯಕ್ರಮ ಮಾಡಿದರೆ ಅದು ಫಲಪ್ರಯೋಗವಾಗಬಹುದು. ಅದಕ್ಕೆ ತಾವು ಆ ಪ್ರಯೋಗವನ್ನು ಮತ್ತೊಂದು ಸಲ ಎರಡನೆ ವರ್ಷಕ್ಕೆ ಮಾಡಿದ್ದೇ ಆದರೆ ಜನರಿಗೆ ಅದರಿಂದ

ಪ್ರಯೋಜನವಾಗಬಹುದು ಎನ್ನುವ ಮಾತನ್ನು ಹೇಳಿ, ನೀರಾವರಿ ಮತ್ತು ವಿದ್ಯುಚ್ಛಕ್ತಿ ಈ ಎರಡಕ್ಕೆ ಆದ್ಯತೆಯನ್ನು ಕೊಡುತ್ತೇವೆ ಎಂಬ ಮಾತನ್ನು ಹೇಳಿದ್ದಾರೆ. ತುಂಗಾ ಮೇಲ್ದಂಡೆ ಯೋಜನೆ, ಒಂದು ಕಾಲಕ್ಕೆ ಅವರಿಗೇ ಗೊತ್ತಿರುವಂತೆ ಅವರೇ ಅರ್ಥ ಸಚಿವರಾಗಿ ಇರಬೇಕಾದಾಗ 600 ಕೋಟಿ ರೂಪಾಯಿ ಅಂದಾಜು ಎಂಬುದನ್ನು 1994 ರಿಂದ 1999ರ ಅವಧಿಯಲ್ಲಿ ಅವರ ಗಮನಕ್ಕೆ ಬಂದಿದ್ದು ಕರ್ನಾಟಕ ನೀರಾವರಿ ನಿಗಮಕ್ಕೆ ಈ ತುಂಗಾ ಮೇಲ್ದಂಡೆ ಯೋಜನೆಯನ್ನು ಸೇರಿಸುವಂಥ ಕೆಲಸವನ್ನೂ ತಾವು ಮಾಡಿದ್ದಿರಿ. ಇವತ್ತು ಆ 600 ಕೋಟಿ ರೂಪಾಯಿ ಹೋಗಿ 940 ಕೋಟಿ ರೂಪಾಯಿಗಳಿಗೆ ಬಂದಿದೆ. ಆ ಯೋಜನೆ ಹಾವೇರಿ ಜಿಲ್ಲೆಯಲ್ಲಿ 2 ಲಕ್ಷ 40 ಸಾವಿರ ಎಕರೆಗೆ ನೀರಾವರಿ ಆಗುವಂಥ ಯೋಜನೆಗೆ ಇದುವರೆಗೆ ಖರ್ಚು ಮಾಡಿರುವಂಥ ಹಣ 100 ಕೋಟಿ ರೂಪಾಯಿಗಳಿಗಿಂತ ಕಡಿಮೆ ಇರುವುದರಿಂದ ಪದೇ ಪದೇ ಅದರ ವೆಚ್ಚ ಜಾಸ್ತಿಯಾಗುತ್ತದೆ. ಆದ್ದರಿಂದ ಅದಕ್ಕೆ ಒಂದು ಕಾಲಮಿತಿಯನ್ನು ಗೊತ್ತುಪಡಿಸಿ ಇವತ್ತು ತುಂಗಾಮೇಲ್ದಂಡೆ ಯೋಜನೆಯ ಬಗ್ಗೆ ಗಂಭೀರವಾಗಿ ಚಿಂತನೆಯನ್ನು ತಾವು ಮಾಡುತ್ತೀರಿ ಎನ್ನುವ ಮಾತನ್ನು ಹೇಳುವುದರ ಜೊತೆಗೆ ಇವತ್ತು ಅತ್ಯಂತ ಪ್ರಮುಖವಾಗಿ ಸಣ್ಣ ನೀರಾವರಿ ಇಲಾಖೆಯಿಂದ ಮಾಡಬೇಕಾಗಿರುವಂಥ ಲಿಫ್ಟ್ ಇರಿಗೇಷನ್ ಸ್ಕೀಮ್‌ಗಳು ಸರಿಯಾದ ರೀತಿಯಿಂದ ಕೆಲಸ ಮಾಡುತ್ತಿಲ್ಲ. ಕೆಲಸ ಮಾಡುವುದಕ್ಕೆ ಆಗುತ್ತಲೂ ಇಲ್ಲ. ಅವುಗಳಿಗೆ ಸರಿಯಾಗಿ ಹಣಕಾಸಿನ ನೆರವು ಸಿಗುತ್ತಿಲ್ಲ ಕಾಲಕಾಲಕ್ಕೆ ಏನಾದರೂ ರಿಪೇರಿ ಬಂದರೆ ನಿಂತುಹೋಗುತ್ತದೆ, ಬ್ಯಾರೇಜ್‌ಗಳ ನಿರ್ಮಾಣವಾಗಿದೆ. ನದಿಗಳಿಗೆ ಬ್ಯಾರೇಜ್‌ಗಳ ನಿರ್ಮಾಣವಾಗುವುದನ್ನು ಇಡೀ ರಾಜ್ಯಾದ್ಯಂತ ಹಾವೇರಿ ಜಿಲ್ಲೆಯ ಪರಿಸ್ಥಿತಿಯನ್ನು ಹೇಳಬಹುದು ಎಂದು ನಾನು ಭಾವಿಸಿಕೊಂಡಿದ್ದೇನೆ. ಹಾವೇರಿ ಜಿಲ್ಲೆಯಲ್ಲಿ 11 ಬ್ಯಾರೇಜುಗಳು ಇದೆ. ಆ 11 ರಲ್ಲಿ ಗೇಟನ್ನು ಹಾಕಬೇಕಾಂಥ ಸಂದರ್ಭದಲ್ಲಿ ಸಮಯಕ್ಕೆ ಸರಿಯಾಗಿ ಹಾಕಿದ್ದಾದರೆ ನೀರನ್ನು ನಿಲ್ಲಿಸಿ 11 ಬ್ಯಾರೇಜ್‌ನಲ್ಲಿ ನೀರು ನಿಂತರೆ ಸುಮಾರು 40 ರಿಂದ 50 ಸಾವಿರ ಎಕರೆಗೆ ನೀರಾವರಿಯಾಗುತ್ತದೆ. ಅಂಥ ಯೋಜನೆಗೆ ಕೇವಲ 40 ಲಕ್ಷ ರೂ ಹಣವನ್ನು ತುಂಬಲು ಸಾಧ್ಯವಾಗದಿದ್ದರೆ ಆ ಗೇಟನ್ನು ನಿಲ್ಲಿಸದೆ ಹೋಗುವಂಥ ಪರಿಸ್ಥಿತಿ ಇದೆ ಎಂದರೆ ಮಾನ್ಯ ಉಪ ಮುಖ್ಯಮಂತ್ರಿಯವರು ಇದನ್ನು ಗಮನಹರಿಸುತ್ತಾರೆಂದು ನಾನು ಭಾವಿಸಿಕೊಂಡಿದ್ದೇನೆ. ಮೈನರ್ ಇರಿಗೇಷನ್ ಒಂದರಲ್ಲೇ ಧಾರವಾಡ ಡಿವಿಜನ್‌ನಲ್ಲಿ ಹದಿನೈದುವರೆ ಕೋಟಿ ರೂ ಹಣ ಕಳೆದ ನಾಲ್ಕು ವರ್ಷಗಳಿಂದ ಪಾವತಿಯಾಗಿಲ್ಲ. ಆ ಕಾರಣದಿಂದ ಅಭಿವೃದ್ಧಿ ಕೆಲಸಗಳು ನಿಂತು ಹೋಗಿವೆ. ಇದರಿಂದ ಯಾವ ಕಂಟ್ರಾಕ್ಟರ್‌ಗಳೂ ಕೆಲಸ ಮಾಡಲು ಮುಂದೆ ಬರುತ್ತಿಲ್ಲ. ಇನ್ನು ಕೆರೆಗಳ ಬಗ್ಗೆ ಹೇಳುವುದಾದರೆ, ಕೆರೆಗಳ maintenanceಗಾಗಿ ಅತ್ಯಂತ ಕಡಿಮೆ ಹಣವನ್ನು ಇಟ್ಟಿದ್ದಾರೆ. ಒಂದು ಕೆರೆಗೆ maintenance grant ಎಂದು ಒಂದು ಎಕರೆಗೆ 63 ರೂ. ಇಟಿದ್ದಾರೆ. ಇದು ಮಾನ್ಯ ಅಧ್ಯಕ್ಷರ, ಗಮನಕ್ಕೆ ಬಂದಿದೆಯೋ ಇಲ್ಲವೋ,

ಗೊತ್ತಿಲ್ಲ, 40–50 ಇರುವಂತಹ ಕೆರೆಗಳಿಗೆ Maintenance grant ಸುಮಾರು 3,000 ರೂ.ಗಳಾಗುತ್ತದೆ. ಅಷ್ಟು ಕಡಿಮೆ ಮೊತ್ತದಲ್ಲಿ ಅಂತಹ ದೊಡ್ಡ ಕೆರೆಯನ್ನು ಹೇಗೆ maintenance ಮಾಡಬೇಕು ? ಇಡೀ ರಾಜ್ಯಾದ್ಯಂತ ಇರುವ ಅಂತಹ ಕೆರೆಗಳ ಪರಿಸ್ಥಿತಿ ಹೇಗೆ ? ಕೆಲವೇ ಕೆಲವು ರಾಜಕಾರಣಿಗಳು, ಯಾರು ಆಡಳಿತ ಪಕ್ಷದಲ್ಲಿ ಇರುತ್ತಾರೋ, ಅವರುಗಳು ಬೇಕಾದಲ್ಲಿ ಮಾತ್ರ ಮಾಡಿಸಿಕೊಳ್ಳುವುದಕ್ಕೆ ಇದರಿಂದ ಸಾಧ್ಯವಾಗುತ್ತದೆ ಎನ್ನುವಂತಹ ಭಾವನೆ ಸಾರ್ವತ್ರಿಕವಾಗಿ ಮೂಡುತ್ತಿದೆ. ಅದು ಆಗಬಾರದು, ಎನ್ನುವುದಾದರೆ, ಎಲ್ಲ ಕಡೆಯಲ್ಲೂ ಸಹಿತ, maintenance grant ಬಗ್ಗೆ ತಾವು ಗಂಭೀರವಾಗಿ ಚಿಂತನೆ ಮಾಡಿ, ಅದನ್ನು ಹೆಚ್ಚು ಮಾಡಿಸುವಂತಹ ಕೆಲಸವನ್ನು ಮಾಡಬೇಕು ಎಂಬ ಮಾತನ್ನು ಹೇಳುತ್ತೇನೆ. ನನಗೆ ಎಲ್ಲದಕ್ಕಿಂತ ವ್ಯಥೆಯಾಗುವಂತಹ ವಿಚಾರ ಏನೆಂದರೆ. ಜಲಾನಯನ ಯೋಜನೆ, ಕೆರೆ ನಿರ್ವಹಣೆ ಯೋಜನೆ, ಜಲ ನಿರ್ಮಲ ಯೋಜನೆ ಎಂದು ವಿಶ್ವಬ್ಯಾಂಕಿನ ಕಾರ್ಯಕ್ರಮಗಳೇನು ಬಂದಿವೆಯೋ, ಇದರೊಳಗೆ ಜನರ ಪಾಲ್ಗೊಳ್ಳುವಿಕೆ ಹೆಚ್ಚಾಗಬೇಕು ಮತ್ತು ಇದಕ್ಕೆ ಆಡಿಟ್ ಸೆಲ್ ಇರಬೇಕಾದಂತಹ ವಿಚಾರದಲ್ಲಿ ಸರಿಯಾದ ರೀತಿಯಿಂದ ಕ್ರಮ ಕೈಗೊಳ್ಳದೇ ಇದ್ದರೆ, ಇದು ಜನರಿಗೆ ಉಪಯೋಗವಾಗುವುದಿಲ್ಲ. ಕರ್ಮಧರ್ಮಕ್ಕೆ ಜಲ ಸಂವರ್ಧನೆ ಯೋಜನೆಯಲ್ಲಿ ರಾಜ್ಯದ ಆರು ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಕಾರ್ಯಗತಗೊಳಿಸುವಾಗ, ನಿನ್ನೆ ನನ್ನ ತಾಲ್ಲೂಕಿನಲ್ಲಿ ಸಹಿತ 224 ಕೆರೆಗಳಿಗೆ ಕಾಯಕಲ್ಪ ಆಗುವಂತಹ ವ್ಯವಸ್ಥೆ ಬಂದಿರುವಾಗ, ಹಣ ದುರುಪಯೋಗವಾಗದಂತೆ ನೋಡಿಕೊಳ್ಳಬೇಕಾಗಿದೆ. ಇದಕ್ಕೆ ಬೇಕಾಗಿರುವಂತಹ ಆಡಿಟ್ ಸೆಲ್ ಮಾಡಬೇಕು. ಇಲ್ಲಿ ಏನಾಗಿದೆ ಎಂದರೆ, ಅಲ್ಲಿ NGOಗೆ ನೇರವಾಗಿ ಹಣ ಬಿಡುಗಡೆಯಾಗಿದೆ, ಸ್ಥಳೀಯರನ್ನು ನಾಮಕಾವಸ್ಥೆ ಕಾರ್ಯದಲ್ಲಿ ಪಾಲ್ಗೊಳ್ಳುವಂತಹ ವ್ಯವಸ್ಥೆ ಏನಿದೆಯೋ, ಅದನ್ನು ಬದಲಾವಣೆ ಮಾಡದಿದ್ದರೆ ಕಷ್ಟವಾಗುತ್ತದೆ. ಕೋಲಾರ ಜಿಲ್ಲೆಯಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ, ಅಂದರೆ ಒಂದು ಸಾವಿರಕ್ಕಿಂತ ಹೆಚ್ಚಿನ ಕೆರೆಗಳಿಗೆ ಈ ಯೋಜನೆ ಅಡಿ ಕಾಯಕಲ್ಪ ನೀಡುವಂತಹ ವ್ಯವಸ್ಥೆ ಇದೆ, ವಿಶ್ವ ಬ್ಯಾಂಕಿನಿಂದ ಇದಕ್ಕಾಗಿ ನೆರವಿನ ಹಣ ಬರುತ್ತಿರುವಾಗ, ಅದರ ಸದ್ಬಳಕೆಯಾಗಬೇಕಾಗಿದೆ, ಅದಕ್ಕಾಗಿ ಇದಕ್ಕೆ ಬೇಕಾಗಿರುವಂತಹ ವಿಚಕ್ಷಣಾ ದಳವನ್ನಾಗಲೀ ಅಥವಾ ಹಣ ಖರ್ಚಾಗಿದ್ದರ ಬಗ್ಗೆ ಇಡಬೇಕಾದಂತಹ ವ್ಯವಸ್ಥೆಯನ್ನು ಸರಿಯಾದ ರೀತಿಯಲ್ಲಿ ನೋಡಿಕೊಳ್ಳುವಂತಹ ವ್ಯವಸ್ಥೆಯನ್ನು ತಾವು ಮಾಡದಿದ್ದರೆ, ಈ ವ್ಯವಸ್ಥೆ ಸಂಪೂರ್ಣವಾಗಿ ಹಾಳಾಗಿ ಹೋಗುತ್ತದೆ ಎಂಬುದನ್ನು ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತಿದ್ದೇನೆ. ವಸತಿ ಯೋಜನೆಯಲ್ಲಿ

ಅಧ್ಯಕ್ಷರು : ಮಾನ್ಯ ಉದಾಸಿಯವರೇ, ಇನ್ನೂ ಬಹಳ ಜನ ಮಾತನಾಡುವವರು ಇದ್ದಾರೆ.

ಶ್ರೀ ಸಿ.ಎಂ. ಉದಾಸಿ : ಒಂದೆರಡು ಮಾತುಗಳನ್ನು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ. ನಾನು ಇನ್ನು ಬಹಳ ಹೊತ್ತು ತೆಗೆದುಕೊಳ್ಳುವುದಿಲ್ಲ. ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸಚಿವರು ಏನು ಹೇಳಿದ್ದಾರೆ ಎಂದರೆ, ಭ್ರಷ್ಟಾಚಾರದ

ಬಗ್ಗೆ ಉಗ್ರ ಕ್ರಮವನ್ನು ಕೈಗೊಳ್ಳುವುದಾಗಿ ಹೇಳುತ್ತಿದ್ದಾರೆ. ಆ ಉಗ್ರ ಕ್ರಮ ಕೈಗೊಳ್ಳಬೇಕಾಗಿರುವಂತಹ ವಿಚಾರದಲ್ಲಿ ಹೇಳುವುದಾದರೆ, ನಿನ್ನೆ ಒಂದು ಉತ್ತರ ಕೊಟ್ಟಿದ್ದಾರೆ. ಕಾರವಾರ ಜಿಲ್ಲಾಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕಾದಂತಹ ವಿಚಾರದಲ್ಲಿ ಸಿ.ಬಿ.ಐ ವರದಿ ಬಂದು, ಎಲ್ಲಾ ಆಗಿದ್ದರೂ ಸಹಿತ, ಇನ್ನೂವರೆಗೂ ಕ್ರಮ ತೆಗೆದುಕೊಳ್ಳಲಿಕ್ಕಾಗಿಲ್ಲ. ಇದು ಏಕೆ ವಿಳಂಬವಾಗುತ್ತಿದೆ? ಇದು ಹೀಗೆ ಆಗಿದ್ದೇ ಆದರೆ, ಜನರಿಗೆ ಭಯ ಇರುವುದಿಲ್ಲ, ನೀವೇ ಹೇಳಿದ ಹಾಗೆ, excuse and discipline cannot go together. ಶಿಸ್ತು ಮತ್ತು ಕ್ರಮಾ ಎರಡೂ ಕೊಡಿ ತೆಗೆದುಕೊಂಡು ಹೋಗಲಿಕ್ಕೆ ಸಾಧ್ಯವೇ ಇಲ್ಲ ಎನ್ನುವುದಾದರೆ, ಅಪರಾಧ ಸಿದ್ಧವಾದ ಮೇಲೂ ಸಹಿತ ಕ್ರಮ ಕೈಗೊಳ್ಳದೇ ಇಲ್ಲಿಯವರೆಗೆ ಸುಮ್ಮನಿದ್ದರೆ ಹೇಗೆ? Handloom Development Corporationನ ಮೇಲೆ ಹಿಂದೆ ಒಂದು ಆರೋಪ ಬಂದಾಗ, ಈ ಸದನದಲ್ಲಿ ಮತ್ತು ವಿಧಾನ ಪರಿಷತ್ತಿನಲ್ಲಿ ಕಾಲಕಾಲಕ್ಕೆ ಚರ್ಚೆಯಾಗಿದೆ. ಅದರ ಮೇಲೆ ಸಹ ಕ್ರಮ ಕೈಗೊಳ್ಳಲಿಲ್ಲ. ಹಾವೇರಿಯ ಜಿಲ್ಲಾಧಿಕಾರಿಗಳು ಕೊಳವೆ ಬಾವಿಗಳನ್ನು ತೆಗೆಸಬೇಕಾದಾಗ, 80 ರೂ. 85 ಪೈಸೆಗೆ ಒಂದು ಘೂಟ್‌ನಂತೆ ತೆಗೆಸಿದ್ದಾರೆ. ಒಂದು ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣ ಅಪವ್ಯಯವಾಗಿದೆ ಎನ್ನುವಂತಹ ಆರೋಪದ ಬಗ್ಗೆ ಈ ವಿಧಾನ ಸಭೆಯಲ್ಲಿ ಮತ್ತು ವಿಧಾನ ಪರಿಷತ್ತಿನಲ್ಲಿ ಚರ್ಚೆಯಾದ ಮೇಲೂ ಸಹಿತ, ಇವತ್ತಿನವರೆಗೂ ಒಂದು ಕೋಟಿ ರೂಪಾಯಿಗಿಂತ ಹೆಚ್ಚು ಹಣ ಲೂಟಿಯಾಗಿದ್ದರ ಬಗ್ಗೆ ಸಹ ಯಾರೂ ಕ್ರಮ ತೆಗೆದುಕೊಳ್ಳಲಿಲ್ಲ, ಇದೇನು ತೋರಿಸುತ್ತದೆ ಎಂದರೆ, ಎಲ್ಲಿಯವರೆಗೆ ನೀವು ಡಿಸಿಪ್ಲೀನ್ ಅನ್ನು ತರಬೇಕು ಎನ್ನುವಂತಹ ವಿಚಾರವನ್ನು ನಿಶ್ಚಿತವಾಗಿ ಜಾರಿಗೊಳಿಸದೇ ಹೋದರೆ ನೀವು ಎಕ್ಸ್‌ಕ್ಯೂಸ್ ಮಾಡುವಂತಹ ಕೆಲಸವನ್ನು ಕೈ ಬಿಡದಿದ್ದರೆ ಇದು ಸಾಧ್ಯವಾಗುವುದಿಲ್ಲ ಎನ್ನುವಂತಹ ಮಾತನ್ನು ಹೇಳುತ್ತೇನೆ. ತಮಗೆ ಗೊತ್ತಿರುವ ಹಾಗೆ, ನಾನು ಒಂದೇ ಒಂದು ಉದಾಹರಣೆ ಹೇಳಿ ನನ್ನ ಮಾತುಗಳನ್ನು ಮುಗಿಸಬೇಕೆಂದು ಇಚ್ಛೆ ಪಡುತ್ತಿದ್ದೇನೆ. ಇಲ್ಲಿ ಏನಾಗಿದೆ ಎಂದರೆ, ಹಿಂದಿನ ದಿವಸ ನಾನು ಚರ್ಚೆ ಮಾಡಬೇಕಾದರೆ ಮಧ್ಯೆ ಪ್ರವೇಶಿಸಿ ಮಾನ್ಯ ಎಂ.ಪಿ. ಪ್ರಕಾಶ್‌ರವರಿಗೆ interrupt ಮಾಡಲಿಕ್ಕೆ ಪ್ರಯತ್ನ ಪಟ್ಟೆ. ಆಶ್ರಯ ಯೋಜನೆಗಳಲ್ಲಿ ಏನಾಗಿದೆ ಎಂದರೆ, ಆಗಿರುವಂತಹ ಅವ್ಯವಹಾರಗಳು....

ಅಧ್ಯಕ್ಷರು : ನಿನ್ನೆ ಅದರ ಬಗ್ಗೆ ಪ್ರಶ್ನೋತ್ತರಗಳು ವಿವರವಾಗಿ ಚರ್ಚೆಯಾಯಿತಲ್ಲಾ ?

ಶ್ರೀ ಸಿ.ಎಂ. ಉದಾಸಿ : ವಿವರವಾದ ಚರ್ಚೆಯಾಗಲಿಲ್ಲ. ನಾನು ಮಧ್ಯೆ interrupt ಮಾಡಿದಾಗ ಮಾತ್ರ ಅವರು ಉತ್ತರ ನೀಡಿದರು. ನಾನು ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದು ಏನಾಗಿದೆ ಎಂದರೆ, ಹಾವೇರಿ ಜಿಲ್ಲೆಯಲ್ಲಿ ಹಾವೇರಿ ಮತ್ತು ಹಾನಗಲ್ ಪುರಸಭೆಗಳಲ್ಲಿ ಆಗಿರುವಂತಹ ವಿಚಾರಗಳನ್ನು ನಾನು ಇಲ್ಲಿ ಸ್ಪಷ್ಟವಾಗಿ ಹೇಳುತ್ತೇನೆ.

"ಹಾವೇರಿ ಪುರಸಭೆಯ ದಾಖಲೀಕರಣ ಅವ್ಯವಸ್ಥೆ ಭೌತಿಕವಾಗಿ ಕಂಡು ಬಂದಿರುವ ಲೋಪದೋಷಗಳು :- 2000-2001ರಲ್ಲಿ 413ರಲ್ಲಿ ಆಯ್ಕೆಯಾಗಿರುವ ಮನೆ ನಿರ್ಮಾಣ ಮಾಡಿಕೊಂಡಿರುವ ಸುಮಾರು ನೂರಕ್ಕೂ ಹೆಚ್ಚು ಫಲಾನುಭವಿಗಳು ನಿರ್ಮಾಣ ಹಂತದ ಮೂರು ಭಾವಚಿತ್ರಗಳು ಹೊಂದಾಣಿಕೆಯಾಗದೇ, ಯಾರದೋ ಮನೆಯ ಭಾವಚಿತ್ರವನ್ನು ನೀಡಿ ಹಣ ಪಡೆದಿರುವುದು ಕಂಡು ಬಂದಿರುತ್ತದೆ."

ಹೀಗೆ ನಿಶ್ಚಿತವಾದಂತಹ ಒಂದು ರಿಪೋರ್ಟ್ ಇದೆ. ಯಾರ್‍ಯಾರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಸ್ಪಷ್ಟವಾಗಿ ಫೋಟೋಗಳನ್ನು ಇಟ್ಟುಕೊಂಡು, ಶಿವಶೈಲಂ ಎಂಬುವವರು ವರದಿ ನೀಡಿದ್ದಾರೆ. ಹಿಂದೆ ಮಾನ್ಯ ಎಂ.ಪಿ. ಪ್ರಕಾಶ್‌ರವರು ಮತ್ತು ಮಾನ್ಯ ಬಸವರಾಜ ಬೊಮ್ಮಾಯಿಯವರು ಆ ಸಂದರ್ಭದಲ್ಲಿ ವಿಧಾನ ಪರಿಷತ್ತಿನಲ್ಲಿ ಈ ವಿಚಾರವನ್ನು ಪ್ರಶ್ನೆ ರೂಪದಲ್ಲಿ ಪ್ರಸ್ತಾಪಿಸಿದಾಗ, ಕ್ರಿಮಿನಲ್ ಮೊಕದ್ದಮೆ ಹೂಡುತ್ತೇವೆಂದು ಅಂದಿನ ವಸತಿ ಸಚಿವರು ಅಲ್ಲಿ ಹೇಳಿಕೆ ನೀಡಿದ್ದಾರೆ. ಆದರೆ ಅದು ಇವತ್ತಿನವರೆಗೂ ಕೂಡ ಕಾರ್ಯಗತವಾಗಿಲ್ಲ, ಅದರ ಒಂದು ವಿವರವನ್ನು ನಾನು ಇಲ್ಲಿ ಓದಿ ಹೇಳುತ್ತೇನೆ. ಯಾವಾಗ ಇದು ಸರಿ ಮಾಡಲಿಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ನೀವು ನೋಡಬೇಕು.

"ಪಾಟೀಲ್ ಬಿ.ಕೆ. :- ಈ ಫಲಾನುಭವಿ 2001-2002ನೇ ಸಾಲಿನಲ್ಲಿ ಆಯ್ಕೆಯಾಗಿ ನಗರ ಆಶ್ರಯ ಯೋಜನೆಯಡಿ ಸಾಲ ಪಡೆದು, ನಾಲ್ಕು ಲಕ್ಷಕ್ಕೂ ಅಧಿಕ ಬೆಲೆ ಬಾಳುವ ಈ ಮನೆಯನ್ನು ನಿರ್ಮಿಸಿಕೊಂಡಿದ್ದಾನೆ, ಜೊತೆಗೆ ಅಂಗಡಿಯನ್ನು ವ್ಯವಹಾರಕ್ಕಾಗಿ ತೆರೆದಿರುತ್ತಾರೆ. ಆದರೆ ಇದುವರೆವಿಗೂ ಸಾಲ ಮರುಪಾವತಿ ಮಾಡಿರುವುದಿಲ್ಲ. ಇವರ ಜೊತೆಗೇ ರತ್ನಮ್ಮ ಕೋಡಾರ್ 2001-2002 ಸಾಲಿನಲ್ಲಿ ಆಯ್ಕೆಯಾಗಿ ನಗರ ಆಶ್ರಯ ಯೋಜನೆಯಡಿ ಸಾಲ ಪಡೆದು, ಮೂರು ಲಕ್ಷಕ್ಕೂ ಅಧಿಕ ಬೆಲೆ ಬಾಳುವ ಮನೆಯನ್ನು ನಿರ್ಮಿಸಿದ್ದಾರೆ.."

ಮೂರು ಲಕ್ಷ ರೂ. ಅಥವಾ ಐದು ಲಕ್ಷ ರೂ.ಗಳ ಮನೆಯನ್ನು ಕಟ್ಟುವುದು ಎಂದರೇನರ್ಥ ? ಈ ರಿಪೋರ್ಟ್ ಅನ್ನು ಎನ್. ಶಿವಶೈಲಂ ಎನ್ನುವಂತಹ ವ್ಯವಸ್ಥಾಪಕ ನಿರ್ದೇಶಕರು ಜಿಲ್ಲಾಧಿಕಾರಿಗಳಿಗೆ ಒಂದು ನೋಟೀಸ್ ಮುಖೇನ ತಿಳಿಸಿದ್ದಾರೆ. ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆ. ಇವತ್ತಿನವರೆಗೂ ಕ್ರಮ ತೆಗೆದುಕೊಂಡಿಲ್ಲ. ಹೀಗಾದರೆ ಹೇಗೆ ? ಇವತ್ತು ನನ್ನ ಕ್ಷೇತ್ರದಲ್ಲಿ 1450 ಮಂಜೂರಾಗಿರುವಂತಹ ಮನೆಗಳನ್ನು ನಾನು ನೋಡಿದ್ದೇನೆ. ಆ ಮಂಜೂರಾಗಿರುವಂತಹ ಮನೆಗಳಲ್ಲಿ ಶೇಕಡ 70ರಷ್ಟು ಮನೆಗಳು ಅನರ್ಹರಿಗೆ ಕೊಟ್ಟಿರುವುದು ದಾಖಲಾಗಿದೆ. ನನ್ನ ಕ್ಷೇತ್ರವೊಂದರಲ್ಲೇ ಇಷ್ಟೊಂದು ಅನರ್ಹರಿಗೆ ವಿತರಣೆಯಾಗಿವೆ. ಗಂಡನ ಹೆಸರಿನಲ್ಲಿ ಮನೆ ಇದೆ. ಹೆಂಡತಿಯ ಹೆಸರಿನಲ್ಲಿ ಈಗ ಮಂಜೂರಾಗುತ್ತದೆ. ಅಪ್ಪನ ಹೆಸರಿನಲ್ಲಿ ಮನೆ ಇದೆ, ಮಗನ ಹೆಸರಿನಲ್ಲಿ ಮಂಜೂರಾಗುತ್ತಿದೆ. ಇದೆಲ್ಲಾ ಏನು ತೋರಿಸುತ್ತದೆ ಎಂದರೆ, ಅವ್ಯವಹಾರ

ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳದೇ ಹೋದರೆ, ಇದು ಬೆಳೆದುಕೊಂಡು ಹೋಗುವುದಕ್ಕೆ ದಾರಿಯಾಗುತ್ತದೆನೋ ಎನ್ನುವಂತಹ ಮಾತುಗಳನ್ನು ಹೇಳಿ, ಈ ವಿಚಾರವನ್ನು ತಮ್ಮ ಗಮನಕ್ಕೆ ತರುವಂತಹ ಕೆಲಸವನ್ನು ನಾನು ಇಲ್ಲಿ ಮಾಡುತ್ತೇನೆ. ನಾನು ಇನ್ನೂ ಅನೇಕ ವಿಚಾರಗಳನ್ನು ಹೇಳುವುದಿದೆ. ಶಿಕ್ಷಣದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ ಮುಗಿಸುತ್ತೇನೆ. ನನಗೆ ಗೊತ್ತಿರುವ ಹಾಗೆ ಇಡೀ ರಾಜ್ಯದಲ್ಲಿ ಟಿ.ಸಿ.ಹೆಚ್. ಮತ್ತು ಬಿ.ಎಡ್. ಆಗಿರುವ 80 ಸಾವಿರಕ್ಕಿಂತ ಹೆಚ್ಚು ನಿರುದ್ಯೋಗಿ ಪದವೀಧರರು ನೋಂದಾಯಿಸಿಕೊಂಡಿದ್ದಾರೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಈ ಸಂದರ್ಭದಲ್ಲಿ ಹಿಂದಿನ ಸರ್ಕಾರದಲ್ಲಿ 650 ಟಿ.ಸಿ.ಹೆಚ್. ಕಾಲೇಜುಗಳಿಗೆ No Objection, 300ಕ್ಕಿಂತ ಹೆಚ್ಚು ಬಿ.ಎಡ್. ಕಾಲೇಜುಗಳಿಗೆ No Objection, 120ಕ್ಕೂ ಹೆಚ್ಚು ನರ್ಸಿಂಗ್ ಸ್ಕೂಲ್‌ಗಳಿಗೆ ಅನುಮತಿಯನ್ನು ನೀಡಿದ್ದಾರೆ ಎನ್ನುವುದು ಗಮನಕ್ಕೆ ಬರುತ್ತಿದೆ. ಇಷ್ಟೊಂದು ಶಿಕ್ಷಣ ಸಂಸ್ಥೆಗಳ ಅವಶ್ಯಕತೆ ನಮಗೆ ಇದೆಯೇ ಎಂಬ ಪ್ರಶ್ನೆ ಇವತ್ತು ನಮ್ಮ ಮುಂದಿದೆ. ಒಂದು ವೇಳೆ ಈ ಸಂಸ್ಥೆಗಳಿಗೆಲ್ಲಾ ಸರ್ಕಾರ ಅನುದಾನ ಕೊಡಬೇಕಾದಂತಹ ಪರಿಸ್ಥಿತಿ ನಿರ್ಮಾಣವಾದರೆ, ಮುಂದೆ ಏನು ಆದೀತು ಎನ್ನುವುದನ್ನೂ ಕೂಡ ನೀವು ನೋಡಬೇಕಲ್ಲವೇ ? ನಿರುದ್ಯೋಗಿಗಳನ್ನು ಹುಟ್ಟು ಹಾಕುವ ಕೆಲಸವನ್ನು ಇದರಿಂದ ಮಾಡಿದಂತಾಗುತ್ತಿದೆ. ಟಿ.ಸಿ.ಹೆಚ್ ಮತ್ತು ಬಿ.ಎಡ್. ಆಗಿರುವವರಿಗೆ ಬೇರೆ ಯಾವ ಕಡೆಯಲ್ಲೂ ಕೂಡ ನೌಕರಿ ಸಿಗಲಿಕ್ಕೆ ಸಾಧ್ಯವೇ ಇಲ್ಲ ಅವರು ಶಿಕ್ಷಕರಾಗಿಯೇ ಕೆಲಸ ಮಾಡಬೇಕು. ಅಂತಹವರನ್ನೇ ಹುಟ್ಟು ಹಾಕುವಂತಹ ಕೆಲಸವನ್ನು ನೀವು ಮಾಡುತ್ತಿದ್ದೀರಿ. ಪ್ರತಿ ವರ್ಷಕ್ಕೆ 24 ಸಾವಿರ ಅಧಿಕ ಜನರನ್ನು ಈ ಸಂಸ್ಥೆಗಳ ಮೂಲಕ ಹೊರಗಡೆ ತರುವಂತಹ ಕೆಲಸವನ್ನು ಮಾಡಿದ್ದು ಸಾಧುವೇ ? ಅದಕ್ಕೆ ನಿಯಂತ್ರಣ ಹಾಕುವಂತಹ ವಿಚಾರ ಸರ್ಕಾರದಲ್ಲಿದೆಯೇ ಎನ್ನುವುದನ್ನೂ ಸಹಿತ ನಾನು ಇಲ್ಲಿ ಅನಿವಾರ್ಯವಾಗಿ ಪ್ರಶ್ನೆ ಮಾಡಬೇಕಾಗುತ್ತದೆ. ಇದನ್ನು ಮಾಡದೇ ಇದ್ದರೆ, ಇದು ಏನಾಗುತ್ತದೆ ಎಂದರೆ, ಇದೊಂದು ವ್ಯಾಪಾರೀಕರಣಕ್ಕೆ ದಾರಿ ಮಾಡಿಕೊಟ್ಟಂತಹ ವ್ಯವಸ್ಥೆಯಾಗುತ್ತದೆ. ಇದರಿಂದಾಗಿ ಜನರಲ್ಲಿ ಸಂಪೂರ್ಣವಾಗಿ ನಿರುದ್ಯೋಗಿ ಉಂಟಾಗಿ ಅವರು ಕಂಗಾಲಾಗುವಂತಹ ಪರಿಸ್ಥಿತಿ ನಿರ್ಮಾಣವಾಗಬಹುದು. ಈಗಾಗಲೇ ನಿರುದ್ಯೋಗಿಗಳಿಗೆ ನೀವು ಭತ್ಯೆ ಕೊಡುತ್ತೇವೆ ಎಂದು ಹೇಳಿದ್ದನ್ನು, ಕೊಡದೇ ಇರುವುದರಿಂದಾಗಿ ಅಮರಣಾಂತ ಉಪವಾಸವನ್ನು ಅವರು ಮಾಡುವಂತಹ ಪರಿಸ್ಥಿತಿಗೆ ಹೋಗಿದ್ದಾರೆ ಇಂತಹ ಪರಿಸ್ಥಿತಿಯಲ್ಲಿ ಇಷ್ಟೊಂದು ಟಿ.ಸಿ.ಹೆಚ್. ಮತ್ತು ಬಿ,ಎಡ್. ಕಾಲೇಜುಗಳಿಗೆ ಪರವಾನಿಗೆ ಕೊಡುವಂತಹ ಅವಶ್ಯಕತೆ ಇತ್ತೇ ಎನ್ನುವುದನ್ನೂ ಸಹ ಮತ್ತೊಂದು ಸಲ ತಾವು ಪರಿಶೀಲನೆ ಮಾಡುತ್ತೀರಿ ಎನ್ನುವಂತಹ ಮಾತುಗಳನ್ನು ಹೇಳುತ್ತೇನೆ. ಇವತ್ತು ತಾವೊಂದು ಮಾತನ್ನು ಹೇಳಿದ್ದೀರಿ. ಕೊಡಗು ಜಿಲ್ಲೆಯಲ್ಲಿ ಬಿಜಾಪುರದ ಸೈನಿಕ ಶಾಲೆಯ ರೀತಿಯಲ್ಲಿ ಶಾಲೆಯೊಂದನ್ನು ಸ್ಥಾಪಿಸಲು ಒಂದು ಕೋಟಿ ರೂ.ಗಳನ್ನು ಕೊಟ್ಟಿದ್ದೀರಿ. ಅದನ್ನು ನೋಡಿ ನನಗೆ ಆಶ್ಚರ್ಯವಾಯಿತು. ಇವತ್ತು ಒಂದು ಮೊರಾರ್ಜಿ

ದೇಸಾಯಿ ವಸತಿ ಶಾಲೆ ಸ್ಥಾಪಿಸಬೇಕೆಂದರೆ 5–6 ಕೋಟಿ ರೂ.ಗಳು ಬೇಕಾಗುತ್ತದೆ. ಸೈನಿಕ ಸ್ಕೂಲ್ ಅಂದರೆ ಅದೊಂದು ಅತ್ಯಂತ ಪ್ರತಿಷ್ಠಿತ ಶಾಲೆ ಎಂದು ನಾನು ಭಾವಿಸಿಕೊಂಡಿದ್ದೇನೆ. ನನ್ನ ಮಗ ಬಿಜಾಪುರದ ಸೈನಿಕ ಶಾಲೆಯಲ್ಲಿ ಓದಿರುವುದರಿಂದ, ನಾನು ಅದನ್ನು ನೋಡಿರುವುದರಿಂದ, ನನಗೆ ಗೊತ್ತಿರುವಂತೆ ಸೈನಿಕ ಶಾಲೆ ಎಂದರೆ 50–60 ಕೋಟಿ ರೂ.ಗಳ ಯೋಜನೆಯೇ ಸರಿ. ಹೀಗಿರುವಾಗ ಮಡಿಕೇರಿಯಲ್ಲಿ ಸೈನಿಕ ಶಾಲೆಗಾಗಿ ಕೇವಲ ಒಂದು ಕೋಟಿ ರೂ.ಗಳಷ್ಟು ಹಣ ಅದಕ್ಕೆ ಬಿಡುಗಡೆ ಮಾಡಿರುವುದು ಸರಿಯಲ್ಲ.

ಅಧ್ಯಕ್ಷರು : ಇನ್ನೂ ತುಂಬಾ ಜನ ಮಾತನಾಡುವವರಿದ್ದಾರೆ. ದಯವಿಟ್ಟು ಬೇಗ ಮುಗಿಸಿ.

ಶ್ರೀ ಸಿ.ಎಂ. ಉದಾಸಿ : ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಮತ್ತು ಹೈಸ್ಕೂಲ್‌ಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ ಬಿಡುತ್ತೇನೆ. ಹೈಸ್ಕೂಲ್‌ಗಳಲ್ಲಿ ಏನಾಗಿದೆ ಎಂದರೆ, ಅಲ್ಲಿಗೆ ಕಂಪ್ಯೂಟರ್‌ಗಳನ್ನು ಕೊಟ್ಟಿದ್ದಾರೆ. ಯಾವುದೇ ಶಾಲೆಗೆ ಹೋಗಿ ನೋಡಿದರೂ ಕೂಡ 100ರಲ್ಲಿ ಶೇಕಡ 90ರಷ್ಟು ಶಾಲೆಗಳಲ್ಲಿ ಆ ಕಂಪ್ಯೂಟರ್‌ಗಳು ಅಪರೇಟ್ ಆಗುತ್ತಿಲ್ಲ. ಅಲ್ಲಿಗೆ ಡೀಸಲ್ ಜನರೇಟರ್ ಕೂಡ ಕೊಟ್ಟಿದ್ದಾರೆ. ಆ ಡೀಸಲ್ ಜನರೇಟರ್ ಅನ್ನೂ ಕೂಡ ಅಲ್ಲಿ ಅಪರೇಟ್ ಮಾಡುವುದಿಲ್ಲ. ಅಲ್ಲಿಗೆ UPS ಕೊಟ್ಟಿದ್ದಾರೆ. ಅದನ್ನೂ ಕೂಡ ಅವರು ಅಪರೇಟ್ ಮಾಡುತ್ತಿಲ್ಲ. ಮೂರು ಲೈನ್ ವಿದ್ಯುತ್ತಿನ ಸರ್ವೀಸ್ ಇಲ್ಲ, ಅಂತಹ ಕಡೆಗಳಲ್ಲಿ ಕಂಪ್ಯೂಟರ್‌ಗಳನ್ನು ಕೊಟ್ಟಿದ್ದಾರೆ. ಇದೆಲ್ಲವನ್ನೂ ನೋಡಿದಾಗ, ಅಲ್ಲಿ ಶಿಸ್ತು ಮೂಡಿಸುವಂತಹ ಕೆಲಸ ಸರ್ಕಾರದಿಂದ ಆಗಬೇಕಾಗಿದೆ ಎನ್ನುವ ಮಾತುಗಳನ್ನು ಹೇಳಿ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

3.50 ಪಿಎಂ

†ಶ್ರೀ ಡಿ.ಟಿ. ಜಯಕುಮಾರ್ (ನಂಜನಗೂಡು) : ಮಾನ್ಯ ಅಧ್ಯಕ್ಷರೆ, ಮಾಧ್ಯಮದ ಗ್ಯಾಲರಿಯಲ್ಲಿ ಯಾರೂ ಕೂರುವುದಿಲ್ಲ. ನಾನು ಪ್ರಚಾರದ ದೃಷ್ಟಿಯಿಂದಲೇ ಈ ರೀತಿ ಹೇಳುತ್ತಿಲ್ಲ. ಇದೊಂದು ಕೆಟ್ಟ ಸಂಪ್ರದಾಯ ಅವರಲ್ಲೂ ಪ್ರಾರಂಭವಾಗಿದೆ. ನಮ್ಮ ರೋಗ ಅವರಲ್ಲೂ ಬಂತೇನೋ ಎಂದು ನನಗನ್ನಿಸುತ್ತಿದೆಯಾದ ಕಾರಣ ನಾನು ಈ ವಿಚಾರವನ್ನೂ ತಮ್ಮ ಗಮನಕ್ಕೆ ತಂದೆಯಷ್ಟೇ, ಮಾನ್ಯ ಅಧ್ಯಕ್ಷರೆ, ಮಾನ್ಯ ಅರ್ಥಸಚಿವರೂ ಹಾಗೂ ರಾಜ್ಯದ ಉಪ ಮುಖ್ಯಮಂತ್ರಿಗಳು ಆದಂಥ ಮಾನ್ಯ ಸಿದ್ಧರಾಮಯ್ಯನವರು ತಂದಿರತಕ್ಕಂಥ 2004–2005 ನೇ ಆಯವ್ಯಯದ ಮೇಲೆ ಮಾತನಾಡತಕ್ಕಂಥ ಈ ಸಂದರ್ಭದಲ್ಲಿ ಇದೊಂದು ಅತ್ಯುತ್ತಮ ಆಯವ್ಯಯವಾಗಿರುವುದರಿಂದ ನಾನು ಇದನ್ನು ಸ್ವಾಗತ ಮಾಡುತ್ತಾ ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತರುವುದಕ್ಕೆ ನಾನು ಇಚ್ಛೆಪಡುತ್ತೇನೆ. ಇವೊತ್ತಿನ ದಿನಗಳಲ್ಲಿ ಈ ಮಾಧ್ಯಮಗಳು, ಪತ್ರಿಕೆಗಳು ಸಮಾಜದ ಕೈಗನ್ನಡಿಯಾಗಿದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಈ ಪತ್ರಿಕೆಗಳ

ಅಂಕಣಕಾರರು ಮತ್ತು ಸಂಪಾದಕರುಗಳು ಈ ಆಯವ್ಯಯವನ್ನು ಹೆಚ್ಚಾಗಿ ಪ್ರಶಂಸಿರುವುದನ್ನು ಮತ್ತು ಶ್ಲಾಘಿಸಿರುವುದನ್ನು ಬರೆದಿರುವುದನ್ನು ನಾವೆಲ್ಲರೂ ಓದಿದ್ದೇನೆ. ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಒಂದು ಕಡೆ 'ಗ್ರಾಮದೆಡೆ ಸಿದ್ಧ ನಡೆ' ಇನ್ನೊಂದು ಕಡೆ ಉದಯವಾಣಿ ಹಾಗೂ ಕನ್ನಡ ಪ್ರಭದಲ್ಲಿ 'ಬದ್ಧತೆಯ ಪ್ರದರ್ಶನ' ಎಂದು ಬರೆದಿದ್ದಾರೆ. ಇವರೆಲ್ಲರೂ ಕೂಡ ಆಯವ್ಯಯದ ಬಗ್ಗೆ ಚಿಂತನೆಯನ್ನು ಮಾಡುತ್ತಾ ಅವರು ವ್ಯಾಖ್ಯಾನಗಳನ್ನು, ವಿಮರ್ಶೆಗಳನ್ನು ಪತ್ರಿಕೆಗಳ ಮೂಲಕ ಜನಸಾಮಾನ್ಯರಿಗೆ ಜನಾಭಿಪ್ರಾಯವನ್ನು ಪಡೆದುಕೊಂಡು ಹೇಳುವಂಥ ಸಂದರ್ಭಗಳಲ್ಲಿ ಒಂದು ಕಡೆ ಸಂಯುಕ್ತ ಕರ್ನಾಟಕದಲ್ಲಿ ಏನು ಹೇಳಲಾಗಿದೆಯೆಂದರೆ " ತಂತಿಯ ಮೇಲಿನ ನಡಿಗೆ" ಎಂದಿದ್ದಾರೆ. ಉದಯವಾಣಿಯಲ್ಲಿ "ಸಮ್ಮಿಶ್ರ ಜನಪರತೆ" ಎಂದಿದ್ದಾರೆ. ಅಂದರೆ ಈ ಸಮ್ಮಿಶ್ರ ಸರ್ಕಾರದಲ್ಲಿ ಒಂದು ಕಡೆ ಜನತಾ ದಳ(ಎಸ್), ಇನ್ನೊಂದು ಕಡೆ ಕಾಂಗ್ರೆಸ್ ಪಕ್ಷ, ಇವೆರಡೂ ಪಕ್ಷಗಳು ವಿಭಿನ್ನ ವಿಚಾರಗಳನ್ನು ಹೊಂದಿರತಕ್ಕಂಥ ಈ ಪಕ್ಷಗಳು ಹೇಗೆ ಸರ್ಕಾರವನ್ನು ತೆಗೆದುಕೊಂಡು ಹೋಗುತ್ತದೆ ಎನ್ನುವಂಥ ಅನುಮಾನವೇನಿತ್ತೋ ಆ ಅನುಮಾನವನ್ನು ಬಗೆಹರಿಸುವುದಕ್ಕೆ ಪತ್ರಿಕೆಯಲ್ಲಿ ಹೇಳುವಂಥ ಸಂದರ್ಭದಲ್ಲಿ "ಸಮ್ಮಿಶ್ರ ಜನಪರತೆ" ಎಂದು ಉದಯವಾಣಿ ಪತ್ರಿಕೆಯವರು ಬರೆದಿದ್ದಾರೆ. ಇನ್ನು ಕನ್ನಡ ಪ್ರಭದಲ್ಲಿ "ಆನ್‌ಲೈನ್ ಹೋಯಿತು, ಸಾರಾಯಿ ಬಂತು" ಇನ್ನೊಂದು ಕಡೆ 'ರೈತನಿಗೆ ಸೂರ್ಯೋದಯ, ರೈತನಿಗೆ ವರ, ಗ್ರಾಹಕನಿಗೆ ಹೊರೆ' ಎನ್ನುವ ಈ ರೀತಿಯ ವ್ಯಾಖ್ಯಾನಗಳನ್ನು ಜನರು ನೋಡಿದಂಥ ಸಂದರ್ಭದಲ್ಲಿ ಇದೊಂದು ಅತ್ಯುತ್ತಮವಾದಂಥ ಬಜೆಟ್ ಎಂದು ಎಲ್ಲರೂ ಒಪ್ಪಿಕೊಳ್ಳಲೇ ಬೇಕಾಗುತ್ತದೆ. ಇದನ್ನು ವಿರೋಧ ಪಕ್ಷದವರೂ ಕೂಡ ಒಪ್ಪಿಕೊಳ್ಳುತ್ತಾರೆ. ನಾವು ಅವರ ಜೊತೆ ಲಾಂಜ್‌ನಲ್ಲಿ ಕುಳಿತುಕೊಂಡಾಗ, ನಿಂತುಕೊಂಡಾಗ ಇದೊಂದು ಅತ್ಯುತ್ತಮವಾದಂಥ ಬಜೆಟ್ ಎಂದು ಹೇಳುತ್ತಾರೆ. ಆದರೆ ವಿರೋಧ ಪಕ್ಷವಾಗಿ ವಿರೋಧ ಮಾಡಬೇಕು ಎನ್ನುವುದಕ್ಕಾಗಿ ಕಾಟಾಚಾರಕ್ಕಾಗಿ ಆಯವ್ಯಯವನ್ನು ವಿರೋಧ ಮಾಡುತ್ತಿದ್ದಾರೆಯೇ ವಿನಃ ಬೇರೆಯದಕ್ಕಲ್ಲ. ಏಕೆಂದರೆ ಈ ಆಯವ್ಯಯ ಆ ರೀತಿ ಇದೆ. ಬಹುಶಃ ಮೊದಲು ನಮಗೂ ಕೂಡ ಅನುಮಾನವಿತ್ತು. ಈ ಹಿಂದೆ ಮಾನ್ಯ ಸಿದ್ಧರಾಮಯ್ಯನವರು ಐದು ಬಾರಿ ಆಯವ್ಯಯವನ್ನು ಮಂಡನೆ ಮಾಡಿದ್ದಾರೆ. ಈ ಐದು ಆಯವ್ಯಯಕ್ಕಿಂತಲೂ ಇದು ಅತ್ಯುತ್ತಮವಾಗಿ ಹೊರಬಂದಿರುವ ಆರನೇ ಆಯವ್ಯಯವಾಗಿದೆ. ಏಕೆಂದರೆ ನಮಗೆಲ್ಲಾ ಇದು ಮಾದರಿ. ಏಕೆಂದರೆ ರಾಜ್ಯದ ಮತದಾರ ಪೂರ್ಣವಾಗಿ ಯಾವುದೇ ಪಕ್ಷಕ್ಕೂ ಆಶೀರ್ವಾದವನ್ನು ಮಾಡಲಿಲ್ಲ. ಎಂಥ ಅನಿವಾರ್ಯತೆ ಬಂತೆಂದರೆ ಈ ಎರಡೂ ಪಕ್ಷಗಳು ಸೇರದೇ ಹೋದರೆ ಸರ್ಕಾರವನ್ನೇ ರಚನೆ ಮಾಡುವುದಕ್ಕೆ ಆಗುವುದಿಲ್ಲ. ಮತ್ತೆ ಚುನಾವಣೆಯನ್ನು ಎದುರಿಸಲೇಬೇಕಾದಂಥ ಪರಿಸ್ಥಿತಿ ನಿರ್ಮಾಣವಾಗುವ ರೀತಿ ಇತ್ತು. ಇಂಥ ಪರಿಸ್ಥಿತಿ ಇರುವಾಗ ಸಮ್ಮಿಶ್ರ ಸರ್ಕಾರದಲ್ಲಿ ಮಾನ್ಯ ಸಿದ್ಧರಾಮಯ್ಯನವರು ಉತ್ತಮವಾದಂಥ ಆಯವ್ಯಯವನ್ನು

ಕೊಡುವುದಕ್ಕೆ ಸಾಧ್ಯವೇ ಎನ್ನತಕ್ಕಂಥ ಅನುಮಾನ ಎಲ್ಲಾ ಕಡೆ ಬರುತ್ತಿತ್ತು. ಆದರೆ ಅವರು ಈಗ ಆಯವ್ಯಯವನ್ನು ಮಂಡನೆ ಮಾಡಿದ ಮೇಲೆ ಈಗ ಎಲ್ಲರೂ ಕೂಡ ಈ ಆಯವ್ಯಯವನ್ನು ಮೆಚ್ಚುತ್ತಿದ್ದಾರೆ. ಜನ ಮೆಚ್ಚತಕ್ಕಂಥ ಕೆಲಸವನ್ನು ಮಾಡಿ ಉತ್ತಮವಾದ ಆಯವ್ಯಯವನ್ನು ಕೊಟ್ಟಿದ್ದಾರೆ ಎನ್ನತಕ್ಕಂಥ ಮಾತನ್ನು ಹೇಳುತ್ತಾರೆ. ಅದೇ ರೀತಿ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಏನು ಹೇಳಿದ್ದಾರೆಂದರೆ, 'ಹಿಂದಿನ ಜನತಾ ದಳ ಸರ್ಕಾರದಲ್ಲಿ ಸತತವಾಗಿ ಐದು ವರ್ಷ ಆಯವ್ಯಯವನ್ನು ಮಂಡಿಸಿದ್ದು ಅವರು ಇದೀಗ ಸಮ್ಮಿಶ್ರ ಸರ್ಕಾರದಲ್ಲಿಯೂ ಕೂಡ ಅರ್ಥ ಖಾತೆಯನ್ನು ಹೊಂದಿರುವ ಉಪ ಮುಖ್ಯಮಂತ್ರಿಯಾಗಿ ಮುಂಗಡ ಪತ್ರವನ್ನು ಸಿದ್ಧಪಡಿಸಿದಾಗ ಉಭಯ ಆಡಳಿತ ಪಕ್ಷಗಳ ಸಾಮಾನ್ಯ ಕನಿಷ್ಠ ಕಾರ್ಯಕ್ರಮಗಳನ್ನೇ ಆಧಾರವಾಗಿರಿಕೊಳ್ಳಬೇಕಾದ ಅನಿವಾರ್ಯತೆ ಇತ್ತು ಎಂಬುದನ್ನು ಮರೆಯಲಾಗದು. ಇಂಥ ಒಂದು ಪರಿಸ್ಥಿತಿಯಲ್ಲಿ ಅತ್ಯುತ್ತಮವಾದಂಥ ಆಯವ್ಯಯವನ್ನು ಕೊಟ್ಟಿದ್ದಾರೆ. ಇವರು ಮುಂದುವರಿದು ಏನು ಹೇಳುತ್ತಾರೆಂದರೆ, ಜನಪರವಾದಂಥ, ರೈತರ ಪರವಾದಂಥ ಬಜೆಟ್ ಇದಾಗಿದೆ ಎನ್ನುವ ಮಾತನ್ನು ಕೂಡ ಹೇಳಿದ್ದಾರೆ. ಅಂದರೆ ಒಟ್ಟಾರೆ ಎಲ್ಲಾ ಪತ್ರಿಕೆಗಳವರು ಮುಕ್ತಕಂಠದಿಂದ ಅಂಕಣಕಾರರು ಈ ಜನಾಭಿಪ್ರಾಯಗಳನ್ನು ತಿಳಿಸುತ್ತಾ ಈ ಆಯವ್ಯಯವನ್ನು ಸ್ವಾಗತ ಮಾಡಿದ್ದಾರೆ. ನಾವು ವಿಧಾನ ಸೌಧದ ಮುಂದೆ 'ಸರ್ಕಾರದ ಕೆಲಸ ದೇವರ ಕೆಲಸ' ಎಂದು ಕೆತ್ತಿರುವುದನ್ನು ನೋಡುತ್ತೇವೆ. ಮಾನ್ಯ ಕೆಂಗಲ್ ಹನುಮಂತಯ್ಯನವರು ದೂರದೃಷ್ಟಿತ್ವದ ಪರಿಣಾಮವಾಗಿ ಈ ವಾಕ್ಯವನ್ನು ಕೆತ್ತಲಾಗಿದೆ. ನಾವೆಲ್ಲರೂ ಕೂಡ ಈ ಸದನದ ಗೌರವವನ್ನು ಹೆಚ್ಚಿಸುವುದಕ್ಕೆ ಜನಪರವಾದಂಥ, ಬಡವರ ಪರವಾದಂಥ, ರೈತರ ಪರವಾದಂಥ ಕೆಲಸವನ್ನು ಮಾಡಬೇಕು ದಿವಂಗತ ದೇವರಾಜ್ ಅರಸುರವರು ಏನು ಹೇಳುತ್ತಿದ್ದರೆಂದರೆ ಸರ್ಕಾರ ಹೇಗಿರಬೇಕೆಂದರೆ ಹೊಟ್ಟೆ ಹಸಿದವನಿಗೆ ಅನ್ನವನ್ನು ಹಾಕಬೇಕು, ಹೊಟ್ಟೆ ತುಂಬಿರುವವನಿಗೆ ಅನ್ನ ಹಾಕುವುದರಲ್ಲಿ ಧರ್ಮವಿಲ್ಲ, ಅರ್ಥವಿಲ್ಲ. ಆದಕಾರಣ ಯಾರೂ ಹೊಟ್ಟೆ ಹಸಿದುಕೊಂಡಿರುತ್ತಾರೋ ಅವರಿಗೆ ಅನ್ನ ಕೊಡಬೇಕು ಎಂದು ಹೇಳುತ್ತಿದ್ದರು. ಆದರೆ ಹಿಂದಿನ, ಇದುವರೆಗಿನ ಆಯವ್ಯಯಗಳಲ್ಲಿ ಹೊಟ್ಟೆ ತುಂಬಿದವನಿಗೆ ಮತ್ತೆ ಹೊಟ್ಟೆ ತುಂಬಿಸುವ ಕೆಲಸವಾಗುತ್ತಿತ್ತು. ಸಮ್ಮಿಶ್ರ ಸರ್ಕಾರವಾಗಿರುವ ಈ ಕಾಲದಲ್ಲಿ ವಿರೋಧ ಪಕ್ಷದವರು ಕಾಂಗ್ರೆಸ್ ಹಾಗೂ ಜನತಾ ದಳ ಪಕ್ಷಗಳು ಅಪವಿತ್ರ ಮೈತ್ರಿ ಮಾಡಿಕೊಂಡಿದೆ ಎಂದು ಹೇಳುತ್ತಾರೆ. ಈ ಅಪವಿತ್ರ ಮೈತ್ರಿಯ ಸಮ್ಮಿಶ್ರ ಸರ್ಕಾರ ಎಷ್ಟು ದಿನ ಇರುತ್ತದೋ ಎನ್ನುವ ಅನುಮಾನಗಳು ಬರುತ್ತದೆ ಎನ್ನತಕ್ಕಂಥ, ಮಾತುಗಳನ್ನು ವಿರೋಧ ಪಕ್ಷದವರು ಹೇಳುತ್ತಿದ್ದರು. ಆ ವಿರೋಧ ಪಕ್ಷದವರೇ ಹೇಳುತ್ತಾರೆ ಇವೊತ್ತು ಕರ್ನಾಟಕ ರಾಜ್ಯ ಮಾತ್ರವಲ್ಲ. ಇಡೀ ಭರತ ಖಂಡದಲ್ಲಿಯೇ ಸಮ್ಮಿಶ್ರ ಸರ್ಕಾರ ಬರುವುದು ಅನಿವಾರ್ಯವಾಗಿದೆ ಎಂದು ಹೇಳುತ್ತಾರೆ. ಏಕೆಂದರೆ ಭಾರತ ದೇಶದಲ್ಲಿ 23 ಪಕ್ಷಗಳೊಳಗೊಂಡ ಎನ್.ಡಿ.ಎ. ಸರ್ಕಾರ ಸತತವಾಗಿ ಐದು ವರ್ಷಗಳ ಕಾಲ ಆಡಳಿತವನ್ನು ನಡೆಸುವುದಕ್ಕೆ ಸಾಧ್ಯವಾಗಿರುವಾಗ ಕೇವಲ

ಎರಡು ಪಕ್ಷಗಳನ್ನೊಗೊಂಡ, ಅದರಲ್ಲೂ ಅನುಭವ ಹೊಂದಿರುವಂಥ ಕಾಂಗ್ರೆಸ್ ಪಕ್ಷ ಹಾಗೂ ಅನುಭವ ಹೊಂದಿರುವ ಜನತಾದಳ(ಎಸ್) ಪಕ್ಷದವರು ಅನಿವಾರ್ಯತೆ ದೃಷ್ಟಿಯಿಂದ ಸರ್ಕಾರವನ್ನು ರಚನೆ ಮಾಡಲಾಯಿತು. ನಿಜವಾಗಿಯೂ ಹೇಳಬೇಕೆಂದರೆ ನಮಗೂ ಕೂಡ ಕಾಂಗ್ರೆಸ್ ಪಕ್ಷದೊಡನೆ ಸೇರಿ ಸರ್ಕಾರ ರಚನೆ ಮಾಡಲು ಮನಸ್ಸು ಇರಲಿಲ್ಲ. ಜನತಾ ದಳ, ಕಾಂಗ್ರೆಸ್ ಸರ್ಕಾರ ರಚನೆ ಹೇಗಪ್ಪ? ಏಕೆಂದರೆ ಕಳೆದ ಚುನಾವಣೆಯಲ್ಲಿ ನಾವು ಕಾಂಗ್ರೆಸ್ ಪಕ್ಷವನ್ನು ವಿರೋಧ ಮಾಡಿದ್ದೇವೆ. ಅವರೊಂದು ದಿಕ್ಕು, ನಾವೊಂದು ದಿಕ್ಕು. ಆದರೆ ಸರ್ಕಾರ ರಚನೆ ಮಾಡಲು ಕಾರಣ ಜನತೆಯ ಹಿತದೃಷ್ಟಿಯಿಂದ, ರಾಜ್ಯದ ಹಿತದೃಷ್ಟಿಯಿಂದ, ಪ್ರಜಾಪ್ರಭುತ್ವದ ಹಿತದೃಷ್ಟಿಯಿಂದ, ಅನಿವಾರ್ಯತೆ ನಿರ್ಮಾಣವಾದ್ದರಿಂದ ಇವೊತ್ತು ಸಮ್ಮಿಶ್ರ ಸರ್ಕಾರ ರಚನೆ ಮಾಡತಕ್ಕಂಥ ಅವಕಾಶ ಬಂತು. ಇಂಥ ಸಮ್ಮಿಶ್ರ ಸರ್ಕಾರದಲ್ಲಿ ಅತ್ಯುತ್ತಮವಾದಂಥ ಬಜೆಟನ್ನು ಯಾರೂ ಕೂಡ ನಿರೀಕ್ಷೆ ಮಾಡಿರಲಿಲ್ಲ. ಇಷ್ಟು ಉತ್ತಮವಾದಂಥ ಬಜೆಟನ್ನು ಮಾನ್ಯ ಸಿದ್ಧರಾಮಯ್ಯನವರು ಕೊಡುತ್ತಾರೆ ಎನ್ನತಕ್ಕಂಥ ವಿಚಾರವನ್ನು ಯಾರೂ ಕೂಢ ಒಪ್ಪುತ್ತಿರಲಿಲ್ಲ. ಆದರೆ ಅದು ಆಯವ್ಯಯದ ಪೂರ್ವ ಚಿಂತನೆಯಾಗಿತ್ತು. ಆಯವ್ಯಯವನ್ನು ಮಂಡನೆ ಮಾಡುವುದಕ್ಕೆ ಮುಂಚೆ ಆ ರೀತಿಯಲ್ಲಿ ಯೋಚನೆ ಮಾಡುತ್ತಿದ್ದರು. ಆದರೆ ಆಯವ್ಯಯವನ್ನು ಮಂಡನೆ ಮಾಡಿದ ಮೇಲೆ ಎಲ್ಲರೂ ಕೂಡ ಇದೊಂದು ಜನಪರವಾದಂಥ ಆಯವ್ಯಯ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದಾರೆ. ಯಾವುದೇ ಪಕ್ಷದ ಸರ್ಕಾರವಿರಲಿ ರಾಜ್ಯದಲ್ಲಿರುವ ಎಲ್ಲರನ್ನೂ ತೃಪ್ತಿಪಡಿಸತಕ್ಕಂಥ ಆಯವ್ಯಯವನ್ನು ಮಂಡನೆ ಮಾಡುವುದಕ್ಕಾಗುವುದಿಲ್ಲ. ಶೇಕಡ 90 ರಷ್ಟು ಜನರಿಗೆ ಒಳ್ಳೆಯದಾಗಬೇಕು ಎಂದರೆ ಶೇಕಡ 10ರಷ್ಟು ಭಾಗಕ್ಕೆ ಕೆಟ್ಟದ್ದು ಆಗೇ ಆಗುತ್ತದೆ. ಆದರೆ ಕೇವಲ ಶೇಕಡ 10ರಷ್ಟು ಭಾಗದ ಹಿತದೃಷ್ಟಿಯನ್ನೇ ನಾವು ನೋಡುವುದಕ್ಕೆ ಹೋದರೆ ಶೇಕಡ 90 ಭಾಗಕ್ಕೆ ಕೆಟ್ಟದ್ದಾಗುತ್ತದೆ. ಒಂದು ರೀತಿಯಲ್ಲಿ ಹೇಳುವುದಾದರೆ ಶೇಕಡ 10 ಭಾಗಕ್ಕೂ ಕೂಡ ಕೆಟ್ಟದ್ದಾಗಬಾರದು, ಆದರೆ ಕೆಲವೊಮ್ಮೆ ಅನಿವಾರ್ಯತೆಯಿಂದ ಹೀಗಾಗುತ್ತದೆ. ಉದಾಹರಣೆಗೆ ತೆರಿಗೆ ವಿಚಾರವನ್ನೇ ತೆಗೆದುಕೊಂಡರೆ ನಿನ್ನೆಯಿಂದ ಕೂಡ ನಾನು ನೋಡುತ್ತಿದ್ದೇನೆ, ವಿರೋಧ ಪಕ್ಷದವರು ಮಾತನಾಡುತ್ತಾ ಇದಕ್ಕೆ ಟ್ಯಾಕ್ಸ್ ಎಕ್ಸೆಂಪ್ಷನ್ ಕೊಡಿ, ಸಿದ್ಧರಾಮಯ್ಯನವರೇ ಇದರ ಮೇಲೆ ಟ್ಯಾಕ್ಸನ್ನು ತೆಗೆಯಿರಿ ಎಂದು ಹೇಳುತ್ತಿದ್ದೀರಿ. ಈ ರೀತಿ ಕೇಳುವುದಾದರೆ ಸರ್ಕಾರವಾದರೂ ಹೇಗೆ ನಡೆಯಬೇಕು ? ಸರ್ಕಾರ ಸಂಪನ್ಮೂಲವನ್ನು ಹೇಗೆ ಕ್ರೋಢಿಕರಿಸಿಕೊಳ್ಳಬೇಕು ? ಯಾವುದಕ್ಕೂ ಟ್ಯಾಕ್ಸ್ ಬೇಡ. ಎಲ್ಲಾ ಟ್ಯಾಕ್ಸ್ ತೆಗೆದುಬಿಟ್ಟರೆ ಸಂಪನ್ಮೂಲ ಎಲ್ಲಿಂದ ಬರಬೇಕು ? ಆದುದರಿಂದ ಅದು ಆಗದ ಮಾತು. ಅಂದರೆ ನಾವು ಶೇಕಡ 90 ಭಾಗಕ್ಕೆ ಒಳ್ಳೆಯದಾಗಬೇಕೆಂದರೆ ಇನ್ನು ಹತ್ತು ಭಾಗಕ್ಕೆ ತೊಂದರೆಯಾಗುತ್ತದೆ. ಆದಕಾರಣ ಇವೊತ್ತು ವಿರೋಧ ಪಕ್ಷದವರು ಕೇಳುವುದರಲ್ಲಿ ಅರ್ಥವಿಲ್ಲವೆಂದೇ ಹೇಳಬೇಕಾಗುತ್ತದೆ.

ಶ್ರೀ ಸಿ.ಎಸ್. ರಾಜೇಂದ್ರನ್ : ಒಂದು ವಿಷಯ ತಮಗೆ ಹೇಳುವುದೇನೆಂದರೆ ಎಲ್ಲರೂ ವಿರೋಧ ಪಕ್ಷದಲ್ಲಿರುವವರು ನಾಯಕರುಗಳು ಮಾತನಾಡುವಾಗ ಟ್ಯಾಕ್ಸ್ ಫ್ರೀ, ಟ್ಯಾಕ್ಸ್ ಫ್ರೀ ಎಂದು ಹೇಳಿದರೆ ಅರ್ಥ ಇದೆ. ನಿಮ್ಮ ಪ್ರಕಾರ ವಿರೋಧ ಪಕ್ಷದಲ್ಲಿರುವವರೆಲ್ಲರೂ ಸೇರಿಕೊಂಡು ಟ್ಯಾಕ್ಸ್ ಹಾಕಿ, ಟ್ಯಾಕ್ಸ್ ಹಾಕಿ ಎಂದು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಡಿ.ಟಿ. ಜಯಕುಮಾರ್ : ಹಾಗಲ್ಲ. ಯಾವುದರ ಮೇಲೆ ಟ್ಯಾಕ್ಸ್ ಹಾಕಬೇಕು. ಯಾವುದರ ಮೇಲೆ ಟ್ಯಾಕ್ಸ್ ಹಾಕಬಾರದು ಎಂಬುದು ಸರ್ಕಾರ ವಿವೇಚನೆ ಮಾಡುತ್ತದೆ. ಆ ಕೆಲಸವನ್ನೇ ಮಾನ್ಯ ಸಿದ್ಧರಾಮಯ್ಯನವರು ಮಾಡಿರತಕ್ಕಂಥದ್ದು. ಅವರ ಒಂದು ಕುಶಲತೆ, ಅವರ ಒಂದು ಚಾಣಾಕ್ಷತನವನ್ನು ಅಲ್ಲಿ ತೋರಿಸಿದ್ದಾರೆ. ಒಬ್ಬ ಅರ್ಥ ಸಚಿವನಿಗೆ ಯಾವ ಚಾಣಾಕ್ಷತೆ ಇರಬೇಕು, ಯಾವ ಬುದ್ಧಿ ಇರಬೇಕು.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಸಣ್ಣ ಕೈಗಾರಿಕೆಗಳಿಗೆ 450 ಕೋಟಿ ರೂಪಾಯಿ ಸಬ್ಸಿಡಿ ಕೊಡದೇ ಇರುವುದು ಚಾಣಾಕ್ಷತೆ. ಈಗ 23 ಸಾವಿರ ಕೋಟಿ ರೂಪಾಯಿಗಳ ಸಾಲ ಮರುಪಾವತಿ ಮಾಡಬೇಕು. ಇದು ಚಾಣಾಕ್ಷತೆಯೋ ? ಸಣ್ಣ ಕೈಗಾರಿಕೆಗಳಿಗೆ 450 ಕೋಟಿ ರೂಪಾಯಿಗಳ ಸಬ್ಸಿಡಿ ಏನು ಕೊಡಬೇಕೋ? ಅದರ ಬಗ್ಗೆ ನೀವು ಪ್ರಸ್ತಾಪ ಮಾಡದೇ ಇರುವುದೇ ಇಂಟಲಿಜೆನ್ಸ್ ಆಗಿದೆ.

ಮಾನ್ಯ ಸದಸ್ಯರು : ಶಾಸಕರ ನಿಧಿಗೆ ಏನು ಕೊಡದೇ ಇರುವುದು ಬಹಳ ಒಳ್ಳೆಯ ಬಜೆಟೇ ?

(ಗೊಂದಲ)

ಅಧ್ಯಕ್ಷರು : ಪರಸ್ಪರ ಯಾರೂ ಮಧ್ಯೆ ಮಾತನಾಡಬೇಡಿ. ನನ್ನ ಪರ್ಮಿಶನ್ ತೆಗೆದುಕೊಳ್ಳದೇ ಮಾತನಾಡಿದರೆ ಅದು ದಾಖಲೆಗೆ ಹೋಗುವುದಿಲ್ಲ. ಮಾನ್ಯ ಜಯಕುಮಾರ್‌ರವರೇ ನೀವು ಅವರ ಕಡೆ ಮುಖ ಮಾಡಿ ಮಾತನಾಡಬೇಡಿ. ನನ್ನ ಕಡೆ ಮುಖ ಮಾಡಿ ಮಾತನಾಡಿ. ಬೇರೆ ಸದಸ್ಯರುಗಳು ಅಷ್ಟೆ. ಅವರು ಮಾತನಾಡುವಾಗ ಮಧ್ಯೆ ಮಧ್ಯೆ ಮಾತನಾಡಿ ಅವರಿಗೆ ಇಂಟರಫ್ಟ್ ಮಾಡಬೇಡಿ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಡಿ.ಟಿ. ಜಯಕುಮಾರ್ : ರೈತರ ಪರವಾಗಿಯೇ ಬಜೆಟ್ ಮಂಡಿಸಲಾಗಿದೆ. ಇನ್ನೇನು ಮಾಡಬೇಕು ನಿಮಗೆ? ನಾನು ನಿಮ್ಮ ಮನಸ್ಸನ್ನು ನೋಯಿಸಬೇಕು ಎಂದು ಈ ಮಾತನ್ನು ಹೇಳುತ್ತಿಲ್ಲ. ಇರುವ ವಾಸ್ತವಾಂಶವನ್ನು ಹೇಳುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು ; ಮಾನ್ಯ ಜಯಕುಮಾರ್‌ರವರೆ, ನೀವು ಏಕೆ ಅವರ ಹತ್ತಿರ ಚರ್ಚೆಗೆ ಇಳಿಯುತ್ತೀರಿ? ಈ ಕಡೆ ತಿರುಗಿಗೊಂಡು ದಯಮಾಡಿ ಮಾತನಾಡಿ. ಹಿರಿಯ ಸದಸ್ಯರಾದ ನೀವೇ ಹೀಗೆ ಮಾಡಿದರೆ ಹೇಗೆ ?

ಮಾನ್ಯ ಸದಸ್ಯರು : ಬಿಜೆಪಿಯವರು ಒಂದು ಕೋಟಿ ಉದ್ಯೋಗ ಸೃಷ್ಟಿ ಮಾಡುತ್ತೇವೆ ಎಂದು ಹೇಳಿದ್ದರು.

ಅಧ್ಯಕ್ಷರು : ದಯಮಾಡಿ ತಾವು ಕುಳಿತುಕೊಳ್ಳಬೇಕು. ಇತ್ತೀಚೆಗೆ ಸದಸ್ಯರಾಗಿ ಬಂದಿರುವ ತಾವು ಈ ರೀತಿ ಕಲಾಪಕ್ಕೆ ಅಡ್ಡಿ ಮಾಡಿದರೆ ಹೇಗೆ ? ನೀವು ಕಲಿತದ್ದು ಇದೆಯೆ ?

ಶ್ರೀ ಡಿ.ಟಿ. ಜಯಕುಮಾರ್ : ಮಾನ್ಯ ಅಧ್ಯಕ್ಷರೆ, ಚುನಾವಣೆಗೂ ಮುಂಚೆ ಎರಡೂ ಪಕ್ಷಗಳು ಚುನಾವಣಾ ಪ್ರಣಾಳಿಕೆಯಲ್ಲಿ ಜನರಿಗೆ ಏನು ಭರವಸೆಯನ್ನು ಕೊಟ್ಟಿದ್ದೆವೋ ಅವುಗಳನ್ನು ಮಾನ್ಯ ಅರ್ಥ ಸಚಿವರು ಗಮನದಲ್ಲಿಟ್ಟುಕೊಂಡು ಆಯವ್ಯಯವನ್ನು ಮಂಡಿಸಿದ್ದಾರೆ. ನಾವೇನು ಚುನಾವಣಾ ಪ್ರಣಾಳಿಕೆಯಲ್ಲಿ ಭರವಸೆ ಕೊಟ್ಟಿದ್ದೇವೆಂದರೆ ಜನತೆ ಆಶೀರ್ವಾದ ಮಾಡಿ ನಮ್ಮನ್ನು ಅಧಿಕಾರಕ್ಕೆ ತಂದರೆ ಒಂದು ಕೆ.ಜಿ. ಅಕ್ಕಿಯನ್ನು 3 ರೂಪಾಯಿಗೆ ಕೊಡುತ್ತೇವೆ ಎಂದು ಹೇಳಿದ್ದೆವು. ಅದನ್ನು ಆಯವ್ಯಯದಲ್ಲಿ ಹೇಳಿದ್ದೇವೆ. ವಿರೋಧ ಪಕ್ಷದವರು ಇದನ್ನು ಸುಳ್ಳಿನ ಕಂತೆ ಎಂದರೆ ಹೇಗೆ? ನೀವು ಕಾದು ನೋಡಬೇಕು. ಇದನ್ನು ಅನುಷ್ಠಾನಕ್ಕೆ ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತೇವೆ ಎಂದರೆ ವಿರೋಧ ಪಕ್ಷದವರು ಇದನ್ನು ಸುಳ್ಳಿನ ಕಂತೆ ಎಂದು ಹೇಳಿದ್ದಾರೆ. ನಾವು ಆಯವ್ಯಯದಲ್ಲಿ ಹೇಳಿದ ಮೇಲೆ ಒಂದು ಕೆ.ಜಿ. ಅಕ್ಕಿಗೆ 3 ರೂಪಾಯಿಯಂತೆ ಕೊಡದೇ ಇರುವುದಕ್ಕೆ ಸಾಧ್ಯವೇ ? ಇದನ್ನು ಮಾಡದಿದ್ದರೆ ನಾಳೆ ದಿವಸ ನೀವೇ ನಮ್ಮನ್ನು ಎದೆ ತಟ್ಟಿಕೊಂಡು ಕೇಳುತ್ತೀರಿ. ಇನ್ನು ಆನ್‌ಲೈನ್ ಲಾಟರಿಯನ್ನು ರದ್ದು ಮಾಡುತ್ತೇವೆಂದು ಭರವಸೆಯನ್ನು ಕೊಟ್ಟಿದ್ದೆವು. ಅದೇ ರೀತಿ ಆನ್‌ಲೈನ್ ಲಾಟರಿಯನ್ನು ರದ್ದು ಮಾಡಿದ್ದೇವೆ. ಇನ್ನು ಬಿಸಿ ಊಟದ ಯೋಜನೆ ಒಂದನೇ ತರಗತಿಯಿಂದ ಐದನೇ ತರಗತಿಯವರೆಗೆ ಇತ್ತು. ಈ ಯೋಜನೆಯನ್ನು ಈಗ 5ನೇ ತರಗತಿಯಿಂದ 7ನೇ ತರಗತಿಯವರೆಗೆ ನಾವು ವಿಸ್ತರಣೆಯನ್ನು ಮಾಡಿದ್ದೇವೆ. ಅದು ಸುಳ್ಳೇ ? ಅದಕ್ಕೆ ಅನುದಾನವನ್ನು...

ಮಾನ್ಯ ಸದಸ್ಯರು : ರೈತರ ಸಾಲವನ್ನು ಮನ್ನಾ ಮಾಡುವ ಬಗ್ಗೆ. ಬಡ್ಡಿ ಮನ್ನಾ ಮಾಡುವ ಬಗ್ಗೆ ಏನು ಹೇಳಲೇ ಇಲ್ಲ.

ಅಧ್ಯಕ್ಷರು : ಮಾನ್ಯ ಸದಸ್ಯರು ದಯಮಾಡಿ ಕುಳಿತುಕೊಳ್ಳಿ. ಏತಕ್ಕೆ ಈ ರೀತಿಯಲ್ಲಿ ಮಧ್ಯೆ ಮಧ್ಯೆ ಮಾತನಾಡುತ್ತೀರೋ ನನಗೆ ಅರ್ಥವಾಗುತ್ತಿಲ್ಲ. ಕಾಲಾವಕಾಶ ಇಲ್ಲ. ಬಹಳ ಜನರು ಮಾತನಾಡುವವರು ಇದ್ದಾರೆ. ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಅಧ್ಯಕ್ಷರೆ. ಜಯಕುಮಾರ್‌ರವರು ನಿಮ್ಮ ಕಡೆ ಮುಖ ಮಾಡಿ ಮಾತನಾಡಿದರೆ ಸರಿಯಾಗುತ್ತದೆ. ಆದರೆ ಅವರು ಸದಸ್ಯರುಗಳ ಕಡೆ ಮುಖ ಮಾಡಿ ಮಾತನಾಡಿದರೆ ಸದಸ್ಯರುಗಳೂ ಕೂಡ ಮಾತನಾಡಲು ಮುಂದಾಗುತಾರೆ.

ಅಧ್ಯಕ್ಷರು : ಚರ್ಚೆಗೆ ಅಡ್ಡಿ ಮಾಡುವುದರಿಂದ ನಿಮಗೇ ತೊಂದರೆಯಾಗುತ್ತದೆ. ಯಾರಿಗೂ ಮಾತನಾಡಲು ಅವಕಾಶ ಸಿಗುವುದಿಲ್ಲ. ದಯಮಾಡಿ ಮಾನ್ಯ ಸದಸ್ಯರುಗಳು ಕುಳಿತುಕೊಳ್ಳಿ.

ಶ್ರೀ ಡಿ.ಟಿ. ಜಯಕುಮಾರ್ : ಈಗ ಆಗಿರುವುದನ್ನು ಮಾತ್ರ ಹೇಳುತ್ತಿದ್ದೇನೆ. ಆಗದೇ ಇರುವುದನ್ನು ಹೇಳುವುದಿಲ್ಲ. ಈಗ ರೈತರಿಗೆ ಸಾಲವನ್ನು ಶೇಕಡ 6 ರ ಬಡ್ಡಿ ದರದಲ್ಲಿ ಕೊಡುತ್ತೇವೆಂದು ನಮ್ಮ ಆಯವ್ಯಯದಲ್ಲಿ ಹೇಳಿದ್ದೇನೆ. ಅದು ಸುಳ್ಳಾಗುತ್ತದೆಯೇ ?

(ಗೊಂದಲ)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಎಷ್ಟು ಜನಕ್ಕೆ ಕೊಡುತ್ತೀರಿ ಹೇಳಿ.

ಅಧ್ಯಕ್ಷರು : ನಾಯ್ಡುರವರೇ ನೀವು ಹಿರಿಯ ಸದಸ್ಯರಾಗಿದ್ದೀರಿ. ಈ ರೀತಿ ಮಧ್ಯೆ ಮಾತನಾಡುವುದು ಸರಿಯಲ್ಲ. ಚರ್ಚೆಗೆ ಅಡ್ಡಿಪಡಿಸುವುದು ಸರಿಯಲ್ಲ. ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಸದಸ್ಯರಲ್ಲಿ ನನ್ನ ವಿನಂತಿಯೆಂದರೆ ಬಹಳ ಜನರಿಗೆ ಮಾತನಾಡಲು ಅವಕಾಶ ಸಿಗುತ್ತದೆ. ನಿಮ್ಮ ನಿಮ್ಮ ಅಭಿಪ್ರಾಯಗಳನ್ನು ನೀವು ಮಾತನಾಡುವಾಗ ತಿಳಿಸಿ. ಈಗ ಏಕೆ ಚರ್ಚೆಗೆ ಅಡ್ಡಿಪಡಿಸುತ್ತೀರಿ.? ಅವರ ಸರ್ಕಾರದಲ್ಲಿ ಅವರ ಪರವಾಗಿರತಕ್ಕಂಥ ಬಜೆಟನ್ನು ಅವರು ಹೊಗಳುತ್ತಾರೆ. ನೀವು ಮಾತನಾಡುವಾಗ ನಿಮ್ಮ ಅಭಿಪ್ರಾಯಗಳನ್ನು ಹೇಳಿ. ಅದನ್ನು ಬಿಟ್ಟು ಕಲಾಪ ನಡೆಯುತ್ತಿರುವಾಗ ಮಧ್ಯೆದಲ್ಲಿ ಏಕೆ ಮಾತನಾಡಿ ತೊಂದರೆ ಕೊಡುತ್ತೀರಿ. ದಯಮಾಡಿ ಕುಳಿತುಕೊಳ್ಳಿ. ಜಯಕುಮಾರ್‌ರವರೇ, ನೀವೂ ಅಷ್ಟೆ, ಆ ಕಡೆ ಮುಖ ಮಾಡಿ ಮಾತನಾಡಬೇಡಿ, ನನ್ನ ಕಡೆ ಮುಖ ಮಾಡಿ ಮಾತನಾಡಿ.

ಶ್ರೀ ಡಿ.ಟಿ. ಜಯಕುಮಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಅರ್ಥ ಸಚಿವರಲ್ಲಿ ನನ್ನ ಬೇಡಿಕೆ ಏನೆಂದರೆ ಶೇಕಡ 6 ರ ಬಡ್ಡಿ ದರದಲ್ಲಿ ಸಾಲ ಕೊಡುವ ವಿಚಾರಕ್ಕೆ ಸಂಬಂಧಪಟ್ಟಂತೆ ನಾನು ಒಂದು ಕ್ಲಾರಿಫಿಕೇಶನ್ ಕೇಳುವುದೇನೆಂದರೆ ಕೇವಲ ಕೋ-ಅಪರೇಟಿವ್ ಬ್ಯಾಂಕ್‌ಗಳಲ್ಲಿ ಮಾತ್ರ ಶೇಕಡ 6 ರಂತೆ ಸಾಲವನ್ನು ರೈತರಿಗೆ ಕೊಡಲಾಗುತ್ತದೋ ಅಥವಾ ಇದರ ಜೊತೆಗೆ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಕೂಡ ಶೇಕಡ 6 ರ ಬಡ್ಡಿ ದರದಲ್ಲಿ ರೈತರಿಗೆ ಸಾಲ ಸಿಗುತ್ತದೋ ಎಂಬ ಬಗ್ಗೆ ಹೇಳಬೇಕು. ನಾನು ಹೇಳುವುದೇನೆಂದರೆ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಕೂಡ ಶೇಕಡ 6 ರ ಬಡ್ಡಿ ದರದಲ್ಲಿ ಸಾಲ ರೈತರಿಗೆ ಸಿಗುವಂತಾಗಲು ಸರ್ಕಾರ ಸೂಕ್ತವಾದ ಮತ್ತು ಕಠಿಣವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ಏಕೆಂದರೆ ಕೇವಲ ಸಹಕಾರಿ ಸಂಘಗಳಲ್ಲಿ ಮಾತ್ರ ಶೇಕಡ 6 ರ ಬಡ್ಡಿ ದರದಲ್ಲಿ ರೈತರಿಗೆ ಸಾಲ ಕೊಡುವುದು ಎಂದರೆ ಇದರಿಂದಾಗಿ ಹೆಚ್ಚು ರೈತರಿಗೇನೂ ಅನುಕೂಲವಾಗುವುದಿಲ್ಲ. ಆದಕಾರಣ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲೂ ಕೂಡ ಶೇಕಡ 6 ರ ಬಡ್ಡಿ ದರದಲ್ಲಿ ರೈತರಿಗೆ ಸಾಲ ಸಿಗುವಂತೆ ಮಾಡಲು ಮಾನ್ಯ ಅರ್ಥ ಸಚಿವರು ಸೂಕ್ತ ಪ್ರಸ್ತಾವನೆಯನ್ನು ಕಳುಹಿಸಿ ಅದಕ್ಕೆ ಸೂಚನೆಯನ್ನು ಕೊಟ್ಟು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲೂ ಕೂಡ ರೈತರಿಗೆ ಶೇಕಡ 6ರ ಬಡ್ಡಿ ದರದಲ್ಲಿ ಸಾಲವನ್ನು ಕೊಡಿಸುವುದಕ್ಕ ಯೋಚನೆಯನ್ನು

ಮಾಡಬೇಕು. ಇನ್ನು ನೇಕಾರರ ಬಗ್ಗೆ ಹೇಳಬೇಕೆಂದರೆ ಹಿಂದೆ ನೇಕಾರರು ಚುನಾವಣೆ ಪೂರ್ವದಲ್ಲಿ ನಾವು ಎಲ್ಲಿಗೆ ಹೋದರೂ ಕೂಡ ಅಲ್ಲಿ ನೇಕಾರರು ಮುಷ್ಕರ ಮಾಡುತ್ತಿದ್ದರು. ಸ್ವಾಮಿ, ಈ ಸರ್ಕಾರ ನಮ್ಮ ಬಗ್ಗೆ ಕೇಳಲೇ ಇಲ್ಲ. ನಮ್ಮನ್ನು ಸರ್ಕಾರ ಗಮನಿಸಲಿಲ್ಲ, ನಮ್ಮನ್ನು ಕೇಳುವವರಿಲ್ಲದೇ ಬಹಳ ಕಷ್ಟದಲ್ಲಿ ಇದ್ದೇವೆ ಎನ್ನತಕ್ಕಂಥ ಮಾತನ್ನು ನಮಗೆ ಹೇಳುತ್ತಿದ್ದರು. ಇದನ್ನು ಮಾನ್ಯ ಅರ್ಥ ಸಚಿವರು ಗಮನಿಸಿ ನೇಕಾರರಿಗಾಗಿಯೇ ವಿಶೇಷವಾದ ಪ್ಯಾಕೇಜ್‌ನ್ನು ಮಾಡಿ ಸುಮಾರು 80 ಸಾವಿರ ನೇಕಾರರಿಗೆ ಅನುಕೂಲ ಆಗತಕ್ಕಂಥ ರೀತಿಯಲ್ಲಿ ಯೋಜನೆಯನ್ನು ಮಾನ್ಯ ಅರ್ಥ ಸಚಿವರು ಮಾಡಿದ್ದಾರೆಂದರೆ ಇಂಥ ವಿಷಮ ಪರಿಸ್ಥಿತಿಯಲ್ಲೂ ಇಂಥ ಆಯವ್ಯಯವನ್ನು ಮಾಡಿ ನೇಕಾರರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆಂದರೆ ನಿಜವಾಗಿಯೂ ನಾವೆಲ್ಲರೂ ಮೆಚ್ಚಿಕೊಳ್ಳಲೇಬೇಕಾಗುತ್ತದೆ. ನಾವು ಎಲ್ಲರನ್ನೂ ಮೆಚ್ಚಿಸುವುದಕ್ಕೆ ಆಗುವುದಿಲ್ಲ. ನಾವು ವಾಸ್ತವಾಂಶಗಳನ್ನು ತಿಳಿದುಕೊಳ್ಳಬೇಕಾಗುತ್ತದೆ. ಇಂದಿನ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ನೀವು ಇಲ್ಲಿಗೆ ಬರಬಹುದು, ನಾವು ಅಲ್ಲಿಗೆ ಹೋಗಬಹುದು. ಆದರೆ ಸರ್ಕಾರ ನಡೆಸತಕ್ಕಂಥ ಯಾರೇ ಆಗಲಿ ಎಲ್ಲರನ್ನೂ ಮೆಚ್ಚಿಸುವುದಕ್ಕೆ ಆಗುವುದಿಲ್ಲ. ಹೆಚ್ಚಿನ ಭಾಗವನ್ನು ಮೆಚ್ಚಿಸಬಹುದೇ ಹೊರತು ಎಲ್ಲರನ್ನೂ ತೃಪ್ತಿಪಡಿಸಲು ಸಾಧ್ಯವೇ ಇಲ್ಲ. ಹರಿಹರಬ್ರಹ್ಮರು ಬಂದರೂ ಕೂಡ ಅವರಿಂದಲೂ ಎಲ್ಲರನ್ನೂ ತೃಪ್ತಿಪಡಿಸಲು ಸಾಧ್ಯವಿಲ್ಲ. ಆದರೆ ಮಾನ್ಯ ಅರ್ಥ ಸಚಿವರು ಎಲ್ಲಾ ಜನರೂ ಮೆಚ್ಚತಕ್ಕಂಥ. ವಿರೋಧ ಪಕ್ಷದವರೂ ಕೂಡ ಮೆಚ್ಚತಕ್ಕಂಥ ಬಜೆಟ್‌ನ್ನು ಕೊಟ್ಟಿದ್ದಾರೆಂದರೆ ನಿಜವಾಗಿಯೂ ನಾವು ಇದನ್ನು ಶ್ಲಾಘನೆ ಮಾಡಲೇಬೇಕಾಗುತ್ತದೆ. ಇನ್ನು ಉತ್ತರ ಕರ್ನಾಟಕದ ಬಗ್ಗೆ ಹೇಳಬೇಕೆಂದರೆ ಅನೇಕ ಶಾಸಕರು ಉತ್ತರ ಕರ್ನಾಟಕರಿಂದ ಬಂದವರು ಇಲ್ಲಿ ಸದಸ್ಯರಾಗಿದ್ದಾರೆ. ಅನೇಕ ವರ್ಷದಿಂದಲೂ ಹೋರಾಟವನ್ನು ಮಾಡಿಕೊಂಡೇ ಬಂದಿದ್ದಾರೆ. ಉತ್ತರ ಕರ್ನಾಟಕದ ಬಗ್ಗೆ ಮಲತಾಯಿ ಧೋರಣೆ ಅನುಸರಿಸುತ್ತಾರೆ. ಉತ್ತರ ಕರ್ನಾಟಕದ ಬಗ್ಗೆ ನಿರಾಧಾರಣೆ ಮಾಡಿದ್ದಾರೆ, ಉತ್ತರ ಕರ್ನಾಟಕದ ಬಗ್ಗೆ ಯಾವುದೇ ರೀತಿಯ ಪ್ಯಾಕೇಜ್ ಪ್ರೋಗ್ರಾಂ ಕೊಟ್ಟಿಲ್ಲವೆಂದು ಕೂಗು ಅನೇಕ ವರ್ಷಗಳಿಂದ ಕೇಳುತ್ತಲೇ ಇದೆ. ನಾನು ಈ ಸದನಕ್ಕೆ ಮೂರನೇ ಬಾರಿ ಶಾಸಕನಾಗಿ ಆಯ್ಕೆಯಾಗಿ ಬರುತ್ತಿದ್ದೇನೆ. ಹತ್ತು ವರ್ಷಗಳಿಂದಲೂ ಈ ಕೂಗನ್ನು ಉತ್ತರ ಕರ್ನಾಟಕದ ಶಾಸಕರಿಂದ ನಾನು ಕೇಳುತ್ತಲೇ ಬಂದಿದ್ದೇನೆ. ಆ ಭಾಗದವರೇ ಮುಖ್ಯಮಂತ್ರಿಗಳಾಗಿದ್ದರು, ಆ ಭಾಗದ ಪ್ರಬಲ ಶಾಸಕರುಗಳೇ ಪ್ರಬಲ ಮಂತ್ರಿಗಳಾಗಿದ್ದರು. ಆದರೂ ಕೂಡ ಅವರುಗಳು ಆ ಭಾಗದ ಬಗ್ಗೆ ಅಭಿವೃದ್ಧಿಯ ಬಗ್ಗೆ ಚಿಂತನೆಯನ್ನು ಮಾಡಲಿಲ್ಲ. ಆದರೆ ಮಾನ್ಯ ಅರ್ಥ ಸಚಿವರು ಉತ್ತರ ಕರ್ನಾಟಕದ ಬಗ್ಗೆ ವಿಶೇಷವಾದ ಗಮನವನ್ನು ಕೊಟ್ಟು ಆ ಭಾಗದಲ್ಲಿ ಉಚ್ಚ ನ್ಯಾಯಾಲಯವನ್ನು ಮಾಡುವುದಕ್ಕಾಗಿ 20 ಕೋಟಿ ರೂಪಾಯಿಗಳ ಮೊತ್ತವನ್ನು ಇಟ್ಟಿದ್ದಾರೆ. ಕೇವಲ 20 ಕೋಟಿ ರೂಯಷ್ಟೇ ಅಲ್ಲ. ಮಾನ್ಯ ಉದಾಸಿಯವರು ಮಾತನಾಡುವಾಗ ಕೇವಲ 20 ಕೋಟಿ ರೂಪಾಯಿಯಲ್ಲಿ

ಏನಾಗುತ್ತದೆ ಎನ್ನುವ ಮಾತನ್ನು ಹೇಳಿದರು. 20 ಕೋಟಿ ರೂಪಾಯಿಯಲ್ಲಿ ಮೊದಲು ಪ್ರಾರಂಭ ಮಾಡುವುದು. ಮುಂದೆ 20 ಕೋಟಿ, 70 ಕೋಟಿ ಅಥವಾ 1000 ಕೋಟಿಯೇ ಆಗಲಿ. ಒಂದೇ ಬಾರಿ ಉತ್ತರ ಕರ್ನಾಟಕದ ಭಾಗದಲ್ಲಿ ಉಚ್ಚ ನ್ಯಾಯಾಲಯವನ್ನು ಕಟ್ಟುವುದಕ್ಕೆ 100 ಕೋಟಿ ರೂಪಾಯಿಯನ್ನು ಖರ್ಚು ಮಾಡುವುದಿಲ್ಲ. ಹಂತ ಹಂತವಾಗಿ ಖರ್ಚು ಮಾಡಬೇಕಾಗುತ್ತದೆ. ಆದುದರಿಂದ 20 ಕೋಟಿ ರೂಪಾಯಿಯನ್ನು ಪ್ರಾರಂಭದಲ್ಲಿ ಮಂಜೂರು ಮಾಡುತ್ತಿರುವ ವಿಚಾರದ ಬಗ್ಗೆ ಉತ್ತರ ಕರ್ನಾಟಕದ ಎಲ್ಲಾ ಶಾಸಕರೂ ಕೂಡ ಬಹಳ ಹೆಮ್ಮೆ ಪಡಬೇಕಾದ ಅವಶ್ಯಕತೆ ಇದೆ ಎಂದು ಹೇಳಬಯಸುತ್ತೇನೆ. ಮಾನ್ಯ ಅರ್ಥ ಸಚಿವರು ಇನ್ನೂ ಒಂದು ಪ್ಯಾಕೇಜ್‌ನ್ನು ಕೊಟ್ಟಿದ್ದಾರೆ. ಸುಮಾರು 54 ಪರ್ಸೆಂಟ್ ಅಂದರೆ 7170 ಕೋಟಿ ರೂಪಾಯಿಗಳ ಸಹಾಯಧನವನ್ನು ಉತ್ತರ ಕರ್ನಾಟಕದ ಅಭಿವೃದ್ಧಿಗಾಗಿ ಕೊಟ್ಟಿದ್ದಾರೆ. ಉತ್ತರ ಕರ್ನಾಟಕ ಭಾಗದವರ ಬಹು ದಿನದ ಕನಸು ಇದಾಗಿತ್ತು. ಅದನ್ನು ನನಸು ಮಾಡುವ ಕೆಲಸವನ್ನು ಮಾನ್ಯ ಅರ್ಥ ಸಚಿವರು ಇಂದು ಮಾಡಿದ್ದಾರೆ. ಆದುದರಿಂದ ಇದಕ್ಕಿಂತ ಅತ್ಯುತ್ತಮವಾದ ಬಜೆಟನ್ನು ಕೊಡುವುದಕ್ಕೆ ಬೇರೆ ಯಾರಿಂದಲೂ ಸಾಧ್ಯವಿಲ್ಲ. ಬಹುಶಃ ಮಾನ್ಯ ಸಿದ್ಧರಾಮಯ್ಯನವರು ಈ ಹಿಂದೆಯೇ ಅತ್ಯುತ್ತಮವಾಗಿ ಆಡಳಿತ ನಡೆಸಿದ ಅನುಭವವನ್ನು ಹೊಂದಿದವರಾಗಿದ್ದರಿಂದ, ಅವರು ಶಿಸ್ತಿನ ಸಿಪಾಯಿಗಳಾಗಿ ಕೆಲಸ ಮಾಡಿದ್ದಾರೆ. ಉಳಿತಾಯದ ಬಜೆಟ್ ಬಗ್ಗೆ ಹೇಳಿದ್ದಾರೆ. ಎಂಟು ವರ್ಷಗಳ ಹಿಂದೆ ಇದೇ ಮಾನ್ಯ ಸಿದ್ಧರಾಮಯ್ಯನವರು ಉಳಿತಾಯ ಬಜೆಟ್‌ನ್ನು ಕೊಟ್ಟಿದ್ದರು. ಇವೊತ್ತು 72 ಕೋಟಿ ರೂಪಾಯಿಗಳ ಉಳಿತಾಯದ ಬಜೆಟ್‌ನ್ನು ಕೊಟ್ಟಿದ್ದಾರೆಂದರೆ ನಿಜವಾಗಿಯೂ ನಾವು ಅವರ ಬದ್ಧತೆ ಬಗ್ಗೆ ಹೆಮ್ಮೆಪಡಬೇಕಾಗುತ್ತದೆ. ಈಗ ಹೊಸ ಶಾಸಕರುಗಳು ಬಂದಿದ್ದಾರೆ. ಅವರಿಗೂ ಕೂಡ ಮುಂದೆ ಅನುಭವವಾಗುತ್ತದೆ. ಇವೊತ್ತು ಸೆಂಟ್ರಲ್‌ನಲ್ಲಿ ಐದು ವರ್ಷ ಸರ್ಕಾರ ನಡೆಸುವುದಕ್ಕೆ ಆಗಲಿಲ್ಲ. ಕಾಂಗ್ರೆಸ್‌ನ್ನು 56 ವರ್ಷಗಳಿಂದ ಬಿ.ಜೆ.ಪಿ. ಯವರು ಬೈಯ್ದುಕೊಂಡೇ ಬಂದರು. ಆದರೆ ಅವರಿಗೆ ಅವಕಾಶ ಸಿಕ್ಕಿದಾಗ 5 ವರ್ಷ ಸರಿಯಾಗಿ ಸರ್ಕಾರ ನಡೆಸುವುದಕ್ಕೆ ಆಗಲಿಲ್ಲ.

ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು : ತಾವು ಕಾಂಗ್ರೆಸ್ ಪಕ್ಷವನ್ನು ಬೈಯ್ದುಕೊಂಡೇ ಇಲ್ಲಿಗೆ ಬಂದದ್ದು.

ಅಧ್ಯಕ್ಷರು : ಮಾನ್ಯ ಜಯಕುಮಾರ್‌ರವರೇ, ತಾವೇಕೆ ಆ ಕಡೆ ತಿರುಗಿಕೊಂಡು ಮಾತನಾಡುತ್ತೀರಿ? ಈ ಕಡೆ ತಿರುಗಿಕೊಂಡು ಮಾತನಾಡಿ ಎಂದರೆ ಈ ರೀತಿ ನೀವು ಮಾತನಾಡುವುದೇ ಇಲ್ಲ. ನೀವೇ ಈ ರೀತಿ ಮಾಡಿದರೆ ಹೇಗೆ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ನೀವೂ ಕೂಡ ಕಾಂಗ್ರೆಸ್‌ನ್ನು ಬೈಯ್ದುಕೊಂಡೇ ಬಂದು ಈಗ ಅವರ ಜೊತೆ ಕೈ ಜೋಡಿಸಿದಿರಿ.

ಶ್ರೀ ಡಿ.ಟಿ. ಜಯಕುಮಾರ್ : ನೀವು ಕಾಂಗ್ರೆಸ್‌ನ್ನು 56 ವರ್ಷಗಳಿಂದ ಬೈಯ್ದುಕೊಂಡೇ ಬಂದಿರಿ. ಜನರು ನಿಮಗೆ ಅವಕಾಶವನ್ನು ಕೊಟ್ಟರು. ಆದರೆ

ಶ್ರೀ ಡಿ.ಟಿ. ಜಯಕುಮಾರ್ : ಅವನ ನೀತಿ ಬೇರೆ ನಮ್ಮ ನೀತಿ ಬೇರೆ. ಕನಿಷ್ಟ ಸಾಮಾನ್ಯ ಕಾರ್ಯಕ್ರಮದಲ್ಲಿ ಒಂದಾಗಿ ಹೋಗುತ್ತೇವೆ. ಆದರೆ ರಾಜಕೀಯ ಪಕ್ಷವಾಗಿ ನಮ್ಮ ಅವನ ವಿಚಾರ ಬೇರೆ. ಚಿನ್ನದ ಕತ್ತಿ ಎಂದು ಕತ್ತು ಕೊಯ್ದು ಕೊಳ್ಳುವುದಕ್ಕೆ ಆಗುವುದಿಲ್ಲ. ನಾವು ಸಮ್ಮಿಶ್ರ ಸರ್ಕಾರ ಮಾಡಿದ್ದೇವೆಂದು ಹೇಳಿ ಕಾಂಗ್ರೆಸ್ ಮಾಡಿದ ತಪ್ಪುಗಳಿಗೆ, ಹಗರಣಗಳಿಗೆ, ಅವ್ಯವಹಾರಗಳಿಗೆ ನಾವು ಭಾಗಿಯಾಗಿದ್ದೇವೆಂದು ತಾವು ಯಾರೂ ಕೂಡ ಭಾವಿಸಬಾರದು. ಅದಕ್ಕೆ ನಾವ್ಯಾರು ಕೂಡ ಭಾಗಿಯಾಗಿಲ್ಲ. ಉಪ್ಪು ತಿಂದವನು ನೀರು ಕುಡಿಯಬೇಕೆಂದು ಹೇಳಿ ಯಾರು ತಪ್ಪು ಮಾಡಿದ್ದಾರೆ ಅವರು ಶಿಕ್ಷೆ ಅನುಭವಿಸಬೇಕು. ಅವರು ಎಷ್ಟೇ ದೊಡ್ಡವರಿರಲಿ, ಮಾನ್ಯ ಮುಖ್ಯ ಮಂತ್ರಿಗಳು ಕೂಡ ಸದನದಲ್ಲಿ ವಾಗ್ದಾನ ಹಾಗೂ ಭರವಸೆಯನ್ನೂ ಕೊಟ್ಟಿದ್ದಾರೆ. ಯಾವುದೇ ವ್ಯಕ್ತಿ, ಯಾವುದೇ ಸರ್ಕಾರ ತಪ್ಪು ಮಾಡಿದ್ದರೆ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ದಿಟ್ಟತನದಿಂದ ಭರವಸೆ ಕೊಟ್ಟಿದ್ದಾರೆ. ಆದುದರಿಂದ ನೀವು ಏನೋ ಆಸೆ ಇಟ್ಟುಕೊಂಡು ಬಿಡಬಹುದು.

ಅಧ್ಯಕ್ಷರು : ನೀವು ಅವರಿಗೆ ಉತ್ತರ ಕೊಡುವುದರಲ್ಲಿ ಕಾಲ ಕಳೆದರೆ ಹೇಗೆ ? ಇನ್ನೂ ಬಹಳ ಜನ ಮಾತನಾಡುವವರು ಇದ್ದಾರೆ.

ಶ್ರೀ ಡಿ.ಟಿ. ಜಯಕುಮಾರ್ : ಮಾನ್ಯ ಅಧ್ಯಕ್ಷರೆ, ನಾನು ಎಲ್ಲಾ ವಿಚಾರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ನಾನು ಎಲ್ಲಾ ವಿಚಾರಕ್ಕೆ ಪಟ್ಟಿ ತಯಾರು ಮಾಡಿದ್ದೇನೆ. ಆದರೆ ಎಲ್ಲಾ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ನಾನು ಮಾನ್ಯ ಅರ್ಥ ಸಚಿವರಿಗೆ ಪ್ರಾರ್ಥನೆ ಮಾಡಿಕೊಳ್ಳುವುದಿಷ್ಟೆ. ಈ ಆಯವ್ಯಯದಲ್ಲಿ ಏನೇನು ಭರವಸೆಯನ್ನು ಕೊಟ್ಟಿದ್ದಾರೆ. ಮತ್ತು ಶ್ರೀಸಾಮಾನ್ಯನ ಬದುಕಿಗೆ ಹಸನಾಗುವುದಕ್ಕೆ ಏನು ಪ್ರಯತ್ನ ಮಾಡುತ್ತಿದ್ದಾರೆ. ಅವೆಲ್ಲವೂ ಕೂಡ ಅನುಷ್ಠಾನಕ್ಕೆ ತರತಕ್ಕಂಥ ರೀತಿಯಲ್ಲಿ ನಾವು ನಮ್ಮ ರಾಜಕಾರಣಿಗಳ ಪದ್ಧತಿ ಇದ್ದರೆ ಸಾಲುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಒಂದು ಸರ್ಕಾರ ಜನಪರವಾದಂತಹ ಕೆಲಸವನ್ನು ಜನಪರವಾದಂತಹ ಆಡಳಿತವನ್ನು ಕೊಡಬೇಕಾದರೆ ಕಾರ್ಯಾಂಗ ಮತ್ತು ಶಾಸಕಾಂಗ ಕೆಲಸ ಮಾಡಬೇಕು. ಶಾಸಕಾಂಗ ತಂದದ್ದನ್ನು ಕಾರ್ಯಾಂಗ ಅನುಷ್ಠಾನಕ್ಕೆ ತರಬೇಕು. ಇವೆರಡೂ ಕೂಡ ಒಂದೇ ಬಂಡಿಯ ಎರಡು ಜೋಡೆತ್ತುಗಳು ಇದ್ದ ಹಾಗೆ. ಇವೆರಡು ಚೆನ್ನಾಗಿ ಕೆಲಸ ಮಾಡಿದಾಗ ಮಾತ್ರ ನಮ್ಮ ಈ ಆಯವ್ಯಯದಲ್ಲಿ ಎಲ್ಲವನ್ನೂ ಅನುಷ್ಠಾನಕ್ಕೆ ತರುವುದಕ್ಕೆ ಸಾಧ್ಯವಾಗುತ್ತದೆ. ಆ ಒಂದು ಸಾಮರ್ಥ್ಯ, ಶಕ್ತಿ ನಮ್ಮ ಮಾನ್ಯ ಸಿದ್ಧರಾಮಯ್ಯನವರಿಗೆ ಇದೆ ಎಂದು ಭಾವಿಸಿಕೊಂಡಿದ್ದೇನೆ. ಜೊತೆಗೆ ಈ ಬಜೆಟ್ ಎಂಟು ತಿಂಗಳ ಬಜೆಟ್. ಮಾನ್ಯ ಸಿದ್ಧರಾಮಯ್ಯನವರು ಮುಂದಿನ ಸಾರಿ ಕೂಡ ಇದೆ ರೀತಿಯಾಗಿ ಇದಕ್ಕಿಂತ ಅತ್ಯುತ್ತಮವಾದಂತಹ ಬಜೆಟ್ ಕೊಡುವುದಕ್ಕೆ ಸಾಧ್ಯವಾಗುತ್ತದೆಂದು ಹಾಗೂ ಒಟ್ಟು 12 ತಿಂಗಳ ಆಯವ್ಯಯದಲ್ಲಿ ಸಂಪನ್ಮೂಲಗಳನ್ನು ಹೆಚ್ಚು ಭರಿಸುವುದಕ್ಕೆ ಸಾಧ್ಯವಾಗುತ್ತದೆ. ಆದರೆ ಎಂಟು ತಿಂಗಳ ಆಯವ್ಯಯದಲ್ಲಿ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದಕ್ಕೆ

ನೀವೇಷ್ಟು ವರ್ಷ ಅಧಿಕಾರ ನಡೆಸಿದಿರಿ? ಅವರು 35 ವರ್ಷ ಅಧಿಕಾರ ನಡೆಸಿದರೆ ನೀವೂ ಕೂಡ 45 ವರ್ಷ ಅಧಿಕಾರ ನಡೆಸಬೇಕಾಗಿತ್ತು. ಆಗ ನಿಮ್ಮನ್ನು ಮೆಚ್ಚಬಹುದಾಗಿತ್ತು ಕಾಂಗ್ರೆಸ್ (ಐ) ಗಿಂತ ಬೆಟರ್ ಎಂದು. ಆದರೆ ನಿಮಗೆ 5 ವರ್ಷ ಸರ್ಕಾರ ನಡೆಸುವುದಕ್ಕೆ ಆಗಲಿಲ್ಲ. ಅದು ಸಲೀಸಾಗಿ ಸರ್ಕಾರ ನಡೆಸುವುದಕ್ಕೆ ಆಗಲಿಲ್ಲ. ಇಲ್ಲಿ ನಿಮ್ಮ ಎಲೆಯೊಳಗೆ ಹೆಗ್ಗಣ ಬಿದ್ದಿದೆ, ಆದರೆ ಇಲ್ಲಿ ನಿಮ್ಮ ಎಲೆಯೊಳಗೆ ಬಿದ್ದಿರತಕ್ಕಂಥ ನೊಣ ನೋಡಿ ನೊಣ ಬಿದ್ದಿದೆ, ನೊಣ ಬಿದ್ದಿದೆ ಎಂದು ಪದೇ ಪದೇ ಅಪಾದನೆಯನ್ನು ಮಾಡಿದರೆ ಹೇಗೆ. ನಾವು ಕೂಡ ಮನುಷ್ಯರೇ, ನಾವೂ ಕೂಡ ಜನಗಳಿಂದ ಆರಿಸಿ ಶಾಸಕರಾಗಿ ಇಲ್ಲಿ ಬಂದಿರುವುದು. ನಿವೆಲ್ಲಾ ಒಂದಿಪ್ಪತ್ತು ಜನರು ನಾವು ಮಾತನಾಡುವಾಗ ಒಟ್ಟಿಗೆ ಎದ್ದುಬಿಟ್ಟರೆ ಹೇಗೆ? ಆ ದೃಷ್ಟಿಯಿಂದ ನಾನು ಮಾತನಾಡುತ್ತಿದ್ದೇನೆಯೇ ಹೊರತು ನಿಮ್ಮನ್ನು ನೋಯಿಸಬೇಕೆನ್ನುವ ವಿಚಾರ ನನಗಿಲ್ಲ. ಮಾನ್ಯ ಅಧ್ಯಕ್ಷರೆ, ನಾನು ಮಾತನಾಡಬೇಕಾದ್ದು ಬಹಳ ವಿಚಾರಗಳಿವೆ. ಆದರೆ ಸಮಯ ಕಡಿಮೆ ಇರುವುದರಿಂದ ಮಧ್ಯೆ ಮಧ್ಯೆ ಮಾನ್ಯ ಸದಸ್ಯರುಗಳು ಬಾಯಿ ಹಾಕಬಾರದು ಎಂದು ತಾವು ಹೇಳಬೇಕು. ಬಾಯಿ ಹಾಕಲೇಬಾರದು ಎಂದೇನೂ ಕೇಳುತ್ತಿಲ್ಲ. ನಿಯಮಾವಳಿ ಪ್ರಕಾರ ಹಾಕಿ, ನಾನೇನಾದರೂ ತಪ್ಪು ಮಾತನಾಡಿದರೆ, ಆದರೆ ನಿಯಮಾವಳಿ ಬಿಟ್ಟು ಮಧ್ಯೆ ಬಾಯಿ ಹಾಕಬಾರದು ಎಂಬುದಷ್ಟೇ ನನ್ನ ಮನವಿ. ಮಾನ್ಯ ಅಧ್ಯಕ್ಷರ ಮೂಲಕ ಈ ಮನವಿ ಮಾಡುತ್ತಿದ್ದೇನೆ. ಅತ್ಯುತ್ತಮವಾದ ಬಜೆಟ್ ಎನ್ನುವುದಕ್ಕೆ ಯಾವುದೇ ಅನುಮಾನ ಇಲ್ಲ. ಇದನ್ನು ವಿರೋಧಪಕ್ಷದವರು ಮೆಚ್ಚತಕ್ಕಂಥ ವಿಚಾರ ಎನ್ನುವುದಲ್ಲ. ಜೊತೆಗೆ ಎಷ್ಟು ಬ್ಯಾಲೆನ್ಸ್ ಮಾಡಿದ್ದಾರೆ ಎಂದರೆ ಸುಮಾರು ಸಾಲ 1998-99 ರಲ್ಲಿ ಇದ್ದದ್ದು 12,445 ಕೋಟಿ ರೂಪಾಯಿ, ಅದು 2003-04 ರಲ್ಲಿ 30,188 ಕೋಟಿ ರೂಪಾಯಿಗಳು ಬೃಹತ್ ಪ್ರಾಮಾಣದ ಸಾಲ ಇತ್ತು. 12 ಸಾವಿರ ಕೋಟಿ ರೂ. ಎಲ್ಲಿ ? ಸುಮಾರು 45 ವರ್ಷಗಳಿಂದ 12,445 ಕೋಟಿ ರೂಪಾಯಿ ಎಂದರೆ ಕೇವಲ ಐದು ವರ್ಷಗಳಲ್ಲಿ 14,700 ರೂಪಾಯಿ ಜಾಸ್ತಿ ಇವತ್ತು ಸಾಲವಾಗಿದೆ ಎಂದರೆ ನಾವು ಏನು ಮಾಡುವುದು ? ಸಾಲ ಮಾಡಿ ಒಬ್ಬಟ್ಟು ಉಂಡ ಹಾಗೆ ಆಯಿತು. ಆದರೆ ಅದನ್ನು ತೀರಿಸುವುದು ಯಾವಾಗ? ಮಾನ್ಯ ಎಸ್.ಎಸ್. ಪಾಟೀಲರು 'ಸಾಲವನ್ನು ಕೊಳ್ಳುವಾಗ ಹಾಲೋಗರವನ್ನುಂಡಂತೆ, ಸಾಲಿಗರು ಬಂದು ಕೇಳುವಾಗ ಕಿಬ್ಬದಿಯ ಕೀಲು ಮುರಿದಂತೆ ಸರ್ವಜ್ಞ ಎಂದು ವಚನವನ್ನು ಹೇಳಿದರು. ಸಾಲ ತೆಗೆದುಕೊಳ್ಳುವುದು ಬಹಳ ಸುಲಭ. ಆದರೆ ಅದನ್ನು ತೀರಿಸುವುದು ಬಹಳ ಕಷ್ಟ.

(ಗೊಂದಲ)

ಮಾನ್ಯ ಸದಸ್ಯರು : ಯಾರು ಸಾಲವನ್ನು ಮಾಡಿದ್ದು? ಬಿಜೆಪಿ ಯವರಾ? ಯಾರು ಸಾಲ ಮಾಡಿದ್ದು ಹೇಳಿ.

(ಗೊಂದಲ)

ಮಾನ್ಯ ಸದಸ್ಯರು : ಹಿಂದೂ ಧರ್ಮ ಬರೆದಂತಹ ಮನು ಹೇಳಿದ್ದಾನೆ ಸಾಲ ಮಾಡಿ ತುಪ್ಪ ತಿನ್ನು ಎಂದು. ಅದಕ್ಕೆ ಸಾಲದ ಬಗ್ಗೆ ಏಕೆ ವಿಸ್ತಾರ ಮಾಡುತ್ತೀರಿ?

ಸ್ವಲ್ಪ ಕಷ್ಟವಾಗುತ್ತದೆ. ಆದರೂ ಸಹ ಅಂತಹ ಕಷ್ಟ ಪರಿಸ್ಥಿತಿಯಲ್ಲಿ ಕೂಡ ಮಾನ್ಯ ಸಿದ್ಧರಾಮಯ್ಯನವರು ಏನು ಈ ಒಂದು ಜನಪರ, ಬಡವರ ಪರವಾದಂತಹ, ರೈತರ ಪರವಾದಂತಹ, ಕಾರ್ಮಿಕರ ಪರವಾದಂತಹ ಒಟ್ಟಾರೆ ಬಡವರ ಪರವಾದಂತಹ ಆಯವ್ಯಯವನ್ನು ಕೊಟ್ಟಿದ್ದಾರೆ. ಅದನ್ನು ಅನುಷ್ಟಾನಕ್ಕೆ ತರುವುದಕ್ಕೆ ಅಧಿಕಾರಿಗಳು ಮತ್ತು ಶಾಸಕರುಗಳು ಸಹಕಾರ ನೀಡಿದರೆ ಖಂಡಿತವಾಗಿ ಇದರಲ್ಲಿ ನಾವು ಯಶಸ್ವಿಗೊಳಿಸುವುದಕ್ಕೆ ಸಾಧ್ಯವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತಾ, ಇನ್ನು ಬಹಳ ಆತಂಕವಾದ ವಿಚಾರವೆಂದರೆ ಸಿಇಟಿ. ಈ ಗೊಂದಲವನ್ನು ನಿವಾರಿಸುವುದಕ್ಕೆ ಮೂರನೆ ಮಹಡಿಯಲ್ಲಿ ಸಭೆ ಸೇರಿದೆ. ಅದಕ್ಕೆ ಒಂದು ಆರ್ಡಿನೆನ್ಸ್ ತರುವುದರ ಮೂಲಕ ಅಲ್ಲಿ ಏನು ಈವತ್ತು ಪೋಷಕರು ಮತ್ತು ವಿದ್ಯಾರ್ಥಿಗಳು ಬಹಳ ಒಂದು ಆತಂಕ ಪರಿಸ್ಥಿತಿಯಲ್ಲಿ ಇದ್ದಾರೆಂದರೆ ನಿದ್ದೆ ಮಾಡುತ್ತಿಲ್ಲ. ಅವರು ತ್ರಿಶಂಕು ಸ್ಥಿತಿಯಲ್ಲಿದ್ದಾರೆ. ಆದುದರಿಂದ ಸರ್ಕಾರ ಎಡಬಿಡದೆ ಕಾಲೇಜುಗಳನ್ನು ನಡೆಸುತ್ತಿರುವಂತಹ ಮ್ಯಾನೇಜ್‌ಮೆಂಟ್ ಅವರ ಬಗ್ಗೆ ಕಾಳಜಿ ಮಾಡದೆ 75:25 ಅನುಪಾತದ ಅನುಗುಣವಾಗಿ ಸಿಇಟಿ ಯನ್ನು ಮಾಡಬೇಕು. ಮತ್ತು ಈ ಸಿಇಟಿ ಗೊಂದಲವನ್ನು ಬೇಗ ನಿವಾರಣೆ ಮಾಡಿ ಸರ್ಕಾರ ವಿದ್ಯಾರ್ಥಿಗಳ ಸಹಾಯಕ್ಕೆ ಬರಬೇಕೆಂದು ಈ ಸಂದರ್ಭದಲ್ಲಿ ಮಾಡುತ್ತಿದ್ದೇನೆ. ಇನ್ನು ಎಲ್ಲಾ ನೀರಾವರಿ ಯೋಜನೆಗಳು.

ಅಧ್ಯಕ್ಷರು : ಬೇಗ ಮುಗಿಸಿ, ಬಹಳ ಜನ ಮಾತನಾಡುವವರು ಇದ್ದಾರೆ.

ಶ್ರೀ ಡಿ.ಟಿ. ಜಯಕುಮಾರ್ : ಇನ್ನೂ ಅನೇಕ ವಿಚಾರಗಳನ್ನು ಮಾತನಾಡಬೇಕೆಂದರೆ ಸಮಯ ಇಲ್ಲ. ಮುಖ್ಯವಾಗಿ ಒಂದೇ ಒಂದು ವಿಚಾರ ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತಂದು ಹೇಳುವುದಾದರೆ ಎಲ್ಲಾ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಎಲ್ಲಾ ರೀತಿಯ ತೊಂದರೆ ಇದೆ. ಯಾವುದೇ ಒಂದು ಸರ್ಕಾರ ಅರ್ಹ ವ್ಯಕ್ತಿಗಳಿಗೆ ಫಲಾನುಭವಿಗಳಿಗೆ ಯಾವುದೇ ಯೋಜನೆಗಳನ್ನು ಅಳವಡಿಸಬೇಕು ಎಂದಾಗ ಎಲ್ಲಾ ಗೊಂದಲಮಯ ವಾತಾವರಣ ಇದೆ. ಒಂದು ಜನತಾ ಮನೆ, ಆಶ್ರಯ ಮನೆ, ಒಂದು ಸ್ಕೂಲ್ ಸರ್ಟಿಫಿಕೇಟ್ ಅಥವಾ ಒಂದು ಆದಾಯದ ಸರ್ಟಿಫಿಕೇಟ್ ತೆಗೆದುಕೊಳ್ಳಬೇಕೆಂದರೆ ಇಪ್ಪತ್ತು ಇಲಾಖೆಗೆ ಅಲೆಯಬೇಕು. ಅದಕ್ಕೆ ಒಂದು ಫ್ಯಾಮಿಲಿ ಕಾರ್ಡ್ ಅನ್ನು ಪ್ರತಿಯೊಂದು ಕುಟುಂಬಕ್ಕೂ ಮಾಡುವುದರ ಮೂಲಕ, ಆ ಕಾರ್ಡ್‌ನಲ್ಲಿ ಮನೆ ಎಷ್ಟು, ಆಸ್ತಿ ಎಷ್ಟು, ಅವರ ವರಮಾನ ಎಷ್ಟು ಮತ್ತು ಅವರ ಜಾತಿ ಏನು ಎಲ್ಲಾ ನಮೂದಿಸಿದರೆ ಒಳ್ಳೆಯದು ಎಷ್ಟು ವಿಪರ್ಯಾಸ ಎಂದರೆ ಹುಟ್ಟುವಾಗ ಜಾತಿ ನಿರ್ಣಯವಾಗುತ್ತದೆ. ಅವನು ಪ್ರತಿವರ್ಷ ಪ್ರತಿ ಇಲಾಖೆಗೆ ಹೋಗಿ ಜಾತಿ ಸರ್ಟಿಫಿಕೇಟ್ ತರಬೇಕು. ಅಲ್ಲಿ ರೆವಿನ್ಯೂ ಇನ್ಸ್‌ಪೆಕ್ಟರ್ ಹತ್ತಿರ, ವಿಲೇಜ್ ಅಕೌಂಟೆಂಟ್ ಹತ್ತಿರ, ತಹಸೀಲ್ದಾರ್ ಹತ್ತಿರ ಹೋಗಬೇಕು, ಪ್ರತಿಸಲ ಶಾಲೆ ಓಪನ್ ಆದಾಗ ಕೂಡ ಒಂದೊಂದು ಸಲ ಕ್ಯಾಸ್ಟ್ ಸರ್ಟಿಫಿಕೇಟ್ ತೆಗೆದುಕೊಂಡು ಹೋಗಬೇಕು. ಹುಟ್ಟಿದಾಗಿನಿಂದ ಹಿಡಿದು ಸಾಯುವವರೆಗೂ ಕೂಡ ಇಂತಹ ಜಾತಿ ಎಂದು ಬರೆದುಬಿಟ್ಟರೆ ಒಂದು ಸಲ ಸರ್ಟಿಫಿಕೇಟ್

ಕೊಟ್ಟರೆ ಅಥವಾ ಐದು ವರ್ಷಕ್ಕೆ ಒಂದು ಸಲ ರಿನ್ಯೂವಲ್ ಮಾಡುವುದರ ಮೂಲಕ ಅಲ್ಲಿರುವಂತಹ ನ್ಯೂನ್ಯತೆಗಳನ್ನು ಸರಿಪಡಿಸಿಕೊಳ್ಳಬಹುದು. ಪ್ರತಿವರ್ಷ ಪ್ರತಿತಿಂಗಳು ಯಾವ್ಯಾವ ಇಲಾಖೆಗೆ ಹೋಗುತ್ತಾರೆ ಅಲ್ಲೆಲ್ಲಾ ಕ್ಯಾಸ್ಟ್ ಸರ್ಟಿಫಿಕೇಟ್ ತೆಗೆದುಕೊಂಡು ಬರಬೇಕು. ಎಸ್‌ಸಿ ಗೆ ಎಸ್‌ಸಿ ಸರ್ಟಿಫಿಕೇಟ್, ಎಸ್‌ಟಿ ಗೆ ಎಸ್‌ಟಿ ಸರ್ಟಿಫಿಕೇಟ್ ಈ ರೀತಿ ಒಂದು ಅವ್ಯವಸ್ಥೆ ನಾವು ಇವತ್ತು ಕಾಣುತ್ತಿದ್ದೇವೆ. ಅದಕ್ಕೆ ಮಾನ್ಯ ಕಂದಾಯ ಸಚಿವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ಒಂದು ಫ್ಯಾಮಿಲಿ ಕಾರ್ಡ್ ಮಾಡುವುದರ ಮುಖಾಂತರ ಅದು ಓಟ್‌ನಿಂದ ಹಿಡಿದು ಯಾವುದೇ ಇಲಾಖೆಯಲ್ಲಿ ಕೆಲಸಕಾರ್ಯಗಳನ್ನು ಮುಗಿಸಿಕೊಳ್ಳಬೇಕಾದರೆ ಆ ಫ್ಯಾಮಿಲಿ ಕಾರ್ಡ್ ಇರಬೇಕು. ಈ ವರ್ಷ ಒಂದು ವರಮಾನ ಬರುತ್ತದೆ. ಮುಂದಿನ ವರ್ಷ ಬೇರೆ ವರಮಾನ ಬರುತ್ತದೆ. ಐದು ವರ್ಷಗಳಿಗೆ ಒಂದು ಸಲ ರಿನ್ಯೂವಲ್ ಆಗುವ ಹಾಗೆ ಫ್ಯಾಮಿಲಿ ಕಾರ್ಡ್ ಅನ್ನೂ ಕೂಡ ಮಾಡುವಂತಹ ಒಂದು ವ್ಯವಸ್ಥೆ ನಮ್ಮ ಸರ್ಕಾರ ವಿಚಾರ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ, ಕೊನೆಯದಾಗಿ ಪರಿಸರವನ್ನು ಕಾಪಾಡುವುದಕ್ಕೆ ಹೇಳುವುದಾದರೆ ಮಳೆ ಕೊಯಿಲು ಎನ್ನುವ ವಿಚಾರ ಎಲ್ಲಾ ಕಡೆ ಪೇಪರ್‌ನಲ್ಲಿ ವಿಚಾರ ಸಂಕೀರ್ಣಗಳು ಆಗುತ್ತಿವೆ. ಇದು ಬಹಳ ಅತ್ಯವಶ್ಯಕ. ನಾವು ನಾಲ್ಕು ವರ್ಷಗಳ ಕಾಲ ಬರಗಾಲದಲ್ಲಿ ನೊಂದಿದ್ದೇವೆ, ಬೆಂದಿದ್ದೇವೆ, ಜನರು ಹಾಗೂ ರೈತರು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಈ ಬರಗಾಲ ಕೂಡ ಕಾರಣವಾಗಿದೆ. ಆ ಕಾರಣ ವಿದ್ಯುತ್ ಸರಿಯಾಗಿ ಬರಬೇಕಾದರೆ ಮಳೆಯಾಗಬೇಕು, ಬೆಳೆಯಾಗಬೇಕು, ಆದುದರಿಂದ ಮಳೆ ಕೊಯಿಲು ಎನ್ನುವಂತಹ ಕಾರ್ಯಕ್ರಮ ತಮಿಳುನಾಡು, ಆಂಧ್ರ ಮತ್ತು ಮಹಾರಾಷ್ಟ್ರದಲ್ಲಿ ಯಾರೇ ಒಬ್ಬ ಹೊಸದಾಗಿ ಕಟ್ಟಡವನ್ನು ನಿರ್ಮಾಣ ಮಾಡಬೇಕಾದರೆ ಆ ಮಳೆ ನೀರನ್ನು ಶೇಖರಣೆ ಮಾಡತಕ್ಕಂಥ ಅದನ್ನು ತೊಟ್ಟಿಯಲ್ಲಿ ಶೇಖರಿಸುವುದಕ್ಕೆ ನಿರ್ಮಾಣ ಮಾಡಬೇಕು. ಆ ನೀರನ್ನು ಅವನು ಉಪಯೋಗಿಸಿಕೊಂಡು ಉಳಿದಿದ್ದನ್ನು ಬೇರೆಯವರಿಗೆ ಕೊಡಬೇಕೆನ್ನುವ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡುತ್ತಿದ್ದಾರೆ. ಅದೇ ರೀತಿ ಕರ್ನಾಟಕದಲ್ಲಿ ಕೂಡ ಮಳೆ ಕೊಯಿಲು ಎನ್ನುವ ಒಂದು ಯೋಜನೆಯನ್ನು ಅನುಷ್ಠಾನಕ್ಕೆ ತರುವುದರ ಮೂಲಕ ಸತತವಾಗಿ ಏನು ಬರಗಾಲ ನಮ್ಮ ರಾಜ್ಯ ಈಡಾಗುತ್ತಿದೆ ಅದನ್ನು ತಪ್ಪಿಸುವುದಕ್ಕೆ ಈ ಕಾರ್ಯಕ್ರಮವನ್ನು ಆ ಯೋಜನೆಯಲ್ಲಿ ತರಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ, ಕೊನೆಯದಾಗಿ ಪರಿಸರ ರಕ್ಷಣೆ. ನಮ್ಮಲ್ಲಿ ಪರಿಸರ ಜ್ಞಾನಾನೇ ಇಲ್ಲ.ಅದನ್ನು ಪಠ್ಯ ಪುಸ್ತಕಗಳಲ್ಲಿ ಸೇರಿಸಬೇಕು. ಅದನ್ನು ಪ್ರೈಮರಿ, ಮಿಡ್ಲ್‌ಸ್ಕೂಲ್‌ಗಳಲ್ಲಿ ಹಾಗೂ ಹೈಸ್ಕೂಲ್‌ಗಳಲ್ಲಿ ಇರುವಂತಹ ಮಕ್ಕಳಲ್ಲಿ ಪರಿಸರದ ಪ್ರಜ್ಞೆ ಮೂಡಿಸಬೇಕು. ನಾನು ಮಾಸ್ಕೋಗೆ ಹೋಗಿದ್ದೆ. ಅಲ್ಲಿ ಒಂದು ಬಾಳೆ ಹಣ್ಣು ಅಥವಾ ಸೀಗರೇಟ್ ಬಿಸಾಕಿದರೆ 500 ರೂಬೆನ್ಸ್ ಎಂದರೆ ಇಲ್ಲಿ ಅದು 250 ರೂಪಾಯಿಗಳಿಗಿಂತ ಜಾಸ್ತಿ. ಒಂದು ಬಾಳೆಹಣ್ಣು ಸಿಪ್ಪೆ ಹೊರಗಡೆ ಹಾಕಿದರೆ, ಮೂತ್ರ ಮಾಡಿದರೆ, ಅಲ್ಲಿ ಜಾಸ್ತಿ ಪನಿಶ್‌ಮೆಂಟ್ ಮಾಡಬೇಕೆನ್ನುವ ಉದ್ದೇಶ ಅಲ್ಲ, ಅದು ಅವನು ಅಲ್ಲಿ ತಪ್ಪು

ಮಾಡದೇ ಇರಲಿ ಎಂದು ಹಾಗೂ ಜ್ಞಾನ ಉಂಟಾಗಲಿ ಎಂದು ಇದರಿಂದ 50 ಪರ್ಸೆಂಟ್ ಆರೋಗ್ಯ ಉಂಟು ಮಾಡಬೇಕೆನ್ನುವ ದೃಷ್ಟಿಯಿಂದ ಆ ಪರಿಸರ ಜ್ಞಾನವನ್ನು ಪ್ರತಿಯೊಬ್ಬ ವಿದ್ಯಾರ್ಥಿ ಚಿಕ್ಕಂದಿನಿಂದ ಹಿಡಿದು ದೊಡ್ಡವರವರೆಗೂ ತರತಕ್ಕಂಥ ಒಂದು ಕಾರ್ಯಕ್ರಮ ಇದೆ. ಇದನ್ನು ನಮ್ಮ ಕರ್ನಾಟಕ ರಾಜ್ಯದಲ್ಲಿ ತಂದು ಮುಂದಿನ ದಿನಗಳಲ್ಲಿ ಪರಿಸರವನ್ನು ಕಾಪಾಡುವಂತಹ ಪ್ರಜ್ಞೆಯನ್ನು ಈಗಿನಿಂದಲೇ ನಾವು ಎಚ್ಚರಿಕೆಯನ್ನು ವಹಿಸಿಕೊಂಡು ಮಾಡಬೇಕೆನ್ನುವ ಸಲಹೆಯನ್ನು ಕೊಡುತ್ತಾ, ಇವತ್ತು ವಿರೋಧ ಪಕ್ಷದ ಏನಾದರೂ ಹೇಳಲಿ, ಆದರೂ ಕೂಡ ಇಲ್ಲಿ ಇರತಕ್ಕಂಥ ಈ ಬಜೆಟ್ ಅನ್ನು ಸಂತೋಷದಿಂದ ಒಪ್ಪಿಗೆ ಕೊಡುವುದರ ಮೂಲಕ 2004-05 ರ ಬಜೆಟ್ ಅನ್ನು ಸ್ವಾಗತಿಸಿ ಒಪ್ಪಿಗೆಯನ್ನು ಕೊಡಬೇಕೆಂದು ಹೇಳುತ್ತಾ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

4.20 ಪಿಎಂ

†ಶ್ರೀ ಶಿವಾನಂದನಾಯಕ್ (ಭಟ್ಕಳ) : ಮಾನ್ಯ ಅಧ್ಯಕ್ಷರೇ, ನಾನು ಈ ರಾಜ್ಯದ ಉಳಿದ ವಿಷಯಗಳನ್ನು ಹೇಳದೇ, ನಾನು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ, ನಮ್ಮ ಜಿಲ್ಲೆಗೆ ಸಂಬಂಧಪಟ್ಟಂತಹ ಕೆಲವು ವಿಷಯಗಳನ್ನು, ಇಲ್ಲಿ ಪ್ರಸ್ತಾಪ ಮಾಡಲು ಪ್ರಯತ್ನ ಮಾಡುತ್ತೇನೆ. ನಮ್ಮ ಜಿಲ್ಲೆ ಈ ರಾಜ್ಯಕ್ಕೆ ಅತೀ ಹೆಚ್ಚಿನ ಕೊಡುಗೆಯನ್ನು ಕೊಡುವಂತಹ ಜಿಲ್ಲೆಯಾಗಿದೆ. ನಮ್ಮ ಜಿಲ್ಲೆ ರಾಜ್ಯದಲ್ಲಿ ಅತೀ ಹೆಚ್ಚಿನ ವಿದ್ಯುತ್ ಅನ್ನು ಉತ್ಪಾದನೆಯನ್ನು ಮಾಡಿ ಒದಗಿಸುತ್ತೇವೆ. ಆದರೂ ನಮ್ಮ ಕತೆ ಏನಾಗಿದೆಯೆಂದರೆ, "ದೀಪದ ಅಡಿಯಲ್ಲಿ ಕತ್ತಲೆ ಇರುವ ಹಾಗೆ" ನಮ್ಮ ಜಿಲ್ಲೆಗೆ ಯಾವುದೇ ರೀತಿಯಲ್ಲಿ ಅನುಕೂಲವಾಗುವಂತಹ ಕೈಗಾರಿಕೆಯ ಯೋಜನೆಯಾಗಲಿ, ನೀರಾವರಿ ಯೋಜನೆಯಾಗಲೀ ಯಾವುದೂ ಇಲ್ಲ. ನಮ್ಮ ಜಿಲ್ಲೆಯಿಂದ ಈಗಾಗಲೇ ಸಾಕಷ್ಟು ವಿದ್ಯುತ್ ಉತ್ಪಾದನೆ ಮಾಡಿ ಕೊಡುತ್ತಿದ್ದೇವೆ. ಅವು ಶರಾವತಿ, ಕಾಳಿ, ಅಘನಾಶಿನಿ, ಅಷ್ಟ ಶನಿ, ಗಂಗಾವಳಿ, ವರದಾ, ಇಷ್ಟೆಲ್ಲಾ ನದಿಗಳನ್ನು ನಮ್ಮ ಜಿಲ್ಲೆಯಲ್ಲಿದೆ. ಇದರಿಂದ ವಿದ್ಯುತ್‌ಗೆ ಬೇಕಾದಷ್ಟು ನೀರನ್ನು ಮಾತ್ರ ಬಳಸುತ್ತಿದ್ದೇವೆ. ಇನ್ನು ಉಳಿದಂತಹ ನೀರು ಸಮುದ್ರದ ಪಾಲಾಗುತ್ತದೆ, ಇವತ್ತು ನಮ್ಮ ಪಕ್ಕದಲ್ಲಿರುವಂತಹ ಭೂಮಿ ಒಣಭೂಮಿಯಾಗಿದೆ. ಅಲ್ಲಿರುವಂತಹ ರೈತರು ಸಣ್ಣ ರೈತರು ಅವರಿಗೆ 10 ಗುಂಟೆಯೋ, ಅರ್ಧ ಎಕರೆಯೋ, ಒಂದು ಎಕರೆಯೋ ಇರುತ್ತದೆ, ಇಲ್ಲಿ ದೊಡ್ಡ ರೈತರೆಂದರೆ ಅವರಿಗೆ 5 ಎಕರೆಗಳಿರುವಂಥವರು. ಈ ರೀತಿಯಲ್ಲಿ ಸಣ್ಣ ಪ್ರಮಾಣದಲ್ಲಿ ಭೂಮಿ ಇರುವಂತಹ ರೈತರಿಗೆ, ಅಲ್ಲಿ ನೀರಾವರಿ ಮಾಡಲಿಕ್ಕೆ, ಅವನೇ ಪಂಪ್‌ಗಳನ್ನು ಅಳವಡಿಸಿಕೊಂಡು ನೀರಾವರಿ ಮಾಡುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ ಅವರಿಗೆ ಸರ್ಕಾರದ ವತಿಯಿಂದ ಒಂದು ನೀರಾವರಿ ಯೋಜನೆಯನ್ನು ಮಾಡಬೇಕಾಗಿತ್ತು. ಆದರೆ ಕಳೆದ 56 ವರ್ಷಗಳಿಂದಲೂ ಯಾವುದೇ ಸರ್ಕಾರ, ಮಾಡಲಿಲ್ಲ, ಇವತ್ತು ನಮ್ಮಲ್ಲಿ ಸಾಕಷ್ಟು ನದಿಯಲ್ಲಿ ನೀರು ಇದ್ದರೂ ಸಹಿತ, ಸರ್ಕಾರಕ್ಕೆ ಆದಾಯ ಬರುವಷ್ಟನ್ನು ಮಾತ್ರ ಉಪಯೋಗಿಸಿಕೊಂಡು

ಉಳಿದ ನೀರು ಸಮುದ್ರಕ್ಕೆ ಹೋಗುತ್ತಿದೆ. ಇದರಿಂದ ಮುಂದಿನ ದಿವಸಗಳಲ್ಲಾದರೂ ಸಹ ನಮ್ಮ ಜಿಲ್ಲೆಯ ಬಗ್ಗೆ, ಮತ್ತು ನಮ್ಮ ಜಿಲ್ಲೆಯ ಜನರ ತ್ಯಾಗದ ಬಗ್ಗೆ, ಸರ್ಕಾರ ಗಣನೆಗೆ ತೆಗೆದುಕೊಂಡು, ಏತ ನೀರಾವರಿಗೆ ಹೆಚ್ಚು ಒತ್ತನ್ನು ಕೊಟ್ಟರೆ ನಮ್ಮ ಜಿಲ್ಲೆಯೂ ಸಹಿತ ಅಭಿವೃದ್ಧಿಯಾಗಲು ಸಾಧ್ಯವಾಗುತ್ತದೆ. ನಮ್ಮ ಜಿಲ್ಲೆಯವರು ಮಾಡುವಂತಹ ತ್ಯಾಗವನ್ನು ಯಾರು ಗಣನೆಗೆ ತೆಗೆದುಕೊಳ್ಳುತ್ತಿಲ್ಲ. ಇದರ ಬಗ್ಗೆ ನಾವು ಕೃಷ್ಣಾ, ಕಾವೇರಿಯ ಭಾಗದವರು ತ್ಯಾಗ ಮಾಡಿದ್ದಾರೆಂದು ನಾವು ಹೇಳುತ್ತೇವೆ, ಆದರೆ ಉತ್ತರ ಕರ್ನಾಟಕದ ಜನರ ತ್ಯಾಗದ ಬಗ್ಗೆ ಎಲ್ಲೂ ಯಾವತ್ತೂ ಚರ್ಚೆಯಾಗುತ್ತಿಲ್ಲ. ಉತ್ತರ ಕರ್ನಾಟಕದ ಬಗ್ಗೆ ಸಮಗ್ರವಾಗಿ ಚಿಂತನೆ ಮಾಡಿ, ಅಭಿವೃದ್ಧಿ ದೃಷ್ಟಿಯಿಂದ ಕೆಲಸವನ್ನು ಮಾಡಿಲ್ಲ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಉದಾಹರಣೆಯಾಗಿ ಮೀನುಗಾರಿಕೆ ಇಲಾಖೆ, ಇಲ್ಲಿ ದಕ್ಷಿಣ ಕನ್ನಡದ ಪಕ್ಕದಲ್ಲೇ, ಉತ್ತರ ಕರ್ನಾಟಕವೂ ಇದೆ, ಈ ಎರಡು ಜಿಲ್ಲೆಗಳನ್ನು ತುಲನೆ ಮಾಡಿದಾಗ, ನಾವು ಅವರಿಗಿಂತಲೂ ನೂರಕ್ಕೆ, ಎಪ್ಪತ್ತರಷ್ಟು ಹಿಂದೆ ಇದ್ದೇವೆ. ಅವುಗಳು ಬಂದರಿಗೆ ಸಂಬಂಧಪಟ್ಟಿರಬಹುದು, ಮತ್ತೆ ಮೀನುಗಾರಿಕೆಗೆ ಸಂಬಂಧಪಟ್ಟಂತಹ ಯಾವುದೇ ವಿಷಯವಾಗಿರಬಹುದು. ಇವತ್ತು ಸರ್ವಋತು ಬಂದರು ನಮ್ಮ ಜಿಲ್ಲೆಗೆ ಯಾವುದೂ ಇಲ್ಲ. ದಕ್ಷಿಣ ಕನ್ನಡದಲ್ಲಿ ಎಲ್ಲಾ ರೀತಿಯ ಸರ್ವ ಋತು ಬಂದರು ಇದೆ. ಇದು ನಮ್ಮ ಜಿಲ್ಲೆಯ ಜನರ ದುರ್ದೈವವಿರಬಹುದು. ನಾವು ಹಿಂದಿನಿಂದಲು ನೋಡುತ್ತಾ, ಬಂದಿದ್ದೇವೆ, ಯಾವಾಗಲೂ ಮೀನುಗಾರಿಕೆಯ ಮಂತ್ರಿಗಳು ದಕ್ಷಿಣ ಕನ್ನಡದವರು ಆಗುತ್ತಾರೆ. ಅವರ ಜಿಲ್ಲೆಗೆ ಬೇಕಾದಂಥ ಕೆಲಸ ಆಗುತ್ತದೆ, ನಮಗೆ ಅವರ ಮೇಲೆ ಹೊಟ್ಟೆಕಿಚ್ಚು ಇಲ್ಲ. ಆದರೆ ನಮ್ಮ ಜಿಲ್ಲೆಗೆ ಅದು ಸಿಗಲಿಲ್ಲವೆಂಬ ಕೊರತೆ ಇದೆ. ಆದರೆ ನಮ್ಮ ಜಿಲ್ಲೆಯಲ್ಲಿ ಮೀನುಗಾರರಿಗೆ ಒಂದು ಸರಿಯಾದಂತಹ ರೀತಿಯಲ್ಲಿ ಬಂದರು ನಿರ್ಮಾಣವಾಗಲಿಲ್ಲ. ಇವತ್ತು ಮೀನುಗಾರರ ಪರಿಸ್ಥಿತಿ ಎಲ್ಲಿಗೆ ಬಂದು ಮುಟ್ಟಿದೆಯೆಂದರೆ, ಕಳೆದ 5 ವರ್ಷಗಳಿಂದ, ಮೀನಿನ ಬರವಿದ್ದೇ ಆದರೆ ಇವರಿಗಾಗಿ ಯಾವುದೇ ರೀತಿಯ ಸಹಾಯವಾಗುವುದನ್ನು ಬಜೆಟ್‌ನಲ್ಲಿ ತೋರಿಸಿಲ್ಲ. ಶೇಕಡಾ 5ರಷ್ಟು ಮಾತ್ರ ಡೀಸೆಲ್‌ಗೆ ಸಬ್ಸಿಡಿ ಕೊಡುತ್ತೇವೆಂಬುದನ್ನು ಮಾತ್ರ ತೋರಿಸಿದ್ದೀರಿ, ಅವರು ಬರೀ ಡೀಸೆಲ್‌ನಿಂದ, ಬೋಟ್ ಅಥವಾ ದೋಣಿಯನ್ನು ಓಡಾಡಿಸುವುದಿಲ್ಲ, ದೋಣಿಗೆ ಸಾಮಾನ್ಯವಾಗಿ ಚಿಮಣಿ ಎಣ್ಣೆಯನ್ನು ಅಥವಾ ವೈಟ್ ಕೆರೊಸಿನ್ ಅನ್ನು ಉಪಯೋಗಿಸಿಕೊಂಡು, ದೋಣಿಯನ್ನು ಓಡಿಸುತ್ತಾರೆ. ಅವರಿಗೆ ಇದಕ್ಕೆ ಸಬ್ಸಿಡಿಯನ್ನು ಕೊಟ್ಟರೆ, ಹೆಚ್ಚಿನ ಅನುಕೂಲವಾಗಬಹುದು. ಇವತ್ತು ಮೀನುಗಾರರು ಮೀನು ಹಿಡಿಯಲು ಹೋಗಿ, ಅವರು ಅಪಘಾತಕ್ಕೆ ಈಡಾಗಿ ಅವರು ಪ್ರಾಣವನ್ನು ಕಳೆದುಕೊಳ್ಳುವಂತಹ ಸ್ಥಿತಿ ಇದೆ, ಅವರು ಆಳ ಸಮುದ್ರದಲ್ಲಿ ಮೀನುಗಳನ್ನು ಹಿಡಿಯಲು ಹೋಗಿ ಅವರು ಪ್ರಾಣವನ್ನು ಕಳೆದುಕೊಂಡಾಗ, ಅವರ ಶವವೂ ಸಿಗುವುದಿಲ್ಲ. ಇದಕ್ಕೆ ಸರ್ಕಾರದಿಂದ ಒಂದು ಕಾನೂನು ಇದೆ," ಮೀನುಗಾರರ ಸಂಕಷ್ಟ ಪರಿಹಾರ ನಿಧಿಯನ್ನು ಕೊಡುವಂಥಾದ್ದನ್ನು ಮಾಡಿದ್ದರೂ, ಸಹಿತ ಅವರ ಶವ ಸಿಗುವವರೆಗೂ ಇದನ್ನು

ಕೊಡುವುದಿಲ್ಲ. ಇವರು 8 ವರ್ಷಗಳು ಕಾಯಬೇಕಾಗುತ್ತದೆ. ಈ 8 ವರ್ಷಗಳಲ್ಲಿ ಆ ಬಡ ಮೀನುಗಾರರ ಕುಟುಂಬ ಬೀದಿ ಪಾಲಾಗುವ ಪರಿಸ್ಥಿತಿ ಉಂಟಾಗುತ್ತದೆ. ಆದುದರಿಂದ ಅಲ್ಲಿ ಸೊಸೈಟಿಯಲ್ಲಿ ಮೆಂಬರ್ ಆಗಿದ್ದು, ಅವರು ಈ ರೀತಿಯಾಗಿ ಅಪಘಾತಕ್ಕೆ ಈಡಾಗಿದ್ದಾರೆ, ಮೃತ ಪಟ್ಟಿದ್ದಾರೆಂದರೆ ಅವರಿಗೆ ಪರಿಹಾರವನ್ನು ಕೊಡುವಂತಹ ವ್ಯವಸ್ಥೆಯನ್ನು, ಮುಂದಿನ ದಿವಸಗಳಲ್ಲಿ ಸರ್ಕಾರ ಮಾಡಬೇಕೆಂದು, ನಾನು ಮನವಿ ಮಾಡಿಕೊಳ್ಳುತ್ತೇನೆ. ಇನ್ನು ಕರಾವಳಿ ಕಣಿವೆಯಲ್ಲಿ ಇವತ್ತು ಅತಿವೃಷ್ಟಿಯಿಂದ, ಸಮುದ್ರದ ಕೊರೆತದಿಂದ ಇವತ್ತು ಸುಮಾರು ಹಾನಿಯಾಗಿದೆ, ರೈತರ ಬೆಳೆ ಹಾನಿಯಾಗಿದೆ, ತೋಟಗಳು ಹಾನಿಯಾಗಿದೆ, ಇದರ ಬಗ್ಗೆ ಪತ್ರಿಕೆಗಳಲ್ಲೂ ಬಂದಿದೆ, ಇವತ್ತು ಸಾಕಷ್ಟು ಈ ವಿಚಾರವಾಗಿ ಮಾನ್ಯ ಮಂತ್ರಿಯವರ ಗಮನಕ್ಕೂ ತಂದಿದ್ದೇವೆ, ಪತ್ರವನ್ನು ಕೊಟ್ಟಿದ್ದೇವೆ, ಆದರೂ ಇವತ್ತೂ ಬಜೆಟನ್ನು ಮಂಡಿಸಿರುವಂತಹ ಸಚಿವರು, ಹಿಂದಿನ ವರ್ಷದಲ್ಲಿ ಕೊಟ್ಟಿರುವಂತಹ 9 ಕೋಟಿ ರೂಪಾಯಿಗಳ ಅನುದಾನವನ್ನು ವಾಪಸ್ಸು ತೆಗೆದುಕೊಂಡಿದ್ದಾರೆ. ಅಂದರೆ ಅತಿವೃಷ್ಟಿಯಾದಂತಹ ಸಂದರ್ಭಗಳಲ್ಲಿ ಎಮರ್ಜೆನ್ಸಿಯಾಗಿ ಇಟ್ಟಿರುವಂತಹದ್ದು, ಇದನ್ನು ವಾಪಸ್ಸು ತೆಗೆದುಕೊಂಡಿದ್ದಾರೆ, ಆದುದರಿಂದ ದಯಮಾಡಿ ಈ ಹಣವನ್ನು ಒದಗಿಸಿಕೊಡಬೇಕು. ಇನ್ನು ಸಮುದ್ರದ ಕೊರೆತವನ್ನು ತಡೆಯುವಂತಹ ಕೆಲಸವನ್ನು ಇವತ್ತು ಕೈಗೆತ್ತಿಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ನಾನು ಮೊದಲೇ ಪ್ರಸ್ತಾಪ ಮಾಡಿದ ಹಾಗೆ ನಮ್ಮಲ್ಲಿರುವಂತಹ ಭಟ್ಕಳ, ಹೊನ್ನಾವರ. ಮತ್ತು ಕಾರವಾರ, ಈ ಎಲ್ಲಾ ಬಂದರುಗಳಲ್ಲಿ ಹೂಳು, ತುಂಬಿ ಬೋಟುಗಳು ದಡಕ್ಕೆ ಬರಬೇಕೆಂದರೆ, ನೀರಿನ ಏರಿಳಿತವನ್ನು ನೋಡಿಕೊಂಡು ಬರಬೇಕಾಗುತ್ತದೆ. ಇದು ಏರಿದಂತಹ ಸಂದರ್ಭದಲ್ಲಿ ಮಾತ್ರ ಬರುವುದಕ್ಕೆ ಆಗುತ್ತದೆ, ಇಳಿದಂತಹ ಸಂದರ್ಭದಲ್ಲಿ ಬರುವುದಕ್ಕೆ ಆಗುವುದಿಲ್ಲ. ಆದುದರಿಂದ ದಯಮಾಡಿ ಈ ಹೂಳನ್ನು ಎತ್ತುವಂತಹ ಕೆಲಸವನ್ನು ಮುಂದಿನ ದಿವಸಗಳಲ್ಲಿ ಕೈಗೆತ್ತಿಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಮನವಿ ಮಾಡುತ್ತಿದ್ದೇನೆ, ಇನ್ನು ರಾಜ್ಯದಲ್ಲಿ ಕಳೆದ ನಾಲ್ಕು ವರ್ಷಗಳಿಂದ ಬರವಿದೆ, ಇದಕ್ಕಾಗಿ ಬೇರೆ ಎಲ್ಲಾ ತಾಲ್ಲೂಕಿಗೆ ಸಾಕಷ್ಟು ಯೋಜನೆಗಳನ್ನು ಇವತ್ತು ಕೇಂದ್ರಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಕೊಟ್ಟಿದೆ. ಆದರೆ ಇಲ್ಲಿ ನಮ್ಮ ದುರ್ದೈವವೆಂದು ಹೇಳಬಹುದು, ಕಳೆದ ನಾಲ್ಕು ವರ್ಷಗಳಿಂದ ಅತಿವೃಷ್ಟಿಯಿಂದ ನಾವು ಬಳಲುತ್ತಿದ್ದೇವೆ. ನಮಗೆ ಬರಕ್ಕಾಗಿ ಯಾವುದೇ ಯೋಜನೆ ಇಲ್ಲ. ನಮ್ಮಲ್ಲಿ ಆಗಿರುವಂತಹ ಅತಿವೃಷ್ಟಿಯಿಂದ ಆಗಿರುವಂತಹ ಹಾನಿಗೆ ಯಾವುದೇ ರೀತಿಯಾದಂತಹ ಪರಿಹಾರವಿಲ್ಲ. ನಮ್ಮಲ್ಲಿರುವಂತಹ ರಸ್ತೆಗಳೆಲ್ಲಾ ಇವತ್ತು ಗುಂಡಿ ಬಿದ್ದು ಹಾಳಾಗಿದೆ. ತಾವು ಬಜೆಟ್ ಬಗ್ಗೆ ಸಮರ್ಥನೆಯನ್ನು ಮಾಡಿಕೊಳ್ಳುತ್ತಿದ್ದೀರಿ, ನೀವು ಇವತ್ತು ಏನು ಕೊಟ್ಟಿದ್ದೀರಿ, ಇವತ್ತು ಹಳ್ಳಿಯ ರಸ್ತೆಗಳಲ್ಲಿ ಬಸ್ಸುಗಳು ಹೋಗುತ್ತಿಲ್ಲ. ಇದಕ್ಕೆ ಕಾರಣ ರಸ್ತೆಗಳಲ್ಲಿ ಗುಂಡಿ ಬಿದ್ದಿದೆ. ಆ ಗುಂಪುಗಳನ್ನು ಮುಚ್ಚುವುದಕ್ಕೆ ಅಲ್ಲಿನ ಜಿಲ್ಲಾ ಪಂಚಾಯತ್, ಪಿ.ಡಬ್ಲ್ಯೂ.ಡಿ. ಇಲಾಖೆಗೆ ಯಾವುದೇ ರೀತಿಯಾದ ಅನುದಾನವನ್ನು ನೀವು ಒದಗಿಸಿಕೊಟ್ಟಿಲ್ಲ. ಇವತ್ತು ಎಷ್ಟೋ ಹಳ್ಳಿಗಳ

ಬಸ್ಸುಗಳು ನಿಂತು ಹೋಗಿದೆ. ನಿಮಗೆ ಏನಾದರೂ ಕಳಕಳಿ ಇದ್ದರೆ, ಆ ಗುಂಡಿಗಳನ್ನು ಮುಚ್ಚುವಂತಹ ಕೆಲಸವನ್ನು ಮೊದಲು ಮಾಡಿ. ಈ ರೀತಿ ಅತಿವೃಷ್ಟಿಯಿಂದಾಗಿ ನಮ್ಮ ಮಲನಾಡು ಭಾಗದಲ್ಲಿರುವಂತಹ ನಮ್ಮ ಕರಾವಳಿ ಪ್ರದೇಶದಲ್ಲಿರುವಂತಹ ತಾಲ್ಲೂಕುಗಳು ಇವತ್ತು ಬಹಳ ಹಿಂದುಳಿದಿವೆ. ಕಳೆದ ನಾಲ್ಕು ವರ್ಷಗಳಿಂದಲೂ ಸರ್ಕಾರದಿಂಧ ಯಾವುದೇ ಯೋಜನೆಗಳು ಬಂದಿಲ್ಲ. ಇಲ್ಲಿ ನಮ್ಮದು ಬರಪೀಡಿತ ಪ್ರದೇಶವೂ ಅಲ್ಲ, ಅತಿವೃಷ್ಟಿಯೆಂದು ಯಾವುದೇ ರೀತಿಯ ಯೋಜನೆಯನ್ನು ಕೊಡುತ್ತಿಲ್ಲ. ಆದುದರಿಂದ ಮುಂದಿನ ದಿವಸಗಳಲ್ಲಿ ನಮ್ಮ ಕರಾವಳಿಯನ್ನೂ ಸಹ ಅತಿವೃಷ್ಟಿಯಿಂದ ಹಾನಿಯಾದಂತಹ ಪ್ರದೇಶವೆಂದು ಘೋಷಣೆಯನ್ನು ಮಾಡಿ ಹೆಚ್ಚಿನ ಅನುದಾನವನ್ನು ಕೊಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಅದೇ ರೀತಿಯಲ್ಲಿ ಸರ್ಕಾರದಿಂದ ಕುಡಿಯುವ ನೀರಿನ ಯೋಜನೆ, ನಮ್ಮ ಕರಾವಳಿಯಲ್ಲ ಪರಿಸ್ಥಿತಿ ಏನಾಗಿದೆಯೆಂದರೆ, ನನಗೆ ಉಳಿದ ಕಡೆಗಳಲ್ಲಿ ಹೇಗೆ ಆಗಿದೆಯೋ, ನನಗೆ ಗೊತ್ತಿಲ್ಲ. ನಮ್ಮಲ್ಲಿ ಬೇಕಾದಷ್ಟು ನದಿಗಳು ಇದ್ದರೂ ಸಹಿತ, ಪಕ್ಕದಲ್ಲಿ ಬಾವಿಯನ್ನು ತೋಡಿದರೆ, ಅಲ್ಲಿ ಉಪ್ಪು ನೀರು ಬರುತ್ತದೆ, ಇದರಿಂದ ಇಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ನಮ್ಮಲ್ಲಿ ಕುಡಿಯುವ ನೀರಿಗಾಗಿ ಸರ್ಕಾರ ವೆಚ್ಚ ಮಾಡಿದಂತಹ ಯೋಜನೆಗಳಲ್ಲಿ, ನೂರಕ್ಕೆ ಎಂಭತ್ತರಷ್ಟು ಜನರಿಗೆ ತಲುಪುವುದಿಲ್ಲ. ಇದು ಏಕೆ ಮುಟುತ್ತಿಲ್ಲವೆಂದರೆ, ಇಲ್ಲಿ ಸರ್ಕಾರದ ಸೂಚನೆಯಿದ್ದರೂ ಸಹಿತ, ಮೊದಲೇ ನೀರಿನ ಸೋರ್ಸ್ ಎಲ್ಲಿದೆಯೆಂಬುದನ್ನು ನೋಡಬೇಕು. ಅನಂತರ ಆ ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕು. ಸರ್ಕಾರದಿಂದ ಮಂಜೂರಾತಿಯಾದೆಯೆಂದರೆ ಸಾಕು, ಬೋರ್‌ವೆಲ್ ಹೊಡೆಯುತ್ತಾರೆ, ಪೈಪ್ ಜೋಡಿಸುತ್ತಾರೆ, ಟ್ಯಾಂಕ್ ಕಟ್ಟುತ್ತಾರೆ. ಯಾರೋ ಒಬ್ಬ ಮಂತ್ರಿಯವರನ್ನು ಕರೆಸಿ ಉದ್ಘಾಟನೆಯನ್ನು ಮಾಡಿಸುತ್ತಾರೆ. ಆದರೆ ಅಲ್ಲಿ ನೀರಿನ ಸೋರ್ಸ್ ಇರುವುದಿಲ್ಲ. ಈ ರೀತಿಯಾಗಿ 100ಕ್ಕೆ 80ರಷ್ಟು ಯೋಜನೆ ವೈಫಲ್ಯವಾಗಿದೆ. ಆದುದರಿಂದ ಮುಂದಿನ ದಿವಸಗಳಲ್ಲಿ ಸರ್ಕಾರ ಇದಕ್ಕೆ ಸರಿಯಾದಂತಹ ಮಾರ್ಗದರ್ಶನವನ್ನು ಮಾಡಿ, ನೀರಿನ ಸೋರ್ಸ್ ಇದ್ದರೆ ಮಾತ್ರ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕೆಂದು ಸರ್ಕಾರ ಸೂಚನೆಯನ್ನು ಕೊಡಬೇಕು. ಇನ್ನು ನಮ್ಮ ಕರಾವಳಿ ಭಾಗದಲ್ಲಿ ಮೀನುಗಾರರ ಸಮಸ್ಯೆ, ಅದೇ ರೀತಿಯಲ್ಲಿ ವಿದ್ಯುತ್ತನ್ನು ಬೇಕಾದಷ್ಟು ನಮ್ಮ ರಾಜ್ಯಕ್ಕೆ ಕೊಟ್ಟರೂ ಸಹ, ನಮಗೆ ಸರಿಯಾದಂತಹ ರೀತಿಯ ಸೌಲಭ್ಯಗಳಿಲ್ಲ. ನೀವು ಇವತ್ತು ಹಾಮ್ಲೆಟ್ ಹೇಳುವಂತಹ ಸ್ಕೀಮ್ ಹಿಂದೆ ಸರ್ಕಾರದಲ್ಲಿತ್ತು. ಈಗ ಅದನ್ನು ರದ್ದುಗೊಳಿಸಿದ್ದೀರಿ, ಇದರಿಂದ ನನ್ನ ತಾಲ್ಲೂಕಿನಲ್ಲಿ ನನ್ನ ಕ್ಷೇತ್ರದಲ್ಲಿ 85 ಮಜರೆ ತನಕವೂ ವಿದ್ಯುತ್ ಹೋಗಲಿಲ್ಲ. ರಾಜ್ಯದಲ್ಲೂ ಈ ರೀತಿ ಎಷ್ಟೋ ಇರಬಹುದು, ಆದುದರಿಂದ ಮುಂದಿನ ದಿವಸಗಳಲ್ಲಿ, ಕೈಗೆತ್ತಿಕೊಳ್ಳಬೇಕೆಂದು ಹೇಳುತ್ತೇನೆ, ಇನ್ನೂ ನಾನು ಹೆಚ್ಚಿನ ವಿಷಯಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಇಲ್ಲಿ ನಮ್ಮ ಹಿರಿಯರು ಇದ್ದಾರೆ, ನಮಗೆ ಕೊಟ್ಟಿರುವಂತಹ ಸಮಯದಲ್ಲಿ ಎಲ್ಲವನ್ನೂ ಹೇಳುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ತಮಗೆ ವಂದಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀಮತಿ ಜೆ. ಸುನೀತಾ ವೀರಪ್ಪಗೌಡ (ಬನ್ನೂರು) : ಮಾನ್ಯ ಅಧ್ಯಕ್ಷರೇ, 2004-05ನೇ ಸಾಲಿನ ಈ ಬಜೆಟ್ಟಿನಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಇಟ್ಟಿದ್ದಾರೆ. ನಿಜವಾಗಲೂ ಇದು ದುರದೃಷ್ಟಕರ ಎಂದು ನಾನಾದರೂ ಭಾವಿಸುತ್ತೇನೆ. ಈಗ ರಾಜ್ಯದಲ್ಲಿ ಎಲ್ಲಾ ಮಹಿಳೆಯರನ್ನೂ ಎಚ್ಚರಗೊಳಿಸಿದ್ದೇವೆ, ಎಲ್ಲಾ ಮಹಿಳೆಯರೂ ನಾಲ್ಕು ಗೋಡೆಗಳಿಂದೀಚೆಗೆ ಬರಬೇಕು, ಅವರೂ ಕೂಡ ಈ ಸಮಾಜದಲ್ಲಿ ಸರಿಸಮಾನರಾಗಿ ಬಾಳಬೇಕು, ಎಲ್ಲಾ ವಿಷಯಗಳನ್ನು ಅವರು ತಿಳಿದುಕೊಳ್ಳಬೇಕು ಎಂದೆಲ್ಲಾ ನಾವು ಹೇಳಿದ್ದು, ಅದರಂತೆ ಅವರು ಈಚೆಗೆ ಬಂದಿದ್ದಾರೆ. ಅವರು ಹೀಗೆ ಬರಬೇಕಾದರೆ, ಅವರಿಗೆ ನಾವು, ನಿಮಗೆ ಸಾಲ ಕೊಡಿಸುತ್ತೇವೆ. ಗ್ಯಾಸ್ ಫ್ರೀ ಕೊಡುತ್ತೇವೆ, ಫ್ರೀಯಾಗಿ ಸೀರೆಗಳನ್ನು ಕೊಡಿಸುತ್ತೇವೆ, ಮಹಿಳಾ ಬ್ಯಾಂಕ್‌ಗಳನ್ನು ತೆಗೆಯುತ್ತೇವೆ ಎಂದು ಹೇಳಿದ್ದೇವೆ. ಆದರೆ ಈ ಬಜೆಟ್‌ನಲ್ಲಿ ಏನೂ ಇಲ್ಲ. ಇದರಿಂದ, ಮಹಿಳೆಯರಿಗೆ ನಿಜವಾಗಿಯೂ ತುಂಬಾ ಅನ್ಯಾಯವಾಗಿದೆ. ದಯಮಾಡಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಇನ್ನೂ ಹೆಚ್ಚು ಹಣವನ್ನು ಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತು ಎಂ.ಎಲ್.ಎ ನಿಧಿ ಏನಿದೆ, ಅದನ್ನು ಖಂಡಿತ ಕೊಡಬೇಕು. ಅದಿಲ್ಲದಿದ್ದರೆ ನಾವು ಇನ್ಯಾವುದರಲ್ಲಿ ಕೆಲಸ ಮಾಡುವುದು? ಎಂ.ಎಲ್.ಎ ನಿಧಿ ಇಲ್ಲದಿದ್ದರೆ ನಾವು ಇನ್ಯಾವುದರಲ್ಲಿ ಕೆಲಸ ಮಾಡುವುದು ? ಎಂ.ಎಲ್.ಎ ನಿಧಿ ಇಲ್ಲದಿದ್ದರೆ ಕೆಲಸ ಮಾಡುವುದು ಕಷ್ಟವಾಗುವಾಗುತ್ತದೆ. ಈ ಸದನದಲ್ಲಿ ನಾವು ಒಟ್ಟು ಆರು ಜನ ಮಹಿಳೆಯರಿದ್ದೇವೆ, ಮಹಿಳೆಯರಿಗಾದರೂ ಆ ನಿಧಿಯನ್ನು ಕೊಡಿ. ಏಕೆಂದರೆ, ನಾವು ಗೆದ್ದು ಬಂದಿರುವುದು ಜನರಲ್ ಕೋಟಾದಲ್ಲಿ ಮಹಿಳಾ ಮೀಸಲಾತಿಯಲ್ಲಿ ಗೆದ್ದು ಬಂದಿಲ್ಲ. ಆದ್ದರಿಂದ, ಮಹಿಳೆಯರಿಗೆ ಕೊಡಬೇಕು ಎಂದು ಹೇಳುತ್ತೇನೆ ಇಷ್ಟು ಮಾತನಾಡಲು ಅವಕಾಶ ಮಾಡಿ ಕೊಟ್ಟ ಸನ್ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಡಿ.ಆರ್. ಪಾಟೀಲ್ (ಗದಗ) : ಸನ್ಮಾನ್ಯ ಅಧ್ಯಕ್ಷರೇ, ಗ್ರಾಮೀಣ ಭಾಗದ ಜನರು ಬಹಳಷ್ಟು ಸಂತೋಷ ಪಡುವಂಥ ಒಂದು ಆಯವ್ಯಯವನ್ನು ಮಂಡಿಸಿದ್ದಕ್ಕಾಗಿ ಸಿದ್ಧರಾಮಯ್ಯನವರಿಗೆ ಮತ್ತು ಮಾನ್ಯ ಧರ್ಮಸಿಂಗ್‌ರವರ ಸರ್ಕಾರಕ್ಕೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇತ್ತೀಚೆಗೆ ನಡೆದ ಚುನಾವಣೆಯೇ ಆ ರೀತಿಯ ಎಚ್ಚರಿಕೆಯನ್ನು ನಮ್ಮ ರಾಜಕೀಯ ನಾಯಕರಿಗೆ ಕೊಟ್ಟಿದೆ. ಅದು ಕೇಂದ್ರದ ಚುನಾವಣೆಯಾಗಿರಬಹುದು ಅಥವಾ ರಾಜ್ಯದ ಚುನಾವಣೆಯಾಗಿರಬಹುದು. ಕಳೆದ ಒಂದು ದಶಕದಲ್ಲಿ ಗ್ರಾಮೀಣ ಭಾಗದ ಜನರನ್ನು ಎಲ್ಲರೂ ನಿರ್ಲಕ್ಷ್ಯ ಮಾಡಿದ್ದರು. ನಮ್ಮನ್ನು ಅಲಕ್ಷ್ಯ ಮಾಡಿದರೆ, ನಾವು ಏನು ಮಾಡುತ್ತೇವೆ ಎನ್ನುವುದನ್ನು ಚುನಾವಣೆಯ ಫಲಿತಾಂಶದ ಮೂಲಕ ತೋರಿಸಿಕೊಟ್ಟರು. ಇಂಥಾ ಒಂದು ಚುನಾವಣೆಯ ಫಲಿತಾಂಶವನ್ನೇ 1971ರಲ್ಲಿ ಈ ದೇಶದ ಜನ ಕೊಟ್ಟಿದ್ದರು. ಆಗಲೂ ಸಹ ಅಲಕ್ಷಿತ ಜನ, ಅವಕಾಶ ವಂಚಿತ ಜನ ಒಂದು ಮೌನಕ್ರಾಂತಿಯನ್ನೇ ಈ ದೇಶದಲ್ಲಿ ತಂದರು. ಹಾಗಾಗಿ, ಇವತ್ತು

ನನ್ನಂಥವರು, ಧರ್ಮಸಿಂಗ್‌ರಂಥವರು, ಸಿದ್ಧರಾಮಯ್ಯನಂಥವರು ರಾಜಕೀಯ ಸ್ಥಾನಮಾನಗಳನ್ನು ಗಳಿಸಿಕೊಳ್ಳಲು ಸಾಧ್ಯವಾಯಿತು. ಆ ಕ್ರಾಂತಿ ಆಗಿರದಿದ್ದರೆ ನಾವ್ಯಾರೂ ಇಲ್ಲಿ ಬಂದು ಮಾತನಾಡಲು ಅವಕಾಶವಿರುತ್ತಿರಲಿಲ್ಲ. ಅಂಥ ಒಂದು ಬದಲಾವಣೆಯನ್ನು ಚುನಾವಣೆಯ ಮೂಲಕ ಜನ ತಂದಿದ್ದಾರೆ. ಹಾಗಾಗಿ, ಕೇಂದ್ರದ ನಾಯಕರೇ ಇರಲಿ, ರಾಜ್ಯಮಟ್ಟದ ನಾಯಕರೇ ಇರಲಿ, ಅವರು ಅನಿವಾರ್ಯವಾಗಿ ಗ್ರಾಮೀಣ ಭಾಗದ ಜನರ ಹಿತರಕ್ಷಣೆ ಮಾಡುವಂಥ ಕೆಲಸವನ್ನು ಮಾಡಲೇಬೇಕಾಗಿದೆ. ಈಗ ಅವರೆಲ್ಲರಿಗೂ ಸದ್ಬುದ್ಧಿ ಬಂದಿದೆ. ಇವತ್ತು ಆ ಸದ್ಬುದ್ಧಿ ನಮ್ಮ ಈ ನಾಯಕರಿಗೂ ಬರುತ್ತಿರುವುದು ನನಗೆ ಬಹಳ ಸಂತೋಷವನ್ನು ತಂದಿದೆ. ಇಲ್ಲಿಯವರೆಗೆ ಬಿ ಜೆ ಪಿ ಎಂದರೆ, ಅದು ನಗರಾಭಿಮುಖವಾಗೇ ಇತ್ತು. ಅದು ಈಗ ಗ್ರಾಮೀಣ ಮುಖ ಮಾಡಿದ್ದು, ಮಾನ್ಯ ಯಡಿಯೂರಪ್ಪನವರಿಗೆ ನಾವು ಆ ಗೌರವವನ್ನು ಸಲ್ಲಿಸಲೇಬೇಕು. ಬಹುಶಃ ಕಳೆದ ಚುನಾವಣೆಯಲ್ಲಿ ಅವರು ಆಯ್ಕೆಯಾಗಿ ಬಂದಿದ್ದರೆ, ಅವರು ಅಟಲ್ ಬಿಹಾರಿ ವಾಜಪೇಯಿಯವರಿಗಾಗಲೀ, ಅದ್ವಾನಿಯವರಿಗಾಗಲೀ ಅಥವಾ ಆಗಿನ ಕೇಂದ್ರ ಮಟ್ಟದ ನಾಯಕರಿಗಾಗಲೀ ಗ್ರಾಮೀಣ ಜನರ ಹಿತರಕ್ಷಣೆಯನ್ನು ಮಾಡಿ ಎಂದು ಅವರಿಗೆ ಬುದ್ಧಿವಾದ ಹೇಳುತ್ತಿದ್ದರೇನೋ ? ಅವರನ್ನು ಜನ ಸೋಲಿಸಿದ್ದಕ್ಕೆ ಕಾರಣವೆಂದರೆ, ಅವರು ಗ್ರಾಮೀಣ ಜನರನ್ನು ಮರೆತರು, ಅವರು ಕೇವಲ ನಗರಾಭಿವೃದ್ಧಿಗೆ ಗಮನ ಕೊಟ್ಟರು ಮತ್ತು ಪತ್ರಿಕಾ ಸ್ನೇಹಿತರು ಕೊಡುವಂಥ ಶಹಭಾಸ್‌ಗಿರಿ, ಸರ್ಟಿಫಿಕೇಟ್‌ಗಳನ್ನು ತೆಗೆದುಕೊಂಡು, ``India is shining, everybody is happy" ಎನ್ನುವ ಗುಂಗಿನಲ್ಲಿ ಅವರು ಇದ್ದುದ್ದರಿಂದ ಸ್ಥಾನಮಾನಗಳನ್ನು ಕಳೆದುಕೊಳ್ಳುವಂತಾಯಿತು.

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೇ, ಈ ರೀತಿ ಅರ್ಥ ಮಾಡಿಕೊಳ್ಳುವವರು ತಿಳಿದುಕೊಳ್ಳಬೇಕು, ಇವತ್ತು ಕರ್ನಾಟಕದ ಮ್ಯಾಂಡೇಟ್ ಏನಿದೆ ? ಅದು ನಿಮ್ಮ ವಿರುದ್ಧವಿದೆ. ನೀವು ಸೆಕೆಂಡ್ ಪ್ಲೇಸ್‌ನಲ್ಲಿ ಬಂದಿದ್ದೀರಿ. Mandate is in favour of B.J.P. ಅದನ್ನು ನೀವು ಮರೆತು ಬಿಟ್ಟಿದ್ದೀರಿ. ಅದನ್ನು ಮರೆತು, ಎನ್ ಡಿ ಎ ಬಗ್ಗೆ ಮಾತನಾಡುತ್ತಿದ್ದೀರಿ, ಅದು ಗ್ರಾಮೀಣ ಸಡಕ್ ಯೋಜನೆ ಇರಬಹುದು, ಮತ್ತೊಂದಿರಬಹುದು, ಹೀಗೆ ಹಲವಾರು ಗ್ರಾಮೀಣ ಅಭಿವೃದ್ಧಿ ಕೆಲಸಗಳು, ಬಹುಶಃ ಮಾನ್ಯ ವಾಜಪೇಯಿಯವರ ಕಾಲದಲ್ಲಿ ಆದಷ್ಟು ಬೇರೆ ಯಾರ ಕಾಲದಲ್ಲೂ ಆಗಿಲ್ಲ.

ಶ್ರೀ ಡಿ.ಆರ್. ಪಾಟೀಲ್ : ನಾವು ಮಾತನಾಡಿ ಮೇಲೆ ನೀವು ಮಾತನಾಡಿ.

ಅಧ್ಯಕ್ಷರು : ಜಗದೀಶ್ ಶೆಟ್ಟರ್‌ರವರೇ, ನೀವು ಮಾತನಾಡುವಾಗ ಅವರಿಗೆ ಉತ್ತರ ಕೊಡಬಹುದು. ಈಗ ಅವರು ಮಾತನಾಡಲಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಹಿಂದಿನ ಅವಧಿಯಲ್ಲಿ ಜಗದೀಶ್ ಶೆಟ್ಟರ್‌ರವರಾಗಲೀ, ಯಡಿಯೂರಪ್ಪನವರಾಗಲೀ, ಕೇಂದ್ರ ಸರ್ಕಾರದಲ್ಲಿ ಸಮರ್ಥವಾಗಿ ಕರ್ನಾಟಕದ ಹಿತವನ್ನು ಬಯಸುವುದಕ್ಕೆ ಪ್ರಯತ್ನವನ್ನು ಮಾಡಿಯೇ ಇದ್ದಾರೆ.

ಅಧ್ಯಕ್ಷರು : ಆಯಿತಲ್ಲಾ. ನೀವು ಮಾತನಾಡುವಾಗ ಅವರಿಗೆ ಉತ್ತರ ಕೊಡಿ.

(ಗೊಂದಲ)

ಅಧ್ಯಕ್ಷರು : ನಾನು ಎಷ್ಟೇ ಮನವಿ ಮಾಡಿದರೂ ಅದು ನಿಮ್ಮ ಕಿವಿಗಳಿಗೆ ಬೀಳುತ್ತಿಲ್ಲ. ಅವರು ಏನು ಹೇಳುತ್ತಿದ್ದಾರೆ ಎನ್ನುವುದನ್ನು ಕೇಳಿ, ನಂತರ ತಾವು ಮಾತನಾಡುವಾಗ ಅದಕ್ಕೆ ಉತ್ತರ ಕೊಡಿ. ಅದು ಬಿಟ್ಟು ಎಲ್ಲರೂ ಈ ರೀತಿ ಎದ್ದು ನಿಂತು ಕೊಂಡರೆ ಹೇಗೆ? ಈಗ ಕಾಲಾವಕಾಶವಿಲ್ಲ. ಬಹಳ ಜನ ಮಾತನಾಡುವವರಿದ್ದಾರೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಪ್ರಧಾನಮಂತ್ರಿ ಸಡಕ್ ಯೋಜನೆಯಲ್ಲಿ ರಾಜ್ಯಕ್ಕೆ ಬಂದಂಥ ಸುಮಾರು 200-300 ಕೋಟಿ ರೂಪಾಯಿಗಳನ್ನು ದುರುಪಯೋಗ ಮಾಡಿಕೊಂಡಿದ್ದಾರೆ.

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಮಾತನಾಡಲು ಎದ್ದುನಿಂತರು)

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೇ, ನಾನು ಮಾತನಾಡುತ್ತೇನೆ, ಆ ನಂತರತಮಗೆ ಅವಕಾಶ ಕೊಡುತ್ತೇನೆ. ಪಾಟೀಲರೇ, ನೀವು ಬಜೆಟ್ ಮೇಲೆ ಮಾತನಾಡುತ್ತಿದ್ದೀರಿ, ಬಜೆಟ್‌ಗೆ ಸಂಬಂಧಪಟ್ಟಂತೆ ಹೇಳಿ. ಅದು ಬಿಟ್ಟು ಸುಮ್ಮಸುಮ್ಮನೆ ಏನೇನೋ ಹೇಳುವುದು ಅದಕ್ಕೆ ಅವರು ಎದ್ದುನಿಲ್ಲುವುದು, ನಂತರ ಇವರು ಎದ್ದು ನಿಲ್ಲುವುದು ಆಗುತ್ತದೆ. ಬಜೆಟ್ ಮೇಲೆ ಬಹಳ ಜನ ಮಾತನಾಡಲು ಸಿದ್ಧರಿದ್ದಾರೆ. ದಯಮಾಡಿ ನೀವು ಮಾತನಾಡಿ, ದಯಮಾಡಿ ಸಹಕರಿಸಿ, ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಎಂ.ಪಿ. ವೆಂಕಟೇಶ್ : ಅಧ್ಯಕ್ಷರೇ, ಅವರು ಮಾತ್ರ ಮಾತನಾಡಬಹುದೇ? ನಾವು ಮಾತನಾಡಬಾರದೇ ?

ಅಧ್ಯಕ್ಷರು : ಆಯಿತು, ತಾವು ಕುಳಿತುಕೊಳ್ಳಿ.

ಮಾನ್ಯ ಸದಸ್ಯರು : ನಾವೂ ಆಗಿನಿಂದಲೂ ಸನ್ಮಾನ್ಯ ಅಧ್ಯಕ್ಷರ ಕಳಕಳಿಯನ್ನು ನೋಡುತ್ತಲೇ ಇದ್ದೇವೆ. ತಮ್ಮ ತರಬೇತಿ ಯಶಸ್ವಿಯಾಗಿಲ್ಲ. ಹಳಬರು, ಹೊಸಬರನ್ನು ಸೇರಿಸಿ ಹೊಸದಾಗಿ ಒಂದು ತರಬೇತಿ ಕೊಡಬೇಕಾಗುತ್ತದೆ. ನಿಮ್ಮ ಮಾತನ್ನು ಯಾರೂ ಕೇಳುತ್ತಲೇ ಇಲ್ಲ. ಹಳಬರು, ಹೊಸಬರು ಎಂದು ಭೇದಭಾವ ಮಾಡದೇ ಎಲ್ಲರಿಗೂ ಒಟ್ಟಿಗೇ ಒಂದು ತರಬೇತಿ ಕೊಡಬೇಕು.

ಅಧ್ಯಕ್ಷರು : ಆಯಿತು, ನೀವು ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ನಾನು ಏಕೆ ಎದ್ದುನಿಂತುಕೊಂಡೆ ಎಂದರೆ, ನಮ್ಮ ಕಾಂಗ್ರೆಸ್ಸಿನಿಂದ ಸ್ನೇಹಿತರು ಒಬ್ಬೊಬ್ಬರೇ

ನಿಂತುಕೊಂಡು ಮಾತನಾಡಿದರೆ ನಾವು ಶಾಂತವಾಗಿ ಕೇಳುತ್ತೇವೆ, ಅದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ನಮ್ಮ ಕಡೆಯವರಿಗೂ ನಾನು ಹೇಳುತ್ತೇನೆ. ಏಕೆಂದರೆ, ಈ ಸದನದಲ್ಲಿ ಸರಿಯಾದಂಥ ಚರ್ಚೆಯಾಗಬೇಕು. ಅವರು ಅವರ ಅಭಿಪ್ರಾಯವನ್ನು ಹೇಳುತ್ತಿದ್ದಾರೆ. ಅದಕ್ಕೆ ನಮ್ಮದೇನೂ ವಿರೋಧವಿಲ್ಲ. ನಮ್ಮ ಅಭಿಪ್ರಾಯವನ್ನು ನಾವು ಹೇಳುತ್ತಿದ್ದೇವೆ ಅಷ್ಟೇ. ಕಾಂಗ್ರೆಸ್ಸಿನ ನಮ್ಮ ಸ್ನೇಹಿತರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಬೇಕು ಎಂದರೆ, ನಾವು ಶಾಂತವಾಗಿ ಕೇಳಲು ತಯಾರಿದ್ದೇವೆ, ಆದರೆ ನಿಮ್ಮ ಮುಖ್ಯಮಂತ್ರಿಗಳೋ, ಉಪಮುಖ್ಯಮಂತ್ರಿಗಳೋ, ಬಿ ಜೆ ಪಿ ಯವರು ಎದ್ದಾಗ ನೀವೆಲ್ಲರೂ ಒಟ್ಟಿಗೇ ಏಳಿ ಎಂದು ಹೇಳಿದ್ದಾರೆಯೇ? ಏಕೆ ಹೀಗೆ ಒಟ್ಟಿಗೆ ಎದ್ದೇಳುತ್ತಿದ್ದೀರಿ ಎಂಬುದು ನನಗೆ ಅರ್ಥವಾಗುತ್ತಿಲ್ಲ.

(ಗೊಂದಲ)

ಶ್ರೀ ಎಂ.ಪಿ. ವೆಂಕಟೇಶ್ : ಬಿ ಜೆ ಪಿ ಯವರಿಗೆ ಮನವರಿಕೆ ಮಾಡಿಕೊಡಬೇಕು. ಒಬ್ಬೊಬ್ಬರೇ ಹೇಳಿದರೆ ನೀವು ಕೇಳಲು ತಯಾರಿಲ್ಲ ಎಂದು ತಾವು ಮನವರಿಕೆ ಮಾಡಿಕೊಡಬೇಕೆಂದು ಅಧ್ಯಕ್ಷರಲ್ಲಿ ವಿನಂತಿಸುತ್ತಿದ್ದೇನೆ.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಈಗ ಪಾಟೀಲರೇ, ತಾವು ಮುಂದುವರೆಸಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ಹೇಳಿದ ಹಾಗೆ ಒಂದು ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಆ ದೇಶದ ಅಥವಾ ಈ ರಾಜ್ಯದ ಗ್ರಾಮೀಣಾಭಿವೃದ್ಧಿ ಬಗ್ಗೆ, ಕೃಷಿ ಕಾರ್ಮಿಕರ ಬಗ್ಗೆ, ರೈತನ ಬಗ್ಗೆ, ಸ್ವಾತಂತ್ರ್ಯ ಬಂದ 56 ವರ್ಷಗಳಲ್ಲಿ ಯಾವ ಮಟ್ಟದ ಕಳಕಳಿಯನ್ನು, ಕಾಳಜಿಯನ್ನು ವಹಿಸಬೇಕಾಗಿತ್ತೋ ಅದನ್ನು ವಹಿಸಲಿಲ್ಲ. ಇದರಲ್ಲಿ ಎರಡು ಮಾತಿಲ್ಲ. ಆದರೆ ನೀವು ಆತ್ಮಪೂರಕವಾಗಿ ಹೇಳಿ, ಎನ್ ಡಿ ಎ ಸರ್ಕಾರ ಬಂದ ಮೇಲೆ ಪ್ರಧಾನ ಮಂತ್ರಿ ಸಡಕ್ ಯೋಜನೆ ಇರಬಹುದು. ಬೆಳೆ ವಿಮೆ ಬಗ್ಗೆ ಇರತಕ್ಕಂಥ ಹೊಸ ಕಾನೂನನ್ನು ತಂದಾಂಥದ್ದು ಇರಬಹುದು, ಅಥವಾ ರೈತರ ಸಾಲದ ಮೇಲಿನ ಬಡ್ಡಿಯನ್ನು ಕಡಿಮೆ ಮಾಡುವುದು ಇರಬಹುದು. ಇವುಗಳನ್ನೆಲ್ಲಾ ಜಾರಿಗೆ ತಂದಾಂಥದ್ದು. ಈಗ ನಿಮಗೆ ಸಮಾಧಾನ ಇಲ್ಲದೇ ಇರಬಹುದು, ನಾವು ಸೋತಿರಬಹುದು, ಅದನ್ನು ನಾನು ಇಲ್ಲ ಎಂದು ಹೇಳುವುದಿಲ್ಲ. ಸೋಲಿಗೆ ಅನೇಕ ಕಾರಣಗಳಿರಬಹುದು. ಈಗ ನಾನು ನಿಮಗೆ ಏನು ಹೇಳುತ್ತೇನೆ ಎಂದರೆ ಯಾವುದೋ ಒಂದು ಕಾರಣಕ್ಕೆ ನಾವು ಅಲ್ಲಿ ಸೋತಿದ್ದೇವೆ. ಯಾವುದೋ ಒಂದು ಕಾರಣಕ್ಕೆ ಇಲ್ಲಿ ನಿಮ್ಮ ಸಮ್ಮಿಶ್ರ ಸರ್ಕಾರ ಅಧಿಕಾರದಲ್ಲಿದೆ. ಈ ಸಂದರ್ಭದಲ್ಲಿ ನೀವು ಗ್ರಾಮೀಣಾಭಿವೃದ್ಧಿಗೆ ಹೆಚ್ಚು ಒತ್ತು ಕೊಟ್ಟರೆ, ಹೆಚ್ಚು ಒಳ್ಳೆಯ ಕೆಲಸಗಳನ್ನು ಮಾಡಿದರೆ, ಅದನ್ನು ನಾವು ಸ್ವಾಗತ ಮಾಡುತ್ತೇವೆ. ಆದ್ದರಿಂದ, ಸೋಲಿಗೆ ಕಾರಣ ಗ್ರಾಮೀಣಾಭಿವೃದ್ಧಿಗೆ ಗಮನ ಕೊಡಲಿಲ್ಲ ಎನ್ನುವುದಿಲ್ಲ. ಉದಾಹರಣೆಗೆ ಹೇಳುವುದಾದರೆ, ಹಿಂದೆ ಕಾಂಗ್ರೆಸ್ಸಿನಿಂದ ನಮ್ಮ ಸ್ನೇಹಿತರಾದ ನೀವೆಲ್ಲಾ ಅಧಿಕಾರದಲ್ಲಿದ್ದಿರಿ.

ಶ್ರೀ ಬಿ.ಸಿ. ಪಾಟೀಲ್ : ಅದೇ ಉದ್ದೇಶಕ್ಕಾಗಿಯೇ, ಈ ಬಜೆಟ್ ಗ್ರಾಮೀಣ ರೈತರ ಪರವಾಗಿರುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಏಕೆ ಹೀಗೆ ಮಾಡುತ್ತೀರಿ? ನಾನು ಮಾತನಾಡಿದ ಮೇಲೆ ನೀವು ಮಾತನಾಡಿ. ನಂತರ ನೀವು ಪರ್ಮಿಷನ್ ತೆಗೆದುಕೊಂಡು ಮಾತನಾಡಿ. ಈಗ ನಾನು ಯೀಲ್ಡ್ ಆಗಿಲ್ಲ. ನಾನು ಮಾತನಾಡುತ್ತಿದ್ದೇನೆ. ಪ್ಲೀಸ್, ನೀವು ಆಮೇಲೆ ಮಾತನಾಡಿ, ಈಗ ನಾನು ಹೇಳುವುದೇನೆಂದರೆ, ಯಾವುದೋ ಒಂದು ಕಾರಣದಿಂದ ನಮ್ಮ ಕಾಂಗ್ರೆಸ್ಸಿನ ಸ್ನೇಹಿತರಿಗೆ ಹಿನ್ನಡೆಯಾಗಿ, ಅವರು ಯಾರದೋ ಹೆಗಲ ಮೇಲೆ ಕುಳಿತುಕೊಂಡು ಈಗ ಆಡಳಿತ ನಡೆಸಬೇಕಾಗಿ ಬಂತು. ಅದನ್ನು ಮಾಡಿ. ಒಳ್ಳೆಯದಾಗಲಿ. ಆದರೆ ನಾನು ನಿಮಗೆ ಈಗ ಒಂದು ಮಾತನ್ನು ಹೇಳಲೇ? ಕಳೆದ ನಾಲ್ಕೂವರೆ ವರ್ಷಗಳಲ್ಲಿ ಮಾನ್ಯ ಎಸ್.ಎಂ. ಕೃಷ್ಣಾ ನೇತೃತ್ವದ ಸರ್ಕಾರ ಭ್ರಷ್ಟಾಚಾರದಲ್ಲಿ ತೊಡಗಿದ್ದರಿಂದ, ರೈತರ ಹಿತವನ್ನು ಸಂಪೂರ್ಣವಾಗಿ ಕಡೆಗಣಿಸಿದ್ದರಿಂದ, ಅಧಿಕಾರದಲ್ಲಿದ್ದಂಥ ಪಕ್ಷ ಈ ರೀತಿ ಚುನಾವಣೆಯಲ್ಲಿ ಸೋತು, ನಿಮ್ಮ ಸದಸ್ಯರ ಸಂಖ್ಯೆ ಕಡಿಮೆಯಾಗಿ, ಜನತಾದಳದವರ ಮೇಲೆ ಅವಲಂಬಿತರಾಗಿ ಸರ್ಕಾರ ರಚನೆ ಮಾಡಲು ಅವಕಾಶವಾಯಿತು ಎನ್ನುವುದನ್ನು ನಾನು ಹೇಳುವುದಕ್ಕಿಂತ ಮಾನ್ಯ ಸಿದ್ಧರಾಮಯ್ಯನವರು, ಅವರ ಹಣಕಾಸಿನ ಬಜೆಟ್‌ನಲ್ಲಿ ಹೇಳಿದ್ದಾರೆ. ಅವರು ಏನು ಹೇಳಿದ್ದಾರೆಂದರೆ, ಇಷ್ಟು ದೊಡ್ಡ ಪ್ರಮಾಣದಲ್ಲಿ ಸಾಲ ಆಯಿತು, ಅಭಿವೃದ್ಧಿ ಕೆಲಸಗಳು ಸ್ಥಗಿತವಾದವು, ಅದಕ್ಕಾಗಿಯೇ ತಾನೇ ಜನಾರ್ಧನ ಪೂಜಾರಿಯವರು ದೇವೇಗೌಡರು ವಿರುದ್ಧ ತಿರುಗಿಬಿದ್ದು, ನಾವೂ ಅವರದೆಲ್ಲಾ ಈಚೆಗೆ ತರಬೇಕೇ ಎಂದು ಹೇಳಿದುದು ಹೌದಲ್ಲವೇ? ಇದರ ಬಗ್ಗೆ ನಿಜವಾಗಿಯೂ ನಾವು ಇಲ್ಲಿ ಕುಳಿತು ಚರ್ಚೆಯನ್ನು ಪ್ರಾರಂಭ ಮಾಡಿದರೆ, ಬಜೆಟ್ ಚರ್ಚೆಗೆ ಅಡ್ಡಿಯಾಗುತ್ತದೆ ಎಂದು ನಾವೂ ಬಾಯಿಮುಚ್ಚಿಕೊಂಡು ಕುಳಿತಿದ್ದೇವೆ. ಆದ್ದರಿಂದ ಅದು ಈಗ ಬೇಡ. ಎರಡನೇ ತಾರೀಖಿನಿಂದ ಇವೆಲ್ಲವನ್ನೂ ವಿವರವಾಗಿ ಚರ್ಚೆ ಮಾಡೋಣ. ಈಗ ತಾವು ಏನು ಹೇಳಬೇಕೋ, ಅದನ್ನು ಹೇಳಿ. ನಾವು ಸ್ವಾಗತ ಮಾಡುತ್ತೇವೆ.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಸಭಾಧ್ಯಕ್ಷರೇ, ನಮ್ಮ ವಿರೋಧ ಪಕ್ಷದ ನಾಯಕರು ಬಹಳ ಚೆನ್ನಾಗಿ ಹೇಳಿಕೊಂಡು ಬಂದರು. ಅದಕ್ಕೆ ಕಡೆಯಲ್ಲಿ ಸ್ವಲ್ಪ ಸೇರಿಸುತ್ತೇನೆ. ಎನ್ ಡಿ ಎ ಸರ್ಕಾರ ಮಣ್ಣು ಮುಕ್ಕಿದ್ದು ಅದೇ ಕಾರಣಕ್ಕಾಗಿಯೇ? ಈ ಮಾತನ್ನು ನಾವು ಕೇಳಬಹುದೇ? ನೀವು ಹೇಳಿದಿರಿ. ಎಸ್.ಎಂ. ಕೃಷ್ಣಾರವರ ಸರ್ಕಾರ ಅವ್ಯವಹಾರಗಳನ್ನು ಮಾಡಿದ ಕಾರಣಕ್ಕಾಗಿ ಸೋತರು, ಗ್ರಾಮೀಣ ಪ್ರದೇಶಗಳಿಗೆ ಗಮನ ಕೊಡಲಿಲ್ಲ ಎಂದು ಹೇಳಿದಿರಿ. ಆ ಮಾತನ್ನು ನಾವು ನಿಮಗೆ ಹೇಳಿದರೆ ಹೇಗೆ? ಎನ್ ಡಿ ಎ ಸರ್ಕಾರ ಅದಕ್ಕಾಗಿಯೇ ಸೋತಿತೇ ? ಅದೆಲ್ಲವನ್ನೂ ಹೇಳಬೇಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಪಾಟೀಲರು ಮಾತನಾಡಬೇಕಾದರೆ ನೀವು ಇರಲಿಲ್ಲವೆಂದು ಕಾಣುತ್ತದೆ.

ಶ್ರೀ ಎ. ಕೃಷ್ಣಪ್ಪ : ಅದಕ್ಕಲ್ಲ, ಈಗ ನೀವು ಮಾಡಿದ ಸ್ಟೇಟ್‌ಮೆಂಟಿಗೆ ಹೇಳಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಪಾಟೀಲರು ಮಾತನಾಡುವಾಗ, ಎನ್ ಡಿ ಎ ಸರ್ಕಾರಕ್ಕೆ ಹಿನ್ನಡೆಯಾಗುವುದಕ್ಕೆ ಕಾರಣ, ಅವರು ಗ್ರಾಮೀಣ ಅಭಿವೃದ್ಧಿಯನ್ನು ಮರೆತರು ಎಂದು ಹೇಳಿದರು. ಅದಕ್ಕಾಗಿ ನಾನು ಹೇಳಿದೆ.

ಮಾನ್ಯ ಸದಸ್ಯರು : ಕಾಂಗ್ರೆಸ್ಸಿಗೆ 35 ಪರ್ಸೆಂಟ್ ಓಟು ಬಂದಿದೆ. ಜನರು 35 ಪರ್ಸೆಂಟ್ ಮತಗಳನ್ನು ಕಾಂಗ್ರೆಸ್ ಪಾರ್ಟಿಗೆ ಹಾಕಿದ್ದಾರೆ.

(ಗೊಂದಲ)

ಅಧ್ಯಕ್ಷರು : ಆಯಿತು, ಪಾಟೀಲರೆ, ಈಗ ನೀವು ಮಾತನಾಡಿ, ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಎಂ.ಪಿ. ವೆಂಕಟೇಶ್ : ಅಧ್ಯಕ್ಷರೇ, ಮತದಾರರು ಕಾಂಗ್ರೆಸ್ ಮತ್ತು ಜೆ.ಡಿ. (ಎಸ್) ಗಳನ್ನು ಒಂದಾಗಿ ಮಾಡಿ ಬಿ ಜೆ ಪಿಯವರ ಸಹವಾಸ ಮಾಡಬೇಡಿ ಎಂದು ಹೇಳಿದ್ದಾರೆ. ಬಿ ಜೆ ಪಿ ಯವರು ಭಾರೀ ಕೆಟ್ಟವರು, ಅವರ ಸಹವಾಸವನ್ನೇ ಮಾಡಬೇಡಿ ಎಂದು ಜನತೆ ಹೇಳಿದ್ದಾರೆ. ಇವರ ಸರ್ಕಾರ ಮಾಡಿದರೆ ಉದ್ಧಾರವಾಗುವುದಿಲ್ಲ. ಆದ್ದರಿಂದ ಅವರ ಜೊತೆ ಸೇರಬೇಡಿ ಎಂದು ಜನತೆ ಹೇಳಿದ ಮೇಲೆಯೇ ಕಾಂಗ್ರೆಸ್, ಜೆ.ಡಿ.(ಎಸ್) ಒಂದಾಗಿ ಸರ್ಕಾರ ಮಾಡಿದ್ದು.

ಶ್ರೀ ಕೆ.ಎಸ್. ಈಶ್ವರಪ್ಪ : ಅದಕ್ಕೇ ಇವರು ಇದುವರೆಗೆ ಮಂತ್ರಿಗಳನ್ನೇ ಮಾಡಿಲ್ಲ, ಜನತಾದಳ ಮತ್ತು ಕಾಂಗ್ರೆಸ್‌ನವರು ಸೇರಿ ಇದುವರೆಗೂ ಮಂತ್ರಿಗಳನ್ನೇ ಮಾಡುವುದಕ್ಕೆ ಆಗಿಲ್ಲ. ಅಧಿಕಾರಕ್ಕೋಸ್ಕರ ಕಚ್ಚಾಡುತ್ತಿದ್ದಾರೆ.

ಮಾನ್ಯ ಸದಸ್ಯರು : ಎನ್ ಡಿ ಎ ಸರ್ಕಾರ ರೈತರ ಪರವಾಗಿ ಇತ್ತು ಎಂದು ಹೇಳುತ್ತಿದ್ದಾರೆ. ಕಳೆದ ಮೂರುವರೆ ವರ್ಷ ಬರಗಾಲವಿದ್ದಂತ ಸಂದರ್ಭದಲ್ಲಿ ರೈತರಿಗೆ ಒಂದು ರೂಪಾಯಿ ಬಡ್ಡಿಯನ್ನು ಮನ್ನಾ ಮಾಡಲಿಲ್ಲ, ಒಂದು ರೂಪಾಯಿ ಸಾಲ ಮನ್ನಾ ಮಾಡಲಿಲ್ಲ, ವಿಮೆ ಹಣ ಬಿಡುಗಡೆ ಮಾಡಲಿಲ್ಲ. ಬಿ ಜೆ ಪಿ ನೇತೃತ್ವದ ಎನ್ ಡಿ ಎ ಸರ್ಕಾರ ಬಂದ ಮೇಲೆ ರೈತರು ಹಾಳಾಗಿರುವುದು. ಈ ರಾಜ್ಯದಲ್ಲಿ, ಈ ದೇಶದಲ್ಲಿ ರೈತ ಹಾಳಾದದ್ದು ಎನ್ ಡಿ ಎ ಸರ್ಕಾರದಿಂದ. ಇದನ್ನು ವಿರೋಧ ಪಕ್ಷದ ನಾಯಕರು ಮನಗಾಣಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದರ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಸಿ.ಟಿ. ರವಿ : ಈಗ ರೈತರನ್ನು ಉದ್ಧಾರ ಮಾಡುವವರು ನೀವಿದ್ದೀರಿ. ರೈತರನ್ನು ಉದ್ಧಾರ ಮಾಡುವವರು ಇಬ್ಬರೂ ಸೇರಿದ್ದೀರಿ. ನೀವು ಉದ್ಧಾರ ಮಾಡಿ. ಸಾಲ ಮನ್ನಾ ಮಾಡಿ.

ಅಧ್ಯಕ್ಷರು : ಡಿ.ಆರ್. ಪಾಟೀಲರೇ, ನೀವು ಮಾತನಾಡಿ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಒಂದು ಸಂತೋಷವೆಂದರೆ ಬಿ ಜೆ ಪಿ ಯವರಿಗೂ ಸಹ ಗ್ರಾಮೀಣ ಜನರ ಬಗ್ಗೆ ಸಾಕಷ್ಟು ಕಳಕಳಿ ಈಗ ಹುಟ್ಟುತ್ತಿದೆ. ಅದು ನಮಗೆಲ್ಲರಿಗೂ ಸಂತೋಷ ತರುತ್ತದೆ. ಒಮ್ಮೆ ಅಧಿಕಾರ ನಮಗೆ

ಮಾಡಿ, ಸುಮಾರು 25 ಲಕ್ಷ ಕುಟುಂಬಗಳನ್ನು, 25 ಕೋಟಿ ರೂಪಾಯಿಗಳ ಶೇರ್ ಕ್ಯಾಪಿಟಲ್ ಕೊಡುವ ಮೂಲಕ ಮೆಂಬರ್‌ಶಿಪ್ ಡ್ರೈವ್ ಮಾಡಿದರೆ ಆಗ ಅವರೆಲ್ಲರೂ ಕೋ-ಆಪರೇಟಿವ್ ಫೋಲ್‌ನಲ್ಲಿ ಬರುತ್ತಾರೆ. ಆಗ ನೀವು ಮಾಡುವಂಥ ಮನ್ನಾ ಇತ್ಯಾದಿಗಳ ಲಾಭ ಎಲ್ಲಾ ವರ್ಗದ ಜನರಿಗೆ ಸಿಗುತ್ತದೆ. ದಯವಿಟ್ಟು ಆ ದಿಸೆಯಲ್ಲಿ ತಾವು ವಿಚಾರ ಮಾಡಿದರೆ ಬಹಳಷ್ಟು ಅನುಕೂಲವಾಗುತ್ತದೆ ಎನ್ನುವ ಮಾತನ್ನು ನಾನು ತಮಗೆ ಹೇಳುತ್ತೇನೆ. ಉಳಿದ 25 ಕೋಟಿ ರೂಪಾಯಿಗಳನ್ನು ನೀವು, ವಿಮೆ ಕೊಡಲು, ಯಶಸ್ವಿನಿ ಯೋಜನೆಯಲ್ಲಿ ಕವರ್ ಮಾಡಲು ಸಾಧ್ಯವಾಗುತ್ತದೆ. ನೀವು ಕೊಡುವಂಥ 50 ಕೋಟಿ ರೂಯಲ್ಲಿ ಇವೆರಡೂ ಕೆಲಸಗಳಾಗುತ್ತವೆ. ಅವರಿಗೆ ಸಬ್ಸಿಡೈಸ್ಡ್ ರೇಟ್‌ನಲ್ಲಿ ಕ್ರೆಡಿಟ್ ಸಿಗುವ ಹಾಗೆ ಆಗುತ್ತದೆ. ವಿಮೆಯೂ ಕವರ್ ಆಗುವ ಹಾಗೆ ಆಗುತ್ತದೆ. ಹಿಂದಿನ ಎಲ್ಲಾ ಸರ್ಕಾರಗಳು, ನೀರಾವರಿ ಪ್ರದೇಶದ ರೈತರಿಗೆ ಎಷ್ಟು ಅನುಕೂಲತೆಗಳನ್ನು ಮಾಡಿವೆ, ಅಷ್ಟು ಅನುಕೂಲತೆಗಳನ್ನು ಮಳೆ ಆಶ್ರಿತ ಕೃಷಿಕರಿಗೆ ಮಾಡಿಲ್ಲ ಎನ್ನುವುದನ್ನು ನಾವೆಲ್ಲರೂ ಪ್ರಾಮಾಣಿಕವಾಗಿ ಒಪ್ಪಿಕೊಳ್ಳಬೇಕು. ಸುಮಾರು ಎಪ್ಪತ್ತು ಪರ್ಸೆಂಟ್ ಜಮೀನು ಇನ್ನೂ ಮಳೆ ಆಶ್ರಯಿತ ಕೃಷಿಕರ ಅವಲಂಬನೆಗೆ ಒಳಗಾಗಿದೆ. ದೇವರು ಕೊಡುವ ಮಳೆಯ ನೀರನ್ನು ನಾವು ಸಂಪೂರ್ಣವಾಗಿ ಹಿಡಿದಿಟ್ಟೆವು ಎಂದರೆ, ನಾವು ಆ ಜಮೀನಿನಲ್ಲೂ ಸಾಕಷ್ಟು ಉತ್ಪಾದನೆಯನ್ನು ಹೆಚ್ಚು ಮಾಡಲು ಸಾಧ್ಯವಾಗುತ್ತದೆ. ಬರೀ ಮಳೆಯ ನೀರನ್ನು ಹಿಡಿದಿಡುವುದರಿಂದ ಮಾತ್ರ ಕೃಷಿಕರ ಬವಣೆ ಸುಧಾರಿಸುತ್ತದೆ ಎಂದು ನಾನು ಹೇಳುವುದಿಲ್ಲ. ಅವರಿಗಾಗಿ, ನಾಲ್ಕು ಕೆಲಸಗಳಾಗಬೇಕು. ಒಂದು; ಮಳೆಯ ನೀರನ್ನು ಸಂಪೂರ್ಣವಾಗಿ ಹಿಡಿದಿಡುವಂಥ ಕೆಲಸ. ಎರಡು, ಅವರಿಗೆ ಸಮಯಕ್ಕೆ ಸರಿಯಾಗಿ ಬೇಕಾಗುವಂಥ ಸಂಪೂರ್ಣ ಹಣಕಾಸಿನ ಸಹಾಯ. ನೀವು ಅವರಿಗೆ ಸ್ವಲ್ಪ ಹಣ ಕೊಟ್ಟು, ಮತ್ತಷ್ಟು ಕೆಲಸಕ್ಕಾಗಿ ನೀವು ಅವರನ್ನು ಪ್ರೈವೇಟ್ ಸೋರ್ಸ್‌ಗೆ ಕಳುಹಿಸಿದಿರಿ ಎಂದರೆ ಅವರ ಶೋಷಣೆ ನಿಲ್ಲುವುದೇ ಇಲ್ಲ. ಅವರಿಗೆ ಬೇಕಾಗುವಂಥ ನೂರರಷ್ಟು ಹಣವನ್ನೂ ನೀವು ಸಹಕಾರಿ ಸಂಸ್ಥೆಗಳ ಮುಖಾಂತರ ಸಿಗುವಂಥ ಒಂದು ವ್ಯವಸ್ಥೆಯನ್ನು ಮಾಡಬೇಕು. ಮತ್ತೊಬ್ಬರ ಕಡ ಅವರು ನೋಡಬಾರದು. ದಳ್ಳಾಳಿಗಳ ಕಡೆಯಾಗಲೀ ಅಥವಾ ಪ್ರೈವೇಟ್ ಸೋರ್ಸ್‌ನ ಕಡೆಯಾಗಲೀ ಅವರು ಸಾಲದ ಸಲುವಾಗಿ ಹೋಗಲಾರದಂತೆ ತಾವು ಮಾಡಿದರೆ ಅದರಿಂದ ಬಹಳಷ್ಟು ಅನುಕೂಲವಾಗುತ್ತದೆ. ಈ ಎರಡು ವಿಚಾರಗಳನ್ನು ತಾವು ಮಾಡಬೇಕು. ಸಹಕಾರಿ ಸಂಸ್ಥೆಗಳ ಮುಖಾಂತರವಾದರೂ ಮಾಡಬೇಕು ಅಥವಾ ಈಗ ಸೆಲ್ಫ್-ಹೆಲ್ಪ್ ಗ್ರೂಪ್‌ಗಳಲ್ಲಿ ರೀಪೇಮೆಂಟ್ ಕಲ್ಚರ್ ಬಹಳ ಚೆನ್ನಾಗಿ ಬಿಲ್ಡಪ್ ಆಗುತ್ತಿದೆ. ಈ ರೀಪೇಮೆಂಟ್ ಕಲ್ಚರನ್ನು, ಅಗ್ರಿಕಲ್ಚರ್ ಕ್ರೆಡಿಟ್‌ನಲ್ಲೂ ಉಳಿಸಿಕೊಳ್ಳಬೇಕೆಂದರೆ, ಅಗತ್ಯವಿದ್ದರೆ, ರೈತರ ಸ್ವಸಹಾಯ ಸಹಕಾರಿಗಳಿಗೆ ಅಟ್ಯಾಚ್ ಮಾಡಿ, ಆ ಸೌಹಾರ್ದ ಸಹಕಾರಿಗಳ ಮುಖಾಂತರ ಅವರಿಗೆ ಹಣಕಾಸಿನ ಸಹಾಯ ಸಿಗುವಂಥ ಒಂದು ವ್ಯವಸ್ಥೆಯನ್ನು ತಾವು [illegible]ರಿಗೆ [illegible]. ಈ ರೀತಿಯೂ ನೀವು ಮಾಡಬಹುದು. [illegible]ಂದರೆ,

ಬರುತ್ತದೆ, ಒಮ್ಮೆ ಅಧಿಕಾರ ಬರುತ್ತದೆ. ಎಲ್ಲರೂ ಕೂಡಿ ಗ್ರಾಮೀಣ ಭಾಗದ ಜನರ ಕಳಕಳಿಯನ್ನು ಮಾಡಲು ಒಂದು ಕಾರ್ಯಕ್ರಮವನ್ನು ಹಾಕಿಕೊಂಡರೆ, ಮುಂದಿನ ಒಂದು ದಶಕದಲ್ಲಾದರೂ ನಮ್ಮ ಸ್ಥಿತಿ ಈಗಿನದಕ್ಕಿಂತ ಉತ್ತಮಗೊಳ್ಳುತ್ತದೆ ಎನ್ನುವ ಮಾತನ್ನು ನಾವೆಲ್ಲರೂ ಒಪ್ಪಲೇಬೇಕು. ಮಾನ್ಯ ಯಡಿಯೂರಪ್ಪನವರು ಇದನ್ನು ಗಮನದಲ್ಲಿಟ್ಟಿದ್ದಾರೆ ಎಂದು ನಾನು ಭಾವನೆ ಮಾಡುತ್ತೇನೆ. ಹಿಂದಿನ ಮಾನ್ಯ ಎಸ್.ಎಂ. ಕೃಷ್ಣಾರವರ ಸರ್ಕಾರವರು ಅದರ ಹಿಂದಿನ ಯಾವ ಸರ್ಕಾರಗಳು ಮಾಡಲಾರದಷ್ಟು ಖರ್ಚನ್ನು ನೀರಾವರಿಗೆ ಮಾಡಿದರು. ಗ್ರಾಮೀಣ ಭಾಗದಲ್ಲಿರುವಂಥ ಬಡವರಿಗೆ ಮನೆಗಳನ್ನು ಕಟ್ಟಿಸಲು ಸಾಕಷ್ಟು ಹಣವನ್ನು ಖರ್ಚು ಮಾಡಿದರು. ಗ್ರಾಮೀಣ ಭಾಗದಲ್ಲಿರುವಂಥ ಪ್ರೈಮರಿ ಎಜುಕೇಷನ್ನಾಗಲೀ, ಸೆಕೆಂಡರಿ ಎಜುಕೇಷನ್ನಾಗಲೀ, ರೋಡುಗಳಾಗಲೀ, ಅಲ್ಲಿರುವಂಥ ಹೆಣ್ಣುಮಕ್ಕಳಿಗೆ ಅನುಕೂಲವಾಗುವಂತೆ ಸ್ತ್ರೀಶಕ್ತಿಯನ್ನು ಹುಟ್ಟುಹಾಕಿ, ಅವರಿಗೆ ಸಾಕಷ್ಟು ಆರ್ಥಿಕ ಸ್ವಾತಂತ್ರ್ಯವನ್ನು ಕೊಡಿಸುವಲ್ಲಿ ಸಾಕಷ್ಟು ಕೆಲಸ ಮಾಡಿದ್ದೇವೆ. ಆದರೆ ಸತತ ಮೂರು ವರ್ಷಗಳ ಬರಗಾಲವಿದ್ದಂಥ ಸಂದರ್ಭದಲ್ಲಿ ಆ ಬರಗಾಲದಲ್ಲಿ ಜನ ಏನು ಅಪೇಕ್ಷೆ ಮಾಡಿದ್ದರು, ಆ ಒಂದು ಅಪೇಕ್ಷೆಯ ಮಟ್ಟಕ್ಕೆ ಕೆಲಸ ಮಾಡಲು ನಮ್ಮಲ್ಲಿ ಆಗಲಿಲ್ಲ ಎನ್ನುವುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆ ರೊಚ್ಚಿಗೆ ನಾವು ಕೊಚ್ಚಿಹೋದೆವೆ ಹೊರತು ಮತ್ಯಾವ ತಪ್ಪಿಗೂ ನಾವು ಕೊಚ್ಚಿಹೋಗಲಿಲ್ಲ. ಈ ಬದಲಾವಣೆಯಿಂದ, ಇವತ್ತು ಗ್ರಾಮೀಣ ಭಾಗದಲ್ಲಿರುವಂಥ ಜನಗಳಿಗೆ ಏನೊಂದು ತಿರುವು ಸಿಗಬೇಕಾಗಿತ್ತೋ, ಆ ತಿರುವನ್ನು ಕೇಂದ್ರ ಸರ್ಕಾರದ ಬಜೆಟ್ ಕೊಟ್ಟಿತು. ಮತ್ತೆ ಆ ತಿರುವನ್ನು ಮಾನ್ಯ ಸಿದ್ಧರಾಮಯ್ಯನವರೂ ಕೊಟ್ಟರು. ಅದಕ್ಕಾಗಿ ನಾನು ಅವರಿಬ್ಬರಿಗೂ ಅಂದರೆ ಮಾನ್ಯ ಚಿದಂಬರವರಿಗೆ ಮತ್ತು ಮಾನ್ಯ ಸಿದ್ಧರಾಮಯ್ಯನವರಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಇವತ್ತು ಆ ಹಿನ್ನೆಲೆಯಲ್ಲಿ, ಸಹಕಾರಿ ಸಂಘಗಳ ಮುಖಾಂತರ ರೈತರಿಗೆ ಆರು ಪರ್ಸೆಂಟ್‌ನಲ್ಲಿ ಸಾಲ ಕೊಡಬೇಕು ಎಂದು ಮಾನ್ಯ ಸಿದ್ಧರಾಮಯ್ಯನವರು ಮುಂದಾಗಿದ್ದಾರೆ. ಇದು ಬಹಳ ಸಂತೋಷಕರ. ಆದರೆ ಒಂದು ವಿಷಯವನ್ನು ನೀವು ನೆನಪಿಡಬೇಕು. ನಾವು ಸಹಕಾರಿ ವ್ಯವಸ್ಥೆಯಲ್ಲಿ ಇಪ್ಪತ್ತು ಪರ್ಸೆಂಟಿಗಿಂತ ಕಡಿಮೆ ರೈತರನ್ನು ಕವರ್ ಮಾಡುತ್ತಿದ್ದೇವೆ. ಬಹಳಷ್ಟು ರೈತರು ಆ ವ್ಯವಸ್ಥೆಯ ಹೊರಗಿದ್ದಾರೆ. ಅದಕ್ಕೆ ನನ್ನದೊಂದು ಸಲಹೆ ಎಂದರೆ, ಯಶಸ್ವಿನಿ ಯೋಜನೆಯಲ್ಲಿ ಸಹಕಾರಿ ಸಂಸ್ಥೆಗಳಲ್ಲಿ ಕೆಲಸ ಮಾಡುವಂಥ ಸದಸ್ಯರಿಗೆ ಮಾತ್ರ ಅದರ ಲಾಭ ದೊರೆಯುತ್ತಿದೆ. ಅದಕ್ಕಾಗಿ, ಸಹಕಾರಿ ಸಂಘದ ಹೊರಗಿದ್ದವರಿಗೂ ಸಹ ವೈದ್ಯಕೀಯ ಪರಿಹಾರ ಸಿಗಲು ಅನುವಾಗುವಂತೆ, ಆ ನಿಧಿಯನ್ನು 50 ಕೋಟಿ ರೂಪಾಯಿಗಳಿಗೆ ಹೆಚ್ಚು ಮಾಡುತ್ತೇನೆ ಎಂದು ತಾವು ಹೇಳಿದ್ದೀರಿ. ಅದರ ಬದಲಿಗೆ, ನಾನು ತಮಗೆ ಏನೊಂದು ಸೂಚನೆ ಕೊಡುತ್ತೇನೆ ಎಂದರೆ, ಈ ಹಣದಲ್ಲಿ 25 ಕೋಟಿ ರೂಪಾಯಿಗಳನ್ನು, ಎಸ್.ಸಿ ಎಸ್.ಟಿ. ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳವರು, ಕೋ-ಅಪರೇಟಿವ್ ಕ್ರೆಡಿಟ್ ಸೊಸೈಟಿಯಲ್ಲಿ ಮೆಂಬರ್‌ಶಿಪ್ ಆಗುವಂತೆ ಒಂದು ಸ್ಪೆಷಲ್ ಡ್ರೈವ್

ಸ್ವಸಹಾಯ ಸಂಘದಲ್ಲಿ ಎಲ್ಲಾ ವರ್ಗದ ಜನರನ್ನು ಅಳವಡಿಸಲು ಸಾಧ್ಯವಾಗುತ್ತದೆ. ಅದು ಸಾಧ್ಯವಾಗದಿದ್ದರೆ, ನಾನು ಆಗಲೇ ಹೇಳಿದ ಹಾಗೆ ಒಂದು ಸ್ಪೆಷಲ್ ಡ್ರೈವ್ ತಂದು ಎಸ್.ಸಿ ಎಸ್.ಟಿ. ಅಲ್ಪಸಂಖ್ಯಾತರು ಮತ್ತು ಹಿಂದುಳಿದ ವರ್ಗದ ಎಲ್ಲಾ ರೈತರನ್ನು ಸದಸ್ಯರನ್ನಾಗಿ ಮಾಡುವಂತಾದರೂ ಸಹ ಬಹಳಷ್ಟು ಉಪಕಾರ ಆ ಜನರಿಗೆ ಆಗುತ್ತದೆ. ಅದಕ್ಕೆ, ದಯವಿಟ್ಟು, ಇವರೆಡರೊಳಗೆ ಯಾವುದಾದರೂ ಒಂದನ್ನು ತಾವು ಆಯ್ಕೆ ಮಾಡಿಕೊಳ್ಳಬೇಕು ಎನ್ನುವುದನ್ನು ನಾನು ಹೇಳುತ್ತೇನೆ.

ಅಧ್ಯಕ್ಷರು : ಪಾಟೀಲರೇ, ಬಹಳ ಜನ ಮಾತನಾಡುವರಿದ್ದಾರೆ. ದಯಮಾಡಿ ಬೇಗ ಮುಗಿಸಿ.

ಶ್ರೀ ಡಿ.ಆರ್. ಪಾಟೀಲ್ : ಅಧ್ಯಕ್ಷರೇ, ನನ್ನದು ಇದು ಫೋರ್ತ್ ಟರ್ಮ್. ನಾನು ಈಗಷ್ಟೇ ಮಾತನಾಡಲು ಚಾಲೂ ಮಾಡಿದ್ದೇವೆ, ಐದು ನಿಮಿಷಗಳಾದವು ಅಷ್ಟೇ. ನನಗಿಂತ ಕಡಿಮೆ ಟರ್ಮ್ ಆಯ್ಕೆಯಾಗಿ ಬಂದವರಿಗೆ ಸಾಕಷ್ಟು ಟೈಂ ಕೊಟ್ಟಿದ್ದೀರಿ, ಸೀನಿಯಾರಿಟಿಯೂ ತಮ್ಮ ಕನ್ಸಿಡರೇಷನ್‌ನಲ್ಲಿರಬೇಕು. ನಮಗೆ ಅವಕಾಶ ಕೊಡಬೇಕು. ನಾನು ಬೇಗ ಮುಗಿಸುತ್ತೇನೆ.

ಅಧ್ಯಕ್ಷರು : ಇದಕ್ಕೆ 110 ಮಿನಿಟ್ ಅಲಾಟ್ ಆಗಿದೆ. ನೀವು ಜಾಸ್ತಿ ಮಾತನಾಡಿದರೆ ಉಳಿದವರಿಗೆ ಅವಕಾಶ ಕಡಿಮೆಯಾಗುತ್ತದೆ.

ಶ್ರೀ ಡಿ.ಆರ್. ಪಾಟೀಲ್ : ನಾನು ಬೇಗ ಮುಗಿಸುತ್ತೇನೆ. ಕೃಷಿ ಸಚಿವರು ಒಂದು ಪ್ರಸಂಗದಲ್ಲಿ ಉತ್ತರ ಕೊಡುವ ಮೊದಲು, ಅಗ್ರಿಕಲ್ಚರ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಮಾಡಬೇಕು ಎನ್ನುವುದನ್ನು, ಮುಂದಿನ ಬಜೆಟ್ ಆದಮೇಲೆ ಮಾಡಲು ಹಣಕಾಸು ಸಚಿವರು ನನಗೆ ತಿಳುವಳಿಕೆ ಕೊಟ್ಟಿದ್ದಾರೆ, ಅದಕ್ಕಾಗಿ, ಅದನ್ನು ನಾವು ಮುಂದಿನ ಸಲ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ದಯವಿಟ್ಟು ಅದನ್ನು ಮುಂದಕ್ಕೆ ಹಾಕಬೇಡಿ. ಸುಮಾರು ಒಂದು ನೂರು ಕೋಟಿ ರೂಪಾಯಿಗಳನ್ನು ಜಲಾನಯನ ಅಭಿವೃದ್ಧಿ ಸಲುವಾಗಿ ಇಡುತ್ತಿದ್ದೀರಿ. ಈ ನೂರು ಕೋಟಿ ರೂಪಾಯಿಗಳನ್ನು ಇಡುವ ಬದಲು, ಅದೇ ನೂರು ಕೋಟಿ ರೂಪಾಯಿಗಳನ್ನು ನೀವು ಅಗ್ರಿಕಲ್ಚರಲ್ ಡೆವಲೆಪ್‌ಮೆಂಟ್ ಕಾರ್ಪೋರೇಷನ್ ಕ್ಯಾಪಿಟಲ್ ಮಾಡಿ, ನೀವು ಕೂಡಲೇ ಅದನ್ನು ರಿಜಿಸ್ಟರ್ ಮಾಡಿಸಿದರೆ, ಆ ನೂರು ಕೋಟಿ ರೂ. ಯ ಬಲದ ಮೇಲೆ ಸಾವಿರಾರು ಕೋಟಿ ರೂಪಾಯಿಗಳನ್ನು ನೀವು ನಬಾರ್ಡ್‌ನಿಂದ ಮತ್ತು ಬೇರೆ ಹಣಕಾಸು ಸಂಸ್ಥೆಗಳಿಂದ ತೆಗೆದುಕೊಳ್ಳಬಹುದು. ರಾಜ್ಯಾದ್ಯಂತ ಇರುವ ಪೂರ್ತಿ ಮಳೆ ಆಶ್ರಿತ ಜಮೀನನ್ನು ಜಲಾನಯನ ಅಭಿವೃದ್ಧಿ ಯೋಜನೆಯಡಿಯಲ್ಲಿ ತರಲು ನಾಲ್ಕೂವರೆ ಸಾವಿರ ಕೋಟಿ ರೂಪಾಯಿಗಳು ಬೇಕಾಗಬಹುದು ಎಂಧು ಮಾನ್ಯ ಶ್ರೀ ಶ್ರೀನಿವಾಸಗೌಡರು ಉತ್ತರ ಕೊಡುವಾಗ ಹೇಳಿದರು. ಆ ನಾಲ್ಕೂವರೆ ಸಾವಿರ ಕೋಟಿ ರೂಪಾಯಿಗಳ ಸಂಪನ್ಮೂಲವನ್ನು ನೀವು, ನಿಮ್ಮ ಅಧಿಕಾರಾವಧಿಯ ಈ ಐದು ವರ್ಷಗಳಲ್ಲಿ ಕೊಟ್ಟರಿ ಎಂದರೆ ಎಲ್ಲಾ ಮಳೆ ಆಶ್ರಿತ ಕೃಷಿಕರು ನಿಮ್ಮನ್ನು ಸಾಕಷ್ಟು ನೆನೆಸಿಕೊಳ್ಳುತ್ತಾರೆ. ಅಂಥ ನೆನಪಿಡುವಂಥ ಒಂದು ಕೆಲಸ ತಮ್ಮಿಂದ ಆಗಬೇಕು. ಇದರ ಜೊತೆಗೆ, ನಮ್ಮ

ಕೃಷಿ ಪದ್ಧತಿಯಲ್ಲಿ ನಾವು ಬಹಳವಾದಂಥ ಬದಲಾವಣೆಯನ್ನು ತರಬೇಕು. ಈಗೇನು ಪ್ಯಾಕೇಜ್ ಆಫ್ ಪ್ರಾಕ್ಟೀಸ್ ಇತ್ತು, ಅಗ್ರಿಕಲ್ಚರ್ ಯೂನಿವರ್ಸಿಟಿಯವರು, ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನವರು ಕೆಮಿಕಲ್ ಫರ್ಟಿಲೈಜರ್ಸ್, ಪೆಸ್ಟಿಸೈಡ್ಸ್ ಉಪಯೋಗ ಮಾಡಿ ಎಂದು ನಮಗೆ ಹೇಳುತ್ತರಲ್ಲಾ, ಇದರಿಂದಲೇ ನಾವು ಬಹಳಷ್ಟು ತಾಪತ್ರಯಕ್ಕೆ ಒಳಗಾಗಿದ್ದು, ಇದರಿಂದ ನಮ್ಮ ಮಣ್ಣಿನ ಫಲವತ್ತತೆಯನ್ನು ನಾವು ಹಾಳು ಮಾಡಿಕೊಳ್ಳುತ್ತೇವೆ. ಇದರಿಂದ ನಮ್ಮ ಇನ್‌ಪುಟ್ ಕಾಸ್ಟ್ ಅನ್‌ಬೇರಲ್ ಆಗುತ್ತಿದೆ. ಅದಕ್ಕಾಗಿ, ನಾವು ಸಾವಯವ ಕೃಷಿಗೆ ಬದಲಾಗುವುದು ಅತೀ ಅವಶ್ಯಕವಾಗಿದೆ. ಸಾವಯವ ಕೃಷಿಗೆ ನಾವು ಬರಬೇಕು. ನಮಗೆ ಸಕಾಲಕ್ಕೆ ಹಣಕಾಸಿನ ಸಹಾಯ ಆಗಬೇಕು. ಮಳೆಯ ನೀರನ್ನು ಸಂಪೂರ್ಣವಾಗಿ ಹಿಡಿದಿಟ್ಟುಕೊಳ್ಳುವಂಥ ಕೆಲಸವಾಗಬೇಕು. ಇದರ ಜೊತೆಗೆ ಬೆಳೆ ವಿಮೆ ಸರಿಯಾಗಿ ಸಿಗುವಂಥ ವ್ಯವಸ್ಥೆಯಾಗಬೇಕು. ಈ ನಾಲ್ಕೂ ಇಂಟಿಗ್ರೇಟೆಡ್ ಆದರೆ ಮಾತ್ರ, ಮಳೆ ಆಶ್ರಿತ ಕೃಷಿಕನ ಬದುಕು ಹಸನಾಗಲಿಕ್ಕೆ ಸಾಧ್ಯವಾಗುತ್ತದೆ. ಈ ನಾಲ್ಕೂ ಇಂಟಿಗ್ರೇಡ್ ಆಗುವಂಥ ಕೆಲಸವನ್ನು ತಾವು ಮಾಡಬೇಕು. ಮಳೆ ನೀರನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳುವಂಥ ಆ ಪ್ರಯೋಗಗಳನ್ನು ನಮ್ಮ ರಾಜ್ಯದಲ್ಲಿ ಬೈಫ್‌ನವರು ಮಾಡುತ್ತಿದ್ದಾರೆ. ರಾಜಸ್ತಾನದಲ್ಲಿ ರಾಜೇಂದರ್ ಸಿಂಗ್‌ರವರು, ಹಾಗೂ ಮಹಾರಾಷ್ಟದಲ್ಲಿ ಅಣ್ಣಾ ಹಜಾರೆಯವರು ಮಾಡಿದ್ದಾರೆ. ಅವರ ಆ ಯಶಸ್ವಿ ಪ್ರಯೋಗಗಳನ್ನು ಅಳವಡಿಸಿಕೊಂಡು ಜನರ ಸಹಭಾಗಿತ್ವದಿಂದ ಈ ಕೆಲಸವನ್ನು ನಾವು ನೆರವೇರಿಸುವ ಕೆಲಸ ಯುದ್ಧೋಪಾದಿಯಲ್ಲಿ ನಡೆಯಬೇಕು. ಸುದೈವದಿಂದ ಮಾನ್ಯ ಶ್ರೀನಿವಾಸ ಗೌಡರಿಗೆ ಅವರ ನೆರೆ ರಾಜ್ಯವಾದ ಆಂಧ್ರ ಪ್ರದೇಶದೊಳಗಿನ ಕುಪ್ಪಂ ಜಿಲ್ಲೆಯಲ್ಲಿ ಸಾಕಷ್ಟು ಬದಲಾವಣೆಯನ್ನು ಈ ರೀತಿಯಾದ ಪ್ರಯೋಗಗಳಿಂದ ತಂದಿದ್ದನ್ನು ಅವರು ಸ್ವತಃ ನೋಡಿದ್ದಾರೆ, ಆ ಬದಲಾವಣೆ ರಾಷ್ಟ್ರಾದ್ಯಂತ ಎಲ್ಲಾ ಮಳೆಯಾಶ್ರಿತ ಕೃಷಿಕರ ಜಮೀನಿನಲ್ಲಿ ಬರಬೇಕು. ಅದು ನಮ್ಮ ರಾಜ್ಯದಲ್ಲಂತೂ ಬರಲೇಬೇಕೆನ್ನುವ ಮಾತನ್ನು ತಮಗೆ ಹೇಳುತ್ತೇನೆ. ಮಾರ್ಕೆಟ್‌ನೊಳಗೆ ರೈತರ ಶೋಷಣೆ ವಿಪರೀತವಾಗಿದೆ. ನಮಗೆ 60 ಕೋಟಿ ರೂ. ನೀವು 6 ಪರ್ಸೆಂಟ್ ಬಡ್ಡಿ ಸಲುವಾಗಿ ಇಟ್ಟಿದ್ದಕ್ಕೆ ಎಷ್ಟು ಸಂತೋಷವಾಗಿದೆ, ಅದರ ಹತ್ತು ಪಟ್ಟು ಶೋಷಣೆ ಅಂದರೆ ಸುಮಾರು 600 ಕೋಟಿ ರೂ.ಗಳಷ್ಟು ಪ್ರತಿವರ್ಷ ಮಾರ್ಕೆಟಿನಲ್ಲಿ ರೈತರ ಶೋಷಣೆ ನಿರಂತರವಾಗಿ ಆಗುತ್ತಿದೆ. ಕಾನೂನಿನೊಳಗೆ ರೈತರಿಗೆ ಅವತ್ತೇ ಪೇಮೆಂಟ್ ಆಗಬೇಕು. ಅದು ದಲಾಲ ತೆಗೆದುಕೊಳ್ಳದೆ ಪೇಮೆಂಟ್ ಆಗಬೇಕೆಂದಿದೆ. ಅದಾಗುತ್ತಿಲ್ಲ ಎನ್ನುವುದು ನಮಗೆಲ್ಲರಿಗೂ ಗೊತ್ತಿದೆ. ಬೆಂಗಳೂರು ಮಾರ್ಕೆಟ್ ಬಿಟ್ಟರೆ ಬಹುತೇಕ ಉಳಿದ ರೆಗ್ಯುಲೇಟೆಡ್ ಮಾರ್ಕೆಟ್‌ನೊಳಗೆ ಈ ಕಾನೂನನ್ನು ಇಂಪ್ಲಿಮೆಂಟ್ ಮಾಡುತ್ತಿಲ್ಲ. ಇದು ತಪ್ಪಬೇಕು. ಅವರ ಗೈರ್ ಕಾನೂನು ದಲಾಲಿ ವಸೂಲಿಯನ್ನು ನಿಲ್ಲಿಸಬೇಕೆಂದು ಹೇಳಿ ಹಿಂದೆ ಮಾನ್ಯ ಉದಾಸಿಯವರು ಕೋ-ಅಪರೇಟಿವ್ ಸಬ್ಜೆಕ್ಟ್ ಕಮಿಟಿ ಛೇರ್ಮನ್‌ನರಿದ್ದಾಗ, ರೆಸಲ್ಯೂಷನ್ ಮಾಡಿದ್ದರು ನಾನೂ ಕೋ-ಅಪರೇಟಿವ್ ಸಬ್ಜೆಕ್ಟ್ ಕಮಿಟಿ ಛೇರ್ಮನ್ ಇದ್ದಾಗ ರೆಸಲ್ಯೂಷನ್

ಮಾಡಿದ್ದೆ. ಎರಡೂ ರೆಸಲ್ಯೂಷನ್‌ಗಳ ಒತ್ತಾಯದ ಮೇಲೆ ನಿಮ್ಮ ಸರ್ಕಾರ ಆಗ ಜೆ.ಹೆಚ್. ಪಟೇಲ್‌ರವರು ಮುಖ್ಯಮಂತ್ರಿಗಳಾಗಿದ್ದಾಗ, ಒಂದು ಕಾನೂನನ್ನು ತಂದರು. ಪೇಮೆಂಟ್ ಥ್ರೂ ಎಪಿಎಂಸಿ ಎಂಬುದನ್ನು ಜಾರಿಗೆ ತಂದರು. ರೈತರಿಗೆ ದಲಾಲರು ಏನು ಪೇಮೆಂಟ್ ಮಾಡುತ್ತರೆಂದರೆ 95 ರೂ. ಮಾತ್ರ ಕೊಡುತ್ತಾರೆ. 100 ರೂ.ಗೆ ಸಹಿ ಮಾಡಿಸಿಕೊಳ್ಳುತ್ತಾರೆ. ಇದು ಅನಿವಾರ್ಯ. ಏಕೆಂದರೆ, ಅವನಿಗೆ ಅಡಚಣೆ ಇದ್ದಾಗ ದಲಾಲರು ಅವನಿಗೆ ಹಣಕಾಸಿನ ನೆರವು ಮಾಡಿರುತ್ತಾರೆ. ಹಾಗಾಗಿ, ಅವರು ಏನೇ ಶೋಷಣೆ ಮಾಡಿದರೂ ಅವರಿಗೆ ಎದುರುತ್ತರ ಕೊಡುವ ಶಕ್ತಿ ಈ ರೈತರಿಗಿಲ್ಲ. ಅದಕ್ಕೆ ಪೇಮೆಂಟ್ ಮಾಡುವ ವಿಷಯದಲ್ಲಿ ರೈತ-ದಲಾಲರ ಸಂಬಂಧವೇನಿದೆ ಅದನ್ನು ಬದಲು ಮಾಡಲಿಲ್ಲ. ಅವರಿಗೆ ನಿರಂತರವಾಗಿ ಶೋಷಣೆಯಾಗುತ್ತಿದೆ. 60 ಕೋಟಿ ರೂ. ಕೊಟ್ಟಿದ್ದಕ್ಕೇ ನಮಗೆ ಇಷ್ಟು ಖುಷಿ ಇದೆ. ಅವರಿಗೆ 600 ಕೋಟಿ ರೂ.ಗಳು ಪ್ರತಿ ವರ್ಷ ಶೋಷಣೆಯಾಗುತ್ತಿದೆ. ಅವರಿಗೆ 100 ರೂ.ಗೆ 100 ರೂ. ಸಿಕ್ಕರೆ ಎಷ್ಟು ಖುಷಿಯಾಗುತ್ತದೆ. 100 ರೂ.ಗೆ 95 ರೂ. ಪಡೆದುಕೊಂಡು 100 ರೂ.ಗೆ ಸಹಿ ಮಾಡಬೇಕು. ಇದು ವಾಸ್ತವ ಪರಿಸ್ಥಿತಿ. ಇದು ಎಲ್ಲರಿಗೂ ಗೊತ್ತಿದೆ. ಆದರೆ, ಕೆಲವು ಕಡೆ 10 ರೂ. ಮುರಿದುಕೊಂಡು ಕೊಡುತ್ತಾರೆ. ಅಂದರೆ 90 ರೂ. ಕೊಟ್ಟು 100 ರೂ.ಗೆ ಸಹಿ ಹಾಕಿಸಿಕೊಳ್ಳುವಂಥ ವ್ಯವಸ್ಥೆ ಇವತ್ತು ಮಾರ್ಕೆಟ್ ವ್ಯವಸ್ಥೆಯಾಗಿದೆ. ಇದು ಬದಲಾಗಬೇಕು. ಈ ಶೋಷಣೆ ಬಧಲಾಗಬೇಕು. ಇದು ಬದಲಾಗಬೇಕಾದರೆ ಏನು ಮಾಡಬೇಕು? 1969ರ ಈಚೆಗೆ ರೈತರ ಪರವಾಗಿ ಕಾನೂನನ್ನು ನಾವು ಸಾಕಷ್ಟು ಮಾಡಿದ್ದೇವೆ. ಆದರೆ ಆ ಯಾವ ಕಾನೂನು ಈಗಿನ ವ್ಯವಸ್ಥೆಯಲ್ಲಿ ದುರ್ದೈವದಿಂದ ಅನುಷ್ಠಾನವಾಗುತ್ತಿಲ್ಲ. ಅದು ಅನುಷ್ಠಾನಗೊಳ್ಳುತ್ತಿಲ್ಲವೆಂದು ರೈತ ರೊಚ್ಚಿಗೆದ್ದು ಏಕೋ ಯಾವ ಮಾರ್ಕೆಟ್‌ನಲ್ಲೂ ಪ್ರತಿಕ್ರಿಯೆ ಮಾಡುತ್ತಿಲ್ಲ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಡಿ.ಆರ್. ಪಾಟೀಲರೇನು ಹೇಳುತ್ತಾರೆ. ಅದಕ್ಕೆ ಸಂಬಂಧಪಟ್ಟಂತೆ ಮಾರ್ಕೆಟ್ ವ್ಯವಸ್ಥೆಯಲ್ಲಿ ಏನಾಗಿದೆ ಎಂದರೆ ದಲಾಲರ ಮೇಲೆ ಅವಲಂಬಿತರಾಗದೆ ಪ್ಯಾರಲೆಲ್ ಅರೇಂಜ್‌ಮೆಂಟ್ ಬೇಕಾಗುತ್ತದೆ. ಆ ಪ್ಯಾಲೇಟ್ ಅರೇಂಜ್‌ಮೆಂಟ್‌ನಿಂದ ಮಾರ್ಕೆಟ್ ಸೊಸೈಟಿಗಳನ್ನು ಸಬಲಗೊಳಿಸಿದರೆ, ಇದು ಸಾಧ್ಯವಾಗಬಹುದೆಂಬುದು ನನ್ನ ಭಾವನೆ, ಅದಕ್ಕೇನಾದರೂ ವರ್ಕಿಂಗ್ ಕ್ಯಾಪಿಟಲ್ ಕೊಡುವ ವ್ಯವಸ್ಥೆ ಮಾಡಿದರೆ, ಮಾರ್ಕೆಟಿಂಗ್ ಸೊಸೈಟಿಗಳಲ್ಲಿ ಆ ಕೆಲಸವನ್ನು ದಲಾಲರ ಬದಲಾಗಿ ಅವರು ಮಾಡಲಿಕ್ಕೆ ಪ್ರಯತ್ನ ಮಾಡಿದರೆ, ಅದು ಸಾಧ್ಯವಾಗುತ್ತದೆ. ಅದಕ್ಕೇನಾದರೂ ಹಣ ಇಡುತ್ತೀರಾ? ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಡಿ.ಆರ್. ಪಾಟೀಲ್ : ಏನೂ ಬೇಕಾಗಿಲ್ಲ Market forces will take care of that. ತಮಗೂ ಗೊತ್ತಿದೆ. ನೀವು ನನಗಿಂತ ಹಿರಿಯರು. 1969ಕ್ಕಿಂತ ಮೊದಲು ಉತ್ತರ ಕರ್ನಾಟಕದ ಎಲ್ಲಾ ಮಾರ್ಕೆಟ್‌ಗಳ ಬಾಂಬೆ ಆಕ್ಟ್‌ನಲ್ಲಿ ಕೆಲಸ ಮಾಡುತ್ತಿದ್ದವು. ಅವತ್ತು ಆಗುತ್ತಿರಲಿಲ್ಲವೇ? ಪ್ರತಿ ದಿವಸ ಪೇಮೆಂಟ್ ಆಗುತ್ತಿತ್ತು.

ವ್ಯಾಪಾರಸ್ಥರು ಏಳು ದಿವಸಗಳಲ್ಲಿ ಪೇಮೆಂಟ್ ಕೊಡುತ್ತಿದ್ದರು, ಎಲ್ಲಾ ಕಾನೂನು ಬದ್ಧವಾಗಿ, ಸರಿಯಾಗಿ ನಡೆದಿತ್ತು. 1969ರ ನಂತರ, ನಾವು ಏಕೀಕೃತ ಕರ್ನಾಟಕಕ್ಕೆ ಒಂದೇ ಕಾನೂನನ್ನು ತಂದೆವು. ಆ ಕಾನೂನಿನೊಳಗೆ ಕೃಷಿಕರ ಪರವಾದ ಕಾನೂನನ್ನು ತಂದೆವು. ಆದರೂ ಸಹ, ಅನುಷ್ಠಾನಗೊಳ್ಳುವಲ್ಲಿ ನಾವು ಇವರ ಸಂಸ್ಕೃತಿಯನ್ನು ಬಳುವಳಿ ಪಡೆದುಕೊಂಡಿದ್ದರಿಂದ ನಾವು ಹಾಳಾಗಿ ಹೋದೆವು. ಕರ್ನಾಟಕದ ರೈತರು ನಿರಂತರವಾಗಿ ಶೋಷಣೆಗೆ ಸಿಗುವ ವ್ಯವಸ್ಥೆ ಆಯಿತು. ಮಾನ್ಯ ಜಾಲಪ್ಪನವರು ಆಗೇನೋ ರೈತರು ದಲಾಲ ಕೊಡುವುದರಿಂದ, ರೈತರೂ ಸಹ 2 ಪರ್ಸೆಂಟ್ ದಲಾಲ ಕೊಡುವ ಬದಲಾಗಿ, 4–6–8 ಪರ್ಸೆಂಟ್ ಇವರು ತೆಗೆದುಕೊಳ್ಳುತ್ತಾರೆ. ಅವರ ಅಸಹಾಯಕತೆಯನ್ನು ಇವರು ಶೋಷಣೆ ಮಾಡುತ್ತಾರೆಂದು ಹೇಳಿ, ರೈತರು ದಲಾಲ ಕೊಡಬಾರದೆಂದು ಅದನ್ನೇ ಟ್ರಾನ್ಸ್‌ಫರ್ ಮಾಡಿ, ಟ್ರೇಡರ್ಸ್‌ಗೆ ಶಿಫ್ಟ್ ಮಾಡಿದರು. ಏನಾಯಿತು? ಇದನ್ನು ಟ್ರೇಡರ್ಸ್ ಕೂಡ ಲೀಗಲ್ ಆಗಿ ತೆಗೆದು ಕೊಳ್ಳಲು ಶುರು ಮಾಡಿದರು. ರೈತರು ಅದನ್ನು ನಿರಂತರವಾಗಿ ಚಾಲೂ ಇಟ್ಟರು. ಇದನ್ನು ಒಪ್ಪುತ್ತೀರಾ? ಇದನ್ನು ಬದಲು ಮಾಡುವ ಕೆಲಸ ಯಾವ ಸರ್ಕಾರದಿಂದಲೂ ಆಗುತ್ತಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಉದಾಸಿಯವರು ಏನು ಸಲಹೆ ಮಾಡಿದರು, ಇದೊಂದು ವ್ಯವಸ್ಥೆ ನಮ್ಮಲ್ಲಿದೆ. ಕೃಷಿ ಸಚಿವರು ಮಾರ್ಕೆಟಿಂಗ್ ಫೆಡರೇಷನ್‌ನ ಪ್ರೆಸಿಡೆಂಟ್ ಆಗಿದ್ದಾರೆ. ನಿಜವಾಗಿ ಏನು ನಡೆಯಬೇಕಾಗಿತ್ತು ಅದು ನಡೆಯುತ್ತಿಲ್ಲ. ಸೊಸೈಟಿಯಗಳನ್ನು ಮಾರಾಟಕ್ಕೆ ಇಟ್ಟುಕೊಂಡು ಕುಳಿತರೂ ಖರೀದಿದಾರರು ಇರುವುದಿಲ್ಲ. ಅಲ್ಲಿ ತೊಂದರೆಯಾಗುತ್ತದೆ. ಅದಕ್ಕೆ ಮಾರ್ಕೆಟಿಂಗ್ ಫೆಡರೇಷನ್ ಎಲ್ಲಾ ವ್ಯವಸ್ಥೆ ಇದೆ. ಆದರೆ, ಸರ್ಕಾರದಿಂದ ಸರಿಯಾದ ಹಣಕಾಸಿನ ನೆರವು ಇಲ್ಲ. ಇವತ್ತು ಅದಾಗದಿದ್ದರೆ ನೀವು ಹೇಳುವುದು ನಡೆಯುವುದಿಲ್ಲ. ಮತ್ತೆ ವ್ಯಾಪಾರಸ್ಥರ ಕೈಗೆ ಸಿಗುತ್ತದೆ. ರೈತರಿಗೆ ಇವತ್ತು ಹಣ ಬೇಕಾದರೆ 10 ರೂ. ಮುರಿದುಕೊಂಡು, 15 ರೂ. ಮುರಿದುಕೊಂಡರೂ ಕೇಳುವವರಿಲ್ಲ. ನಾವು ಸಹಕಾರ ಸಂಘಗಳ ಮೂಲಕ ಖರೀದಿ ಮಾಡುವ ವ್ಯವಸ್ಥೆಯನ್ನು ಎಲ್ಲಿವರೆಗೆ ಮಾಡುವುದಿಲ್ಲವೋ, ಅಲ್ಲಿವರೆಗೆ ಇದು ಜಾರಿಗೆ ಬರುವುದಿಲ್ಲ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಉದಾಸಿಯವರಿಗೆ ಗೊತ್ತಿದೆ, ರಾಣಿಬೆನ್ನೂರಿನ ಎಪಿಎಂಸಿ ಯಾರ್ಡ್‌ನಲ್ಲಿ ಹತ್ತಿ ಪೇಮೆಂಟ್ ಅನ್ನು ಕಾನೂನಿನ ಪ್ರಕಾರ ಅವತ್ತೇ ಕೊಡಬೇಕು. ಅದನ್ನು ಕೊಡಬೇಕಾದರೆ 20 ಪರ್ಸೆಂಟ್ ಕಮಿಷನ್ ಅನ್ನು ಇಲ್ಲೀಗಲ್ ಆಗಿ ಮುರಿದುಕೊಂಡಿರುವುದು ನಮಗೆ ನಿದರ್ಶನವಿದೆ. ನಮಗೂ ನಿದರ್ಶನ ಇದೆ. ಇವತ್ತು ಏನು ಮಾಡುತ್ತಾರೆಂದರೆ, ವ್ಯಾಪಾರಸ್ಥರು ದಲಾಲರಿಗೆ ಒಂದು ವಾರದಲ್ಲಿ ಹಣ ಕೊಡಬೇಕು. ನಿಮಗೆ ಒಂದು ವಾರದಲ್ಲಿ ಬೇಕಾದರೆ ಕೊಡುತ್ತಾರೆ. ಇಲ್ಲೀಗಲ್ ಆಗಿ2 ಪರ್ಸೆಂಟ್ ಡಿಸ್ಕಾಂಟ್ ಮಾಡಿ ಎಂದು ಹೇಳುತ್ತಾರೆ. ಅವರ ಹತ್ತಿರ ಹಣವಿದೆ. ಇಲ್ಲವೆಂದಲ್ಲ, ಆದರೂ, ಡಿಸ್ಕೌಂಟ್ ಮಾಡಿ ಎಂದು ಹೇಳುತ್ತಾರೆ, ಈ ವ್ಯವಸ್ಥೆಯನ್ನು ನೋಡಿಕೊಂಡು ನಾವೆಲ್ಲರೂ

ಸುಮ್ಮನೆ ಕುಳಿತಿದ್ದೇವೆ, ಈ ವ್ಯವಸ್ಥೆಯಲ್ಲಿ ಕೆಲಸ ಮಾಡುವ ಅಧಿಕಾರಿಗಳಾಗಲಿ, ನಾವಾಗಲಿ, ಬಾಯಿ ಮುಚ್ಚಿ ಸುಮ್ಮನೆ ಕುಳಿತು, ನೂರಾರು ಕೋಟಿ ರೂಪಾಯಿಗಳನ್ನು ಅವರು ಕೊಳ್ಳೆ ಹೊಡೆಯುವುದನ್ನು ನೋಡಿಕೊಂಡು, ಇಲ್ಲಿ 50-60, 100 ಕೋಟಿ ರೂ. ಕೊಟ್ಟರೆ ನಾವು ಎಷ್ಟು ಖುಷಿಯಾಗುತ್ತೇವೆ? ನಮಗೆ ಯಾರ ಸಹಾಯಧನವೂ ಬೇಕಾಗಿಲ್ಲ, ಯಾರ ಬಡ್ಡಿ ಮನ್ನಾ ಬೇಕಾಗಿಲ್ಲ, ಏನೂ ಬೇಕಾಗಿಲ್ಲ. ನಮ್ಮ ಶೋಷಣೆ ಆಗಲಾರದ ಮಾರ್ಕೆಟ್ ವ್ಯವಸ್ಥೆ ನಮಗೆ ಕೊಡಿ. ಸೆಲರ್ಸ್ ಮಾರ್ಕೆಟ್ ಅನ್ನು ಕ್ರಿಯೇಟ್ ಮಾಡಿ. ಉಳಿದ ಉತ್ಪಾದಕ ಹೇಗೆ ತನ್ನ ಉತ್ಪಾದನಾ ಬೆಲೆಯನ್ನು ತಾನೇ ನಿಗದಿಪಡಿಸುತ್ತಾನೋ, ಹಾಗೆಯೇ ರೈತ ಸಹ ತನ್ನ ಉತ್ಪಾದನಾ ಬೆಲೆಯನ್ನು ತಾನೇ ನಿಗದಿಪಡಿಸಿಕೊಳ್ಳುವ ಶಕ್ತಿಯನ್ನು ಅವನಿಗೆ ಕೊಡಿ. ಅಂಥ ಒಂದು ವ್ಯವಸ್ಥೆಯನ್ನು ರೂಪಿಸಿಕೊಡಿ. ನಮಗೆ ಯಾವ ಬಡ್ಡಿ ಮನ್ನಾ ಬೇಕಾಗಿಲ್ಲ. ಅದನ್ನು ನೀವು ಕೊಡುವುದಿಲ್ಲ. ಏಕೆ? ಒಂದು ಷಡ್ಯಂತ್ರಕ್ಕೆ ಈ ದೇಶದೊಳಗಿದೆ, ಗ್ರಾಮೀಣ ಭಾಗದ ಜನರ ವಿರುದ್ಧ ವಿಶೇಷವಾಗಿ ಅದೂ ರೈತರ ವಿರುದ್ಧ ಇದೆ. ನಾವು ಯಾರ ಬಿಡೆಯಲ್ಲಿ ಬದುಕುವವರಲ್ಲ. ನಮ್ಮ ಹತ್ತಿರ ಹಣವಿದ್ದರೆಮ ಚೈನಿ ಹೊಡೆಯುತ್ತೇವೆ, ಎಲ್ಲಾ ಮಾಡುತ್ತೇವೆ. ಹಣವಿಲ್ಲದಿದ್ದರೆ, ಒಪ್ಪತ್ತು ಉಪವಾಸ ಇರುತ್ತೇವೆ. ಮತ್ತೊಬ್ಬರ ಹತ್ತಿರ ಹೋಗಿ ಭಿಕ್ಷೆ ಬೇಡುವ ಕೆಲಸ ಮಾಡುವುದಿಲ್ಲ, ಮತ್ತೊಬ್ಬರ ಹತ್ತಿರ ಹೋಗಿ ಹಂಗಿನಿಂದ ತಿನ್ನುವ ಕೆಲಸ ಮಾಡುವುದಿಲ್ಲ. ಹಾಗಾಗಿ, ಬಹಳಷ್ಟು ಇಂಡಿಪೆಂಡೆಂಟ್ ಮೈಂಡೆಡ್ ರೈತರಿರುತ್ತಾರೆ. ಇವರು ಅಧಿಕಾರಕ್ಕೆ ಬರಬಾರದು, ಇವರು ಶಕ್ತಿವಂತರಾಗಬಾರದೆನ್ನುವ ಷಡ್ಯಂತರ ಈ ದೇಶದಲ್ಲಿ ಎಲ್ಲ ಪಕ್ಷದ ಮೂಲಕ ಆಗುತ್ತಿದೆ. ಅದಕ್ಕೆ ನಮ್ಮನ್ನು ಎಕನಾಮಿಕ್ ಆಗಿ ಇಂಡಿಪೆಂಡೆಂಟ್ ಆಗಲಿಕ್ಕೆ, ನಾವು ಎಕನಾಮಿಕ್ ಆಗಿ ಡೆವಲಪ್‌ಮೆಂಟ್ ಆಗಲಿಕ್ಕೆ ಸಾಧ್ಯವಾಗಲಾರದ ವ್ಯವಸ್ಥೆ ನಡೆಯುತ್ತಿದೆ. ದುರ್ದೈವದಿಂದ, ಒಮ್ಮೊಮ್ಮೆ ನಮ್ಮ ಹಿತ ರಕ್ಷಣೆ ಮಾಡುವವರು ಅಧಿಕಾರಕ್ಕೆ ಬಂದಾಗಲೂ ಸಹ, ಆ ವ್ಯವಸ್ಥೆಯನ್ನು ಬದಲಾವಣೆ ಮಾಡಲು ಸಾಧ್ಯವಾಗಲಾರದ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಅದಕ್ಕೆ ನಾವೆಲ್ಲರೂ ಎಚ್ಚೆತ್ತುಕೊಳ್ಳಬೇಕು. ಡೆಮಾಕ್ರಸಿಯೊಳಗೆ ನಾವೇ ಮೆಜಾರಿಟಿ ಇರುವವರು. ನಮ್ಮ ಪ್ರತಿನಿಧಿಗಳೇ ಮೆಜಾರಿಟಿ ಇರುವವರು. ನಮ್ಮ ಹಿತ ರಕ್ಷಣೆಯನ್ನು ಅವರು ಮಾಡಲಿಲ್ಲವೆಂದರೆ, ಮತ್ತೆ ಅವರಿಗೆ ಅಧಿಕಾರ ಏಕೆ ಕೊಡಬೇಕು? ಇದು ಬದಲಾಗಬೇಕಲ್ಲವೇ? ನಾವೆಲ್ಲರೂ ಪಕ್ಷಭೇದ ಮರೆತು, ವ್ಯವಸ್ಥೆಯಲ್ಲಿ ಹೇಗೆ ಬದಲಾವಣೆ ತರಬೇಕೆನ್ನುವ ಬಗ್ಗೆ ಆ ವೇದಿಕೆ ಮೂಲಕ ಚಿಂತನೆ ನಡೆದು, ಬದಲಾವಣೆ ಪ್ರಕ್ರಿಯೆಯನ್ನು 5 ವರ್ಷಗಳಲ್ಲಿ ಆರಂಭ ಮಾಡಬೇಕು. ಸುದೈವದಿಂದ ಧರ್ಮಸಿಂಗ್‌ರವರಾಗಲಿ.

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) : ಮಾನ್ಯ ಡಿ.ಆರ್. ಪಾಟೀಲರು ಹೇಳುವುದು ನಿಜ. ರೈತರಿಗೆ ಮೂರೇ ಬೇಕಾಗಿರುವುದು. ಕ್ರೆಡಿಟ್ ನೀರು ಮತ್ತು ಮಾರ್ಕೆಟ್. ಈ ಮೂರು ಕೊಟ್ಟರೆ ಯಾವ ಸರ್ಕಾರದ ಕಡೆಗೂ ಅವರು ನೋಡುವುದಿಲ್ಲ. ಅವನ ಕೆಲಸ ಅವನು ಮಾಡಿಕೊಂಡು ಹೋಗುತ್ತಾನೆ. ಯಾವ

ಸರ್ಕಾರದ ತಲೆಗಳೂ ತಲೆ ಕೆಡಿಸಿಕೊಳ್ಳುವುದಿಲ್ಲ. ಈ ವ್ಯವಸ್ಥೆಗೆ ಸ್ವಾತಂತ್ರ್ಯ ಬಂದಾಗ, ಎಷ್ಟು ಒತ್ತು ಕೊಡಬೇಕೋ, ಅಷ್ಟು ಕೊಟ್ಟಿಲ್ಲ. ಅದಕ್ಕೆ ಈ ರೈತನ ಬಾಳು ಈ ರೀತಿ ಬಂದಿರುವುದೇ ವಿನಃ ಈ ಮೂರಕ್ಕೆ ಒತ್ತು ಕೊಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಶ್ರೀ ಡಿ.ಆರ್. ಪಾಟೀಲ್ : ನಮಗೂ ಉಳಿತಾಯ ಪ್ರವೃತ್ತಿ ಇಲ್ಲ. ಹಣವಿದ್ದರೆ ಸಾಕು, ಮೋಜು ಮಾಡುತ್ತೇವೆ, ಆಸ್ತಿ ಮಾಡುತ್ತೇವೆ, ನಮ್ಮ ಮಕ್ಕಳ ಮುಂಜಿ, ಮದುವೆ ಮಾಡುತ್ತೇವೆ, ಒಟ್ಟಾರೆ, ಕೈನಲ್ಲಿ ಹಣ ಇಟ್ಟುಕೊಂಡು ಮಾನ್ಯ ಉದಾಸಿಯವರ ಹಾಗೆ ಬದುಕುವ, ನಿಮ್ಮ ಹಾಗೆ ಬುದ್ಧಿವಂತರು ನಾವಲ್ಲ. ರೈತರು ಕೈಯಾಗೆ ಇದ್ದದ್ದು ಎಲ್ಲಾ ಖರ್ಚು ಮಾಡುತ್ತಾರೆ. ಯಾವುದಕ್ಕೂ ಆಗಲಿಲ್ಲವೆಂದರೆ ಕಡೆಗೆ ಜಿದ್ದಿಗೆ ಬಿದ್ದು ಪಂಚಾಯತ್ ಚುನಾವಣೆಯಲ್ಲಾಗಲಿ, ತಾಲ್ಲೂಕು ಪಂಚಾಯತ್ ಚುನಾವಣೆಯಲ್ಲಾಗಲಿ, ಎಂಎಲ್ಎ ಚುನಾವಣೆಯಲ್ಲಾಗಲಿ, ಯಾವುದರೊಳಗಡೆಯಾದರೂ ದುಡ್ಡು ಖರ್ಚು ಮಾಡಿ ಮತ್ತೆ ಕಿಸೆ ಖಾಲಿ ಮಾಡಿಟ್ಟುಕೊಂಡು, ಹೋಗುವುದು. ಇದರ ಜೊತೆಗೆ ಅದೇನು ಎಲ್ಲೆಲ್ಲಿ ನೀರಾವರಿ ಬಂದಿದೆ, ಎಲ್ಲಲ್ಲಿ ರೈತರ ಪರಿಸ್ಥಿತಿ ಸುಧಾರಿಸಿದೆ, ಅಲ್ಲಿ ಬಹುತೇಕ ನೀವು ನೋಡ್ರಿ ಬಾರ್, ಸರ್ ಅಂಗಡಿ, ಸಾಕಷ್ಟು ಆಗಿದೆ. ಈ ಇರೀಗೇಷನ್ ಪ್ರಾಜೆಕ್ಟದ್ದು ಲಾಭ ರೈತರಿಗಿಂತ ಹೆಚ್ಚು ಎಕ್ಸೈಸ್‌ನವರಿಗೆ ಆಗಿದೆ. ಹೌದೋ ಅಲ್ಲವೋ? ಅದಕ್ಕೆ ನಾವು ಈಗ ಹೇಗೆ ಮಾನ್ಯ ಸಿದ್ಧರಾಮಯ್ಯನವರು ಬೋಲ್ಡ್ ಆಗಿ ಆನ್ ಲೈನ್ ಲಾಟರಿ ಬಂದೆ ಮಾಡಿದರು, ಆನ್ ಲೈನ್ ಲಾಟರಿ ಬಂದ್ ಮಾಡಿದ್ದರ ಜೊತೆಗೆ ನೀವು ಪ್ರಾಹಿಬಿಷನ್ ತರುವುದಕ್ಕೆ ಮೊನ್ನೆ ಏಕೋ ನಕರಾತ್ಮಕವಾಗಿ ಇದು ಆಗುವುದಿಲ್ಲವೆಂದು ಹೇಳಿಬಿಟ್ಟಿರಿ. ಪ್ರಾಹಿಷನ್ ತರುವುದು ಈಗ ಅಗತ್ಯವಿದೆ.

ಶ್ರೀ ಸಿ.ಎಂ. ಉದಾಸಿ : ಪ್ರಾಹಿಬಿಷನ್ ಮಾಡಬೇಕು ಎನ್ನುವುದರ ಬಗ್ಗೆ ಹಿಂದೆ ಇಲ್ಲಿ ವಿಧಾನ ಸಭೆಯಲ್ಲಿ ಚರ್ಚೆಯಾಗಿದೆ. ಪಾನ ಪ್ರತಿಬಂಧ ಮಾಡಬೇಕೆಂದು ಚರ್ಚೆಯಾದಾಗ ಏನು ಬಂತು ಎಂದು ಹೇಳಿದರೆ, ನಾನೊಂದು ಮಾತು ಅವಾಗ, ತಮ್ಮ ಸ್ಥಾನದಲ್ಲಿ ಮಾನ್ಯ ಬಿ.ಜಿ. ಬಣಾಕಾರ್ ಅವರು ಕುಳಿತಿದ್ದರು. ಈ ಚುನಾವಣೆಯಲ್ಲಿ ಏನು ಇದೆ ಕುಡಿಯುವವರು ಕುಡಿಯುವವರಿಗೆ ಓಟು ಹಾಕಬೇಕು. ಕುಡಿಯದಿದ್ದವರು ಕುಡಿಯದಿದ್ದವರಿಗೆ ಓಟು ಹಾಕಬೇಕು ಎಂದರೆ ನಾವು ಎಲ್ಲರೂ ಸೋತು ಬಿಡುತ್ತೇವೆ ಅದಕ್ಕೆ ಆ ಪ್ರಸ್ತಾಪವನ್ನು ವಿಧಾನ ಸಭೆಯಲ್ಲಿ ಮಾಡುವುದು ಬೇಡ ಎಂದು ನಾನು ಹೇಳಿದ್ದೆ, ಅದು ನೆನಪು ಇರಬೇಕು ನಿಮಗೆ.

ಶ್ರೀ ಡಿ.ಆರ್. ಪಾಟೀಲ್ : ಎಲ್ಲಿಗೆ ಬಂದಿದೆ ನೋಡಿ ಸಾರ್ ಪರಿಸ್ಥಿತಿ? ಅಂದರೆ ಕುಡಿಯಿರಿ ಎಂದು ಹೇಳಬೇಕು ಎಂದು ಮಾನ್ಯ ಉದಾಸಿಯವರು ಅನ್ನುತ್ತಾರೆ. ಸ್ವಾಮಿ, ನಾವು ಕುಡಿದು ಹಾಳಾಗೋಣ ಮುಂದಿನ ಪೀಳಿಗೆ ಕುಡಿದು. ಹಾಳಾಗಬಾರದು. ಇದು ಅವಶ್ಯನಾ ನಮಗೆ? ನಮ್ಮ ಬದುಕಿಗೆ ಅವಶ್ಯನಾ ಅದು ಅಥವಾ ನಿಬಾಯಿಸುವಂಥ ಶಕ್ತಿ ನಮಗೆ ಇದೆಯೇ? ಇಲ್ಲದಾಗ ಅದನ್ನು ಖರ್ಚು ಮಾಡುವಂಥ ವ್ಯವಸ್ಥೆಯನ್ನು ನಾವು ಆ ಒಂದು ವಾತಾವರಣವನ್ನು ಏಕೆ ಸೃಷ್ಟಿ

ಮಾಡಬೇಕು? ಸುದೈವದಿಂದ ನಮ್ಮ ತಾಯಂದಿರು, ಮತ್ತು ಸಹೋದರಿಯರು, ರಾಜಕೀಯವಾಗಿ ಸಾಕಷ್ಟು ಜಾಗೃತರಾಗಿದ್ದಾರೆ. ಮತ್ತು ಸ್ತ್ರೀ ಶಕ್ತಿ ಮೂಲಕ ಸಾಕಷ್ಟು ಸಂಘಟಿತರಾಗಿದ್ದಾರೆ. ಈ ಪ್ರಾಹಿಬಿಷನ್ ಮಾನಿಟರ್ ಮಾಡುವಂಥ ಕೆಲಸ ನೀವು ಅವರಿಗೆ ಕೊಡ್ರಿ ಅವರು ಎಷ್ಟು ಯಶಸ್ವಿಯಾಗಿ ಮಾಡುತ್ತಾರೆ. ನಾವು ಪ್ರಾಹಿಬಿಷನ್ ಇಂಪ್ಲಿಮೆಂಟ್ ಮಾಡುವುದು, ಮಾನೀಟರ್ ಮಾಡುವುದು ಈ ಪೊಲೀಸ್ ವ್ಯವಸ್ಥೆಗೆ ಇಟ್ಟಿದ್ದೇವೆ ಅಲ್ಲವೇ ಹೀಗಾಗಿ ಅದು ಯಶಸ್ವಿಯಾಗುವುದಕ್ಕೆ ಸಾಧ್ಯವಿಲ್ಲ. ಆ ಅಧಿಕಾರ ಅವರಿಗೆ ಕೊಡಿ, ಯಾರು ಕುಡಿದು ಬರುತ್ತಾರೆ ಅವರಿಗೆ ಪನಿಷ್‌ಮೆಂಟ್ ಮಾಡುವಂಥ ಅಧಿಕಾರ ಅವರಿಗೆ ಕೊಟ್ಟೆವು ಎಂದರೆ ನಮ್ಮನ್ನು ಬರೋಬರಿ ಹತೋಟಿಯಲ್ಲಿ ಇಡುತ್ತಾರೆ. ಈಗ ಅದು ಯಶಸ್ವಿಯಾಗುತ್ತದೆ. ಹೆಣ್ಣು ಮಕ್ಕಳು ಸಂಘಟಿರಾಗಿದ್ದಕ್ಕೆ ಈಗ ಪ್ರಾಹಿಬಿಷನ್ ನೀವು ತಂದಿರಿ ಎಂದರೆ, ಅದು ಯಶಸ್ವಿಯಾಗುತ್ತದೆ. ಕಡೆಗೆ ನಾನು ಮಾನ್ಯ ಸಿದ್ಧರಾಮಯ್ಯನವರಲ್ಲಿ ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ. ನೀವು ಪ್ರಾಯೋಗಿಕವಾಗಿ ಯಾವ್ಯಾವ ಗ್ರಾಮ ಸಭಾಯೊಳಗೆ ಸಂಪೂರ್ಣವಾಗಿ ನಮ್ಮ ಪಂಚಾಯತ್ ಒಳಗೆ ಪ್ರಾಹಿಬಿಷನ್ ಬೇಕು ಎಂದು ಅಪೇಕ್ಷೆ ಪಡುತ್ತಾರೆ ಅಲ್ಲಿಯಾದರೂ ನೀವು ಮಾಡಿ. ಅದನ್ನು ನೀವು ಮಾಡಿಲ್ಲ. ನೀವು ಮಾಡಿ ಮಾನೀಟರ್ ಅನ್ನು ಮಾಡುವುದನ್ನು ಈ ಪೊಲೀಸ್ ವ್ಯವಸ್ಥೆಯೊಳಗೆ ನೀವು ಇಟ್ಟಿದ್ದೀರಿ, ಈ ಪೊಲೀಸ್ ವ್ಯವಸ್ಥೆಯಿಂದ ಅದನ್ನು ಬಿಡಿಸಿ ಅದನ್ನು ಹೆಣ್ಣುಮಕ್ಕಳಿಗೆ ಕೊಡಿ.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) : 1998-99ರಲ್ಲಿ ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲಿ ನಿಮ್ಮ ಗದಗ್‌ನಲ್ಲಿ ಹಾಗೂ ಬೆಳ್ತಂಗಡಿಯಲ್ಲಿ ಇದನ್ನು ಮಾಡಿದ್ದೆವು. ಅಲ್ಲಿ ಅದು ಸಕ್ಸೆಸ್ ಆಗಲಿಲ್ಲವೆಂದು ಮತ್ತೆ ವಾಪಸ್ ಹೋದೆವು. ನಮ್ಮ ಸಂಡೂರಿನ ಶಾಸಕರಾದಂಥ ಮಾನ್ಯ ಘೋರ್ಪಡೆಯವರು ಇದನ್ನು ನಿಲ್ಲಿಸಿ ಎಂದು ಆಗ ಹೇಳಿದರು. ಎಲ್ಲಾ ಪಂಚಾಯಿಗಳು ಒಪ್ಪಿಗೆ ಮಾಡಿವೆ ಎಂದು ಹೇಳಿದರು. ಅಲ್ಲಿ ಬೆಳ್ತಂಗಡಿಯಲ್ಲಿ ಮಾನ್ಯ ಹೆಗಡೆಯವರು ಮಾಡಿಸಿ ಎಂದು ಹೇಳಿದರು. ಗದಗ್ ನಲ್ಲಿ ಕೂಡ ನೀವು ಅದನ್ನು ಮಾಡಿಸಿ ಎಂದು ಹೇಳಿದಿರಿ. ಮತ್ತೆ ನಾವು ವಾಪಸ್ ಹೊದೆವು, ಏಕೆಂದರೆ, ಅಲ್ಲಿ ಇನ್ನು ಕಳ್ಳಭಟ್ಟಿ ಜಾಸ್ತಿಯಾಗಿಬಿಟ್ಟಿದೆ. ಕುಡಿಯುವರು ಇನ್ನು ಜಾಸ್ತಿಯಾಗಿ ಬಿಟ್ಟಿದ್ದಾರೆ, ಹೊರಗಡೆಯಿಂದ ತಂದು ಕುಡಿಯುತ್ತಿದ್ದಾರೆ ಮತ್ತೆ ಅದನ್ನು ಆ್ಯಕ್ಷನ್ ಮಾಡಿ ಎಂದು ಹೇಳಿದರು.

ಶ್ರೀ ಡಿ.ಆರ್. ಪಾಟೀಲ್ :,ನಾನು ಕೇಳಿದ್ದು ಆಗ ನೀವು ಏನು ಮಾಡಿದಿರಿ? ಅರ್‍ಯಾಕ್ ಷಾಪ್ ಎಲ್ಲೆಲ್ಲಿ ಗ್ರಾಮ ಸಭಾ ನಿರ್ಣಯ ಮಾಡುತ್ತದೆ ಆ ಗ್ರಾಮದೊಳಗೆ ಅರ್‍ಯಾಕ್ ಷಾಪ್ ಇರಬಾರದು ಎಂದು ತಾವು ಮಾಡಿದಿರಿ. ನಾನು ಕೇಳುತ್ತಿರುವುದು. ಆಗ ಇವರು ಯಾರು ಗಂಡು ಮಕ್ಕಳು ಕುಡಿದು ನಿಶೆಯಾಗಿ ಬರುತ್ತಾರೆ. ಅವರಿಗೆ ಬರೋಬರಿ ಬುದ್ಧಿ ಕಲಿಸುವುದಕ್ಕೆ ನಮ್ಮ ತಾಯಂದಿರಿಗೆ ಹಾಗೂ ಸಹೋದರಿಯರಿಗೆ ಒಂದು ಶಕ್ತಿ ಇರುತ್ತದೆ. ಅದು ಆಫೆನ್ಸ್ ಅಲ್ಲವೆಂದು ನೀವು ಮಾಡಿದಿರಿ, ಅದು ಕಂಟ್ರೋಲ್ ಆಗುವುದಿಲ್ಲ.

ಶ್ರೀ ಕೆ. ಶ್ರೀನಿವಾಸ ಗೌಡ : ಗುಜರಾತ್‌ನಲ್ಲಿ ಟೋಟಲಿ ಪ್ರಾಹಿಬಿಷನ್ ಇದೆ. ಅಲ್ಲಿ ಇಲ್ಲಿ ಕುಡಿಯಬಾರದು ಅದಕ್ಕೆ ಕಾನೂನು ಪ್ರಕಾರ ಅಲ್ಲಿ ಪ್ರಾಹಿಬಿಷನ್ ಇದೆ. ಆದರೆ ಫುಟ್‌ಪಾತ್‌ಗಳಲ್ಲಿ ಮಾರುತ್ತಾರೆ. ಎಂಥ ಸರಾಯಿ ವಿಸ್ಕಿ ಬೇಕಾದರೂ ಅಲ್ಲಿ ಮಾರುತ್ತಾರೆ. ಈ ವ್ಯವಸ್ಥೆ ನಮ್ಮ ದೇಶದಲ್ಲಿ 1994ರಲ್ಲಿ ಆಗಿನ ಸರ್ಕಾರ, ಗುಜರಾತಿಗೂ ಹೋಗಿ ಎಲ್ಲಾ ನೋಡಿಕೊಂಡು ಬಂದು ಆಗಲಿಲ್ಲವೆಂದು ಮತ್ತೆ ಇದನ್ನು ಇಂಪ್ಲಿಮೆಂಟ್ ಮಾಡಿದರು.

ಶ್ರೀ ಎಸ್. ಎಸ್. ಪಾಟೀಲ್ : ದೇಶದೊಳಗೆ ಹೇಗೆ ಎಂದರೆ, ಒಮ್ಮೆ ಇಲ್ಲಿ ಪಾನ ನಿರೋಧ ಸಂಯಂ ಮಂಡಳಿ, ಅದಕ್ಕೆ ಒಬ್ಬ ಕುಡಕನನ್ನು ಹಾಕಿದ್ದರು, ಮಂದಿಯೊಳಗೆ ಬಹಳ ಅಸಹ್ಯ ಆ್ಯಕ್ಚುವಲ್ ಇಲ್ಲಿ ನಡೆದಿದ್ದು ಇದು ಘಟನೆ ನಂತರ ಪತ್ರಿಕೆಯಲ್ಲಿ ಬಂದ ಮೇಲೆ ಅವನನ್ನು ವಜಾ ಮಾಡಿದರು. ಇವತ್ತು ಅದು ಹೇಗೆ ಇದೆ ಎಂದರೆ, ಮಾನ್ಯ ಡಿ.ಆರ್. ಪಾಟೀಲ್‌ರವರು ಹೇಳಿದ ಹಾಗೆ ಇದು ಕಾಯಿದೆಯಿಂದ ಹೋಗುವುದಿಲ್ಲ. ಇದನ್ನು ನಾವು ಹಿಂದಿನಿಂದಲೂ ನೋಡಿದ್ದೇವೆ. ಜನರನ್ನು ನಾವು ಈ ರೀತಿಯಾಗಿ ಬದಲಾವಣೆ ತರುವಂಥ ಪ್ರಯತ್ನ ಮಾಡಬೇಕಾಗುತ್ತದೆಯೇ ಹೊರತು ನಾವು ಕಾಯಿದೆಯಿಂದ ಮಾಡುವುದಕ್ಕೆ ಹೋದರೆ ಭಟ್ಟಿ ಸರಾಯಿ ಶುರುವಾಗುತ್ತದೆ. ಇದನ್ನೆಲ್ಲಾ ನಾವು ನೋಡಿದ್ದೇವೆ, ಒಂದು ಉದಾಹರಣೆ ನಿಮಗೆ ಹೇಳುತ್ತೇನೆ, ನಮ್ಮಲ್ಲಿ ಹಾಕಲಗೇರಿ ಎಂದು ಒಂದು ಊರು ಇದೆ. ಆ ಊರಿಗೆ ನಾನು ಹೋದೆ, ಹೋದಾಗ ಅಲ್ಲಿ ಪಂಚಾಯತ್ ಮೆಂಬರ್ ಆಗಿರುವ ಹೆಣ್ಣು ಮಕ್ಕಳು ಕುಳಿತಿದ್ದರು. ರೀಅಪ್ಪಾರಾ, ನಮ್ಮ ಊರಿನಾಗ ಕುಡಿಯುವುದನ್ನು ಬಂದ್ ಮಾಡಿರಿ, ಕುಡಿಯುವುದು ಹೆಚ್ಚಾಗಿದೆ ಎಂದು ಒಬ್ಬ ಹೆಣ್ಣು ಮಗಳೂ ಅಂದಳು. ಆ ಮೇಲೆ ನಾನು ಹೇಳಿದೆ ಆಯಿತು. ನೋಡೋಣ ಎಂದು ಹೇಳಿದೆ, ಆಗ ಯಾರೋ ಒಬ್ಬನು ಹೊರಗಡೆಯಿಂದ ಬಂದ, ಆಕೆ ಏನು ಹೇಳುತ್ತಾಳೆ ರೀ, ಆಕೆ ಏನು ಹೇಳುತ್ತಾಳೆ ಕುಡಿಯುವುದು ನಮ್ಮ ಹಕ್ಕು, ಅಂದ ಅವನು. ನನಗೆ ಸಿಟ್ಟು ಬಂತು, ಅವನು ಯಾರು ಆಕೆ ಗೀಕೆ ಅಂತಾನೆ ಕರೆಯಿರಿ ಅವನಿಗೆ ಎಂದು ಹೇಳಿದೆ. ಕೇಳಿದರೆ ಆ ಹೆಣ್ಣುಮಗಳ ಗಂಡ ಅವನಾಗಿದ್ದ. ಇದು ನಡೆದಂಥ ಘಟನೆ, ಬಹಳ ತ್ರಾಸ ಇದೆ, ಆ ಹೆಣ್ಣುಮಕ್ಕಳಿಗೆ ಎಷ್ಟು ತ್ರಾಸ ಇದೆ. ನೀವು ಏನು ಹೆಣ್ಣು ಮಕ್ಕಳ ಕೈಗೆ ಕೊಟ್ಟರೆ ಮಾಡುತ್ತಾರೆಂದು ಏನು ಹೇಳುತ್ತೀರಿ, ಬಹಳ ಕಷ್ಟ ಇದೆ. ಅವರು ಹುಚ್ಚು ಅವರಿಗೇ ಗೊತ್ತು. ಅದು ಆಗುವುದಿಲ್ಲ. ಬದಲಾವಣೆ ತರಬೇಕಾದರೆ ಸ್ವಲ್ಪ ಶರಣರ ದಾರಿಯಲ್ಲಿ ನಾವು ಜನರನ್ನು ತರತಕ್ಕಂಥ ಪ್ರಯತ್ನ ಮಾಡಬೇಕೇ ವಿನಾಃ ಹಾಗೇಯೇ ಆಗುವುದಿಲ್ಲ.

ಅಧ್ಯಕ್ಷರು : ಪಾಟೀಲರೇ, ನಿಮಗೆ ಎಷ್ಟು ನಿಮಿಷ ಬೇಕು ?

ಶ್ರೀಮತಿ ಟಿ. ಭಾಗೀರಥಿ : ಮಾನ್ಯ ಪಾಟೀಲರವರು ಹೇಳಿದರ ಹಾಗೆ ಯಾವ ಕೆಲಸ ಬೇಕಾದರೂ ಮಹಿಳೆಯರು ಮಾಡಲಿಕ್ಕೆ ತಯಾರಿದ್ದೇವೆ, ಆದರೆ ನಿಮಗೆ ಎಷ್ಟರಮಟ್ಟಿಗೆ ರಕ್ಷಣೆ ಸಿಗುತ್ತದೆ ಎನ್ನತಕ್ಕಂಥ ಮಾತು ಇಲ್ಲಿ ಬರಬೇಕಾಗುತ್ತದೆ.

ಶ್ರೀ ಆರ್. ಜ್ಞಾನೇಂದ್ರ : ಪಾಟೀಲ್‌ರೇ, ಕೆಲವು ಕಡೆ ಹೆಣ್ಣುಮಕ್ಕಳೇ

ಕುಡಿದುಕೊಂಡು ಇರುತ್ತಾರಲ್ಲಾ ಏನು ಮಾಡುವುದು? ಸಾರ್, ನೀವು ಬೆಂಗಳೂರು ಬಾರ್‌ಗಳಿಗೆ ಹೋಗಿ ಬಹಳಷ್ಟು ಜನ ಅಂತವರೇ ಕುಳಿತಿರುತ್ತಾರೆ.

ಶ್ರೀಮತಿ ಟಿ. ಭಾಗೀರಥಿ : ಎಷ್ಟು ಪರ್ಸೆಂಟೇಜ್ ಎಂಬುದು ಕೂಡ ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಅರಗ ಜ್ಞಾನೇಂದ್ರ : ಹೆಣ್ಣು ಮಕ್ಕಳವರದ್ದು ಅದಕ್ಕೆ ಅನೇಕರ ಬೆಂಬಲ ಇದೆ.

ಶ್ರೀ ಡಿ.ಆರ್. ಪಾಟೀಲ್ : ಜ್ಞಾನೇಂದ್ರರವರೇ, ಇನ್ನೊಂದು 25 ವರ್ಷಕ್ಕೆ ಅವರು ಕುಡಿಯುವುದಕ್ಕೆ ಶುರು ಮಾಡುತ್ತಾರೆ. ಈಗ ನಾವು ಒಂದು ಪೀಳಿಗೆ ಹಾಳು ಮಾಡಿದ್ದೇವೆ, ಮುಂದೆ ನಿರಂತರವಾಗಿ ಎಲ್ಲರನ್ನೂ ಹಾಳು ಮಾಡಬೇಕು ಎನ್ನುವುದಿದ್ದರೆ ಅದಕ್ಕೆ ಯಾರು ಏನು ಮಾಡುವುದು? ಅದು ದಯದ್ರ್ಯೆವ.

ಅಧ್ಯಕ್ಷರು : ಪಾಟೀಲ್‌ರೇ, ನಾಳೆಗೆ ಮುಂದುವರೆಸಿ.

ಶ್ರೀ ಡಿ.ಆರ್. ಪಾಟೀಲ್ : ಸರಿ, ಸಾರ್ ಆಗಬಹುದು.

ಅಧ್ಯಕ್ಷರು : ಈ ದಿನ ಸದಸ್ಯರಾದ ವಾಟಾಳ್ ನಾಗರಾಜ್‌ರವರು, ಆಯವ್ಯಯದ ಮೇಲೆ ನಡೆಸಿದ ಸಾಮಾನ್ಯ ಚರ್ಚೆಯ ಸಂದರ್ಭದಲ್ಲಿ ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ ದೇವೇಗೌಡರವರು ಹೆಸರು, ಕೆಪಿಸಿಸಿ ಅಧ್ಯಕ್ಷರಾದ ಶ್ರೀ ಪೂಜಾರಿಯವರ ಹೆಸರು ಹಾಗೂ ಲಂಗೋಟಿ, ಬಟ್ಟೆ, ಕನ್ನಡಕ, ಇಂಥ ಅನೇಕ ಪದಗಳು ಬಳಕೆಯಾಗಿರುವುದನ್ನು ಕಡತದಿಂದ ತೆಗೆದು ಹಾಕಲಾಗಿದೆ. ಈಗ ಸದನವನ್ನು ನಾಳೆ ಬೆಳಿಗ್ಗೆ 10 ಗಂಟೆಗೆ ಮುಂದೂಡಲಾಗಿದೆ.

(ಸದನವು ಸಂಜೆ 5 ಗಂಟೆ 8 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 29ನೇ ಜುಲೈ ಮಾಹೆ 2004ರ ಗುರುವಾರದಂದು ಬೆಳಿಗ್ಗೆ 10 ಗಂಟೆಗೆ ಸೇರಲು ನಿಶ್ಚಯಿಸಿತು)

---

†ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.